ಮಂಗಳವಾರ, ಡಿಸೆಂಬರ್ 9, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 339 | ಪುಟ 14
prajavani.net prajavani • www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಸೂರ್ಯ ಪಡೆ ಸಜ್ಜು
ಕಟಕ್‌ನಲ್ಲಿ ಮಂಗಳವಾರ ನಡೆಯಲಿರುವ ದಕ್ಷಿಣ ಆಫ್ರಿಕಾ ಎದುರಿನ ಮೊದಲ ಟಿ20 ಪಂದ್ಯದಲ್ಲಿ ಭಾರತ ತಂಡವನ್ನು ಮುನ್ನಡೆಸಲಿರುವ ಸೂರ್ಯಕುಮಾರ್ ಯಾದವ್

ವಿನಿಯೋಗ
ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಕಳೆದ 11 ವರ್ಷಗಳಲ್ಲಿ ₹7,641 ಕೋಟಿ ವೆಚ್ಚ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ

ಸೆನ್ಸೆಕ್ಸ್ 85,102 | ನಿಫ್ಟಿ 25,960 | $/₹ 90.05 | ಚಿನ್ನ (Std. 10g) ₹1,34,330 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,91,500 (ಬೆಂಗಳೂರು)


ಗೀತೆಯ ಜಾಡು: ಜಗಳ ಜೋರು

ನವದೆಹಲಿ: 'ವಂದೇ ಮಾತರಂ' ಗೀತೆಗೆ 150 ವರ್ಷ ತುಂಬಿದ ಕಾರಣ ಲೋಕಸಭೆಯಲ್ಲಿ ಸೋಮವಾರ ನಡೆದ ವಿಶೇಷ ಚರ್ಚೆಯು ಆಡಳಿತ ಹಾಗೂ ವಿಪಕ್ಷಗಳ ನಡುವೆ ಆರೋಪ–ಪ್ರತ್ಯಾರೋಪಕ್ಕೆ ವೇದಿಕೆಯಾಯಿತು. ತುಷ್ಟೀಕರಣ ರಾಜಕಾರಣಕ್ಕಾಗಿ ಕಾಂಗ್ರೆಸ್ ಪಕ್ಷವು ಗೀತೆಯನ್ನು ಕೇವಲ ಎರಡು ಚರಣಗಳಿಗೆ ಇಳಿಸಿತು ಎಂದು ಪ್ರಧಾನಿ ನರೇಂದ್ರ ಮೋದಿ ತೀವ್ರ ವಾಗ್ದಾಳಿ ನಡೆಸಿದರು. ಮುಂಬರುವ ಪಶ್ಚಿಮ ಬಂಗಾಳ ಚುನಾವಣೆಯ ಕಾರಣಕ್ಕೆ ಆಡಳಿತಾರೂಢ ಎನ್‌ಡಿಎ ವಂದೇ ಮಾತರಂ ಕುರಿತು ಚರ್ಚೆ ನಡೆಸುತ್ತಿದೆ ಎಂದು ಕಾಂಗ್ರೆಸ್ ತಿರುಗೇಟು ನೀಡಿತು. ಸುಮಾರು 10 ತಾಸು ನಡೆದ ಚರ್ಚೆಯು ಸದನ ಹಾಗೂ ಸದನದ ಹೊರಗೆ ಎನ್‌ಡಿಎ–ಇಂಡಿಯಾ ಮೈತ್ರಿಕೂಟದ ನಡುವೆ 'ಕದನ'ಕ್ಕೂ ಕಾರಣವಾಯಿತು. ಚರ್ಚೆ ಆರಂಭಕ್ಕೆ ಮೊದಲು ಮೋದಿ ಲೋಕಸಭೆಗೆ ಪ್ರವೇಶಿಸಿದಾಗ ಬಿಜೆಪಿ ಸಂಸದರು, 'ನಾವು ಬಿಹಾರ ಗೆದ್ದಿದ್ದೇವೆ. ಈಗ ಪಶ್ಚಿಮ ಬಂಗಾಳದ ಸರದಿ' ಎಂಬ ಘೋಷಣೆಗಳನ್ನು ಕೂಗಿ ರಾಜಕೀಯ ಚರ್ಚೆಗೆ ಮುನ್ನುಡಿ ಹಾಕಿಕೊಟ್ಟರು

ಮುಸ್ಲಿಂ ಲೀಗ್ ಓಲೈಕೆಗೆ ಹಾಡಿಗೆ ಕತ್ತರಿ ಹಾಕಿದ್ದ ನೆಹರೂ: ಮೋದಿ

'ಸಾಮಾಜಿಕ ಸಾಮರಸ್ಯದ ನೆಪದಲ್ಲಿ ಕಾಂಗ್ರೆಸ್ ಪಕ್ಷವು ವಂದೇ ಮಾತರಂ ಗೀತೆಯನ್ನು ತುಂಡು ತುಂಡಾಗಿ ಒಡೆದು ಹಾಕಿದೆ. ಜತೆಗೆ, ಈಗಲೂ ಓಲೈಕೆಯ ರಾಜಕಾರಣದಲ್ಲಿ ತೊಡಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

ವಿಶೇಷ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಹಾಗೂ ಕಾಂಗ್ರೆಸ್ ವಿರುದ್ಧ ತೀವ್ರವಾಗ್ದಾಳಿ ನಡೆಸಿದರು. ಮುಸ್ಲಿಮರನ್ನು ಸಮಾಧಾನ ಪಡಿಸಲು ರಾಷ್ಟ್ರ ಗೀತೆಯನ್ನು ಕೇವಲ ಎರಡು ಚರಣಗಳಿಗೆ ಮೊಟಕುಗೊಳಿಸಲಾಗಿದೆ ಎಂದು ದೂರಿದರು.



'ವಂದೇ ಮಾತರಂ ಗೀತೆಯನ್ನು ವಿರೋಧಿಸಿ ಮೊಹಮ್ಮದ್ ಅಲಿ ಜಿನ್ನಾ ನೇತೃತ್ವದ ಮುಸ್ಲಿಂ ಲೀಗ್ ಲಖನೌದಲ್ಲಿ 1937ರಲ್ಲಿ ಪ್ರತಿಭಟನೆ ನಡೆಸಿತ್ತು. ಆದರೆ, ನೆಹರೂ ಹಾಗೂ ಕಾಂಗ್ರೆಸ್ ಅದನ್ನು ವಿರೋಧಿಸುವ ಬದಲು, ಗೀತೆಯನ್ನು ಪರಿಶೀಲಿಸಲು ಮುಂದಾಗಿದ್ದರು' ಎಂದು ಮೋದಿ ಹೇಳಿದರು.

▶8

ಬಂಗಾಳ ಚುನಾವಣೆ ಹೊತ್ತಲ್ಲಿ ಗೀತೆ ನೆನಪು: ಪ್ರಿಯಾಂಕಾ

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವಾಗ ಜನರ ಸಮಸ್ಯೆಗಳಿಂದ ಬೇರೆಡೆಗೆ ಗಮನ ಸೆಳೆಯಲು ಸರ್ಕಾರವು ವಂದೇ ಮಾತರಂ ಕುರಿತು ಚರ್ಚೆಗೆ ಅವಕಾಶ ಕಲ್ಪಿಸಿದೆ ಎಂದು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಟೀಕಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು ನರೇಂದ್ರ ಮೋದಿ ವಿರುದ್ಧ ಟೀಕಾಪ್ರಹಾರ ನಡೆಸಿದರು. 'ಅವರು ಈಗ ಹಿಂದಿನಂತಿಲ್ಲ. ಏಕೆಂದರೆ ಅವರ ಆತ್ಮವಿಶ್ವಾಸ ಕಡಿಮೆಯಾಗುತ್ತಿದೆ ಮತ್ತು ಅವರ ನೀತಿಗಳು ದೇಶವನ್ನು ದುರ್ಬಲಗೊಳಿಸುತ್ತಿವೆ. ಪ್ರಧಾನಿ ದುರ್ಬಲ ಆಗುತ್ತಿರುವುದು ಸ್ಪಷ್ಟವಾಗಿ ಗೋಚರ ಆಗುತ್ತಿದೆ. ಆದ್ದರಿಂದ ಅವರು ಹಿಂದಿನ ವಿಷಯಗಳ ಬಗ್ಗೆ ಮಾತನಾಡದೆ ಬೇರೆ ಏನು ಮಾಡಲು ಸಾಧ್ಯ? ಪಕ್ಷದಲ್ಲಿರುವವರು (ಬಿಜೆಪಿ) ಮೌನವಾಗಿದ್ದಾರೆ. ಏಕೆಂದರೆ, ಅವರು ಸಹ ನಾಚಿಕೆಪಡುತ್ತಾರೆ. ದೇಶದ ಜನರು ಇಂದು ಅತೃಪ್ತರು, ದುಃಖಿತರಾಗಿದ್ದಾರೆ ಮತ್ತು ಸಮಸ್ಯೆಗಳಿಂದ ಹೈರಾಣಾಗಿದ್ದಾರೆ. ನೀವು ಅವುಗಳನ್ನು ಪರಿಹರಿಸುತ್ತಿಲ್ಲ' ಎಂದರು.



▶8



ನರೇಂದ್ರ ಮೋದಿ ಅವರು ಯಾವುದೇ ವಿಷಯದ ಬಗ್ಗೆ ಮಾತನಾಡುವಾಗ ಕಾಂಗ್ರೆಸ್ ಹಾಗೂ ನೆಹರೂ ಅವರನ್ನು ಉಲ್ಲೇಖಿಸುತ್ತಾರೆ. ಆಪರೇಷನ್ ಸಿಂಧೂರ ಕುರಿತ ಚರ್ಚೆ ಸಂದರ್ಭದಲ್ಲಿ ನೆಹರೂ ಅವರ ಹೆಸರನ್ನು 14 ಬಾರಿ ಮತ್ತು ಕಾಂಗ್ರೆಸ್ ಹೆಸರನ್ನು 50 ಬಾರಿ, ಸಂವಿಧಾನದ 75ನೇ ವಾರ್ಷಿಕೋತ್ಸವದ ಚರ್ಚೆ ವೇಳೆ ನೆಹರೂ ಹೆಸರು 10 ಬಾರಿ ಮತ್ತು ಕಾಂಗ್ರೆಸ್ ಹೆಸರನ್ನು 26 ಬಾರಿ ಉಲ್ಲೇಖಿಸಿದ್ದರು. ಇಂತಹ ಹತ್ತಾರು ಉದಾಹರಣೆಗಳನ್ನು ಹೇಳಬಹುದು. ನೀವು ಎಷ್ಟೇ ಪ್ರಯತ್ನಿಸಿದರೂ ಪಂಡಿತ್ ನೆಹರೂ ಅವರ ಕೊಡುಗೆಗಳ ಕುರಿತು ಒಂದೂ ಕಪ್ಪು ಚುಕ್ಕೆ ಇಡಲು ನಿಮಗೆ ಸಾಧ್ಯವಾಗುವುದಿಲ್ಲ

ಗೌರವ್ ಗೊಗೊಯ್, ವಿರೋಧ ಪಕ್ಷದ ಉಪನಾಯಕ



'ವಂದೇ ಮಾತರಂ' ಮತ್ತು ಅದರ ಇತಿಹಾಸದ ಬಗ್ಗೆ ಪಕ್ಷಪಾತವಿಲ್ಲದೇ ಮೌಲ್ಯಮಾಪನ ಮಾಡುವ ಸಮಯ ಬಂದಿದೆ. ಎಲ್ಲರೂ ಹಾಡಿನ ಮೊದಲ ಎರಡು ಚರಣಗಳನ್ನು ಕೇಳಿದ್ದಾರೆ. ಆದರೆ ಹಲವರಿಗೆ ಉಳಿದವುಗಳ ಪರಿಚಯವಿಲ್ಲ. ಇಡೀ ಹಾಡು ಮತ್ತು ಆನಂದ್ ಮಠ ಪುಸ್ತಕವು ಎಂದಿಗೂ ಇಸ್ಲಾಂ ವಿರೋಧಿ ಯಾಗಿರಲಿಲ್ಲ. ಆದರೆ, ಕಾಂಗ್ರೆಸ್‌ನ ತುಷ್ಟೀಕರಣದ ರಾಜಕೀಯವು ಭಾರತದ ವಿಭಜನೆಗೆ ಕಾರಣವಾಯಿತು. ದೇಶದ ಸಂಸ್ಥೆಗಳನ್ನು ದುರ್ಬಲ ಗೊಳಿಸುವ ಪಿತೂರಿಯ ಭಾಗವಾಗಿ ಚುನಾವಣಾ ಆಯೋಗದಂತಹ ಸಂಸ್ಥೆಗಳ ಮೇಲೆ ವಿರೋಧ ಪಕ್ಷಗಳು ದಾಳಿ ನಡೆಸುತ್ತಿವೆ

ರಾಜನಾಥ್ ಸಿಂಗ್, ರಕ್ಷಣಾ ಸಚಿವ



ಬೆಳಗಾವಿಯ ಟಿಳಕವಾಡಿಯ ವ್ಯಾಕ್ಸಿನ್ ಡಿಪೊ ಮೈದಾನ ಪ್ರವೇಶಿಸಲು ಯತ್ನಿಸಿದ ಎಂಇಎಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು ಪ್ರಜಾವಾಣಿ ಚಿತ್ರ

ಮುಖಂಡರ ವಶ: ಎಂಇಎಸ್‌ಗೆ ಸಿಗದ ನಿರೀಕ್ಷಿತ ಬೆಂಬಲ

'ಮಹಾಮೇಳಾವ'ಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಗರದಲ್ಲಿ ಒಂದೆಡೆ ಚಳಿಗಾಲದ ಅಧಿವೇಶನ ಆರಂಭಗೊಂಡರೆ, ಇನ್ನೊಂದೆಡೆ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಮುಖಂಡರು ಗದ್ದಲ ಸೃಷ್ಟಿಸಿದರು. ಅನುಮತಿ ಸಿಗದಿದ್ದರೂ 'ಮಹಾಮೇಳಾವ್' ನಡೆಸಲು ಮುಂದಾದರು. ತಕ್ಷಣ ಪೊಲೀಸರು ಎಂಇಎಸ್ ಕಾರ್ಯ ಕರ್ತರನ್ನು ವಶಕ್ಕೆ ಪಡೆದರು. ಇದರಿಂದ ಬೆಳಗಾವಿ, ಅಥಣಿ ಮತ್ತು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಕೆಲ ಕಾಲ ಬಿಗುವಿನ ವಾತಾವರಣವಿತ್ತು.

ಬೆಳಗಾವಿಯಲ್ಲಿ ವಿಧಾನಮಂಡಲ ಚಳಿಗಾಲದ ಅಧಿವೇಶನ ವಿರೋಧಿಸಿ ಎಂಇಎಸ್ ಕಾರ್ಯಕರ್ತರು ಪ್ರತಿವರ್ಷ ಮಹಾಮೇಳಾವ್ ಆಯೋಜನೆಗೆ ಯತ್ನಿಸುತ್ತಾರೆ. ರಾಜ್ಯದ ಮರಾಠಿ ಭಾಷಿಕ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಲು ಹಕ್ಕೊತ್ತಾಯ ಮಂಡಿಸುತ್ತಾರೆ. ಇದು ನಾಡವಿರೋಧಿ ಚಟುವಟಿಕೆ ಎಂದು ಪರಿಗಣಿಸಿರುವ ಜಿಲ್ಲಾಡಳಿತ ಅನುಮತಿ ನೀಡಿಲ್ಲ. ಅನುಮತಿ ಇಲ್ಲದಿದ್ದರೂ ಮೇಳ ನಡೆಸಲು ಮುಂದಾದವರನ್ನು ಪೊಲೀಸರು ತಡೆದರು.

ಮೇಳಕ್ಕಾಗಿ ಇಲ್ಲಿನ ವ್ಯಾಕ್ಸಿನ್ ಡಿಪೊ ಮೈದಾನದಲ್ಲಿ ಸಿದ್ಧತೆ ನಡೆದಿತ್ತು. ಅಲ್ಲಿಗೆ ಬಂದ ಎಂಇಎಸ್ ಕಾರ್ಯಾಧ್ಯಕ್ಷ ಮನೋಹರ ಕಿಣೇಕರ, ಮುಖಂಡರಾದ ಪ್ರಕಾಶ ಮರಗಾಲೆ, ಮಾಲೋಜಿರಾವ್ ಅಷ್ಟೇಕರ, ರೇಣು ಕಿಲ್ಲೇಕರ, ಪ್ರಕಾಶ ಶಿರೋಳಕರ, ಶುಭಂ ಶೆಳಕೆ, ಅಮರ ಯಳ್ಳೂರಕರ ಮತ್ತಿತರರನ್ನು ಪೊಲೀಸರು ವಶಕ್ಕೆ ಪಡೆದಾಗ, ತಳ್ಳಾಟ, ನೂಕಾಟ ನಡೆಯಿತು. ಆಗ 'ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಲೇಬೇಕು' ಎಂದು ಘೋಷಣೆ ಕೂಗಿದರು.

▶4B

'ಮಹಾ'ಗೆ ಬಸ್ ಸಂಚಾರ ಸ್ಥಗಿತ

ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಶಿವಸೇನಾ (ಉದ್ಧವ್ ಠಾಕ್ರೆ ಬಣ) ಕಾರ್ಯಕರ್ತರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್‌ಆರ್‌ಟಿಸಿ) ಬಸ್ ಸಂಚಾರ ತಡೆದು, ಪುಣೆಯಿಂದ ಹಳಿಯಾಳಕ್ಕೆ ಹೊರಟಿದ್ದ ಬಸ್‌ನ ಮೇಲೆ 'ಜೈ ಮಹಾರಾಷ್ಟ್ರ' ಸ್ಟಿಕ್ಕರ್ ಅಂಟಿಸಿದರು. ಇದು ಜಾಲತಾಣಗಳಲ್ಲಿ ಹರಿದಾಡಿತು.

ಇದರಿಂದ ಆಕ್ರೋಶಗೊಂಡ ಕರ್ನಾಟಕ ರಕ್ಷಣಾ ವೇದಿಕೆ (ಶಿವರಾಮೇಗೌಡ ಬಣ) ಕಾರ್ಯಕರ್ತರು ಜಿಲ್ಲೆಯ ಅಥಣಿ ಪಟ್ಟಣದಲ್ಲಿ ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ತಡೆದರು. ಅದರ ಮೇಲೆ 'ಜೈ ಕರ್ನಾಟಕ' ಎಂದು ಬರೆದರು.

ಕೊಲ್ಹಾಪುರದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿದ್ದು, ಮಧ್ಯಾಹ್ನದಿಂದ ಬೆಳಗಾವಿಯಿಂದ ಮಹಾರಾಷ್ಟ್ರಕ್ಕೆ ಬಸ್ ಸಂಚಾರ ಸ್ಥಗಿತಗೊಳಿಸಲಾಯಿತು.

'ಪ್ರಣಾಳಿಕೆಯ ಘೋಷಣೆ ಅಕ್ರಮವಲ್ಲ'

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ನವದೆಹಲಿ: ಯಾವುದೇ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿನ ಘೋಷಣೆಯು ಚುನಾವಣಾ ಅಕ್ರಮ ಹೇಗಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಪ್ರಶ್ನಿಸಿದೆ.

2023ರ ವಿಧಾನಸಭಾ ಚುನಾವಣೆಗೆ ಮುನ್ನ ಕಾಂಗ್ರೆಸ್ ಪಕ್ಷವು ಪಂಚ ಗ್ಯಾರಂಟಿಗಳನ್ನು ಘೋಷಿಸಿದ್ದರಿಂದ ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಗೆದ್ದಿದ್ದಾರೆ ಎಂದು ಆರೋಪಿಸಿ ಕೆ.ಶಂಕರ್ ಎಂಬವರು ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಹಾಗೂ ಸಂದೀಪ್ ಮೆಹ್ತಾ ಅವರ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

▶4B

'ಸಮಸ್ಯೆಗಳಿಗೆ ಇಂಡಿಗೊ ಕಾರಣ'

ಪ್ರಜಾವಾಣಿ ವಾರ್ತೆ/ಪಿಟಿಐ



ರಾಮಮೋಹನ್ ನಾಯ್ಡು

ನವದೆಹಲಿ: 'ಇಂಡಿಗೊ ಸಂಸ್ಥೆಯು ತನ್ನ ವಿಮಾನಗಳ ಹಾರಾಟವನ್ನು ದೊಡ್ಡ ಸಂಖ್ಯೆಯಲ್ಲಿ ರದ್ದು ಮಾಡಿದ್ದಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರ ತನಿಖೆ ಆರಂಭಿಸಿದೆ. ಇಂಡಿಗೊ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸರ್ಕಾರವು ತೆಗೆದುಕೊಳ್ಳುವ ಕ್ರಮವು ಇತರೆ ವಿಮಾನಯಾನ ಸಂಸ್ಥೆಗಳಿಗೂ ಎಚ್ಚರಿಕೆಯಾಗಲಿದೆ' ಎಂದು ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ತಿಳಿಸಿದರು.

ಇಂಡಿಗೊ ಪ್ರಕರಣದ ಕುರಿತು ಉತ್ತರ ನೀಡುವಂತೆ ವಿರೋಧ ಪಕ್ಷಗಳು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಒತ್ತಾಯಿಸಿದವು. ಸಚಿವ ರಾಮಮೋಹನ್ ನಾಯ್ಡು ಅವರು ರಾಜ್ಯ ಸಭೆಯಲ್ಲಿ ಪ್ರಶ್ನೆಗಳಿಗೆ ಉತ್ತರಿಸಿದರು.

'ಸಿಬ್ಬಂದಿ ಮತ್ತು ಪೈಲಟ್‌ಗಳ ನಿತ್ಯದ ಕೆಲಸದ ಪಾಳಿಯನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸದೇ ಇರುವುದೇ ಇಷ್ಟೆಲ್ಲ ಸಮಸ್ಯೆಗಳಿಗೆ ಕಾರಣ' ಎಂದು ನಾಯ್ಡು ಅವರು ಇಂಡಿಗೊ ಸಂಸ್ಥೆಯನ್ನು ದೂರಿದರು. 'ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ನಾವು ತೆಗೆದುಕೊಳ್ಳುವ ಕ್ರಮವು ಮಾದರಿಯಾಗಲಿದೆ. ಸ್ವಯಂ ಚಾಲಿತ ಸಂದೇಶ ರವಾನೆ ವ್ಯವಸ್ಥೆಯಿಂದಾಗಿ(ಎಎಂಎಸ್‌ಎಸ್) ಈ ಸಮಸ್ಯೆ ಉದ್ಭವಿಸಿಲ್ಲ. ಪಾಳಿ ವ್ಯವಸ್ಥೆಯನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸದೇ ಇರುವ ಇಂಡಿಗೊ ಸಂಸ್ಥೆಯೇ ಇದಕ್ಕೆಲ್ಲ ಕಾರಣ' ಎಂದರು.

'ವಿಮಾನಯಾನ ಕೆಲಸದ ಅವಧಿ ಮಿತಿ (ಎಫ್‌ಡಿಟಿಎಲ್) ಜಾರಿಯ ಬಗ್ಗೆ ಕೇಂದ್ರ ಸರ್ಕಾರವು ಇಂಡಿಗೊ ಒಳಗೊಂಡಂತೆ ಭಾರತದ ಎಲ್ಲ ವಿಮಾನಯಾನ ಸಂಸ್ಥೆಗಳೊಂದಿಗೂ ಮಾತುಕತೆ ನಡೆಸಿತ್ತು. ಎಫ್‌ಡಿಟಿಎಲ್ ನಿಯಮಗಳ ಜಾರಿಯ ವಿಚಾರದಲ್ಲಿ ಯಾವುದೇ ವಿನಾಯಿತಿ ಇಲ್ಲ ಎಂದೂ ಸರ್ಕಾರವು ಸ್ಪಷ್ಟಪಡಿಸಿತ್ತು' ಎಂದರು.

'ನ.1ರಂದು ಎಫ್‌ಡಿಟಿಎಲ್ ನಿಯಮಗಳು ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿದ್ದವು. ಈ ಬಳಿಕ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಎಲ್ಲ ಸಂಸ್ಥೆಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿ ಇತ್ತು. ನಿಯಮಗಳ ಜಾರಿಯಿಂದ ತಮ್ಮ ಕಾರ್ಯಾಚರಣೆಯಲ್ಲಿ ಕೆಲವು ಅಡಚಣೆಯಾಗಲಿದೆ. ಆದ್ದರಿಂದ ಒಂದಿಷ್ಟು ವಿನಾಯಿತಿ ನೀಡುವಂತೆ ಕೆಲವು ಸಂಸ್ಥೆಗಳು ಡಿಜಿಸಿಎಗೆ ಮನವಿ ಮಾಡಿದ್ದವು' ಎಂದು ಮಾಹಿತಿ ನೀಡಿದರು.

▶9

ಸಿಇಒಗೆ ಸಮನ್ಸ್ ಜಾರಿ

ವಿಮಾನಗಳ ಹಾರಾಟ ರದ್ದಾದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗರಿಕ ವಿಮಾನಯಾನ ಸಂಸ್ಥೆಯು ತನಿಖಾ ಸಮಿತಿಯೊಂದನ್ನು ರಚಿಸಿದೆ.

ತನಿಖೆಯ ಭಾಗವಾಗಿ ಇಂಡಿಗೊ ಸಂಸ್ಥೆಯ ಸಿಇಒ ಪೀಟರ್ ಎಲ್ಬರ್ಸ್ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ ಇಸಿಡ್ರ ಪೊರ್ಕೆರಸ್ ಅವರಿಗೆ ಸಮನ್ಸ್ ಜಾರಿ ಮಾಡಿದೆ.



'ಡಿಕೆಶಿ ಕೋರಿಕೆ ಹೈಕಮಾಂಡ್ ಒಪ್ಪಿಲ್ಲ'

ಪ್ರಜಾವಾಣಿ ವಾರ್ತೆ



ಯತೀಂದ್ರ

ಬೆಳಗಾವಿ: 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮಗೂ ಅವಕಾಶ ಕೊಡಿ ಎಂದು ಕೋರಿದ್ದು ನಿಜ. ಆದರೆ, ಹೈಕಮಾಂಡ್ ಒಪ್ಪಿಲ್ಲ. ಈಗ ನಾಯಕತ್ವ ಬದಲಾವಣೆಯ ಪರಿಸ್ಥಿತಿ ಇಲ್ಲ ಎಂದು ಹೇಳಿದೆ. ಹೀಗಾಗಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರೇ ಐದು ವರ್ಷ ಪೂರೈಸುತ್ತಾರೆ' ಎಂದು ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಸುವರ್ಣ ವಿಧಾನಸೌಧದ ಎದುರು ಸೋಮವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, 'ನಾಯಕತ್ವ ಬದಲಾವಣೆ ಎಂಬುದು ಈಗ ಮುಗಿದ ಅಧ್ಯಾಯ. ಮುಂದಿನ ಜನವರಿಯಲ್ಲಿ ಪದವಿ ಬದಲಾವಣೆ ಆಗಲಿದೆ ಎಂಬುದು ಸುಳ್ಳು' ಎಂದರು.

▶4B

'ಕೇಂದ್ರದತ್ತ ಬೊಟ್ಟು ಮಾಡುವುದೇ ಸಿ.ಎಂ ಕೆಲಸವೇ?'



'ಮುಖ್ಯಮಂತ್ರಿ ಪಟ್ಟ ಉಳಿಸಿಕೊಳ್ಳಲು ಸಿದ್ದರಾಮಯ್ಯ, ಅದೇ ಕುರ್ಚಿ ಕಬಳಿಸುವಲ್ಲಿ ಡಿ.ಕೆ.ಶಿವಕುಮಾರ್ ಕಾಲ ಕಳೆಯುತ್ತಿದ್ದಾರೆ. ಪ್ರತಿಪಕ್ಷದವರು ಏನೇ ಪ್ರಶ್ನಿಸಿದರೂ ಕೇಂದ್ರದತ್ತ ಬೊಟ್ಟು ಮಾಡುತ್ತಾರೆ. ಇದಕ್ಕಾಗಿಯೇ ಸಿ.ಎಂ ಆಗಿದ್ದಾರೆಯೇ?' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಪ್ರಶ್ನಿಸಿದರು.

'ಸಿಎಂ ಮತ್ತು ಡಿಸಿಎಂ ಇಬ್ಬರೂ ರಾಜ್ಯದ ಜನರ, ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಸರ್ಕಾರದ ನಿರ್ಲಕ್ಷ್ಯ ಧೋರಣೆ ಖಂಡಿಸಿ ಮಂಗಳವಾರ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕುತ್ತೇವೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಚಿನಕುರುಳಿ — ಪ್ರಕಾಶ್ ಶೆಟ್ಟಿ




₹6 ಲಕ್ಷ ಕೋಟಿ ಸಾಲ ರೈಟ್‌ಆಫ್

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಕಳೆದ ಐದೂವರೆ ವರ್ಷಗಳಲ್ಲಿ ಒಟ್ಟು ₹6.15 ಲಕ್ಷ ಕೋಟಿ ಮೊತ್ತದ ಸಾಲವನ್ನು ರೈಟ್‌ಆಫ್ ಮಾಡಿವೆ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಸೋಮವಾರ ತಿಳಿಸಿದೆ.

'ಆರ್‌ಬಿಐ ನೀಡಿರುವ ಮಾಹಿತಿ ಪ್ರಕಾರ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ರೈಟ್‌ಆಫ್ ಮಾಡಿರುವ ಮೊತ್ತವು ಕಳೆದ ಐದು ಹಣಕಾಸು ವರ್ಷಗಳಲ್ಲಿ ಹಾಗೂ ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ 30ರವರೆಗೆ ₹6.15 ಲಕ್ಷ ಕೋಟಿಯಷ್ಟಾಗಿದೆ' ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಕೇಂದ್ರ ಸರ್ಕಾರವು 2022–23ರ ನಂತರದಲ್ಲಿ ಬಂಡವಾಳದ ನೆರವು ಒದಗಿಸಿಲ್ಲ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ತಮ್ಮ ಹಣಕಾಸಿನ ಸ್ಥಿತಿಯನ್ನು ಗಮನಾರ್ಹವಾಗಿ ಸುಧಾರಿಸಿಕೊಂಡಿವೆ. ಅವು ಲಾಭದಾಯಕವಾಗಿ ನಡೆಯುತ್ತಿವೆ, ಬಂಡವಾಳದ ಸ್ಥಿತಿಯನ್ನು ಸುಧಾರಿಸಿಕೊಂಡಿವೆ ಎಂದು ಚೌಧರಿ ಹೇಳಿದ್ದಾರೆ.



ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಈಗ ಬಂಡವಾಳದ ಅಗತ್ಯಗಳಿಗಾಗಿ ಮಾರುಕಟ್ಟೆ ಮೂಲಗಳನ್ನು ನೆಚ್ಚಿಕೊಳ್ಳುತ್ತಿವೆ, ಆಂತರಿಕ ನಿಧಿಯನ್ನು ಬಳಸಿಕೊಳ್ಳುತ್ತಿವೆ. ಅವು 2022ರ ಏಪ್ರಿಲ್ 1ರ ನಂತರದಲ್ಲಿ ಈಕ್ವಿಟಿ ಮತ್ತು ಸಾಲಪತ್ರಗಳ ಮೂಲಕ ಬಂಡವಾಳ ಮಾರುಕಟ್ಟೆ ಗಳಿಂದ ಒಟ್ಟು ₹1.79 ಲಕ್ಷ ಕೋಟಿ ಸಂಗ್ರಹಿಸಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಬ್ಯಾಂಕ್‌ಗಳು ತಮ್ಮ ಆಡಳಿತ ಮಂಡಳಿ ಅನುಮೋದನೆ ನೀಡಿದ ನಿಯಮ ಹಾಗೂ ಆರ್‌ಬಿಐ ಮಾರ್ಗಸೂಚಿಗಳಿಗೆ ಅನುಗುಣವಾಗಿ ರೈಟ್‌ಆಫ್ ತೀರ್ಮಾನ ತೆಗೆದುಕೊಳ್ಳುತ್ತಿವೆ ಎಂದು ಸಚಿವರು ಹೇಳಿದ್ದಾರೆ. ಆದರೆ ರೈಟ್‌ಆಫ್ ಎಂದರೆ ಸಾಲ ಮನ್ನಾ ಅಲ್ಲ, ಸಾಲ ಮನ್ನಾ ಆಗುವುದಿಲ್ಲ, ಸಾಲ ವಸೂಲಿ ಪ್ರಕ್ರಿಯೆ ಮುಂದುವರಿಯುತ್ತದೆ. ಆದರೆ ಬ್ಯಾಂಕ್‌ನ ಲೆಕ್ಕಪತ್ರಗಳಲ್ಲಿ ಎನ್‌ಪಿಎ ಪ್ರಮಾಣ ಕಡಿಮೆಯಾಗಿ ಕಾಣಿಸುತ್ತದೆ.

ರೈಟ್‌ಆಫ್ ಆದ ಸಾಲಗಳ ವಸೂಲಿಯು ನಿರಂತರ ಪ್ರಕ್ರಿಯೆ. ಬ್ಯಾಂಕ್‌ಗಳು ತಮಗೆ ಲಭ್ಯವಿರುವ ವಿವಿಧ ಮಾರ್ಗಗಳ ಮೂಲಕ ವಸೂಲಾತಿ ಪ್ರಕ್ರಿಯೆಯನ್ನು ಮುಂದುವರಿಸುತ್ತವೆ. 'ಸರ್ಫೇಸಿ ಕಾಯ್ದೆ' ಅಡಿ ಕ್ರಮ ಜರುಗಿಸುವುದು, ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ಮೊರೆ ಹೋಗುವುದು, ಸಿವಿಲ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಕೆಲಸವನ್ನು ಅವು ಮಾಡುತ್ತವೆ ಎಂದು ವಿವರಿಸಿದ್ದಾರೆ.

ವಸೂಲಾಗದ ಸಾಲಗಳಿಗೆ ಹಣ ತೆಗೆದಿರಿಸುವ ಕೆಲಸ ಆಗಿರುತ್ತದೆ. ಹೀಗಾಗಿ ರೈಟ್‌ಆಫ್ ಪ್ರಕ್ರಿಯೆಯ ಕಾರಣದಿಂದಾಗಿ ನಗದು ಹೊರಹರಿಯುವಿಕೆ ಇರುವುದಿಲ್ಲ. ಬ್ಯಾಂಕ್‌ನಲ್ಲಿ ನಗದು ಲಭ್ಯತೆ ಮೇಲೆ ಕೆಟ್ಟ ಪರಿಣಾಮ ಇರುವುದಿಲ್ಲ ಎಂದು ಕೂಡ ಅವರು ಮಾಹಿತಿ ನೀಡಿದ್ದಾರೆ.

ಇಂಗಾಲ ಪ್ರಮಾಣ ಕುಗ್ಗಿಸಿದ್ದಕ್ಕೆ ರೈತರ ಖಾತೆಗೆ 'ಕಾರ್ಬನ್ ಕ್ರೆಡಿಟ್' ರೂಪದಲ್ಲಿ ನಗದು ಜಮೆ

ಪಾಳುಬಿದ್ದಿದ್ದ ಭೂಮಿಯಲ್ಲಿ ಕಾಂಡ್ಲಾ ವನ

• ಎಂ.ಜಿ.ನಾಯ್ಕ

ಕುಮಟಾ (ಉತ್ತರ ಕನ್ನಡ): ಹಲವು ದಶಕಗಳ ಹಿಂದೆ ಸಿಗಡಿ ಮೀನಿನ ಕೃಷಿಗೆ ಬಳಕೆಯಾಗಿ, ಪಾಳುಬಿದ್ದಿದ್ದ 600 ಎಕರೆ ವಿಸ್ತೀರ್ಣದ ಗಜನಿ ಭೂಮಿಯಲ್ಲಿ ಕಾಂಡ್ಲಾವನ ರೂಪುಗೊಂಡಿದೆ.

ಹೊನ್ನಾವರದ 'ಸ್ನೇಹ ಕುಂಜ' ಸಂಸ್ಥೆಯು ಗಜನಿ ಭೂಮಿಯ ಒಡೆತನವುಳ್ಳ 250 ರೈತರನ್ನು ಬಳಸಿ ಕಾಂಡ್ಲಾ ಗಿಡಗಳನ್ನು ಬೆಳೆಸುವಂತೆ ಮಾಡಿದೆ. ಹೀಗೆ ಬೆಳೆಸಿದ ಗಿಡಗಳಿಂದ ಸಂಗ್ರಹವಾಗುವ 'ಕಾರ್ಬನ್ ಕ್ರೆಡಿಟ್' ಆದಾಯವನ್ನೂ ರೈತರಿಗೆ ನೀಡಲಾಗುತ್ತದೆ.

'ಹಿಂದೆ ಕಗ್ಗ ತಳಿಯ ಭತ್ತ ಬೆಳೆಯುತ್ತಿದ್ದ ಪ್ರದೇಶದಲ್ಲಿ ಅಘನಾಶಿನಿ ನದಿಯ ಹಿನ್ನೀರು ಬಳಸಿ ಗಜನಿಗಳಲ್ಲಿ ಸಿಗಡಿ ಕೃಷಿ ನಡೆಸಲು ಉದ್ಯಮಿಗಳಿಗೆ ರೈತರು ಜಮೀನು ನೀಡಿದ್ದರು. ಬಿಳಿ ಚುಕ್ಕಿ ರೋಗ ಬಂದು ಸಿಗಡಿ ಕೃಷಿ ನಷ್ಟವಾಗಿತ್ತು. ಹೊಂಡಗಳಲ್ಲಿ ಮುಂದೆ ಕೃಷಿ ಸಾಧ್ಯವಾಗದೆ, ಹಲವು ದಶಕಗಳಿಂದ ಹಾಗೇ ಇದ್ದವು. ಇದೇ ಜಾಗವನ್ನು ಈಗ ಕಾಂಡ್ಲಾ ವನವಾಗಿ ರೂಪಿಸಲಾಗಿದೆ' ಎಂದು ಸ್ನೇಹಕುಂಜ ಸಂಸ್ಥೆಯ ಕಾರ್ಯದರ್ಶಿ ನರಸಿಂಹ ಹೆಗಡೆ ತಿಳಿಸಿದರು.

'ಕಾಂಡ್ಲಾ ಗಿಡಗಳು ವಾತಾವರಣದಲ್ಲಿನ ಇಂಗಾಲದ ಡೈ ಆಕ್ಸೈಡ್ ಹೀರಿ ವಾತಾವರಣ ಶುದ್ಧಗೊಳಿಸುತ್ತವೆ. ಕಾಂಡ್ಲಾ ವನ ಪ್ರಮಾಣ ಹೆಚ್ಚಿದಷ್ಟು ಪರಿಸರದಲ್ಲಿ ಇಂಗಾಲದ ಪ್ರಮಾಣ ಕಡಿಮೆಯಾಗುತ್ತದೆ. ಈ ಕಾರ್ಯಕ್ಕೆ ಹಿಮಾಲಯ ವೆಲ್‌ನೆಸ್ ಕಂಪನಿ ಮತ್ತು ವ್ಯಾಲ್ಯು ನೆಟ್‌ವರ್ಕ್ ವೆಂಚರ್ಸ್ ಎಂಬ ಏಜೆನ್ಸಿ ಮೂಲಕ ಪರಿಸರ ರಕ್ಷಣೆಗೆ ಕಾಂಡ್ಲಾ ಕೃಷಿ ಕೈಕೊಳ್ಳಲಾಗಿದೆ' ಎಂದು ಹೇಳಿದರು.

'ಪ್ರತಿ ವರ್ಷ 12 ಸಾವಿರ ಮೆಟ್ರಿಕ್ ಟನ್ ಇಂಗಾಲವನ್ನು ನೆಲದಡಿ ಹುದುಗಿಸಿ ಪರಿಸರ ಶುದ್ಧ ಮಾಡಲು ರೈತರ ಜಮೀನು ಬಳಕೆ ಆಗುತ್ತದೆ. ಇದರಿಂದ ರೈತರಿಗೆ ಕಾರ್ಬನ್ ಕ್ರೆಡಿಟ್ ಹೆಸರಿನಲ್ಲಿ ಪ್ರತಿ ಎಕರೆಗೆ ₹6 ರಿಂದ ₹ 8 ಸಾವಿರ ಆದಾಯ ಸಿಗುತ್ತದೆ' ಎಂದು ಅವರು ತಿಳಿಸಿದರು.

ರೈತರ 5 ಗುಂಪು ರಚನೆ

'ಕುಮಟಾದ ಧಾರೇಶ್ವರದಿಂದ ಮಾದನಗೇರಿವರೆಗೆ 2020-21ರಿಂದ ರೈತರ ಪಾಳುಬಿದ್ದ ಗಜನಿ ಭೂಮಿಯಲ್ಲಿ ಕಾಂಡ್ಲಾ ಗಿಡ ನೆಡುವ ಯೋಜನೆ ಕೈಗೆತ್ತಿಕೊಂಡಿದ್ದೇವೆ. 250 ರೈತರ ಜೊತೆ ಈ ಬಗ್ಗೆ ಒಪ್ಪಂದ ಮಾಡಿಕೊಂಡು ತಲಾ 50 ಜನರ ರೈತರ 5 ಗುಂಪು ರಚಿಸಲಾಗಿದೆ' ಎಂದು ಸ್ನೇಹ ಕುಂಜ ಸಂಸ್ಥೆಯ ಕಾರ್ಯದರ್ಶಿ ನರಸಿಂಹ ಹೆಗಡೆ ತಿಳಿಸಿದರು.

'ಕಾರ್ಬನ್ ಕ್ರೆಡಿಟ್ ಆದಾಯ ಎಲ್ಲ ರೈತರ ಬ್ಯಾಂಕ್ ಖಾತೆಗಳಿಗೆ ಸಮನಾಗಿ ಜಮೆ ಆಗುವಂತೆ ವ್ಯವಸ್ಥೆ ರೂಪಿಸಲಾಗಿದೆ. 2026ರ ಮಾರ್ಚ್‌ನಲ್ಲಿ ಮೊದಲ ಹಂತದ ಕಾರ್ಬನ್ ಕ್ರೆಡಿಟ್ ಮೊತ್ತ ರೈತರ ಬ್ಯಾಂಕ್ ಖಾತೆಗೆ ಜಮೆ ಆಗಲಿದೆ' ಎಂದರು.



ಕುಮಟಾ ತಾಲ್ಲೂಕು ಮಾಸೂರಿನಲ್ಲಿ ಪಾಳುಬಿದ್ದಿದ್ದ ಭೂಮಿಯಲ್ಲಿ ಕಾಂಡ್ಲಾ ಗಿಡ ಬೆಳೆಸಲಾಗಿದೆ

> ಕಾಂಡ್ಲಾ ಕೃಷಿ ಪ್ರದೇಶವು ಮೀನು, ಸಿಗಡಿ, ಏಡಿ ಸೇರಿ ಜಲಚರಗಳ ಸಂತತಿ ಬೆಳೆಯಲು ಅನುಕೂಲಕರ. ರೈತರಿಗೆ ಉತ್ತಮ ಆದಾಯ ಸಿಗುತ್ತದೆ
> **ನರಸಿಂಹ ಹೆಗಡೆ,** ಕಾರ್ಯದರ್ಶಿ, ಸ್ನೇಹಕುಂಜ ಸಂಸ್ಥೆ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ.

ರಂಗ ಪ್ರದರ್ಶನ

ಪ್ರಜಾವಾಣಿ ಚಿತ್ರ



ಕರ್ನಾಟಕ ಬೀದಿ ನಾಟಕ ಅಕಾಡೆಮಿ ಆಯೋಜಿಸಿರುವ ಸಿಜಿಕೆ-75 ರಂಗಭೂಮಿಯ ಒಡಲಾಳ ನಾಟಕೋತ್ಸವದಲ್ಲಿ ಸೋಮವಾರ ನವರಸಂ ರಂಗ ತಂಡವು ಕುವೆಂಪು ಅವರು ರಚಿಸಿದ 'ಬೆರಳ್ಗೆ ಕೊರಳ್' ನಾಟಕವನ್ನು ಪ್ರಸ್ತುತಪಡಿಸಿತು

ನಾಯಿ ಕಚ್ಚಿ 274 ಮಂದಿಗೆ ಗಾಯ

ಆಶ್ರಯ ತಾಣದಲ್ಲಿ 139 ಬೀದಿ ನಾಯಿ
• ನಗರ ಪಾಲಿಕೆ ಅಧಿಕಾರಿಗಳಿಂದ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಮೂರು ತಿಂಗಳಿಂದ ಬೀದಿ ನಾಯಿಗಳು 274 ಪ್ರಕರಣಗಳಲ್ಲಿ ಜನರ ಮೇಲೆ ದಾಳಿ ಮಾಡಿದ್ದು, ಯಾರಿಗೂ ಗಂಭೀರ ಸ್ವರೂಪದ ಗಾಯಗಳಾಗಿಲ್ಲ ಎಂದು ನಗರ ಪಾಲಿಕೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜಿಬಿಎ ವ್ಯಾಪ್ತಿಯಲ್ಲಿ ಬೀದಿ ನಾಯಿ ಹಾವಳಿಗೆ ಸಂಬಂಧಿಸಿದಂತೆ ಲೋಕಾಯುಕ್ತರ ವಿಚಾರಣೆಯಲ್ಲಿ ಸೋಮವಾರ ಭಾಗವಹಿಸಿದ್ದ ಪಾಲಿಕೆಗಳ ಪಶು ಸಂಗೋಪನೆ ವಿಭಾಗದ ಸಹಾಯಕ ನಿರ್ದೇಶಕರು ವರದಿ ಸಲ್ಲಿಸಿದರು.

ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 44 ಬೀದಿ ನಾಯಿಗಳು ಕಚ್ಚಿದ ಪ್ರಕರಣಗಳು ವರದಿಯಾಗಿವೆ. ಒಬ್ಬ ವ್ಯಕ್ತಿಗೆ ಹಲವು ಕಡೆ ನಾಯಿ ಕಚ್ಚಿದ್ದರಿಂದ ಆತನಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಆ ವ್ಯಕ್ತಿ ಸಂಪೂರ್ಣ ಗುಣಮುಖನಾಗಿದ್ದಾನೆ ಎಂದು ಮಾಹಿತಿ ನೀಡಿದ್ದಾರೆ.

ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಲಯ-1ರಲ್ಲಿ 68 ಹಾಗೂ ವಲಯ-2ರಲ್ಲಿ 26 ಬೀದಿ ನಾಯಿ ಕಚ್ಚಿದ ಪ್ರಕರಣಗಳು ವರದಿಯಾಗಿವೆ. ಇದರಲ್ಲಿ ನಾಲ್ಕು ಉಗ್ರ ನಾಯಿಗಳನ್ನು ಪ್ರತ್ಯೇಕಿಸಿ ಆಶ್ರಯ ಕೇಂದ್ರ ದಲ್ಲಿ ಇರಿಸಲಾಗಿದೆ ಎಂದಿದ್ದಾರೆ.

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಲಯ-1ರಲ್ಲಿ 32 ಹಾಗೂ ವಲಯ-2ರಲ್ಲಿ 31, ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 32 ಪ್ರಕರಣಗಳ ಬೀದಿ ನಾಯಿ ಕಚ್ಚಿದ ಪ್ರಕರಣಗಳಿದ್ದು, ಯಾವುದೇ ಗಂಭೀರ ಗಾಯಗಳಾಗಿಲ್ಲ.

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ 41 ನಾಯಿ ಕಚ್ಚಿದ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ ಆಶ್ರಯ ತಾಣದಲ್ಲಿರಿಸಿದ್ದ ನಾಲ್ಕು ನಾಯಿಗಳು ಸತ್ತಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಆಶ್ರಯ ತಾಣದಲ್ಲಿ ಬೀದಿ ನಾಯಿಗಳ ಸುರಕ್ಷತೆ ಬಗ್ಗೆ ಖಾತರಿ ಪಡಿಸಿಕೊಳ್ಳುವಂತೆ ಲೋಕಾಯುಕ್ತರು ಅಧಿಕಾರಿಗಳಿಗೆ ಸೂಚಿಸಿದರು.

ಐದೂ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿದ್ದ 139 ಬೀದಿ ನಾಯಿಗಳನ್ನು ಆಶ್ರಯ ತಾಣದಲ್ಲಿ ಇರಿಸಲಾಗಿದೆ. ಸುಪ್ರೀಂ ಕೋರ್ಟ್ ಆದೇಶ ಪಾಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. 7617 ಸಂಸ್ಥೆಗಳನ್ನು ಗುರುತಿಸಲಾಗಿದ್ದು, ಡಿ.25ರ ಒಳಗೆ ಆಶ್ರಯ ತಾಣಗಳಿಗೆ ಬೀದಿ ನಾಯಿಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪಶು ಸಂಗೋಪನೆ ವಿಭಾಗದ ಉಪ ನಿರ್ದೇಶಕರು ಲೋಕಾಯುಕ್ತರಿಗೆ ಸಲ್ಲಿಸಿದ ವರದಿಯಲ್ಲಿ ತಿಳಿಸಿದ್ದಾರೆ.

ಬೀದಿ ನಾಯಿ ಕಚ್ಚಿದ ಪ್ರಕರಣಗಳು (ನಗರ ಪಾಲಿಕೆ)

ನಗರ ಪಾಲಿಕೆ	ಪ್ರಕರಣಗಳು
ಉತ್ತರ	44
ದಕ್ಷಿಣ	94
ಪಶ್ಚಿಮ	63
ಕೇಂದ್ರ	32
ಪೂರ್ವ	41

ಆಶ್ರಯ ತಾಣದಲ್ಲಿ ಕೋಳಿ ಮಾಂಸ

ಆಶ್ರಯ ತಾಣದಲ್ಲಿರಿಸಲಾಗುವ ಬೀದಿ ನಾಯಿಗಳಿಗೆ ಕೋಳಿ ಮಾಂಸ ಸೇರಿದಂತೆ ಪೋಷಕಾಂಶಯುಕ್ತ ಆಹಾರ ನೀಡಲು ನಗರ ಪಾಲಿಕೆಗಳು ನಿರ್ಧರಿಸಿವೆ.

ಬಿಬಿಎಂಪಿಯಾಗಿದ್ದಾಗ 2025ರ ಜುಲೈನಲ್ಲಿ ಬೀದಿ ನಾಯಿಗಳಿಗೆ ₹2.88 ಕೋಟಿ ವೆಚ್ಚದಲ್ಲಿ ಆಹಾರ ನೀಡಲು ನಿರ್ಧರಿಸಲಾಗಿತ್ತು. ಸಾಕಷ್ಟು ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಯೋಜನೆ ಸ್ಥಗಿತಗೊಂಡಿತ್ತು. ಸುಪ್ರೀಂ ಕೋರ್ಟ್ ಬೀದಿ ನಾಯಿಗಳನ್ನು ಆಶ್ರಯ ತಾಣಕ್ಕೆ ಸ್ಥಳಾಂತರಿಸಬೇಕು ಎಂದು ಸೂಚಿಸಿರುವುದರಿಂದ ಮತ್ತೆ 'ಚಿಕನ್ ರೈಸ್' ನೀಡುವ ಯೋಜನೆಗೆ ಚಾಲನೆ ನೀಡಲಾಗಿದೆ.

'ಈ ಹಿಂದೆ ಒಂದು ಬಾರಿ ಊಟ ನೀಡುವ ಯೋಜನೆ ಇತ್ತು. ಆಶ್ರಯ ತಾಣದಲ್ಲಿ ಎರಡು ಬಾರಿ ಊಟ ನೀಡುವ ಯೋಜನೆ ರೂಪಿಸಲಾಗಿದೆ. ಇದಕ್ಕೆ ಪಾಲಿಕೆಗಳ ವ್ಯಾಪ್ತಿಯಲ್ಲೇ ಟೆಂಡರ್ ಕರೆಯಲಾಗುತ್ತದೆ. ಕೋಳಿ ಮಾಂಸವನ್ನು ಎರಡು ಬಾರಿ ನೀಡಬೇಕೇ ಅಥವಾ ಒಂದು ಬಾರಿ ಸಾಕೇ ಎಂಬುದರ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತಿದೆ. ಎರಡು ಬಾರಿ ಊಟ ನೀಡುವುದರಿಂದ ವೆಚ್ಚ ಮೊದಲಿನ ಅಂದಾಜಿಗಿಂತ ಹೆಚ್ಚಾಗಲಿದೆ' ಎಂದು ಪಶು ಸಂಗೋಪನೆ ವಿಭಾಗದ ಅಧಿಕಾರಿಗಳು ತಿಳಿಸಿದರು.



ಬಿಡಿಸಿಸಿ ಬ್ಯಾಂಕ್ ಚುನಾವಣೆ: ಕಾಂಗ್ರೆಸ್ ಬೆಂಬಲಿಗರಿಗೆ ಜಯ

ಬೆಂಗಳೂರು: ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಬಿಡಿಸಿಸಿ ಬ್ಯಾಂಕ್) ಆಡಳಿತ ಮಂಡಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ತಿಳಿಸಿದರು.


ಚಾಮರಾಜಪೇಟೆಯ ಬಿಡಿಸಿಸಿ ಬ್ಯಾಂಕ್‌ನಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '18 ಕ್ಷೇತ್ರಗಳ ಪೈಕಿ 15ರಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಗೆದ್ದಿದ್ದಾರೆ. ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರದ 2 ಕ್ಷೇತ್ರಗಳು, ಚನ್ನಪಟ್ಟಣದ 1, ಕನಕಪುರದ 2, ಮಾಗಡಿಯ 2 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಶಾಸಕ ಸೋಮಶೇಖರ್ ಅವರು ನಮ್ಮ ಜೊತೆ ಕೈಜೋಡಿಸಿದ್ದು, ಅವರ ಕ್ಷೇತ್ರದಲ್ಲೂ ನಮ್ಮ ಅಭ್ಯರ್ಥಿ ಗೆದ್ದಿದ್ದಾರೆ. ಬೆಂಗಳೂರು ಉತ್ತರ ಜಿಲ್ಲೆಯ ಹೊಸಕೋಟೆಯ 2, ದೇವನಹಳ್ಳಿಯಲ್ಲಿ 1, ದೊಡ್ಡಬಳ್ಳಾಪುರದಲ್ಲಿ 1, ಆನೇಕಲ್‌ನಲ್ಲಿ 1, ಬೆಂಗಳೂರು ಉತ್ತರದಲ್ಲಿ 1 ಕ್ಷೇತ್ರದಲ್ಲಿ ಹಾಗೂ ಎಚ್.ಎಂ. ರೇವಣ್ಣ ಅವರ ಸಹಕಾರದಿಂದ 1 ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆದ್ದಿದ್ದಾರೆ. ಉಳಿದಂತೆ ನೆಲಮಂಗಲ ಹಾಗೂ ಸೋಲೂರುಗಳಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆದ್ದಿದ್ದಾರೆ' ಎಂದು ಮಾಹಿತಿ ನೀಡಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ರಾಮಲಿಂಗಾರೆಡ್ಡಿ, ಕೆ.ಎಚ್ ಮುನಿಯಪ್ಪ, ಕೃಷ್ಣ ಬೈರೇಗೌಡ ಹಾಗೂ ಶಾಸಕರಾದ ಶಿವಣ್ಣ, ಶರತ್ ಬಚ್ಚೇಗೌಡ, ಇಕ್ಬಾಲ್ ಹುಸೇನ್, ಬಾಲಕೃಷ್ಣ, ಸಿ.ಪಿ ಯೋಗೇಶ್ವರ್, ಶ್ರೀನಿವಾಸ್, ಮುಖಂಡರಾದ ಆರ್.ಕೆ. ರಮೇಶ್, ವೆಂಕಟರಮಣಪ್ಪ ಮತ್ತಿತರರ ಸಹಕಾರದಿಂದ ಈ ಗೆಲುವು ಸಾಧ್ಯವಾಗಿದೆ ಎಂದು ತಿಳಿಸಿದರು.

ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಹಾಗೂ ಬೆಂಗಳೂರು ನಗರ ಜಿಲ್ಲೆಗಳ ಒಟ್ಟು 36 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿ ಹೊಂದಿರುವ ಬ್ಯಾಂಕ್ ಇದಾಗಿದೆ. ರೈತರು ಹಾಗೂ ನಾಗರಿಕರಿಗೆ ಉತ್ತಮ ಸೇವೆ, ಸೌಲಭ್ಯವನ್ನು ನಮ್ಮ ಆಡಳಿತ ಮಂಡಳಿ ನೀಡಲಿದೆ' ಎಂದರು.

ನಿಧನ ವಾರ್ತೆ

ಮರಿಯಪ್ಪ



ಬೆಂಗಳೂರು: ಸುಂಕದಕಟ್ಟೆ ನಿವಾಸಿ ಮರಿಯಪ್ಪ (90) ಅವರು ಸೋಮವಾರ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರಿದ್ದಾರೆ.

ಮೃತರ ಹುಟ್ಟೂರು ನೆಲಮಂಗಲದ ಬೆತ್ತನಗೆರೆಯಲ್ಲಿ ಮಂಗಳವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸಂಪರ್ಕಕ್ಕೆ: 93420 63745.

ಪುತ್ರನ ಕೊಂದು ತಾಯಿ, ಅಜ್ಜಿ ಆತ್ಮಹತ್ಯೆ

ತಾವರೆಕೆರೆಯ ಒಂದನೇ ಮುಖ್ಯರಸ್ತೆಯ ಬಾಡಿಗೆ ಮನೆಯಲ್ಲಿ ಘಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುದ್ದಗುಂಟೆಪಾಳ್ಯ ಠಾಣೆ ಪೊಲೀಸ್ ಠಾಣಾ ವ್ಯಾಪ್ತಿಯ ತಾವರೆಕೆರೆ ಒಂದನೇ ಮುಖ್ಯರಸ್ತೆಯ ಬಾಡಿಗೆ ಮನೆಯಲ್ಲಿ ಮೂವರ ಮೃತದೇಹ ಪತ್ತೆಯಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಮಾದಮ್ಮ (68), ಅವರ ಪುತ್ರಿ ಸುಧಾ (38) ಹಾಗೂ ಸುಧಾ ಅವರ ಪುತ್ರ ಮೌನೀಶ್(14) ಮೃತದೇಹ ಪತ್ತೆಯಾಗಿದೆ. ಪುತ್ರನನ್ನು ಕೊಂದು ತಾಯಿ ಹಾಗೂ ಅಜ್ಜಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ.

ವಿಷಯ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ, ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಹಾಗೂ ಸೊಕೊ ತಂಡದ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತಮಿಳುನಾಡಿನ ಧರ್ಮಪುರಿಯ ಕುಟುಂಬ ಒಂದೂವರೆ ವರ್ಷದಿಂದ ತಾವರೆಕೆರೆಯಲ್ಲಿ ವಾಸವಿತ್ತು. ಮಾದಮ್ಮ ಜತೆಗೆ ಪುತ್ರಿ ಸುಧಾ ಹಾಗೂ ಅವರ ಮೊಮ್ಮಗ ವಾಸವಿದ್ದರು. ಆರಂಭದಲ್ಲಿ ಬಿರಿಯಾನಿ ಹೋಟೆಲ್ ನಡೆಸುತ್ತಿದ್ದ ತಾಯಿ, ಮಗಳು, ನಂತರ ಹಾಲಿನ ವ್ಯಾಪಾರದ ಜೊತೆಗೆ ಮನೆಗೆಲಸ ಮಾಡಿಕೊಂಡಿದ್ದರು ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

'ಸೋಮವಾರ ಬೆಳಿಗ್ಗೆ ಪೊಲೀಸ್ ಸಹಾಯವಾಣಿಗೆ ಬಂದ ಕರೆ ಆಧರಿಸಿ, ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಮೂವರ ಮೃತದೇಹ ಪತ್ತೆಯಾಗಿದೆ. ಮೃತದೇಹಗಳ ಮರಣೋತ್ತರ ಪರೀಕ್ಷೆಗೆಂದು ರವಾನಿಸಲಾಗಿದೆ. ತಮಿಳುನಾಡಿನಲ್ಲಿ ನೆಲಸಿರುವ ಸುಧಾ ಅವರ ಕುಟುಂಬಸ್ಥರಿಗೆ ಮಾಹಿತಿ ನೀಡಲಾಗಿದೆ. ಮೊದಲು ಪುತ್ರನಿಗೆ ವಿಷ ಕುಡಿಸಿ ಬಳಿಕ ತಾವೂ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಮರಣೋತ್ತರ ಪರೀಕ್ಷಾ ವರದಿ ಬಂದ ಬಳಿಕವಷ್ಟೇ ಸಾವಿಗೆ ಕಾರಣ ಗೊತ್ತಾಗಲಿದೆ' ಎಂದು ಪೊಲೀಸರು ಹೇಳಿದರು.


ಮೃತರಾದ ಮಾದಮ್ಮ, ಸುಧಾ ಹಾಗೂ ಮೌನೀಶ್

'ಭಾನುವಾರ ಮೂವರೂ ಧರ್ಮಪುರಿ ಬಳಿಯ ದೇವಸ್ಥಾನಕ್ಕೆ ಹೋಗಿ ಪೂಜೆ ಮುಗಿಸಿಕೊಂಡು ವಾಪಸ್ ಬಂದಿದ್ದರು. ನಂತರ, ಸಹೋದರಿಯೊಂದಿಗೂ ಮಾತನಾಡಿದ್ದರು. ಅದಾದ ಮೇಲೆ ಈ ಘಟನೆ ನಡೆದಿದೆ' ಎಂದು ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ತಿಳಿಸಿದ್ದಾರೆ.

ಸಾಲದ ಕಾರಣಕ್ಕೆ ಆತ್ಮಹತ್ಯೆ: 'ಬಿರಿಯಾನಿ ಹೋಟೆಲ್ ನಡೆಸುವಾಗ ಸಾಲ ಮಾಡಿಕೊಂಡಿದ್ದರು. ಸಾಲ ವಿಪರೀತವಾದ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮದ್ಯ ಸೇವಿಸಿ ಕಾರು ಚಾಲನೆ: ಸರಣಿ ಅಪಘಾತ

ಬೆಂಗಳೂರು: ಬಸವನಗುಡಿಯ ವಾಸವಿ ರಸ್ತೆಯಲ್ಲಿ ಭಾನುವಾರ ರಾತ್ರಿ ಚಾಲಕ ಪಾನಮತ್ತನಾಗಿ ಅಡ್ಡಾದಿಡ್ಡಿ ಕಾರು ಚಲಾಯಿಸಿದ ಪರಿಣಾಮ ಸರಣಿ ಅಪಘಾತ ಸಂಭವಿಸಿದೆ. ಘಟನೆಯಲ್ಲಿ ನಾಲ್ಕು ವಾಹನಗಳು ಜಖಂಗೊಂಡಿವೆ. ಜತೆಗೆ ಮನೆಯೊಂದರ ಕಾಂಪೌಂಡ್‌ಗೂ ಹಾನಿಯಾಗಿದೆ.

ಬಾಣಸವಾಡಿ ಬಳಿಯ ಜೈಭಾರತ್ ನಗರ ನಿವಾಸಿ ಪ್ರಣಯ್ ಜೈನ್ (26) ಎಂಬುವವರು ಸ್ನೇಹಿತರೊಂದಿಗೆ ಪಾರ್ಟಿ ನಡೆಸಿ ಕಾರು ಚಾಲನೆ ಮಾಡಿಕೊಂಡು ಮನೆಗೆ ಹೋಗುವಾಗ ಈ ಅಪಘಾತ ಸಂಭವಿಸಿತ್ತು.

'ಪ್ರಣಯ್ ಜೈನ್ ಅವರು ತಮ್ಮ ಬೆಂಜ್ ಕಾರಿನಲ್ಲಿ ಸ್ನೇಹಿತರನ್ನು ಅವರ ಮನೆಗಳಿಗೆ ಡ್ರಾಪ್ ಮಾಡಿ ಜೈಭಾರತ್ ನಗರದತ್ತ ತೆರಳುತ್ತಿದ್ದರು. ಮದ್ಯದ ನಶೆಯಲ್ಲಿ ಅವರು ಅಡ್ಡಾದಿಡ್ಡಿ ಕಾರು ಚಾಲನೆ ಮಾಡಿದ್ದಾರೆ' ಎಂದು ಸಂಚಾರ ಪೊಲೀಸರು ಹೇಳಿದರು.

ಅಡ್ಡಾದಿಡ್ಡಿ ಕಾರು ಚಾಲನೆ ಮಾಡಿದ್ದರಿಂದ ನಿಯಂತ್ರಣ ತಪ್ಪಿ, ರಸ್ತೆ ಬದಿಯಲ್ಲಿ ನಿಂತಿದ್ದ ಬೈಕ್‌ಗಳಿಗೆ ಹಾಗೂ ಕಾರಿಗೆ ಡಿಕ್ಕಿ ಹೊಡೆದಿದೆ. ನಂತರ, ರಸ್ತೆ ಪಕ್ಕದ ಮನೆಯ ಕಾಂಪೌಂಡ್‌ಗೆ ಗುದ್ದಿದೆ.

ಘಟನೆಯ ವಿಷಯ ತಿಳಿದು ಸ್ಥಳಕ್ಕೆ ಹೋಗಿ ಪ್ರಣಯ್ ಜೈನ್ ಅವರನ್ನು ತಪಾಸಣೆ ಮಾಡಿದಾಗ ಅವರು ಮದ್ಯ ಸೇವಿಸಿ ಕಾರು ಚಾಲನೆ ಮಾಡಿರುವುದು ದೃಢಪಟ್ಟಿದೆ. ಅವರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಕಾರು ಚಾಲಕರ ವಿರುದ್ಧ ಪಾನಮತ್ತ ಚಾಲನೆ ಆರೋಪದ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.



ಪ್ರಮುಖ ವಿಮಾನಯಾನಗಳ ವಿಮಾನ ಪ್ರಯಾಣಿಕರು ಹೆಚ್ಚು ಸಂಕಷ್ಟ ಅನುಭವಿಸಿದ್ದಾರೆ!

ವೈದ್ಯೆಗೆ ಪ್ರಜ್ಞೆ ತಪ್ಪಿಸಿ ಆಭರಣ ದೋಚಿದ ನೇಪಾಳದ ದಂಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯೆಗೆ ಪ್ರಜ್ಞೆ ತಪ್ಪಿಸಿ, ಅವರ ಕುತ್ತಿಗೆ ಹಾಗೂ ಮನೆಯಲ್ಲಿದ್ದ ಆಭರಣ ದೋಚಿ ಪರಾರಿಯಾಗಿರುವ ನೇಪಾಳದ ದಂಪತಿಗಾಗಿ ಬ್ಯಾಡರಹಳ್ಳಿ ಠಾಣೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಬ್ಯಾಡರಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಭರತ್‌ನಗರದಲ್ಲಿ ನೆಲಸಿರುವ ಸ್ತ್ರೀರೋಗ ತಜ್ಞೆ ಲಲಿತಾ ಅವರ ಮನೆಯಲ್ಲಿ ಕಳ್ಳತನ ನಡೆದಿದೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಒಟ್ಟು 55 ಗ್ರಾಂ ಚಿನ್ನಾಭರಣ ಕಳ್ಳತನ ಮಾಡಲಾಗಿದೆ ಎಂದು ದೂರು ನೀಡಲಾಗಿದೆ.

'ನೇಪಾಳದ ದಂಪತಿ ತಿಂಗಳ ಹಿಂದಷ್ಟೇ ಮನೆಗೆಲಸಕ್ಕೆ ಸೇರಿಕೊಂಡಿದ್ದರು. ಮನೆಯ ನೆಲ ಮಹಡಿಯಲ್ಲಿ ನೆಲಸಿದ್ದರು. ಲಲಿತಾ ಅವರ ಪತಿಯೂ ವೈದ್ಯರಾಗಿದ್ದಾರೆ. ಪುತ್ರ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ವೈದ್ಯ ದಂಪತಿಯ ಮನೆಯಲ್ಲಿ ಅಧಿಕ ಹಣ ಹಾಗೂ ಆಭರಣ ಇರುವ ಮಾಹಿತಿಯನ್ನು ಆರೋಪಿಗಳು ತಿಳಿದುಕೊಂಡಿದ್ದರು. ಡಿ.2ರಂದು ಲಲಿತಾ ಅವರ ಪುತ್ರ ಅನಾರೋಗ್ಯದಿಂದ ಬೇಗನೆ ಮಲಗಿದ್ದರು. ಅದೇ ಸರಿಯಾದ ಸಮಯವೆಂದು ಆಲೋಚಿಸಿ, ಅಂದು ರಾತ್ರಿ ವೈದ್ಯೆಗೆ ಊಟದಲ್ಲಿ ಔಷಧ ಬೆರೆಸಿ ಕೊಟ್ಟಿದ್ದರು. ಊಟ ಸೇವಿಸಿದ ವೈದ್ಯೆ ಕೆಲವೇ ನಿಮಿಷಗಳಲ್ಲಿ ಪ್ರಜ್ಞೆ ತಪ್ಪಿದ್ದರು. ಅದಾದ ಮೇಲೆ ಲಲಿತಾ ಅವರ ಮೈ ಮೇಲಿದ್ದ 40 ಗ್ರಾಂ ಸರ ಹಾಗೂ 15 ಗ್ರಾಂನ ತೂಕದ ಎರಡು ಬಳೆಗಳು, ಮೊಬೈಲ್ ಮತ್ತು ಹಣ ದೋಚಿಕೊಂಡು ಪರಾರಿ ಆಗಿದ್ದರು' ಎಂದು ಪೊಲೀಸರು ಹೇಳಿದರು.

ಮರು ದಿನ ಬೆಳಿಗ್ಗೆ ಪುತ್ರ ತನ್ನ ಕೊಠಡಿಯಿಂದ ಎದ್ದು ತಾಯಿ ಕೊಠಡಿಗೆ ಹೋಗಿ ನೋಡಿದಾಗ ಚಿನ್ನ ಹಾಗೂ ನಗದು ದೋಚಿ ಪರಾರಿ ಆಗಿರುವುದು ಗೊತ್ತಾಗಿತ್ತು ಎಂದು ಪೊಲೀಸರು ಹೇಳಿದರು.

ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸಾಮೂಹಿಕ ಅತ್ಯಾಚಾರ ದೂರು: ಪ್ರಕರಣಕ್ಕೆ ತಿರುವು

ಬೆಂಗಳೂರು: 'ಸಾಮೂಹಿಕ ಅತ್ಯಾಚಾರ ನಡೆದಿದೆ' ಎಂಬುದಾಗಿ ಯುವತಿಯೊಬ್ಬರು ನೀಡಿದ್ದ ದೂರಿನ ತನಿಖೆ ವೇಳೆ ಪ್ರಕರಣ ತಿರುವು ಪಡೆದುಕೊಂಡಿದೆ. 'ಸಂತ್ರಸ್ತೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿಲ್ಲ; ಬದಲಿಗೆ ಸ್ನೇಹಿತನಿಂದಲೇ ಲೈಂಗಿಕ ದೌರ್ಜನ್ಯ ನಡೆದಿದೆ' ಎಂಬುದು ತನಿಖೆಯಲ್ಲಿ ಗೊತ್ತಾಗಿದೆ. ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ವೇಳೆ ದೂರುದಾರೆ ಗೊಂದಲಕಾರಿ ಹೇಳಿಕೆ ನೀಡಿದ್ದರು. ತನಿಖೆ ಮುಂದುವರಿಸಿದಾಗ ಪ್ರಿಯಕರನ ಎದುರು ಸತ್ಯ ಮುಚ್ಚಿಡಲು ಸುಳ್ಳು ದೂರು ದಾಖಲಿಸಿರುವುದು ಬಯಲಾಗಿದೆ.

ಸಂತ್ರಸ್ತೆ ಮೊದಲು ಮಡಿವಾಳ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಕ್ಯಾಬ್ ಚಾಲಕ ಮತ್ತು ಆತನ ಸ್ನೇಹಿತ ಸೇರಿ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ, ಮಡಿವಾಳ ಪೊಲೀಸರು ಪ್ರಕರಣವನ್ನು ಬಾಣಸವಾಡಿ ಠಾಣೆಗೆ ವರ್ಗಾಯಿಸಿದ್ದರು. ದೂರಿನ ಅನ್ವಯ, ಕೇರಳ ಕ್ಯಾಬ್ ಚಾಲಕ ಸುರೇಶ್ ಎಂಬಾತನನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದರು.

'ಮಡಿವಾಳದಿಂದ ಕ್ಯಾಬ್ ಬುಕ್ ಮಾಡಿದ್ದ ಕೇರಳದ ಯುವತಿ, ತನ್ನದೇ ರಾಜ್ಯದ ಕ್ಯಾಬ್ ಚಾಲಕ ಸುರೇಶ್‌ಗೆ ಪರಿಚಿತರಾಗಿದ್ದರು. ಇಬ್ಬರೂ ಸ್ನೇಹಿತರಾಗಿ, ನಂತರ ಪರಸ್ಪರ ಒಪ್ಪಿಗೆಯೊಂದಿಗೆ ದೈಹಿಕ ಸಂಪರ್ಕ ಬೆಳೆಸಿದ್ದರು. ಪಾರ್ಟಿ, ಹೋಟೆಲ್ ಎಂದು ಸುತ್ತಾಟ ನಡೆಸಿದ್ದರು. ಆ ಸಂದರ್ಭದಲ್ಲಿ ಯುವತಿಗೆ ಸಣ್ಣ ಗಾಯವಾಗಿತ್ತು. ಕೆಲವು ದಿನ ಕಳೆದ ಮೇಲೆ ಯುವತಿ ಕೇರಳಕ್ಕೆ ತೆರಳಿ, ಸ್ನೇಹಿತನನ್ನು ಭೇಟಿ ಮಾಡಿದ್ದರು. ಗಾಯದ ಬಗ್ಗೆ ಪ್ರಿಯಕರ ಕೇಳಿದ್ದರು. ಆಗ ಯುವತಿ ಸಾಮೂಹಿಕ ಅತ್ಯಾಚಾರ ನಡೆದಿದೆ ಎಂಬುದಾಗಿ ಹೇಳಿದ್ದರು. ಗೆಳತಿಯ ಮಾತು ನಂಬಿದ್ದ ಪ್ರಿಯಕರ, ಪ್ರಿಯತಮೆಯನ್ನು ಬೆಂಗಳೂರಿಗೆ ಕರೆದುತಂದು ದೂರು ದಾಖಲಿಸಿದ್ದರು' ಎಂದು ಮೂಲಗಳು ಹೇಳಿವೆ.

'ತನಿಖೆ ವೇಳೆ ಯುವತಿ ಹಾಗೂ ಆರೋಪಿ ಸುರೇಶ್ ವಾಟ್ಸ್‌ಆ್ಯಪ್ ಪರಿಶೀಲನೆ ನಡೆಸಲಾಯಿತು. ಅವರಿಬ್ಬರಿಗೂ ಮೊದಲೇ ಪರಿಚಯ ಇರುವುದು ಪತ್ತೆ ಆಯಿತು. ಇಬ್ಬರೂ ಪರಸ್ಪರ ಒಪ್ಪಿಗೆಯಿಂದ ಭೇಟಿ ಮಾಡಿರುವುದಕ್ಕೂ ಸಾಕ್ಷ್ಯಗಳು ಲಭ್ಯವಾಗಿವೆ. ಆರೋಪಿ ಸಹ ಇಬ್ಬರ ಒಪ್ಪಿಗೆಯಿಂದಲೇ ಲೈಂಗಿಕ ಕ್ರಿಯೆ ನಡೆದಿರುವುದಾಗಿ ಹೇಳಿಕೆ ನೀಡಿದ್ದಾನೆ' ಎಂದು ಮೂಲಗಳು ಹೇಳಿವೆ.

'ಯುವತಿ ಹೇಳಿಕೆಯನ್ನೂ ದಾಖಲು ಮಾಡಲಾಗಿದೆ. ಪ್ರಕರಣದಲ್ಲಿ ಈ ಮೊದಲು ಸಾಮೂಹಿಕ ಅತ್ಯಾಚಾರ ಪ್ರಕರಣ ದಾಖಲಾಗಿತ್ತು. ಇದೀಗ ಕ್ಯಾಬ್ ಚಾಲಕನ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮರಣಪತ್ರ ಬರೆದಿಟ್ಟು ಯುವತಿ ಆತ್ಮಹತ್ಯೆ

ರಾಮನಗರ: ತನ್ನೊಂದಿಗೆ ಪ್ರೀತಿಯ ನಾಟಕವಾಡಿದ ಯುವಕನಿಂದ ಬ್ಲಾಕ್ ಮೇಲ್ ಮತ್ತು ವಂಚನೆಗೆ ಒಳಗಾದ ಯುವತಿಯೊಬ್ಬರು ನೇಣಿ ಹಾಕಿಕೊಂಡ ಘಟನೆ ತಾಲ್ಲೂಕಿನಲ್ಲಿ ನಡೆದಿದೆ.

ತಾಲ್ಲೂಕಿನ ವಿಭೂತಿಕೆರೆಯ ವರ್ಷಿಣಿ (22) ಮೃತರು. ಯುವುದಕ್ಕೆ ಮುನ್ನ ಮರಣಪತ್ರ ಬರೆದಿಟ್ಟಿರುವ ಅವರು, 'ಪ್ರೀತಿ ಹೆಸರಲ್ಲಿ ಮೋಸ ಮಾಡಿರುವ ಅಭಿ ನನ್ನ ಸಾವಿಗೆ ಕಾರಣ. ಅವನನ್ನು ಸುಮ್ಮನೆ ಬಿಡಬೇಡಿ' ಎಂದು ನಮೂದಿಸಿದ್ದಾರೆ.

ಈ ಸಂಬಂಧ ರಾಮನಗರ ಗ್ರಾಮಾಂತರ ಠಾಣೆ ಪೊಲೀಸರು ಅಭಿಯನ್ನು ಬಂಧಿಸಿದ್ದಾರೆ.

ಪುನೀತ್ ಕೆರೆಹಳ್ಳಿ ವಿರುದ್ಧ ಮತ್ತೊಂದು ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯಾನ್ಮಾರ್ ನಿರಾಶ್ರಿತರೊಬ್ಬರ ಮೇಲೆ ಹಲ್ಲೆ ನಡೆಸಿದ ಆರೋಪದಡಿ ರಾಷ್ಟ್ರ ರಕ್ಷಣಾ ಪಡೆಯ ಮುಖಂಡ ಪುನೀತ್ ಕೆರೆಹಳ್ಳಿ ಹಾಗೂ ಸಹಚರರ ವಿರುದ್ಧ ಸಿ.ಕೆ.ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪುನೀತ್ ಕೆರೆಹಳ್ಳಿ ಮತ್ತು ಸಹಚರರಿಂದ ಹಲ್ಲೆಗೆ ಒಳಗಾಗಿರುವ ಜಹಂಗೀರ್ ಆಲಂ ಎಂಬುವರು ದೂರು ನೀಡಿದ್ದಾರೆ.

ಜಹಂಗೀರ್ ಆಲಂ, ಪತ್ನಿ ಮತ್ತು ಮಕ್ಕಳೊಂದಿಗೆ ಹಲವು ವರ್ಷಗಳಿಂದ ಕಗ್ಗಲಿಪುರದಲ್ಲಿ ನೆಲಸಿದ್ದಾರೆ. ಅವರಿಗೆ ವಿಶ್ವಸಂಸ್ಥೆಯ ನಿರಾಶ್ರಿತರ ಏಜೆನ್ಸಿಯು (ಯುಎನ್‌ಎಚ್‌ಸಿಆರ್) ನಿರಾಶ್ರಿತರ ಗುರುತಿನ ಚೀಟಿ ನೀಡಿದೆ. ಜಹಂಗೀರ್ ಆಲಂ ಅವರು ಚಿಂದಿ ಆಯುವ ಕೆಲಸ ಮಾಡುತ್ತಾರೆ. ಅವರು ನಾಯಂಡಹಳ್ಳಿ, ಬನಶಂಕರಿ, ಚನ್ನಮ್ಮನಕೆರೆ ಅಚ್ಚುಕಟ್ಟು ಭಾಗದಲ್ಲಿ ಚಿಂದಿ ಆಯುತ್ತಾರೆ ಎಂದು ಪೊಲೀಸರು ಹೇಳಿದರು.

'ಡಿ.3ರಂದು ರಾತ್ರಿ ಚನ್ನಮ್ಮನಕೆರೆ ಅಚ್ಚುಕಟ್ಟು ಭಾಗದಲ್ಲಿ ಚಿಂದಿ ಆಯುತ್ತಿದ್ದಾಗ ಪುನೀತ್ ಕೆರೆಹಳ್ಳಿ ಮತ್ತು ಸಹಚರರು ಅಲ್ಲಿಗೆ ಬಂದು ಜಹಂಗೀರ್ ಆಲಂ ಅವರನ್ನು ನಿಂದಿಸಿದ್ದಾರೆ. ಬಾಂಗ್ಲಾ ನುಸುಳುಕೋರ ಎಂದು ಭಾವಿಸಿ ಜಹಂಗೀರ್ ಅವರನ್ನು ಎಳೆದಾಡಿ, ಹಲ್ಲೆ ನಡೆಸಿದ್ದರು' ಎಂದು ಪೊಲೀಸರು ಹೇಳಿದರು.

ವಿಚಾರಣೆಗೆ ಬರುವಂತೆ ಆರೋಪಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಗ್ಯಾಸ್ ಗೀಸರ್‌ನಿಂದ ಅನಿಲ ಸೋರಿಕೆ: ತಾಯಿ, ಮಗಳ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಿಂದರಾಜನಗರ ಠಾಣಾ ವ್ಯಾಪ್ತಿಯ ಪಂಚಮಶೀಲ ನಗರದ ಮನೆಯೊಂದರಲ್ಲಿ ಸ್ನಾನ ಮಾಡುತ್ತಿದ್ದ ವೇಳೆ ಗ್ಯಾಸ್ ಗೀಸರ್‌ನಿಂದ ಅನಿಲ ಸೋರಿಕೆಯಾಗಿ ತಾಯಿ ಹಾಗೂ ಮಗಳು ಸೋಮವಾರ ಮಧ್ಯಾಹ್ನ ಮೃತಪಟ್ಟಿದ್ದಾರೆ. ಚಾಂದಿನಿ (30) ಹಾಗೂ ಯುವಿ ಕಿರಣ್ (4) ಮೃತರು.

ಚಾಂದಿನಿ ಅವರ ಪತಿ ಕಿರಣ್ ಅವರು ಕಾರ್ಪೆಂಟರ್ ಕೆಲಸಕ್ಕೆ ತೆರಳಿದ್ದರು. ದಂಪತಿಯ ಮೊದಲ ಮಗಳು ಶಾಲೆಗೆ ತೆರಳಿದ್ದಳು. ಅವಳನ್ನು ಕಿರಣ್ ಅವರ ಸಹೋದರ ಸೋಮವಾರ ಮಧ್ಯಾಹ್ನ ಮನೆಗೆ ಕರೆದುಕೊಂಡು ಬಂದಿದ್ದರು. ಬಾಗಿಲು ಬಡಿದರೂ ತೆರೆದಿರಲಿಲ್ಲ. ಬಳಿಕ ಬಾಗಿಲು ಒಡೆದು ಪರಿಶೀಲಿಸಿದಾಗ ಸ್ನಾನದ ಕೋಣೆಯಲ್ಲಿ ಅಸ್ವಸ್ಥರಾಗಿ ತಾಯಿ ಹಾಗೂ ಮಗಳು ಬಿದ್ದಿರುವುದು ಕಂಡುಬಂತು. ತಕ್ಷಣವೇ ಇಬ್ಬರನ್ನೂ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಗೋವಿಂದರಾಜನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದಲ್ಲಿ ಇಂದು

ಮಹಿಳಾ ಉದ್ಯಮಿಗಳಿಗಾಗಿ ಒಂದು ದಿನದ ರಾಷ್ಟ್ರೀಯ ಮಟ್ಟದ ವಿಚಾರಸಂಕಿರಣ: ಅತಿಥಿಗಳು: ಕೋಕಿಲಾ ಎ., ಕೆ. ರತ್ನಪ್ರಭಾ, ಆಯೋಜನೆ: ಉಬುಂಟು ಮಹಿಳಾ ಉದ್ಯಮಿ ಸಂಘಗಳ ಒಕ್ಕೂಟ, ಸ್ಥಳ: ಆಡಳಿತ ಸಂಶೋಧನಾ ಸಂಸ್ಥೆ, ಐಎಎಸ್ ಆಫೀಸರ್ಸ್ ಅಸೋಸಿಯೇಷನ್, ಬೆಳಿಗ್ಗೆ 10

'ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನ'ದ ಉದ್ಘಾಟನೆ: ಅಶೋಕ ಬಿ. ಹಿಂಚಿಗೇರಿ, ಅತಿಥಿಗಳು: ಸಲೀಲ್ ಶೆಟ್ಟಿ, ಮೀರಾ ಕೃಷ್ಣಪ್ಪ, ಅಧ್ಯಕ್ಷತೆ: ಆರ್. ಉಪೇಂದ್ರ ಶೆಟ್ಟಿ, ಆಯೋಜನೆ: ಯೂನಿವರ್ಸಲ್ ಸ್ಕೂಲ್ ಆಫ್ ಲಾ, ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ಪ್ರಶಸ್ತಿ ಪ್ರದಾನ, ಬಹುಮಾನ ವಿತರಣೆ: ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ್, ಪ್ರಶಸ್ತಿ ಪ್ರದಾನ: ಪುರುಷೋತ್ತಮ ಬಿಳಿಮಲೆ, ಉಪಸ್ಥಿತಿ: ಎಲ್. ಹನುಮಂತಯ್ಯ, ವ.ಚ. ಚನ್ನೇಗೌಡ, ಅಮೃತ ನಾರಾಯಣ, ಭಾರತಿ ಶೇಷಗಿರಿರಾವ್, ಸಂಜೀವರತ್ನ, ಪ್ರಶಸ್ತಿ ಸ್ವೀಕರಿಸುವವರು: ಹಿ.ಚಿ. ಬೋರಲಿಂಗಯ್ಯ, ಟಿ. ತಿಮ್ಮೇಶ್, ಅ.ಕೃ. ಸೋಮಶೇಖರ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ಕಾರ್ಮಿಕ ಲೋಕ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಸಿಜಿಕೆ–75 ರಂಗಭೂಮಿಯ ಒಡಲಾಳ ನಾಟಕೋತ್ಸವ: ಅಧ್ಯಕ್ಷತೆ: ಸಿ.ಕೆ. ಗುಂಡಣ್ಣ, ಅತಿಥಿ: ಸಿ.ಎಂ. ನರಸಿಂಹಮೂರ್ತಿ, 'ಬೆಲ್ಲದ ದೋಣಿ' ನಾಟಕ ಪ್ರದರ್ಶನ: ರಂಗವಾಹಿನಿ ಚಾಮರಾಜನಗರ, ರಚನೆ: ಹನೂರು ಚೆನ್ನಪ್ಪ, ನಿರ್ದೇಶನ: ರೂಬಿನ್ ಸಂಜಯ್, ಆಯೋಜನೆ: ಕರ್ನಾಟಕ ಬೀದಿನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.45


ಸಿಜಿಕೆ

'ಅನೂಹ್ಯ' ನಾಟಕ ಪ್ರದರ್ಶನ: ನಿರ್ದೇಶನ: ಎಸ್.ವಿ. ಕಶ್ಯಪ್, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಉತ್ಸಾಹವೆಂಬ ಪರಮೌಷಧ



• ರಘು ವಿ.

ಆರೋಗ್ಯವೇ ಮಹಾಭಾಗ್ಯ ಎಂಬ ಮಾತು ನಮಗೆಲ್ಲ ತಿಳಿದದ್ದೇ. ಆದರೆ, ನಿಜವಾದ ಆರೋಗ್ಯ ಎಂದರೇನು? ದೇಹ ಸ್ವಸ್ಥವಾಗಿದ್ದರೆ ಸಾಕೇ? ಖಂಡಿತ ಸಾಲದು. ನಿಜವಾದ ಆರೋಗ್ಯದ ಗುರುತು ಉತ್ಸಾಹದಲ್ಲಿ ಕಾಣಬರುತ್ತದೆ. ಉತ್ಸಾಹವಿಲ್ಲದ ದೇಹ ಕೇವಲ ಒಂದು ಚರ್ಮ-ಎಲುಬಿನ ಗೂಡು. ಉತ್ಸಾಹವೇ ಜೀವದ ಶಕ್ತಿ, ಅದು ನಮ್ಮ ದೇಹ ಮನಸ್ಸುಗಳಿಗೆ ಹುರುಪು ನೀಡುತ್ತದೆ.

ಉತ್ಸಾಹ ಮತ್ತು ಆರೋಗ್ಯದ ನಡುವಣ ಸಂಬಂಧ: ಉತ್ಸಾಹವು ನಮ್ಮ ಒಳಗಿನ ಸೌಖ್ಯದ ದರ್ಪಣ. ನಾವು ಉತ್ಸಾಹದಿಂದ ಇದ್ದಾಗ, ನಮ್ಮ ದೇಹದಲ್ಲಿ 'ಎಂಡಾರ್ಫಿನ್ಸ್' ಎಂಬ ಸಂತೋಷ ಹಾರ್ಮೋನುಗಳು ಹೆಚ್ಚಾಗಿ ಸ್ರವಿಸುತ್ತವೆ. ಇವು ನೋವನ್ನು ಕಡಿಮೆ ಮಾಡಿ, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ. ಉತ್ಸಾಹವಿಲ್ಲದ ವ್ಯಕ್ತಿ ಸಣ್ಣ ಸಮಸ್ಯೆಯನ್ನೂ ಸಹಿಸಲಾರ, ಅವನ ರೋಗನಿರೋಧಕ ಶಕ್ತಿಯೂ ಕುಗ್ಗುತ್ತದೆ. ಆದುದರಿಂದಲೇ ಅಂತಹವರಲ್ಲಿ ಖಿನ್ನತೆ ಮತ್ತು ಚಿಂತೆಗಳು ಆವರಿಸಿ ಹಲವಾರು ಶಾರೀರಿಕ ರೋಗಗಳಿಗೆ ಕಾರಣವಾಗುತ್ತವೆ.

ಸ್ವಾಮಿ ವಿವೇಕಾನಂದರು, 'ಹಿಂದಿರುಗಿ ನೋಡದಿರಿ , ಮುನ್ನುಗ್ಗಿ; ಅಮಿತ ಶಕ್ತಿ, ಅನಂತ ಉತ್ಸಾಹ, ಅದಮ್ಯ ಸಾಹಸ ಮತ್ತು ಅನಂತ ಸಹನೆ - ಇವಿದ್ದರೆ ಮಾತ್ರವೇ ಮಹತ್ಕಾರ್ಯಗಳನ್ನು ಸಾಧಿಸಬಲ್ಲೆವು' ಎಂದಿದ್ದಾರೆ. ಉತ್ಸಾಹವೇ ಜೀವನ. ಉತ್ಸಾಹ ಕಡಿಮೆಯಾದಂತೆಲ್ಲಾ ಮರಣ ಸನಿಹವಾಗುತ್ತದೆ. ನಿಜವಾಗಿಯೂ, ಉತ್ಸಾಹವುಳ್ಳ ವ್ಯಕ್ತಿ ಬಹಳ ಶಕ್ತಿಯುತವಾಗಿ ಕೆಲಸ ಮಾಡಬಲ್ಲ, ಸವಾಲನ್ನು ಸಮರ್ಥವಾಗಿ ಎದುರಿಸಬಲ್ಲ. ಉತ್ಸಾಹವೇ ದೇಹದ ಮುಖ್ಯ ಇಂಧನ. ಅದಿದ್ದಾಗ ಎಲ್ಲ ಅಂಗಗಳು ಚುರುಕಾಗಿ, ಸರಿಯಾಗಿ ಕೆಲಸ ಮಾಡುತ್ತವೆ.

ಆದುದರಿಂದಲೇ ಜೀವನದ ಯಶಸ್ಸು ಬಯಸುವವರು ಮೊದಲಿಗೆ ಉತ್ಸಾಹವನ್ನು ರೂಢಿಸಿಕೊಳ್ಳಬೇಕು.

ಉತ್ಸಾಹದ ವಿರುದ್ಧಪದ ನಿರುತ್ಸಾಹ, ಎಂದರೆ ಅಶ್ರದ್ಧೆ, ನಿರಾಸಕ್ತಿ. ಕರ್ಮಯೋಗದ ಆಶಯ ಕರ್ಮಕೌಶಲ. ಎಂದರೆ ತಾಮಸವನ್ನು ಮೆಟ್ಟಿ ರಾಜಸಿಕತೆಯನ್ನು ಮೆರೆಯುವ ಸಂಕಲ್ಪ, ಅದರ ಅಭಿವ್ಯಕ್ತಿ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನ ಉತ್ಸಾಹವನ್ನು ಪ್ರಚೋದಿಸುವ ಕೆಲಸವನ್ನೇ ಮಾಡಿರುವುದು. ಶ್ರೀಕೃಷ್ಣನು ಅರ್ಜುನನಿಗೆ ಕರ್ಮಯೋಗದ ಬಗ್ಗೆ ಬೋಧಿಸುವಾಗ, 'ಯೋಗಃ ಕರ್ಮಸು ಕೌಶಲಂ' (ಕರ್ಮಗಳಲ್ಲಿ ನಿಪುಣತೆಯೇ ಯೋಗ) ಎಂದು ಹೇಳುತ್ತಾನೆ. ಕರ್ಮದಲ್ಲಿ ನಿಪುಣತೆ ಬರಬೇಕಾದರೆ ಉತ್ಸಾಹ ಅತ್ಯಗತ್ಯ. ಕರ್ಮವನ್ನು ಉತ್ಸಾಹದಿಂದ, ಶ್ರದ್ಧೆಯಿಂದ ಮಾಡುವುದೇ ಆರೋಗ್ಯಕರ ಮನಸ್ಸಿನ ಲಕ್ಷಣ. ರೋಮ್‌ನ ಚಿಂತಕ ಸಿಸೆರೋ ಹೇಳುತ್ತಾನೆ, 'ಚೈತನ್ಯಶೀಲ ಆತ್ಮ ದೀರ್ಘಕಾಲ ಬಾಳುತ್ತದೆ. ಚೈತನ್ಯಶೀಲ ಆತ್ಮ ಎಂದರೆ ಉತ್ಸಾಹಭರಿತವಾದ ಆತ್ಮ. ಇಂತಹ ಆತ್ಮವು ದೇಹವನ್ನು ದೀರ್ಘಕಾಲ ಚೆನ್ನಾಗಿ ಇರಿಸುತ್ತದೆ. ಆಶಾವಾದ ಮತ್ತು ಉತ್ಸಾಹ ಸೋದರರು. ಇವು ನಮ್ಮ ರಕ್ತದೊಳಗೆ ಸಾಗಿ, ರೋಗಗಳನ್ನು ಎದುರಿಸುವ ಶಕ್ತಿಯನ್ನು ನೀಡುತ್ತವೆ.'

ಸನಾತನಧರ್ಮದ ಲಕ್ಷಣವೇ ಉತ್ಸಾಹ. ಕಠೋಪನಿಷತ್ತಿನ ನಚಿಕೇತ ತನ್ನನ್ನು ಯಮನಿಗೆ ದಾನ ಮಾಡಿದ ವಿಚಾರ ಕೇಳಿ ಎದೆಗುಂದಲಿಲ್ಲ. ತಾನೇ ಮುಂದಾಗಿ ಯಮಲೋಕಕ್ಕೆ ನಡೆದು ಅವನ ಬಾಗಿಲು ಕಾದು ಯಮನನ್ನೇ ಪ್ರಶ್ನಿಸಿದ. ಯಾವ ಉಪನಿಷತ್ತೇ ಆಗಲಿ, ಅಲ್ಲಿನ ಪ್ರಶ್ನೋತ್ತರಗಳನ್ನು ಗಮನಿಸಿ; ಪ್ರಾಶ್ನಿಕನು ಅತ್ಯಂತ ಉತ್ಸಾಹದಿಂದ ಬೌದ್ಧಿಕ ಉನ್ನತಿಯನ್ನು ಕಾಣುವ ಹವಣಿಕೆಯಲ್ಲಿ ಇರುವುದು ಗೋಚರವಾಗುತ್ತದೆ.

ನಮ್ಮ ಅಧ್ಯಯನ ಯಾವಾಗಲೂ ಉತ್ಸಾಹಭರಿತವಾಗಿರಬೇಕು. ಉತ್ಸಾಹವನ್ನು ಜ್ಞಾನಾರ್ಜನೆಯ ಅವಿಭಾಜ್ಯ ಅಂಗವಾಗಿ ಕಾಣಲಾಗಿದೆ.

ನಿತ್ಯಜೀವನದಲ್ಲಿ ಉತ್ಸಾಹವನ್ನು ಹೇಗೆ ಕಾಪಾಡಿಕೊಳ್ಳಬೇಕು?

1 **ಕೃತಜ್ಞತಾ ಭಾವ:** ಪ್ರತಿದಿನ ನಮ್ಮಲ್ಲಿರುವ ಮತ್ತು ನಮಗೆ ದೊರೆಯುವ ಸಣ್ಣ ಸಣ್ಣ ಅನುಕೂಲಗಳಿಗೆ ಧನ್ಯವಾದ ಹೇಳುತ್ತ ಕೃತಜ್ಞತೆಯ ಭಾವವನ್ನು ವ್ಯಕ್ತಪಡಿಸಿದರೆ ಅದು ಉತ್ಸಾಹವನ್ನು ಹೆಚ್ಚಿಸುತ್ತದೆ. ಉದಾಹರಣೆಗೆ, ನಿತ್ಯ ನಾವು ಕಚೇರಿಗೋ ಶಾಲಾ-ಕಾಲೇಜಿಗೋ ಪಯಣಿಸುವಾಗ ಬಸ್ಸಿನ ನಿರ್ವಾಹಕನಿಗೋ ಸಹಪ್ರಯಾಣಿಕನಿಗೋ ಒಂದು ಮುಗುಳನಗೆ ಸಹಿತ ಧನ್ಯವಾದ ಅರ್ಪಿಸಿದರೆ, ಅದರಿಂದ ಅವರ ದಿನವೂ ಉಲ್ಲಸಿತವಾಗಿರುತ್ತದೆ, ನಮ್ಮ ಮನಸ್ಸಿನಲ್ಲೂ ಉತ್ಸಾಹ ಮೂಡುತ್ತದೆ.

2 **ಶಾರೀರಿಕ ಚಟುವಟಿಕೆ:** ನಿತ್ಯವೂ ಮಾಡುವ ವ್ಯಾಯಾಮ, ಯೋಗಾಸನ ಮತ್ತು ಧ್ಯಾನಗಳು ಮನಸ್ಸನ್ನು ಪ್ರಸನ್ನಗೊಳಿಸಿ ಉತ್ಸಾಹವನ್ನು ತರುತ್ತವೆ. ವ್ಯಾಯಾಮದಿಂದ ದೇಹದಲ್ಲಿ ಸಂತೋಷಕಾರಕ ಹಾರ್ಮೋನ್‌ಗಳು ಉತ್ಪತ್ತಿಯಾಗುತ್ತವೆ. ಆದುದರಿಂದ ನಮ್ಮ ನಮ್ಮ ವಯೋಮಾನಕ್ಕೆ ತಕ್ಕುದಾದ ಮೈ ಬೆವರುವಂತಹ ವ್ಯಾಯಾಮದಲ್ಲಿ ತೊಡಗುವುದರಿಂದ ಉತ್ಸಾಹವನ್ನು ಕಾಪಾಡಿಕೊಳ್ಳಬಹುದು.

3 **ಗುರಿಯಿರಲಿ ಬಾಳ್ಗೆ:** ಜೀವನದಲ್ಲಿ ಒಂದು ಗುರಿ ಇರಿಸಿಕೊಳ್ಳುವುದರಿಂದ, ಅದನ್ನು ಸಾಧಿಸಲು ಶ್ರಮಿಸುವುದರಿಂದ ಉತ್ಸಾಹವನ್ನು ಕಾಪಾಡಿಕೊಳ್ಳಬಹುದು. ಗುರಿ ಎತ್ತರವಾದಷ್ಟೂ ಉತ್ಸಾಹ ಹೆಚ್ಚು. ಬೆಟ್ಟ ದೊಡ್ಡದಾದಷ್ಟೂ ಹತ್ತುವ ಹುಮ್ಮಸ್ಸು.

4 **ಸಕಾರಾತ್ಮಕ ಜನರ ಸಹವಾಸ:** ಸಂತೋಷ ಮತ್ತು ಉತ್ಸಾಹದಿಂದ ಇರುವವರ ಸಹವಾಸದಿಂದ ನಮ್ಮಲ್ಲೂ ಅದರ ಪ್ರಭಾವ ಮೂಡುತ್ತದೆ. ರಭಸವಾಗಿ ಹರಿವ ನದಿಗೆ ಝರಿ ಬೆರೆತರೆ ಅದಕ್ಕೂ ವೇಗದ ಓಘ ದಕ್ಕುವಂತೆ ಇದು. ಸಾಧ್ಯವಾದಷ್ಟೂ ಉತ್ಸಾಹಶಾಲಿಗಳೊಂದಿಗೆ ನಮ್ಮ ಒಡನಾಟವಿರಲಿ.

5 **ಹವ್ಯಾಸಗಳು:** ನಮಗೆ ಇಷ್ಟವಾದ ಕೆಲಸಗಳನ್ನು ಮಾಡುವುದರಿಂದ, ಹವ್ಯಾಸಗಳನ್ನು ಬೆಳೆಸಿಕೊಳ್ಳುವುದರಿಂದ ಮನಸ್ಸಿಗೆ ಮುದ ದೊರೆತು, ಚಟುವಟಿಕೆಗಳಲ್ಲಿ ಉತ್ಸಾಹ ತುಂಬಿಕೊಳ್ಳುತ್ತದೆ.

ನಿಜವಾದ ಆರೋಗ್ಯ ಎಂದರೆ ಕೇವಲ ರೋಗವಿಲ್ಲದಿರುವುದು ಮಾತ್ರವಲ್ಲ, ಅದು ಒಂದು ಪೂರ್ಣವಾದ ಸ್ಥಿತಿ - ದೇಹ, ಮನಸ್ಸು ಮತ್ತು ಆತ್ಮದ ಸಮಗ್ರ ಕ್ಷೇಮ. ಈ ತ್ರಿವೇಣಿ ಸಂಗಮದಲ್ಲಿ ಉತ್ಸಾಹವೇ ಪ್ರವಾಹದ ಶಕ್ತಿ. ಉತ್ಸಾಹವು ನಮ್ಮ ಜೀವನದ ನದಿಗೆ ದಿಕ್ಕು ಮತ್ತು ಗತಿ ನೀಡುತ್ತದೆ. ಆದುದರಿಂದ, ಉತ್ಸಾಹವನ್ನು ಕಳೆದುಕೊಳ್ಳಬಾರದು. ಸವಾಲುಗಳು ಬಂದಾಗ, ಅವುಗಳನ್ನು ಸ್ವಾಗತಿಸಿ. ಜೀವನದ ಪ್ರತಿ ಕ್ಷಣವನ್ನು ಉತ್ಸಾಹದಿಂದ, ಪೂರ್ಣ ಭಾವದಿಂದ ಜೀವಿಸಬೇಕು. ನಮ್ಮ ಉತ್ಸಾಹವೇ ನಮ್ಮ ಆರೋಗ್ಯದ ಸತ್ಯವಾದ ಮತ್ತು ಅತ್ಯುತ್ತಮ ಲಕ್ಷಣವಾಗಿದೆ. ಉತ್ಸಾಹವೇ ಪರಮ ಬಲ. ಉತ್ಸಾಹಕ್ಕಿಂತ ಮಿಗಿಲಾದ ಬಲವೇ ಇಲ್ಲ. ಅಂತಹ ಉತ್ಸಾಹವು ಯಾವಾಗಲೂ ಹಿತಕರವಾದುದು ಮತ್ತು ಎಲ್ಲ ಆರೋಗ್ಯವನ್ನು ನೀಡುವಂಥದ್ದು.

ಫಿಸ್ಟುಲಾಗೆ ವ್ಯಾಯಾಮ–ಆಹಾರಗಳ ಮದ್ದು

ಹೊಸಯುಗದ ಕ್ಲಿಷ್ಟತಮ ಕಾಯಿಲೆ ಫಿಸ್ಟುಲಾ. ಈ ವ್ಯಾಧಿಯ ಬಗ್ಗೆ ಪ್ರಥಮ ಉಲ್ಲೇಖವಿದೆ ವಿಶ್ವದ ಮೊದಲ ಶಸ್ತ್ರವೈದ್ಯ ಸುಶ್ರುತನ ಗ್ರಂಥದಲ್ಲಿಯೇ ಇದೆ. ಅಂದು ಮಹಾರಾಜರ ಸಂಗಡ ಸದಾ ಕಾಲ ಕುಳಿತು ಸಮಾಲೋಚನೆ ಮಾಡುತ್ತಿದ್ದವರು, ರಾಜ ಮಹಾರಾಜರು ಈ ಕಾಯಿಲೆಯಿಂದ ನರಳುತ್ತಿದ್ದರೆಂಬ ಪ್ರಾಚೀನ ಉಲ್ಲೇಖಗಳಿವೆ. ಏನಿದು ಫಿಸ್ತುಲಾ? ಯಾವ ಕಾರಣಗಳಿಂದ ಇದು ಸಂಭವಿಸುತ್ತದೆ? ತಡೆ ಮತ್ತು ಪರಿಹಾರದ ಮಾರ್ಗ ಇಲ್ಲಿದೆ



• ಡಾ.ಸತ್ಯನಾರಾಯಣ ಭಟ್.ಪಿ.

ಮಾಲಿನಿಯ ವಯಸ್ಸು ಕೇವಲ ಇಪ್ಪತ್ತೈದು. ಪ್ರತಿಷ್ಠಿತ ವೈದ್ಯರ ಕುಟುಂಬದ ಹುಡುಗಿ. ಕೊಂಚ ಸ್ಥೂಲ ಕಾಯ. ಅಪ್ಪನಿಂದ ದೂರವಾಣಿ ಕರೆ ಬಂತು. ಅರ್ಜೆಂಟ್ ಎಂದು ದುಂಬಾಲು ಬಿದ್ದರು. ಆಕೆಗಿದ್ದ ದೊಡ್ಡ ತೊಂದರೆ ಪದೇ ಪದೇ ಕುರಗಳು ಏಳುವುದು. ತೊಡೆ, ಪರ್‍ರೆ, ಜಘನ, ಕೆಳಹೊಟ್ಟೆಯಲ್ಲಿ ಕುರ ಉದ್ಭವ. ಅನಂತರ ಕೀವುಗಟ್ಟಿ ನೆತ್ತರು ಮತ್ತು ಕೀವು ಸ್ರಾವ. ಅಸಾಧ್ಯ ಬಾವು ಮತ್ತು ನೋವು. ಕೇವಲ ಒಂದು ಬಾರಿ ನೋಡಿದ ತಕ್ಷಣ ತಿಳಿಯಿತು. ಈ ಕುರಗಳು ಗುದಭಾಗದಿಂದ ತುಂಬ ದೂರದಲ್ಲಿ ಉಂಟಾಗುತ್ತಿವೆ. ಹಾಗಾಗಿ ಕೊಂಚ ನಿರಾಳ. ವೈದ್ಯರೇ ಆಗಿದ್ದ ಮಾಲಿನಿಯ ತಂದೆಗೆ ತಿಳಿಸಿ ಹೇಳಿದೆ. ಆಕೆಯ ಐ.ಟಿ. ಕೆಲಸದ ಪಾಳಿಯಲ್ಲಿ ಪ್ರತಿ ಅರೆ ತಾಸಿಗೊಮ್ಮೆ ಕನಿಷ್ಠ ಹತ್ತು ನಿಮಿಷದ ವಿಶ್ರಾಂತಿ; ನಡಿಗೆ, ಮಹಡಿ ಏರಿಳಿಯುವ ಕಸರತ್ತು; ಕೊಂಚವಾದರೂ ಬೆವರಿಳಿಯುವ ವ್ಯಾಯಾಮಗಳನ್ನು ಸೂಚಿಸಿದೆ. ಕಹಿ ಮದ್ದನ್ನು ಕುಡಿಸಿದೆ. ಕ್ರಮೇಣ ಆಕೆಯ ಪದೇ ಪದೇ ಕುರ ಮೂಡುವ ಸನ್ನಿವೇಶಕ್ಕೆ ಪೂರ್ಣ ವಿರಾಮ ಬಿತ್ತು.

'ಗುದ' ಎಂದರೆ ಮಲಪ್ರವೃತ್ತಿಯ ಹೊರ ಮುಖದ ದ್ವಾರ. 'ಭಗ' ಎಂದರೆ ಮೂತ್ರ ಮಾರ್ಗದ ಪೀಠ. ಹೊಕ್ಕುಳಿನ ಕೆಳಬದಿಯ ಸಮತಟ್ಟು ಪ್ರದೇಶ. 'ನಿತಂಬ' ಎಂದರೆ ಗುದಪ್ರದೇಶದ ಸುತ್ತಣ ಎರಡಂಗುಲ ಪ್ರದೇಶ. ಇಲ್ಲಿ ಮೊದಲಿಗೆ ಕಾಣುವುದು ಕುರದ ಹಾಗೆ ಒಂದು ಗುಳ್ಳೆ. ಅನಂತರ ಅದು ಕೊಳವೆಯಾಕಾರದಲ್ಲಿ ಒಳಗಿನ ಅವಯವಗಳ ಜತೆಗೆ ಜೋಡಿಸಿಕೊಳ್ಳುವ ಮತ್ತು ಗುಣವಾಗದ ಗಾಯ. ಅತ್ಯಂತ ವೇದನೆ, ಮೊದಮೊದಲು ಕೇವಲ ರಕ್ತಸ್ರಾವ. ಅನಂತರ ಕೀವುಭರಿತ ರಕ್ತಸ್ರಾವ. ಗುಣವಾಗದಂತಹ ಗುದಭಾಗದ ಮೂಲವ್ಯಾಧಿಯ ಮುಂದಿನ ಹಂತವೇ 'ಭಗಂದರಾ' (ಫಿಸ್ಟುಲಾ). ಇದು ಯೋನಿಯ ಹೊರಮಾರ್ಗದಲ್ಲಿ ಅಕ್ಕಪಕ್ಕ ಕೂಡ ಉಂಟಾದೀತು. ಗುದದ ಸುತ್ತಲಿನ ನಾಲ್ಕು ಬೆರಳಿನ ಅಂತರದ ವರ್ತುಲದ ಗುದ ಪೀಠ (ಸೀಟ್) ಭಾಗದಲ್ಲಿ ಕಾಣಿಸೀತು. ಮೂತ್ರಚೀಲ - ಬಸ್ತಿ (ಬ್ಲಾಡರ್) ಸಹ ಈ ಕಾಯಿಲೆ ಉಂಟಾಗುವ ಸ್ಥಳ. ಚರಕರ ಒಂದು ಶ್ಲೋಕದಲ್ಲಿ ಹೇಳುವಂತೆ , ಇದು ಶಸ್ತ್ರ ಚಿಕಿತ್ಸೆಯ ಸಂದರ್ಭ. ಆಗ ಅವರು ಸಮಕಾಲೀನ ಸುಶ್ರುತರ ಸ್ಮರಣೆ ಉಲ್ಲೇಖಿಸಿದ್ದು ನಿಜ. ಆದರೆ ಸುಶ್ರುತರು ಗುದ, ಯೋನಿ ಮತ್ತು ಬಸ್ತಿಯಂತಹ ನಾಜೂಕಿನ ಅಂಗ (ಮರ್ಮ) ದಲ್ಲಿ ಪದೇ ಪದೇ ಶಸ್ತ್ರ ಕ್ರಿಯೆ ಬೇಡ ಎಂಬ ಎಚ್ಚರಿಕೆ ಮಾತು ನೀಡಿದ್ದನ್ನು ಮರೆಯಲಾಗದು. ಬನಾರಸ್ ವಿಶ್ವವಿದ್ಯಾಲಯದ ಆಯುರ್ವೇದ ವಿಭಾಗದ ವೈದ್ಯ ಪಿ.ಜೆ. ದೇಶಪಾಂಡೆ ಎಂಬ ನಿಪುಣರು ಹೊಸ ಪ್ರಯೋಗವನ್ನು ವಿಶ್ವಕ್ಕೆ ಪರಿಚಯಿಸಿದ್ದು ಇದೀಗ ಇತಿಹಾಸ.

ಕ್ಷಾರಸೂತ್ರ ಎಂಬ ವಿಧಾನದ ಮೂಲಕ ಕೊಳವೆ ಹುಣ್ಣಿಗೆ ಪರಿಹಾರ ನೀಡುವ ದೇಶಪಾಂಡೆ ವಿಧಾನವನ್ನು ಆಧುನಿಕ ಶಸ್ತ್ರವೈದ್ಯರೂ ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದು ಭಾರತೀಯ ವೈದ್ಯ ಪದ್ಧತಿಗೆ ದೊರಕಿದ ಮನ್ನಣೆ.

ಅಕ್ಕಿ, ರಾಗಿಯನ್ನು ಸೋಸುವ ಜರಡಿ ಗೊತ್ತಲ್ಲ. ಅಂತಹ ಜರಡಿಯಂತಹ ಸಾಲು ಸಾಲು ಹುಣ್ಣು, ರಂಧ್ರ ಗುದದ ಸುತ್ತ ಆಗುವುದನ್ನು ಊಹಿಸಿಕೊಳ್ಳಿರಿ. ಅದರಿಂದ ಸದಾಕಾಲ ಸ್ರಾವ, ಇನ್ನೂ ಹೆಚ್ಚು ತೀವ್ರ ರೋಗಿಗಳಲ್ಲಿ ಮಲವೇ ಹೊರ ಬರುವಂತಹ ಸ್ಥಿತಿ ನಿಜಕ್ಕೂ ಅಸಹನೀಯ. ಈ ಹಂತದ ಸಮಸ್ಯೆಗೆ 'ಶತಪೋನಕ ಭಗಂದರಾ' ಎಂಬ ಹೆಸರು (ನೂರು ರಂಧ್ರ). ಮೂಲವ್ಯಾಧಿಯ ಮುಂದಿನ ಹಂತ ಭಗಂದರಾ ಎಂಬುದು ಶತಸಿದ್ಧ. ಹಾಗಾಗಿ ಕುಳಿತು ಕೆಲಸ ಮಾಡುವ ಎಲ್ಲರಿಗೂ ಅನ್ವಯವಾಗು ಮೊದಲ ಸೂತ್ರ ತಾಸಿಗೊಮ್ಮೆ ವಿರಾಮದ ಹತ್ತು ನಿಮಿಷದ ನಡಿಗೆ.

ಮಲಮೂತ್ರದ ವೇಗ ಯಾವ ಕಾರಣಕ್ಕೂ ತಡೆಯದ ಜೀವನ ಶೈಲಿ. ಮಲಬದ್ಧತೆ ಖಂಡಿತ ಇರಲೇ ಬಾರದು. ದರ್ಜಿ, ವಾಹನ ಚಾಲಕರು, ಅತಿಯಾದ ಜಿಮ್ ಮಾಡುವ ಮತ್ತು ಐಟಿ ಕಾಯಕದ ಹೊಸ ಪೀಳಿಗೆ ನೆನಪಿಡಿ. ಈ ಬಗೆಯ ರೋಗ ವರ್ತುಲಕ್ಕೆ ಸಿಲುಕದಿರಿ. ಈ ಬಗೆಯ ಯುವ ಜನಾಂಗವೇ ಇರಲಿ, ಶ್ರಮಿಕವರ್ಗದವರಾಗಲಿ. ತಮ್ಮ ಗುದಭಾಗದ ಆರೋಗ್ಯ ಪಾಲನೆಯತ್ತ ಎಚ್ಚರದ ನಡಿಗೆ ಇರಿಸುವುದು ಸದಾಕಾಲದ ಅಗತ್ಯಕ್ರಮ.

ಗುಟಕಾ, ತಂಬಾಕು, ಮದ್ಯ, ಧೂಮಪಾನ, ಇರುಳಿನ ಪಾಳಿಯ ನಿದ್ದೆಗೇಡು, ಕಾಫಿ, ಚಹದಂತಹ ಉತ್ತೇಜಕ ಪೇಯಗಳ ಪದೇ ಪದೇ ಸೇವನೆ, ಅತಿ ಖಾರ, ಕರಿದ ತಿಂಡಿ, ಅನುದಿನವೂ ನಾರಿನಂಶ ರಹಿತ ಮಾಂಸಾಹಾರಕ್ಕಿರಲಿ ಕಡಿವಾಣ. ಮೊಸರಿಗಿಂತ ಮಜ್ಜಿಗೆ ಹೆಚ್ಚು ಸೂಕ್ತ. ಬೇಳೆಗಿಂತ ತೆಂಗಿನ ಕಾಯಿ ಬಳಕೆಗೆ ಹೆಚ್ಚು ಒತ್ತು ಕೊಡಿರಿ. ಮೂಲಂಗಿ, ಈರುಳ್ಳಿ, ಸೊಪ್ಪು ತರಕಾರಿಗಳಿಂದ ಹೆಚ್ಚು ಉಪಕಾರ. ನುಗ್ಗೆ ಎಲೆ, ಸುವರ್ಣಗಡ್ಡೆಯಂತಹ ವಸ್ತುಗಳು ಉಪಕಾರಿ ಆಹಾರ.

ಮಲಶೋಧನೆಗೆ ಅಳಲೆಕಾಯಿಯ ಸಾರ್ವತ್ರಿಕ ಬಳಕೆಗೆ ಇದೆ ಮನ್ನಣೆ. ಭಯ ಬೇಡ. ಬಂದ ಮೇಲೆ ಅನುಭವಿಸುದಕ್ಕಿಂತ ಭಗಂದರ ತಡೆ ಉತ್ತಮ ಮಾರ್ಗ. 'ಹಸಿದು ಹಸಿದಿರ ಬೇಡ, ಹಸಿಯದಿರೆ ಉಣಬೇಡ, ಬಿಸಿ ಬೇಡ, ತಂಗೂಳನುಣಬೇಡ ವೈದ್ಯನಾ ಬೇಸನವೆ ಬೇಡ ಸರ್ವಜ್ಞ!'

ತಿದ್ದುಪಡಿ: ಡಿ.2ರ ಸಂಚಿಕೆಯಲ್ಲಿ ಪ್ರಕಟವಾದ 'ಮೈಮನಗಳನ್ನು ಸುಡುವ ಟೈಫಾಯ್ಡ್' ಲೇಖನದ ಲೇಖಕರ ಹೆಸರು ತಪ್ಪಾಗಿ ಪ್ರಕಟವಾಗಿದೆ. ಇದರ ಲೇಖಕರು ಡಾ. ವೀಣಾ ಎನ್.ಸುಳ್ಯ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಗಣಿತ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ–5 ಸಮಾಂತರ ಶ್ರೇಢಿ

ಅಭ್ಯಾಸ 5.2

9) ಒಂದು ಸಮಾಂತರ ಶ್ರೇಢಿಯ 3ನೇ ಮತ್ತು 9ನೇ ಪದಗಳು ಕ್ರಮವಾಗಿ 4 ಮತ್ತು –8 ಆದರೆ ಅದರ ಎಷ್ಟನೇ ಪದ ಸೊನ್ನೆಯಾಗಿದೆ?

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ, 3ನೇ ಪದ= 4

$a + (3-1)d = 4 \quad (\because a_n = a+(n-1)d)$

$a + 2d = 4$ .... (1)

9ನೇ ಪದ = - 8 (ಹಿಂದಿನ ಸಂಚಿಕೆಯಿಂದ)

$a + (9-1)d = -8$

$a + 8d = -8$ ....(2)

(1) ಮತ್ತು (2)ನ್ನು ಬಿಡಿಸುವುದರಿಂದ

$a = 8 \quad d = -2$

ಸಮಾಂತರ ಶ್ರೇಢಿಯ nನೇ ಪದ ಶೂನ್ಯವಾದಾಗ

$a + (n-1)d = 0 \quad (a_n = a+(n-1)d)$

$= 8+(n-1)(-2) = 0$

$= -2(n-1)= -8 \Rightarrow = -2(n-1)= -8 \Rightarrow n-1 = -8/-2 = 4$

$n = 4+1 = 5$

5ನೇ ಪದ ವು ಶೂನ್ಯವಾಗಿದೆ

10) ಒಂದು ಸಮಾಂತರ ಶ್ರೇಢಿಯ 17ನೇ ಪದವು ಅದರ 10ನೇ ಪದಕ್ಕಿಂತ 7 ಹೆಚ್ಚಾಗಿದ್ದರೆ ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ, ಪ್ರಶ್ನೆಯಲ್ಲಿ ಕೊಟ್ಟಂತೆ $a_{17} = a_{10} + 7$

$a + (17-1)d = a + (10-1)d + 7$

$(\because a_n = a+(n-1)d)$

$a + 16d = a + 9d + 7$

$16d - 9d = 7 \Rightarrow 7d = 7 \Rightarrow d = 7/7 = 1$

ಸಾಮಾನ್ಯ ವ್ಯತ್ಯಾಸ = 1

11) 3, 15, 27, 39 .... ಈ ಸಮಾಂತರ ಶ್ರೇಢಿಯ ಯಾವ ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿದೆ?

ಪರಿಹಾರ:– ನೀಡಿರುವ ಸಮಾಂತರ ಶ್ರೇಢಿ 3, 15, 27, 39.........

ಇಲ್ಲಿ $a = 3 \quad d = 15-3 = 12$

$a_n = a + (n-1)d$

$a_{54} = a + 53d$

$= 3 + 53(12)$

$= 639$

nನೇ ಪದವು 54ನೇ ಪದಕ್ಕಿಂತ 132 ಹೆಚ್ಚಾಗಿದೆ ಎಂದು ಭಾವಿಸಿದಾಗ

$a_n = a_{54} + 132$

$= 639 + 132$

$= 771$

$a + (n-1)d = 771$

$(n-1)12 = 771 - a$

$(n-1)12 = 771 - 3$

$(n-1)12 = 768$

$(n-1) = 768/12$

$(n-1) = 64$

$n = 65$

65 ಪದವು ಅದರ 54ನೇ ಪದಕ್ಕಿಂತ 132 ಹೆಚ್ಚಾಗಿದೆ

12) ಎರಡು ಸಮಾಂತರ ಶ್ರೇಢಿಗಳ ಸಾಮಾನ್ಯ ವ್ಯತ್ಯಾಸ ಒಂದೇ ಆಗಿದೆ. ಅವುಗಳ 100ನೇ ಪದಗಳ ನಡುವಿನ ವ್ಯತ್ಯಾಸ 100 ಆದರೆ 1000ನೇ ಪದಗಳ ನಡುವಿನ ವ್ಯತ್ಯಾಸವೇನು?

ಪರಿಹಾರ:– ಎರಡೂ ಸಮಾಂತರ ಶ್ರೇಢಿಯ ಮೊದಲ ಪದಗಳು ಕ್ರಮವಾಗಿ a_1 ಮತ್ತು a_2 ($a_1 > a_2$) ಆಗಿರಲಿ.

ಸಾಮಾನ್ಯ ವ್ಯತ್ಯಾಸ d ಆಗಿರಲಿ

ಮೊದಲ ಪದ =

$a_1 + (100-1)d \quad (\because a_n = a+(n-1)d)$

$= a_1 + 99d$

ಎರಡನೇ ಪದ=

$a_2 + (100-1)d \quad (\because a_n = a+(n-1)d)$

$= a_2 + 99d$

ದತ್ತ ಪ್ರಶ್ನೆಯ ಪ್ರಕಾರ

$a_1 + (99)d - a_2 + (99)d = 100$

$a_1 - a_2 = 100$

ಈಗ 1000th term of the 1st AP

$a_1 + (1000-1)d \quad (\because a_n = a+(n-1)d)$

$= a_1 + 999d$

1000th term of the 2nd AP

$a_2 + (1000-1)d \quad (\because a_n = a+(n-1)d)$

$= a_2 + 999d$

ಆದ್ದರಿಂದ ಇವುಗಳ 1000ನೇ ಪದಗಳ ನಡುವಿನ ವ್ಯತ್ಯಾಸ =

$(a_1 + 999)d - (a_2 + 999)d$

$a_1 - a_2 = 100$

13) ಮೂರು ಅಂಕಿಗಳ ಎಷ್ಟು ಸಂಖ್ಯೆಗಳು 7ರಿಂದ ಭಾಗಿಸಲ್ಪಡುತ್ತದೆ?

ಪರಿಹಾರ:– 7ರಿಂದ ಭಾಗಿಸಲ್ಪಡುವ ಮೂರು ಅಂಕಿಯ ಸಂಖ್ಯೆಗಳು 105, 112, 119, 126........994

$\Rightarrow a_2 - a_1 = 112 - 105 = 7$

$\Rightarrow a_3 - a_2 = 119 - 112 = 7$

$\Rightarrow a_4 - a_3 = 126 - 119 = 7$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 7$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿವೆ.

ಮೊದಲ ಪದ ಪದಗಳು(a) 105, ಕೊನೆಯ ಪದ (l) = 994

ಇವುಗಳ nನೇ ಪದ= (l)

$a + (n-1)d = 994$

$105 + (n-1)(7) = 994$

$(n-1)7 = 994 - 105$

$(n-1)7 = 889$

$(n-1) = \frac{889}{7}$

$(n-1) = 127$

$n = 127 + 1 = 128$

128 ಮೂರು ಅಂಕಿಯ ಸಂಖ್ಯೆಗಳು 7ರಿಂದ ಭಾಗಿಸಲ್ಪಡುತ್ತವೆ.

14) 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ ಎಷ್ಟು?

ಪರಿಹಾರ:– 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ

12, 16, 20, 24...............248

$\Rightarrow a_2 - a_1 = 16 - 12 = 4$

$\Rightarrow a_3 - a_2 = 20 - 16 = 4$

$\Rightarrow a_4 - a_3 = 24 - 20 = 4$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 4$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿವೆ.

ಊನೆಯ ಪದ (l)= 248

(ಮುಂದಿನ ಸಂಚಿಕೆಯಿಂದ)

ಪಿಯುಸಿ ಪರೀಕ್ಷೆ ದಿಕ್ಸೂಚಿ — MATHS

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

INTEGRALS

Basics

44. Integrate $\int \frac{1}{e^x} + \frac{1}{e^{2x}} - \frac{1}{e^{2x}} dx$ w.r.t 'x'

Soln: - Given $\int \frac{1}{e^x} + \frac{1}{e^{2x}} - \frac{1}{e^{2x}} dx$

$= \int e^{-x} + e^{-2x} - e^{-3x} dx$

$= -e^{-x} - \frac{e^{-2x}}{2} + \frac{e^{-3x}}{3} c$

45. Evaluate $\int \frac{10x^9 + 10^x \log_e 10}{10^x + x^{10}}.dx$

Soln: - **Given** $\int \frac{10x^9 + 10^x \log_e 10}{10^x + x^{10}}.dx$

$\int \frac{1}{t}.dx = t = 10^x + x^{10}$

$dt = (10^x \log 10 + 10x^9) dx$

$\Rightarrow \log_e t = \log_e (10^x + x^{10}) + c$

46. Evaluate $\int \frac{e^x}{e^x + 1}.dx$

Soln: - **Given** $\int \frac{e^x}{e^x + 1}.dx$

$\int \frac{1}{t}.dx = \log_e t$

$= \log_e (e^x + 1) + c$

47. Evaluate $\int \frac{\text{Sinx}}{a + b\text{Cosx}}.dx$

Soln: - **Given** $\int \frac{\text{Sinx}}{a + b\text{Cosx}}.dx$

$a + b\text{Cosx} = t$

$0 - b\text{Sinx}dx = dt$

$\Rightarrow -\frac{1}{b}\int \frac{dt}{t} = -\frac{1}{b}\log t + c$

$\text{Sinx}\,dx = -\frac{1}{b}dt$

$= -\frac{1}{b}\log_e (a + b\text{Cosx}) + c$

49. Evaluate $\int \frac{\text{Sinx}}{(3 + 4\text{Cosx})^3}.dx$

Soln: - **Given** $\int \frac{\text{Sinx}}{(3 + 4\text{Cosx})^3}.dx$

let $t = \text{Cosx}$; then $\frac{dt}{dx} = -\text{Sinx}$

50. Evaluate

$x\sqrt{1+y^2} + y\sqrt{1+x^2}\frac{dy}{dx} = 0$

Soln: - **Given** $x\sqrt{1+y^2} + y\sqrt{1+x^2}\frac{dy}{dx} = 0$

Divide the equation by $\sqrt{1+y^2} . \sqrt{1+x^2}$

$\frac{x}{\sqrt{1+x^2}}dx + \frac{y}{\sqrt{1+y^2}}dy = 0$

Integrating both sides

$\int \frac{x}{\sqrt{1+x^2}}dx + \int \frac{y}{\sqrt{1+y^2}}dy = C$

put $1 + x^2 = t$,

$2xdx = dt; \quad \therefore xdx = \frac{1}{2}dt$

$\int \frac{\frac{1}{2}x}{\sqrt{t}}dt + \int \frac{\frac{1}{2}du}{\sqrt{u}} = C$

When $u = \sqrt{1+y^2}$

$\sqrt{t} + \sqrt{u} = C$

$\sqrt{1+y^2} + \sqrt{1+x^2} = C$

51. Evaluate $\frac{dy}{dx} = (x+y)^2$

Soln:- $\frac{dy}{dx} = (x+y)^2$

Put $x + y = z$

then $1 + \frac{dy}{dx} = \frac{dz}{dx}$

$\therefore \frac{dy}{dx} = \frac{dz}{dx} - 1$

Equation (1) becomes $\frac{dz}{dx} = z^2 + 1$

$dz = (z^2 + 1)dx$

Integrating both the sides we get,

$\int \frac{dz}{z^2 + 1} = \int dx + C$

i.e., $\tan^{-1}(z) = x + c$

$\tan^{-1}(x + y) = x + c$

52. Evaluate $\int \frac{1}{4 + 9x^2}.dx$

Soln: - Given $\int \frac{1}{4 + 9x^2}.dx$

$\Rightarrow \frac{1}{9}\int \frac{1}{\frac{4}{9} + x^2}.dx \Rightarrow \frac{1}{9}\int \frac{1}{\left(\frac{2}{3}\right)^2 + x^2}.dx$

$\Rightarrow \frac{1}{9} \times \frac{3}{2}\tan^{-1}\left(\frac{3x}{2}\right) + c \Rightarrow \frac{1}{6}\tan^{-1}\left(\frac{3x}{2}\right) + c$

53. $\int \frac{\text{Cosx}}{4\text{Sin}^2x - 9}dx = ?$

Soln: - *Given* $\int \frac{\text{Cosx}}{4\text{Sin}^2x - 9}dx$

$= \int \frac{\text{Cosx}}{(2\text{Sinx})^2 - (3)^2}dx$

$t = 2\text{Sinx}; \frac{dt}{dx} = 2\text{Cosx} \Rightarrow \frac{dt}{2} = \text{Cosx}.dx$

$= \frac{1}{2}\int \frac{dt}{t^2 - 3^2}$

(Contd...)

ಸದನ ಸಮಿತಿ ರಚನೆಗೆ ಒಪ್ಪಿಗೆ

ಶಾಲೆಗಳ ಮಾನ್ಯತೆ ನವೀಕರಣ ತೊಡಕುಗಳ ನಿವಾರಣೆಗೆ ಸರ್ಕಾರ ಕ್ರಮ

ಪ್ರಜಾವಾಣಿ ವಾರ್ತೆ

ವಿಧಾನಮಂಡಲ ಅಧಿವೇಶನ

ಸುವರ್ಣ ವಿಧಾನಸೌಧ (ಬೆಳಗಾವಿ): ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಮಾನ್ಯತೆ ನವೀಕರಣದ ಸಂಬಂಧ ಇರುವ ತೊಡಕುಗಳ ನಿವಾರಣೆಗೆ ಸದನ ಸಮಿತಿ ರಚಿಸಲು ಸರ್ಕಾರ ಒಪ್ಪಿಗೆ ನೀಡಿದೆ.

ವಿಧಾನ ಪರಿಷತ್ತಿನಲ್ಲಿನ ಪುಟ್ಟಣ್ಣ, ಶಶೀಲ್ ಜಿ.ನಮೋಶಿ, ಎಸ್.ವಿ. ಸಂಕನೂರ ಮತ್ತು ಎಸ್.ಎಲ್. ಬೋಜೇಗೌಡ ಅವರು ನಿಯಮ 330ರ ಅಡಿಯಲ್ಲಿ ವಿಷಯ ಪ್ರಸ್ತಾಪಿಸಿ, 'ಸುಪ್ರೀಂ ಕೋರ್ಟ್ ಆದೇಶದಂತೆ ರಾಜ್ಯ ಸರ್ಕಾರವು ಮಾನ್ಯತೆ ನವೀಕರಣ ನಿಯಮಗಳನ್ನು ರೂಪಿಸಿದೆ. ಆದರೆ ಯಾವ ಶಾಲೆಗಳೂ ಅವುಗಳನ್ನು ಪಾಲಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಶಾಲೆಗಳನ್ನು ಮುಚ್ಚುವ ಸ್ಥಿತಿ ಎದುರಾಗಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಚರ್ಚೆಯ ಬಳಿಕ ಉತ್ತರ ನೀಡಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, 'ಲಂಚದ ಸಮಸ್ಯೆ ಇದ್ದರೆ, ಅದನ್ನು ನನ್ನ ಗಮನಕ್ಕೆ ತನ್ನಿ. ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಇಲ್ಲಿ ಚರ್ಚಿಸಲಾದ ಎಲ್ಲ ಸಮಸ್ಯೆಗಳು ನಿಜಕ್ಕೂ ಇವೆ. ನಾನು ಅಧಿಕಾರ ವಹಿಸಿಕೊಳ್ಳುವ ಮುನ್ನ 62 ನಿಯಮಗಳು ಇದ್ದವು. ಅದನ್ನು ಈಗ 48ಕ್ಕೆ ಇಳಿಸಿದ್ದೇವೆ. ಇನ್ನೂ ಸರಳ ಮಾಡಲು ಯತ್ನಿಸುತ್ತೇವೆ. ಯಾವೆಲ್ಲಾ ಸಮಸ್ಯೆ ಇದೆ ಮತ್ತು ಅವಕ್ಕೆ ಪರಿಹಾರಗಳನ್ನು ಕಂಡುಕೊಳ್ಳಲು ಸದನ ಸಮಿತಿ ರಚಿಸಲು ಒಪ್ಪಿಗೆ ಇದೆ' ಎಂದು ಹೇಳಿದರು.

ಸಭಾಪತಿಯ ಪೀಠದಲ್ಲಿದ್ದ ಎಂ.ಕೆ. ಪ್ರಾಣೇಶ್ ಅವರು, 'ಸದನ ಸಮಿತಿ ರಚಿಸಲಾಗುವುದು. ಅದರ ಸದಸ್ಯರು ಯಾರು ಎಂಬುದನ್ನು ತಿಳಿಸಲಾಗುತ್ತದೆ' ಎಂದರು.

ಯಾರು ಏನೆಂದರು?: ಪುಟ್ಟಣ್ಣ, '50-60 ವರ್ಷಗಳ ಹಿಂದೆ ಆರಂಭಿಸಲಾಗಿರುವ ಶಾಲೆಗಳಿಗೆ ಭೂಮಿ ಹೇಗೆ ಬಂತು ಎಂಬುದಕ್ಕೆ ದಾಖಲೆ ನೀಡಿ, ಕಟ್ಟಡ ನಕ್ಷೆ ಮಂಜೂರಾತಿ ದಾಖಲೆ ನೀಡಿ, ಅಗ್ನಿಶಾಮಕ ದಳದ ನಿರಾಕ್ಷೇಪಣಾ ಪತ್ರ ನೀಡಿ ಎಂಬ ನಿಯಮವಿದೆ. ಹಳೆಯ ಶಾಲೆಗಳಿಗೆ ಈ ಎಲ್ಲ ದಾಖಲೆಗಳನ್ನು ಎಲ್ಲಿಂದ ತರುವುದು. ಈ ಅಸಹಾಯಕತೆಯನ್ನು ಬಳಸಿಕೊಂಡು ಲೋಕೋಪಯೋಗಿ ಇಲಾಖೆ, ಅಗ್ನಿಶಾಮಕ ಸೇವೆಗಳ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಡುತ್ತಿದ್ದಾರೆ' ಎಂದು ಆರೋಪಿಸಿದರು.

'ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಸದನ ಸಮಿತಿ ರಚಿಸಿ' ಎಂದು ಸರ್ಕಾರವನ್ನು ಒತ್ತಾಯಿಸಿದರು. ನಮೋಶಿ ಮತ್ತು ಬೋಜೇಗೌಡ ಅವರು ಪುಟ್ಟಣ್ಣ ಅವರಿಗೆ ದನಿಗೂಡಿಸಿದರು.

ನಮೋಶಿ, 'ಖಾಸಗಿ ಶಾಲೆಗಳಿಗಷ್ಟೇ ಈ ನಿಯಮ ಅನ್ವಯ ಮಾಡಲಾಗುತ್ತಿದೆ. ಸರ್ಕಾರಿ ಶಾಲೆಗಳಿಗೆ ಏಕೆ ಅನ್ವಯ ಮಾಡುತ್ತಿಲ್ಲ. ಅಲ್ಲಿನ ಮಕ್ಕಳ ಸುರಕ್ಷತೆಗೆ ಬೆಲೆ ಇಲ್ಲವೇ' ಎಂದು ಪ್ರಶ್ನಿಸಿದರು.

ಬೋಜೇಗೌಡ ಅವರು, '15 ಮೀಟರ್‌ಗಳಿಗಿಂತ ಕಡಿಮೆ ಎತ್ತರದ ಕಟ್ಟಡಗಳಿರುವ ಶಾಲೆಗೆ ಈ ನಿಯಮ ಅನ್ವಯಿಸಬಾರದು ಎಂದು ಹೈಕೋರ್ಟ್ ಸೂಚನೆ ನೀಡಿದೆ. ಹೀಗಿದ್ದೂ ಶಿಕ್ಷಣ ಇಲಾಖೆ ಅಧಿಕಾರಿಗಳು ಹೈಕೋರ್ಟ್ ಸೂಚನೆಯನ್ನು ಪಾಲಿಸುತ್ತಿಲ್ಲ. ಬದಲಿಗೆ ಮಾನ್ಯತೆ ನವೀಕರಣ ತಡೆಹಿಡಿದು, ಲಂಚ ಕೀಳುತ್ತಿದ್ದಾರೆ' ಎಂದು ಆರೋಪಿಸಿದರು.

'ಸಿಎ ನಿವೇಶನ ನಿಯಮ ಸಡಿಲ'

'ನಾಗರಿಕ ಬಳಕೆ (ಸಿಎ) ನಿವೇಶನಗಳನ್ನು ಮಂಜೂರು ಮಾಡಿದ ನಂತರದ ಮೂರು ವರ್ಷಗಳಲ್ಲಿ ಕಟ್ಟಡ ನಿರ್ಮಿಸದೇ ಇದ್ದರೆ, ಮಂಜೂರಾತಿ ರದ್ದಾಗುತ್ತದೆ ಎಂಬ ನಿಯಮವನ್ನು ಸಡಿಲಿಸಲಾಗುವುದು. ಮೂರು ವರ್ಷಗಳ ಮಿತಿಯನ್ನು ಐದು ವರ್ಷಗಳಿಗೆ ಹೆಚ್ಚಿಸಲಾಗುವುದು' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ಡಿ.ಎಸ್.ಅರುಣ್ ಅವರು, 'ಸಿಎ ನಿವೇಶನಗಳ ಹಂಚಿಕೆಗೆ ಮಾರ್ಗಸೂಚಿ ದರದ ಶೇ 100ರಷ್ಟನ್ನು ಪಾವತಿಸಬೇಕು ಮತ್ತು ಮೂರು ವರ್ಷದಲ್ಲಿ ಕಟ್ಟಡ ನಿರ್ಮಿಸದೇ ಇದ್ದರೆ ಮಂಜೂರಾತಿ ರದ್ದಾಗುತ್ತದೆ. 30 ವರ್ಷಗಳ ನಂತರ ಮಂಜೂರಾತಿ ನವೀಕರಣ ಮಾಡುವಾಗ ಇದನ್ನೇ ಮುಂದು ಮಾಡಿ, ನವೀಕರಣ ತಡೆಹಿಡಿಯಲಾಗುತ್ತದೆ. ಈ ನಿಯಮಗಳನ್ನು ಸಡಿಲಿಸಬೇಕು. ಲೀಸ್ ಕಂ ಸೇಲ್ ನಿಯಮ ಕೈಬಿಟ್ಟು, ಮಾರಾಟ ಪತ್ರ ನೀಡಬೇಕು' ಎಂದು ಸರ್ಕಾರದ ಗಮನ ಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ಬೈರತಿ ಸುರೇಶ್, 'ಸರ್ಕಾರಿ ಜಮೀನನ್ನು ಮಾರಾಟ ಮಾಡಲು ಸಾಧ್ಯವಿಲ್ಲ. ಆ ನಿಯಮಗಳಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದರು.

'ಮದ್ಯಪ್ರಿಯರ ಉಳಿಸಿ'

'ರಾಜ್ಯದ ಮದ್ಯಪ್ರಿಯರು ಲಿವರ್ ಸಿರೋಸಿಸ್ ಕಾಯಿಲೆಯಿಂದ ಬಳಲುತ್ತಿದ್ದಾರೆ. ಸರ್ಕಾರ ಅವರ ಚಿಕಿತ್ಸೆಗೆ ಅಬಕಾರಿ ತೆರಿಗೆ ಆದಾಯದಲ್ಲಿ ಶೇಕಡ 20ರಷ್ಟನ್ನು ತೆಗೆದಿರಿಸಬೇಕು. ಮದ್ಯಪ್ರಿಯರನ್ನು ರಕ್ಷಿಸಬೇಕು' ಎಂದು ವಿಧಾನಪರಿಷತ್ತಿನ ವಿರೋಧ ಪಕ್ಷದ ಸಚೇತಕ ಎನ್.ರವಿಕುಮಾರ್ ಒತ್ತಾಯಿಸಿದರು.

ಕೆ.ಎಸ್.ನವೀನ್, 'ಸರ್ಕಾರವು ಮದ್ಯಪಾನವನ್ನು ಉತ್ತೇಜಿಸುತ್ತಿದ್ದು, ಅಕ್ರಮ ಮದ್ಯ ಮಾರಾಟ ಹೆಚ್ಚಾಗುತ್ತಿದೆ. ಇದನ್ನು ತಡೆಗಟ್ಟಬೇಕು' ಎಂದು ಒತ್ತಾಯಿಸಿದರು.

ಸಭಾನಾಯಕ ಎನ್.ಎಸ್. ಬೋಸರಾಜು, 'ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಹೀಗಾಗಿ ಪ್ರತ್ಯೇಕ ನಿಧಿ ತೆಗೆದಿರಿಸಲು ಸಾಧ್ಯವಿಲ್ಲ' ಎಂದರು.

ಬಿಜೆಪಿ ಸದಸ್ಯರ ಒತ್ತಾಯಕ್ಕೆ ಕಾಂಗ್ರೆಸ್‌ನ ರಮೇಶ್‌ಬಾಬು ಪ್ರತಿಕ್ರಿಯಿಸಿ, 'ಕೇಂದ್ರ ಸರ್ಕಾರವು ನಮ್ಮಿಂದ ಸಂಗ್ರಹಿಸುವ ತೆರಿಗೆಯಲ್ಲಿ ಶೇ 25ರಷ್ಟನ್ನು ವಾಪಸ್ ನೀಡಲಿ. ಎಲ್ಲ ನಿಧಿಗಳನ್ನು ಸ್ಥಾಪಿಸುತ್ತೇವೆ' ಎಂದರು.

'ನಾಟಿ ಕೋಳಿ ತಿನ್ನಬೇಕಯ್ಯ, ಏನೂ ಆಗಲ್ಲ'

ಪ್ರಜಾವಾಣಿ ವಾರ್ತೆ


ಅಶೋಕ ಹೆಗಲಿಗೆ ಕೈಹಾಕಿ ಮಾತನಾಡಿಸಿದ ಸಿದ್ದರಾಮಯ್ಯ

ಬೆಳಗಾವಿ (ಸುವರ್ಣ ವಿಧಾನಸೌಧ): 'ನಾಟಿ ಕೋಳಿ ತಿನ್ನಬೇಕಯ್ಯ, ಏನೂ ಆಗಲ್ಲ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಚಾಯಿಸಿದ ಪ್ರಸಂಗ ವಿಧಾನಸಭೆಯ ಮೊಗಸಾಲೆಯಲ್ಲಿ ಸೋಮವಾರ ನಡೆಯಿತು.

ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರ ಕೊಠಡಿ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಆರ್. ಅಶೋಕ ಮುಖಾಮುಖಿಯಾದರು. ಅಶೋಕ ಅವರ ಹೆಗಲಮೇಲೆ ಕೈ ಹಾಕಿದ ಸಿದ್ದರಾಮಯ್ಯ, 'ಏನ್ ಸಣ್ಣ ಆಗಿದ್ದೀಯಾ ಅಶೋಕ್' ಎಂದು ಕೇಳಿದರು.

ಆಗ ಅಶೋಕ, 'ನಿಮ್ಮ ಥರ ನಾಟಿ ಕೋಳಿ ತಿನ್ನಲ್ಲ ಸರ್. ನಾನು ಎಲ್ಲವನ್ನೂ ಬಿಟ್ಟಿದ್ದೀನಿ' ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಹೇ.. ತಿನ್ನು ಏನೂ ಆಗಲ್ಲ. ಬಾ ತಿನ್ನೋಣ' ಎಂದರು. ಅಶೋಕ ನಕ್ಕು ಮುಂದೆ ಸಾಗಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿವಾಸದಲ್ಲಿ ಇತ್ತೀಚೆಗೆ ನಡೆದ ಉಪಾಹಾರ ಕೂಟದಲ್ಲಿ ಸಿದ್ದರಾಮಯ್ಯ ಅವರು ನಾಟಿ ಕೋಳಿ ಸಾರು, ಇಡ್ಲಿ ಸವಿದಿದ್ದರು. ಈ ಬಗ್ಗೆ ಸುದ್ದಿಗೋಷ್ಠಿ ನಡೆಸಿದ್ದ ಆರ್. ಅಶೋಕ ಅವರು, 'ಹನುಮ ಜಯಂತಿ ದಿನ ನಾಟಿ ಕೋಳಿ ತಿಂದಿದ್ದಾರೆ. ಬ್ರೇಕ್ ಫಾಸ್ಟ್ ಹೆಸರಿನಲ್ಲಿ ನಾಟಿ ಕೋಳಿ ಮರ್ಡರ್ ಆಗಿದೆ' ಎಂದಿದ್ದರು.

ಅವಿಶ್ವಾಸ ನಿರ್ಣಯ ಮಂಡಿಸ್ತಿರೇನಪ್ಪಾ?: ಅಶೋಕ ಜೊತೆಗಿದ್ದ ಬಿಜೆಪಿ ಶಾಸಕ ವಿ. ಸುನಿಲ್‌ಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈಕುಲುಕಿದರು. ಈ ವೇಳೆ ಸಿದ್ದರಾಮಯ್ಯ ಅವರು, 'ನಮ್ಮ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸ್ತಿರೇನಪ್ಪಾ?' ಎಂದು ನಗುತ್ತಲೇ ಕೇಳಿದರು. ಅದಕ್ಕೆ ಸುನಿಲ್‌ಕುಮಾರ್ ಮತ್ತು ಅಶೋಕ ನಕ್ಕು ಸುಮ್ಮನಾದರು.

ಇದಕ್ಕೂ ಮುನ್ನ ಸುನಿಲ್‌ಕುಮಾರ್ ಅವರು ಸಭಾಧ್ಯಕ್ಷರ ಕೊಠಡಿಯಲ್ಲಿ ಸಭಾಧ್ಯಕ್ಷ ಯು.ಟಿ.ಖಾದರ್ ಅವರನ್ನು ಉದ್ದೇಶಿಸಿ ತುಳುವಿನಲ್ಲಿ 'ಬೆಳಗಾವಿಯ ಮುಂದಿನ ಅಧಿವೇಶನದ ವೇಳೆ ನೀವು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅದೇ ಸ್ಥಾನಗಳಲ್ಲಿ ಇರುತ್ತೀರಾ' ಎಂದು ಹಾಸ್ಯದ ಧಾಟಿಯಲ್ಲಿ ಪ್ರಶ್ನಿಸಿದರು.

ಅದೇ ವೇಳೆ ಕೊಠಡಿ ಒಳಗೆ ಬಂದ ಸಿದ್ದರಾಮಯ್ಯ ಅವರು, 'ಏನಯ್ಯ ಸುನಿಲ್' ಎಂದು ನಗುತ್ತಾ ಹೆಗಲ ಮೇಲೆ ಕೈ ಹಾಕಿದರು. 'ಮುಂದಿನ ಅಧಿವೇಶನಕ್ಕೂ ನೀವೇ ಇರಬೇಕು' ಎಂದು ಸುನಿಲ್ ಹೇಳಿದಾಗ, 'ಹಾಂ' ಎಂದು ಸಿದ್ದರಾಮಯ್ಯ ಉದ್ಗರಿಸಿದರು.

ಭ್ರಷ್ಟಾಚಾರ ಸಾಬೀತು ಮಾಡಿದರೆ ರಾಜೀನಾಮೆ: ಹೊರಟ್ಟಿ ಹೇಳಿಕೆ

ಪ್ರಜಾವಾಣಿ ವಾರ್ತೆ


ಬಸವರಾಜ ಹೊರಟ್ಟಿ

ಸುವರ್ಣ ವಿಧಾನಸೌಧ (ಬೆಳಗಾವಿ): 'ನೇಮಕಾತಿ ಸೇರಿದಂತೆ ಯಾವುದೇ ವಿಷಯದಲ್ಲಿ ಅವ್ಯವಹಾರ ನಡೆದಿರುವುದನ್ನು ಸಾಬೀತು ಮಾಡಿದರೆ ಒಂದು ಕ್ಷಣವೂ ಸ್ಥಾನದಲ್ಲಿ ಮುಂದುವರಿಯುವುದಿಲ್ಲ' ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಕೆಲವರು ಸುಮ್ಮನೆ ಆರೋಪಗಳನ್ನು ಮಾಡುತ್ತಾರೆ. ಸಾಕ್ಷ್ಯಾಧಾರ ಇಟ್ಟುಕೊಂಡು ಮಾತನಾಡಬೇಕು. ಎಂಟು ಬಾರಿ ಪರಿಷತ್ ಸದಸ್ಯನಾಗಿ ಆಯ್ಕೆಯಾಗಿದ್ದೇನೆ. ಸಭಾಪತಿಯಾದ ನಂತರವೂ ಪಾರದರ್ಶಕವಾಗಿ ಇದ್ದೇನೆ. ಸಭಾಪತಿ ಕಚೇರಿಯಲ್ಲಿ ಭ್ರಷ್ಟಾಚಾರದ ದೂರುಗಳಿಗೆ ತಕ್ಷಣ ಸ್ಪಂದಿಸಿದ್ದೇನೆ. ಆರೋಪ ಮೇಲ್ನೋಟಕ್ಕೆ ಸಾಬೀತಾದ ಪ್ರಕರಣಗಳಲ್ಲಿ ಮೂವರ ವಿರುದ್ಧ ಕ್ರಮ ಜರುಗಿಸಲಾಗಿದೆ. ನನ್ನ ಮೇಲಿನ ಆರೋಪವನ್ನು ನಿಯಮದಂತೆ ಮಂಡಿಸಿದರೆ ನಿಯಮದಂತೆ ಕ್ರಮವಹಿಸಲಾಗುವುದು. ತಪ್ಪು ಕಂಡುಬಂದರೆ ರಾಜೀನಾಮೆ ನೀಡುವೆ. ಇಲ್ಲದಿದ್ದರೆ ಸಭಾಪತಿ ಪೀಠದ ಗೌರವಕ್ಕಾಗಿಯಾದರೂ ಆರೋಪ ಮಾಡಿದವರ ವಿರುದ್ಧ ಕ್ರಮಕ್ಕೆಗೊಳ್ಳಲಾಗುವುದು' ಎಂದರು.

ಡಿ.10ರಂದು ಪ್ರಶ್ನೋತ್ತರ ಅವಧಿ ಮುಗಿದ ನಂತರ ಇಡೀ ದಿನದ ಕಲಾಪವನ್ನು ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಚರ್ಚೆಗೆ ಮೀಸಲಿಡಲಾಗುವುದು. ಕಲಾಪದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ, ಮಹದಾಯಿ ಯೋಜನೆಗಳ ಅನುಷ್ಠಾನ, ಅರಣ್ಯಭೂಮಿ ಅತಿಕ್ರಮಣ, ಸಂತ್ರಸ್ತರ ಸಮಸ್ಯೆ ಹಾಗೂ ಪರಿಹಾರೋಪಾಯಗಳು, ರೈತರು ಎದುರಿಸುತ್ತಿರುವ ಸಮಸ್ಯೆ, ಉದ್ಯೋಗ ಸೃಷ್ಟಿ ಸೇರಿದಂತೆ ವಿವಿಧ ವಿಷಯಗಳ ಮೇಲೆ ಚರ್ಚೆಗೆ ಅವಕಾಶ ನೀಡಲಾಗುವುದು ಎಂದು ತಿಳಿಸಿದರು.

ಈ ಅಧಿವೇಶನಕ್ಕೆ ಒಟ್ಟು 1,649 ಪ್ರಶ್ನೆಗಳನ್ನು ಸ್ವೀಕರಿಸಲಾಗಿದೆ. ನಿಯಮ 72ರಡಿ 112 ಸೂಚನೆ, ನಿಯಮ 330ರಡಿ ಬಂದಂತಹ 84 ಸೂಚನೆಗಳನ್ನು ಸ್ವೀಕರಿಸಲಾಗಿದೆ. ಕಲಾಪ ಸಲಹಾ ಸಮಿತಿ ತೀರ್ಮಾನದಂತೆ ಇತರೆ ವಿಷಯಗಳ ಮೇಲೆ ಚರ್ಚೆ ನಡೆಯಲಿದೆ ಎಂದು ಹೇಳಿದರು.

ನೇಮಕಾತಿ ಅಕ್ರಮಕ್ಕೆ ದಾಖಲೆಗಳಿವೆ: ಯಾದವ್

'ವಿಧಾನಪರಿಷತ್ ಕಾರ್ಯಾಲಯದಲ್ಲಿ ನಡೆದ ನೇಮಕಾತಿಯಲ್ಲಿ ಅವ್ಯವಹಾರ ನಡೆದಿರುವುದಕ್ಕೆ ದಾಖಲೆಗಳಿವೆ. ಎಲ್ಲ ದಾಖಲೆಗಳನ್ನೂ ಸದನದ ಮುಂದೆ ಇಡುತ್ತೇನೆ' ಎಂದು ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ ನಾಗರಾಜ್ ಯಾದವ್ ಪುನರುಚ್ಚರಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಭಾಪತಿ ಕಾರ್ಯಾಲಯವೇ ಅವ್ಯವಹಾರದಲ್ಲಿ ಭಾಗಿಯಾಗಿದೆ. ಪರೀಕ್ಷೆಯ ನಂತರ ತಮಗೆ ಬೇಕಾದಂತೆ ಪಟ್ಟಿ ಸಿದ್ಧಪಡಿಸಿಕೊಂಡಿದ್ದಾರೆ. ಶೀಘ್ರ ದಾಖಲೆ ಬಿಡುಗಡೆ ಮಾಡಲಾಗುವುದು. ಪಕ್ಷ ಅನುಮತಿ ನೀಡಿದರೆ ಅವರ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಲಾಗುವುದು' ಎಂದರು.

ಸಭಾಪತಿ ವಿರುದ್ಧ ಆಕ್ರೋಶ: ಕ್ಷಮೆಯಾಚನೆ

ಬೆಳಗಾವಿ: ಕಾಂಗ್ರೆಸ್‌ನ ನಾಗರಾಜ್ ಯಾದವ್ ಅವರು ಸಭಾಪತಿ ಬಸವರಾಜ ಹೊರಟ್ಟಿ ವಿರುದ್ಧ ಸದನದಲ್ಲೇ ಆಕ್ರೋಶ ವ್ಯಕ್ತಪಡಿಸಿ, ನಂತರ ಕ್ಷಮೆಯಾಚಿಸಿದ ಪ್ರಸಂಗಕ್ಕೆ ಸೋಮವಾರ ನಡೆದ ವಿಧಾನಪರಿಷತ್ ಕಲಾಪ ಸಾಕ್ಷಿಯಾಯಿತು.

ಪ್ರಶ್ನೋತ್ತರ ಅವಧಿ ನಿಗದಿಗಿಂತ ಹೆಚ್ಚು ಸಮಯ ತೆಗೆದುಕೊಂಡದ್ದನ್ನು ಉಲ್ಲೇಖಿಸಿದ ಬಸವರಾಜ ಹೊರಟ್ಟಿ ಅವರು, 'ಪ್ರತಿ ದಿನ ಪ್ರಶ್ನೋತ್ತರಕ್ಕೆ 75 ನಿಮಿಷ ನಿಗದಿ ಮಾಡಲಾಗಿದೆ. ಪ್ರತಿ ಸದಸ್ಯರು 10ರಿಂದ 20 ನಿಮಿಷ ತೆಗೆದುಕೊಂಡರೆ ಮಧ್ಯಾಹ್ನದವರೆಗೆ ಇದೇ ಆಗುತ್ತದೆ. 75 ನಿಮಿಷಕ್ಕೆ ಮುಗಿಸಿದರೆ ಉಳಿದ ಸದಸ್ಯರ ಪ್ರಶ್ನೆಗಳು ವ್ಯರ್ಥವಾಗುತ್ತವೆ. ಉತ್ತರ ಕರ್ನಾಟಕದ ಸಮಸ್ಯೆಗಳ ಚರ್ಚೆಗೂ ಸಮಯ ಸಿಗುವುದಿಲ್ಲ' ಎಂದರು.

ಪ್ರಶ್ನೋತ್ತರಕ್ಕೆ ಹೆಚ್ಚು ಸಮಯ ತೆಗೆದುಕೊಂಡ ಸದಸ್ಯರ ಹೆಸರು ಹೇಳುವಾಗ ನಾಗರಾಜ್ ಯಾದವ್ ಅವರನ್ನೂ ಸಭಾಪತಿ ಹೆಸರಿಸಿದರು. ಆಗ ಆಕ್ರೋಶಗೊಂಡ ಯಾದವ್, 'ನನಗೂ ನಿಯಮಗಳ ಬಗ್ಗೆ ಗೊತ್ತಿದೆ. ನಾನೂ ಓದಿಕೊಂಡಿದ್ದೇನೆ' ಎಂದು ಸಭಾಪತಿಗಳಿಗೆ ಏರಿದ ಧ್ವನಿಯಲ್ಲಿ ಉತ್ತರಿಸಿದರು. ಅವರ ಮಾತನ್ನು ಎಲ್ಲ ಸದಸ್ಯರೂ ಪಕ್ಷಭೇದ ಮರೆತು ಖಂಡಿಸಿದರು. ನಂತರ ಯಾದವ್ ಕ್ಷಮೆಯಾಚಿಸಿದರು.

ಇಂದಿನಿಂದಲೇ 'ಉತ್ತರ'ದ ಚರ್ಚೆ: ಬಿಎಸಿ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣಸೌಧ): ವಿಧಾನ ಸಭೆಯಲ್ಲಿ ಉತ್ತರ ಕರ್ನಾಟಕದ ವಿಚಾರಗಳ ಕುರಿತು ಮಂಗಳವಾರದಿಂದಲೇ (ಡಿ. 9) ಚರ್ಚೆ ನಡೆಸಲು ಕಲಾಪ ಸಲಹಾ ಸಮಿತಿ (ಬಿಎಸಿ) ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಶುಕ್ರವಾರದವರೆಗೆ (ಡಿ.12) ಈ ಚರ್ಚೆ ನಡೆಯಲಿದೆ.

ಅಧಿವೇಶನದ ಎರಡನೇ ವಾರದಲ್ಲಿ ಉತ್ತರ ಕರ್ನಾಟಕದ ಕುರಿತು ಚರ್ಚೆ ನಡೆಸಲು ವಿರೋಧ ಪಕ್ಷಗಳಿಗೆ ಅವಕಾಶ ನೀಡಲಾಗುತ್ತಿತ್ತು. ಕೊನೆಯ ದಿನಗಳ ಅವಸರದಲ್ಲಿ ಚರ್ಚೆಗೆ ಅವಕಾಶ ಸಿಗುತ್ತಿಲ್ಲ ಎಂಬ ಟೀಕೆಗಳೂ ಇದ್ದವು. ಈ ಬಾರಿ, ಆರಂಭದಲ್ಲೇ ಕಲ್ಯಾಣ, ಕಿತ್ತೂರು ಕರ್ನಾಟಕದ ಕುರಿತ ಚರ್ಚೆಗೆ ಅವಕಾಶ ಕೊಡಬೇಕು ಎಂದು ಸರ್ಕಾರವು ಬಿಎಸಿ ಸಭೆಯಲ್ಲಿ ಪ್ರಸ್ತಾಪಿಸಿತು. ಅದಕ್ಕೆ ವಿರೋಧ ಪಕ್ಷ ಸಮ್ಮತಿಸಿತು.

> **ಕಬ್ಬು ಬೆಳೆಗಾರರ ಸಮಸ್ಯೆ, ಮೆಕ್ಕೆಜೋಳದ ವಿಚಾರವಾಗಿ ಕೇಂದ್ರ ಸರ್ಕಾರ ಈವರೆಗೂ ಬಾಯಿ ಬಿಟ್ಟಿಲ್ಲ. ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಕೇಂದ್ರ ಸರ್ಕಾರ ಉತ್ತರ ಕೊಡಬೇಕಿದೆ**
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

'ಆಡಳಿತ ಪಕ್ಷದಿಂದಲೇ ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರದ ಬಗ್ಗೆ ನಿಲುವಳಿ ಸೂಚನೆ ಮಂಡಿಸಿ ಚರ್ಚೆ ಆರಂಭಿಸುತ್ತೇವೆ' ಎಂದು ಸಭೆಯಲ್ಲಿ ಮುಖ್ಯಮಂತ್ರಿ ಪ್ರಕಟಿಸಿದರು. ಆದರೆ, ವಿರೋಧ ಪಕ್ಷದ ಸದಸ್ಯರು ಅದಕ್ಕೆ ಸಮ್ಮತಿಸಲಿಲ್ಲ. ನಾವು ಈಗಾಗಲೇ ನಿಲುವಳಿ ಸೂಚನೆ ಮಂಡನೆಗೆ ಸಭಾಧ್ಯಕ್ಷರ ಕಚೇರಿಗೆ ಪ್ರಸ್ತಾವ ಸಲ್ಲಿಸಿದ್ದೇವೆ. ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ ಮತ್ತೊಂದು ನೋಟಿಸ್ ಅಗತ್ಯವಿಲ್ಲ. ನಿಲುವಳಿ ಸೂಚನೆಯನ್ನು ವಿರೋಧ ಪಕ್ಷ ಮಂಡಿಸಬೇಕೆಂಬುದು ಕ್ರಮ. ಹೊಸ ಸಂಪ್ರದಾಯಕ್ಕೆ ನಾಂದಿ ಹಾಡುವುದು ಬೇಡ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಬಲವಾಗಿ ಪ್ರತಿಪಾದಿಸಿದರು.

ಈ ಅಧಿವೇಶನದಲ್ಲಿ 20ಕ್ಕೂ ಹೆಚ್ಚು ಮಸೂದೆಗಳನ್ನು ಮಂಡಿಸಲಾಗುವುದು ಎಂದು ಸಭೆಯಲ್ಲಿ ಸರ್ಕಾರ ತಿಳಿಸಿದೆ. ದ್ವೇಷ ಭಾಷಣ ನಿಯಂತ್ರಣವೂ ಸೇರಿದಂತೆ ಮೂರು ಪ್ರಮುಖ ಮಸೂದೆಗಳ ಕುರಿತು ಬಗ್ಗೆ ಸುದೀರ್ಘ ಚರ್ಚೆಗೆ ಅವಕಾಶ ಕಲ್ಪಿಸುವ ಭರವಸೆಯನ್ನೂ ನೀಡಿದೆ. ಪ್ರತಿದಿನ ಮಸೂದೆ ಮಂಡಿಸುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ, ಉತ್ತರ ಕರ್ನಾಟಕ ಚರ್ಚೆಯ ಸಂದರ್ಭದಲ್ಲಿ ಬೇರೆ ವಿಚಾರಗಳ ಚರ್ಚೆ ಬೇಡ ಎಂದು ಪ್ರತಿಪಾದಿಸಿತು.

ಶಾಸನಸಭೆಯ ಅಧಿವೇಶನ ಕರೆಯುವುದೇ ಶಾಸನ ರಚನೆಗೆ. ಹೀಗಾಗಿ ಮಸೂದೆಗಳ ಮಂಡನೆಗೆ ಷರತ್ತು ಸರಿಯಲ್ಲ. ಎಲ್ಲ ವಿಚಾರಗಳ ಚರ್ಚೆಗೂ ಸಾಕಷ್ಟು ಅವಕಾಶ ನೀಡಲಾಗುವುದು ಎಂದು ಸರ್ಕಾರ ಭರವಸೆ ನೀಡಿದೆ.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅಧ್ಯಕ್ಷತೆಯಲ್ಲಿ ನಡೆದ ಬಿಎಸಿ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ ಆರ್. ಅಶೋಕ, ಗೃಹ ಸಚಿವ ಜಿ. ಪರಮೇಶ್ವರ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಬಿಜೆಪಿಯ ವಿ. ಸುನೀಲ್ ಕುಮಾರ್ ಪಾಲ್ಗೊಂಡಿದ್ದರು.

‘ರೇರಾ ಆದೇಶ: ‘ಡಿಕ್ರಿ’ ಅಲ್ಲ’

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಆದೇಶಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ-ರೇರಾ) ಮತ್ತು ಅದರ ಮೇಲ್ಮನವಿ ಪ್ರಾಧಿಕಾರ ಹೊರಡಿಸಿರುವ ಆದೇಶಗಳನ್ನು ಸಿವಿಲ್ ನ್ಯಾಯಾಲಯಗಳಲ್ಲಿ, ಅನುಷ್ಠಾನ ಕೋರಿಕೆ ಅರ್ಜಿ (ಎಕ್ಸಿಕ್ಯೂಷನ್ ಪಿಟಿಷನ್) ಸಲ್ಲಿಸುವ ಮೂಲಕ ಜಾರಿಗೆ ತರಲು ಆಗದು’ ಎಂದು ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ‘ಮಂತ್ರಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್’ ಸಲ್ಲಿಸಿದ್ದ ಮೂರು ರಿಟ್ ಅರ್ಜಿಗಳನ್ನು ಮಾನ್ಯ ಮಾಡಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ರಿಯಲ್ ಎಸ್ಟೇಟ್ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ರೇರಾ ಆದೇಶಗಳು ನಾಗರಿಕ ಸಂಹಿತೆ ಪ್ರಕ್ರಿಯೆಯಲ್ಲಿನ (ಸಿಪಿಸಿ) ‘ಡಿಕ್ರಿ’ ಅರ್ಥದ ವ್ಯಾಪ್ತಿಗೆ ಒಳಪಡುವುದಿಲ್ಲ’ ಎಂಬ ವಿಶೇಷ ಉಲ್ಲೇಖವನ್ನು ನಮೂದಿಸಿದೆ.



ರೇರಾ ಆದೇಶಗಳು ಕಾನೂನು ವಿಶ್ಲೇಷಣಾ ವ್ಯಾಪ್ತಿಗೆ ಒಳಪಡುವುದಿಲ್ಲ. ರೇರಾ ಆದೇಶಗಳನ್ನು ಜಾರಿಗೊಳಿಸಲು ತಹಶೀಲ್ದಾರ್ ಸಂಪೂರ್ಣ ವಿಫಲವಾದಾಗ ಮಾತ್ರ ಸಕ್ಷಮ ಕೋರ್ಟ್ ಮೊರೆ ಹೋಗಬಹುದು

ನ್ಯಾ.ಎಂ.ನಾಗಪ್ರಸನ್ನ

‘ಕಲಂ 40(1)ರ ಅಡಿ ರೇರಾ ವಿಧಿಸುವ ಪರಿಹಾರದ ಮೊತ್ತ ಅಥವಾ ದಂಡವನ್ನು ಬಡ್ಡಿ ಸಹಿತ ವಸೂಲು ಮಾಡಬಹುದು. ಅದನ್ನು ಭೂ ಕಂದಾಯ ಎಂದು ಪರಿಗಣಿಸಬಹುದು ಎಂದು ತಿಳಿಸಲಾಗಿದೆ. ಅಂತೆಯೇ, ಕಲಂ 79ರ ಅಡಿ ರೇರಾದ ಆದೇಶ ಮತ್ತು ದಾವೆಗಳನ್ನು ಪುರಸ್ಕರಿಸಲು ಸಿವಿಲ್ ಕೋರ್ಟ್‌ಗೆ ನಿರ್ಬಂಧವಿದೆ’ ಎಂಬುದನ್ನು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಬಿಲ್ಡರ್‌ಗಳ ಮನವಿ ತಿರಸ್ಕರಿಸಿದ್ದ ಸಿವಿಲ್ ಕೋರ್ಟ್‌ನ ಆದೇಶವನ್ನು ರದ್ದುಗೊಳಿಸಿರುವ ನ್ಯಾಯಪೀಠ, ‘ಪ್ರತಿವಾದಿ ರೇರಾ ಕಂದಾಯ ಅಧಿಕಾರಿಗಳ ಮೂಲಕ ಆದೇಶ ಜಾರಿಗೆ ಇತರೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲು ಸ್ವತಂತ್ರವಾಗಿದೆ’ ಎಂದು ಸ್ಪಷ್ಟಪಡಿಸಿದೆ.

ಪ್ರಕರಣವೇನು?: ಮನೆ ಖರೀದಿದಾರರ ಪರ ‘ಕೆ-ರೇರಾ’ 2023ರಲ್ಲಿ ಹಲವು ಆದೇಶಗಳನ್ನು ನೀಡಿತ್ತು. ಈ ಆದೇಶಗಳನ್ನು ಜಾರಿಗೊಳಿಸುವಂತೆ ಕೋರಿ ಮನೆ ಖರೀದಿದಾರರು ಸಿವಿಲ್ ಕೋರ್ಟ್‌ನಲ್ಲಿ ಆದೇಶಗಳ ಅನುಷ್ಠಾನ ಕೋರಿಕೆ ಅರ್ಜಿಗಳನ್ನು (ಎಕ್ಸಿಕ್ಯೂಷನ್ ಪಿಟಿಷನ್) ಸಲ್ಲಿಸಿದ್ದರು.

ಈ ಅರ್ಜಿಗಳಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಬಿಲ್ಡರ್‌ಗಳು, ‘ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಮತ್ತು ಅದರ ಮೇಲ್ಮನವಿ ಪ್ರಾಧಿಕಾರ ಹೊರಡಿಸಿರುವ ಆದೇಶಗಳನ್ನು ಸಿವಿಲ್ ನ್ಯಾಯಾಲಯಗಳಲ್ಲಿ ಪ್ರಶ್ನಿಸಲಾಗದು. ಸಿವಿಲ್ ಕೋರ್ಟ್‌ಗಳಿಗೆ ಕಲಂ 79ರ ಅಡಿ ಅಂತಹ ಅರ್ಜಿಗಳನ್ನು ಪುರಸ್ಕರಿಸುವ ಅಧಿಕಾರವಿಲ್ಲ. ಕರ್ನಾಟಕ ರೇರಾ ನಿಯಮ 26ರ ಅಡಿ ಹೇಗೆ ಆದೇಶಗಳನ್ನು ಜಾರಿಗೊಳಿಸಬಹುದು ಎಂಬುದು ಈಗಾಗಲೇ ವಿದಿತವಾಗಿದೆ’ ಎಂಬ ವಾದ ಮಂಡಿಸಿದ್ದರು.

ಇದಕ್ಕೆ ಪ್ರತಿಯಾಗಿ ಮನೆ ಖರೀದಿದಾರರು, ‘ರೇರಾ ಆದೇಶಗಳು ಡಿಕ್ರಿ ಇದ್ದಂತೆ. ಹಾಗಾಗಿ, ಎಕ್ಸಿಕ್ಯೂಷನ್ ಅರ್ಜಿಗಳು ಸ್ವೀಕಾರಾರ್ಹ ಮತ್ತು ಸಿವಿಲ್ ಕೋರ್ಟ್‌ಗಳು ಅವುಗಳನ್ನು ಜಾರಿಗೊಳಿಸುವ ಅಧಿಕಾರ ಹೊಂದಿವೆ’ ಎಂದು ಪ್ರತಿವಾದ ಮಂಡಿಸಿದ್ದರು.

ಡಿಕ್ರಿ ವ್ಯಾಖ್ಯಾನ

ಸಿವಿಲ್ ಪ್ರೊಸೀಜರ್ ಕೋಡ್ (ಸಿಪಿಸಿ) ಕಲಂ 2(2)ರಲ್ಲಿ ಡಿಕ್ರಿ ಎಂದು ವ್ಯಾಖ್ಯಾನಿಸಲು ಮೂರು ಅಗತ್ಯ ಷರತ್ತುಗಳನ್ನು ಪೂರೈಸಬೇಕಾಗುತ್ತದೆ.

- ತೀರ್ಪು ಮೂಲ ದಾವೆಯಿಂದ ಬಂದಿರಬೇಕು
- ವ್ಯಾಜ್ಯ ದೂರಿನೊಂದಿಗೆ ಆರಂಭವಾಗಿರಬೇಕು ಮತ್ತು ಡಿಕ್ರಿಯೊಂದಿಗೆ ಕೊನೆಯಾಗಬೇಕು
- ನ್ಯಾಯಾಲಯ ತೀರ್ಪನ್ನು ಅಂತಿಮಗೊಳಿಸಿರಬೇಕು
- ರೇರಾ ಮುಂದಿರುವ ಪ್ರಕ್ರಿಯೆಗಳು ದೂರುಗಳಷ್ಟೇ. ಅವು ಮೂಲ ದಾವೆಗಳಲ್ಲ. ಹಾಗಾಗಿ, ಅವುಗಳನ್ನು ದಾವೆಗಳೆಂದು ಪರಿಗಣಿಸಲಾಗದು.

ಯುಜಿ ನೀಟ್: ಅಂತಿಮ ಫಲಿತಾಂಶ ಪ್ರಕಟ

ಬೆಂಗಳೂರು: ಹೈಕೋರ್ಟ್ ಆದೇಶದ ಪ್ರಕಾರ ಯುಜಿ ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ನ 3ನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಸೀಟು ಹಂಚಿಕೆಯಾದವರು ಡಿ.10ರೊಳಗೆ ಶುಲ್ಕ ಪಾವತಿಸಬೇಕು. (ಈಗಾಗಲೇ ಪಾವತಿಸಿರುವ ಶುಲ್ಕವನ್ನು ಕಡಿತಗೊಳಿಸುವ ಮೂಲಕ) ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಂಡು, ಡಿ.11ರೊಳಗೆ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಒಟ್ಟು 1,080 ಮಂದಿಗೆ ವೈದ್ಯಕೀಯ ಹಾಗೂ 266 ಮಂದಿಗೆ ದಂತ ವೈದ್ಯಕೀಯ ಸೀಟುಗಳನ್ನು ಈ ಸುತ್ತಿನಲ್ಲಿ ಹಂಚಿಕೆ ಮಾಡಲಾಗಿದೆ. ಆಡಳಿತ ಮಂಡಳಿ ಕೋಟಾದ ಇನ್ನೂ 74 ವೈದ್ಯಕೀಯ ಸೀಟು ಈ ಸುತ್ತಿನಲ್ಲಿ ಉಳಿದಿವೆ. ದಂತ ವೈದ್ಯಕೀಯ ಸೀಟು ಎಲ್ಲವೂ ಹಂಚಿಕೆಯಾಗಿವೆ ಎಂದಿದ್ದಾರೆ.

ಶಾಸಕ ವಿನಯ ಕುಲಕರ್ಣಿ ಜಾಮೀನು ಅರ್ಜಿ ವಜಾ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ ಆರೋಪಿಯಾದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರಿಗೆ ಜಾಮೀನು ನೀಡಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರಾಕರಿಸಿದೆ. ವಿನಯ ಕುಲಕರ್ಣಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ಕೋರ್ಟ್ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಪ್ರಕಟಿಸಿದರು.

‘ಡಿಕೆಶಿ ಕೋರಿಕೆ ಹೈಕಮಾಂಡ್ ಒಪ್ಪಿಲ್ಲ’

ಒಂದನೇ ಪುಟದಿಂದ...

‘ನಾಯಕತ್ವ ವಿಷಯದಲ್ಲಿ ಎದ್ದ ಗೊಂದಲಕ್ಕೆ ತೆರೆ ಎಳೆಯುವ ಸಂಬಂಧ ಉಪಾಹಾರ ಕೂಟ ಮಾಡಿದ್ದರು. ಹೈಕಮಾಂಡ್‌ನ ನಿರ್ಧಾರಕ್ಕೆ ಬದ್ಧ ಎಂದು ಇಬ್ಬರೂ ನಾಯಕರು ಹೇಳಿದ್ದಾರೆ. ಒಗ್ಗಟ್ಟು ಪ್ರದರ್ಶಿಸಿದ್ದಾರೆ’ ಎಂದರು.

‘ಶಾಸಕಾಂಗ ಪಕ್ಷದ ಸಭೆಯಲ್ಲಿ ಆಯಾ ಪಕ್ಷದ ನಾಯಕರನ್ನು ಇಷ್ಟು ವರ್ಷಕ್ಕೆ ಸೀಮಿತ ಎಂದು ಆಯ್ಕೆ ಮಾಡುವುದಿಲ್ಲ. ಶಾಸಕರು ಐದು ವರ್ಷ ಆಯ್ಕೆಯಾದ ರೀತಿಯಲ್ಲೇ ಶಾಸಕಾಂಗ ಪಕ್ಷದ ನಾಯಕರೂ ಐದು ವರ್ಷಕ್ಕೆ ಆಯ್ಕೆ ಆಗಿರುತ್ತಾರೆ’ ಎಂದು ಹೇಳಿದರು.

ಇದಕ್ಕೂ ಮುನ್ನ ವಿಮಾನ ನಿಲ್ದಾಣದಲ್ಲಿ ಮಾತನಾಡಿದ್ದ ಅವರು, ‘ಸದನದಲ್ಲಿ ಅವಿಶ್ವಾಸ ಮಂಡನೆ ಮಾಡುವುದಾಗಿ ಬಿಜೆಪಿಯ ಕೆಲ ನಾಯಕರು ಹೇಳುತ್ತಿದ್ದಾರೆ. ಆ ಪ್ರಯತ್ನಕ್ಕೆ ಕೈ ಹಾಕಿದರೆ ಮುಖಭಂಗ ಎದುರಿಸುತ್ತಾರೆ. ಆ ಸಾಮರ್ಥ್ಯ ಅವರಿಗೆಲ್ಲಿದೆ’ ಎಂದರು.

‘ಅಧಿವೇಶನದಲ್ಲಿ ಜನರ ವಿಷಯ, ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚಿಸಿ. ಅದನ್ನು ಬಿಟ್ಟು ರಾಜಕೀಯ ಮಾಡಿದರೆ ಅನಗತ್ಯ ಖರ್ಚು ಮತ್ತು ಸಮಯ ವ್ಯರ್ಥವಾಗುತ್ತದೆ’ ಎಂದರು.

ಬಿಜೆಪಿ ಸಂಸ್ಕೃತಿ: ‘ಹಣ ಪಡೆದು ಸಿ.ಎಂ ಪದವಿ ಕೊಡುವ ಸಂಸ್ಕೃತಿ ಬಿಜೆಪಿಯಲ್ಲಿದೆ ಹೊರತು ನಮ್ಮಲ್ಲಿ ಇಲ್ಲ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

‘₹500 ಕೋಟಿ ಕೊಟ್ಟರೆ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಮಾಡುತ್ತಾರೆ’ ಎಂಬ ಮಾಜಿ ಸಚಿವೆ ನವಜೋತ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, ‘ನವಜೋತ್ ಅವರು ಕರ್ನಾಟಕದವರೇ? ಅವರು ಹೇಳಿದ್ದಾರೆ ಎಂದು ಬಿಜೆಪಿಯವರು ಏಕೆ ಮೈ ಉರಿ ಮಾಡಿಕೊಳ್ಳಬೇಕು’ ಎಂದು ಪ್ರಶ್ನಿಸಿದರು.

‘ಉಪಾಹಾರದಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರು ಇಡ್ಲಿ ತಿಂದರೋ ನಾಟಿಕೋಳಿ ತಿಂದರೋ ಎಂಬುದು ಬೇಕಾಗಿಲ್ಲ. ಬಿಜೆಪಿ ಸದನದಲ್ಲಿ ಪ್ರಶ್ನೆಗಳನ್ನು ಕೇಳಲಿ. ಉತ್ತರಿಸಲು ನಾವು ಸಿದ್ಧರಿದ್ದೇವೆ’ ಎಂದರು.

ಜ. 8, 9ರವರೆಗೆ ಕಾಯಿರಿ: ಇಕ್ಬಾಲ್

‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗೇ ಆಗುತ್ತಾರೆ. ಜನವರಿ 8 ಅಥವಾ 9ರವರೆಗೆ ಕಾಯಿರಿ’ ಎಂದು ಡಿ.ಕೆ. ಶಿವಕುಮಾರ್ ಅವರ ಆಪ್ತ, ಶಾಸಕ ಇಕ್ಬಾಲ್ ಹುಸೇನ್ ಹೇಳಿದರು.

‘ಐದು ವರ್ಷವೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ’ ಎಂಬ ಯತೀಂದ್ರ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಶಾಸಕರಿಗೆ ವರಿಷ್ಠರ ಬಗ್ಗೆ ನಂಬಿಕೆ ಇಡಬೇಕು. ವರಿಷ್ಠರ ತೀರ್ಮಾನಕ್ಕೆ ಕಾಯಬೇಕು’ ಎಂದರು.

‘ನಾನು ಜನವರಿಗಾಗಿ ಕಾಯುತ್ತಿದ್ದೇನೆ. ಹಿಟ್ ಆ್ಯಂಡ್ ರನ್ ಮಾಡುವುದಿಲ್ಲ. ಜನವರಿ 2ರಂದು ಬಂದು ಮಾತನಾಡುವೆ’ ಎಂದು ಶಿವಕುಮಾರ್ ಅವರ ಮತ್ತೊಬ್ಬ ಆಪ್ತ ಶಾಸಕ ಬಸವರಾಜ ಶಿವಗಂಗಾ ಹೇಳಿದರು.

ಮಂಡ್ಯ ಶಾಸಕ ರವಿಕುಮಾರ್ ಗಣಿಗ ಅವರು, ‘ಯತೀಂದ್ರ ಏನು ಹೇಳಿದ್ದಾರೆ ಎಂದು ಗೊತ್ತಿಲ್ಲ. ಆದರೆ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆದರೆ ಅವರ ಸಂಪುಟದಲ್ಲಿ ಸಚಿವನಾಗುವುದಿಲ್ಲ ಎಂದು ಕೆ.ಎನ್. ರಾಜಣ್ಣ ಹೇಳಿದ್ಧಾರೆ. ಹಾಗಾದರೆ ಮುಖ್ಯಮಂತ್ರಿ ಆಗುತ್ತಾರೆ ಎಂದರ್ಥವಲ್ಲವೇ?’ ಎಂದರು.

‘ನಿಮ್ಮ ತಟ್ಟೆಯಲ್ಲಿ ಸತ್ತುಬಿದ್ದ ಕತ್ತೆ ತೆಗೆಯಿರಿ’

‘ಬಿಜೆಪಿಯವರ ತಟ್ಟೆಯಲ್ಲಿ ಕತ್ತೆ ಸತ್ತುಬಿದ್ದಿದೆ. ಅದನ್ನು ಸ್ವಚ್ಛ ಮಾಡುವುದು ಬಿಟ್ಟು ಮತ್ತೊಬ್ಬರ ತಟ್ಟೆಯಲ್ಲಿ ನೊಣ ಹುಡುಕುತ್ತಿದ್ದಾರೆ’ ಎಂದು ಸಚಿವ ಶಿವರಾಜ್ ತಂಗಡಗಿ ತಿರುಗೇಟು ನೀಡಿದರು.

‘ಕುರ್ಚಿ ಕದನ’ ವಿಷಯದ ಬಗ್ಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, ‘ಬೇರೆ ಏನೂ ಇಲ್ಲವೆಂದು ಬಿಜೆಪಿಯವರು ಉತ್ತರ ಕರ್ನಾಟಕ ವಿಷಯ, ಉಪಾಹಾರದ ವಿಷಯ ತೆಗೆಯುತ್ತಿದ್ದಾರೆ. ನಮಗೆ ಏನು ಇಷ್ಟವೋ ಅದನ್ನು ನಾವು ತಿನ್ನುತ್ತೇವೆ. ಆಡಿಕೊಳ್ಳಲು ಇವರ‍್ಯಾರು’ ಎಂದೂ ಪ್ರಶ್ನಿಸಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿ ಆದಾಗಿನಿಂದಲೂ ಬಿಜೆಪಿಯವರು ನಾಯಕತ್ವ ಬದಲಾವಣೆ ಮಾತು ಆಡುತ್ತಲೇ ಇದ್ದಾರೆ. ಈಗ ಅದಕ್ಕೆಲ್ಲ ಅರ್ಥವಿಲ್ಲ. ಅದು ಅವರ ಕನಸು

ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ತಿನ ಸದಸ್ಯ

ಸಿ.ಎಂ ಬದಲಾವಣೆ ಕುರಿತು ನಾನು ಮಾತನಾಡುವುದಿಲ್ಲ. ನನಗೆ ನೋಟಿಸ್ ನೀಡಿದ್ದಾರೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅನ್ಯೋನ್ಯವಾಗಿದ್ದಾರೆ. ಯತೀಂದ್ರ ಚಿಂತನೆ ಮಾಡಿಯೇ ಮಾತಾಡಿದ್ದಾರೆ


ಎಚ್.ಡಿ.ರಂಗನಾಥ್, ಶಾಸಕ, ಕುಣಿಗಲ್

ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿ ಆಗುವುದು ಯತೀಂದ್ರ ಕೈಯಲ್ಲಿಲ್ಲ. ಶಾಸಕಾಂಗ ಪಕ್ಷದ ತೀರ್ಮಾನವೇ ಬೇರೆ, ಹೈಕಮಾಂಡ್ ತೀರ್ಮಾನವೇ ಬೇರೆ


ಬಾಲಕೃಷ್ಣ, ಶಾಸಕ, ಮಾಗಡಿ

ರಾಜ್ಯ ಗುತ್ತಿಗೆದಾರರ ಸಂಘಕ್ಕೆ ಆಯ್ಕೆ

ಬೆಂಗಳೂರು: ರಾಜ್ಯ ಗುತ್ತಿಗೆದಾರರ ಸಂಘಕ್ಕೆ 2025–26ನೇ ಸಾಲಿನಿಂದ ಐದು ವರ್ಷದ ಅವಧಿಗೆ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಆರ್. ಮಂಜುನಾಥ್



ಜಿ.ಎಂ. ನಂದಕುಮಾರ್

ಅಧ್ಯಕ್ಷರಾಗಿ ಆರ್. ಮಂಜುನಾಥ್ ಅವರು ಮರು ಆಯ್ಕೆಯಾಗಿದ್ದರೆ, ಪ್ರಧಾನ ಕಾರ್ಯದರ್ಶಿಯಾಗಿ ಜಿ.ಎಂ. ನಂದಕುಮಾರ್, ಖಜಾಂಚಿ ಯಾಗಿ ಡಿ.ಎಂ. ನಾಗರಾಜ್ ಹಾಗೂ ಗೌರವಾಧ್ಯಕ್ಷರು, ಕಾರ್ಯಾಧ್ಯಕ್ಷರು, ಉಪಾಧ್ಯಕ್ಷರು, ಜಂಟಿ ಕಾರ್ಯದರ್ಶಿಗಳು ಚುನಾಯಿತ ರಾಗಿದ್ದಾರೆ.

ರಾಜ್ಯದ 31 ಜಿಲ್ಲೆಗಳ ಗುತ್ತಿಗೆದಾರರ ಸಂಘದಿಂದ 67 ಪದಾಧಿಕಾರಿಗಳು ಅವಿರೋಧವಾಗಿ ರಾಜ್ಯ ಗುತ್ತಿಗೆದಾರರ ಸಂಘಕ್ಕೆ ಆಯ್ಕೆಯಾದರು. ಅವರೆಲ್ಲ ಸೇರಿ ರಾಜ್ಯ ಸಂಘದ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ ಎಂದು ಪ್ರಧಾನ ಕಾರ್ಯದರ್ಶಿ ನಂದಕುಮಾರ್ ತಿಳಿಸಿದ್ದಾರೆ.

‘ಪ್ರಣಾಳಿಕೆಯ ಘೋಷಣೆ ಅಕ್ರಮವಲ್ಲ’

ಒಂದನೇ ಪುಟದಿಂದ...

ವಿಚಾರಣೆಯ ಆರಂಭದಲ್ಲೇ ಈ ಅರ್ಜಿ ವಜಾಗೊಳಿಸಲಾಗಿದೆ ಎಂದು ನ್ಯಾಯಪೀಠ ಪ್ರಕಟಿಸಿತು. ಆಗ ಅರ್ಜಿದಾರರ ಪರ ವಕೀಲರು, ‘ಚುನಾವಣೆಗೆ ಮುನ್ನ ನೀಡಿದ ಭರವಸೆಗಳು ಚುನಾವಣಾ ಅಕ್ರಮವಾಗುತ್ತದೆಯೇ ಎಂಬ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ ಹಾಗೂ ಇಂತಹುದೇ ಇನ್ನೊಂದು ಪ್ರಕರಣದಲ್ಲಿ ಪ್ರತಿವಾದಿಗಳಿಗೆ ನ್ಯಾಯಪೀಠ ನೋಟಿಸ್ ನೀಡಿದೆ’ ಎಂದು ಗಮನ ಸೆಳೆದರು. ಆಗ ನ್ಯಾಯಪೀಠವು, ಸಿದ್ದರಾಮಯ್ಯ ಅವರಿಗೆ ನೋಟಿಸ್ ಜಾರಿ ಮಾಡಲು ಸೂಚಿಸಿತು.

ಸಿದ್ದರಾಮಯ್ಯ ಅವರು ಚುನಾವಣಾ ಅಕ್ರಮ ನಡೆಸಿ ಗೆಲುವು ಸಾಧಿಸಿದ್ದು, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಎಂದು ಅರ್ಜಿದಾರರು ಕೋರಿದ್ದರು. ಅವರ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ಪ್ರಿಯಾಂಕ್ ಖರ್ಗೆಗೆ ನೋಟಿಸ್

2023ರ ಚುನಾವಣೆಯಲ್ಲಿ ಚಿತ್ತಾಪುರ ಕ್ಷೇತ್ರದಲ್ಲಿ ಅಕ್ರಮ ನಡೆಸಲಾಗಿದೆ ಎಂಬ ಆರೋಪದ ಪ್ರಕರಣದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಜಾರಿ ಮಾಡಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಅಶ್ವತ್ಥರಾಮ್ ರಾಥೋಡ್ ಎಂಬವರು ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಎಂ. ಎಂ. ಸುಂದರೇಶ್ ಹಾಗೂ ಸತೀಶ್ ಚಂದ್ರ ಶರ್ಮಾ ಅವರ ಪೀಠವು ಸೋಮವಾರ ವಿಚಾರಣೆ ನಡೆಸಿತು.

ಸುಳ್ಳು ಜಾತಿ ಪ್ರಮಾಣಪತ್ರ ಹಾಗೂ ಶೈಕ್ಷಣಿಕ ದಾಖಲೆಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವುದಲ್ಲದೇ, ಉಚಿತ ಗ್ಯಾರಂಟಿಗಳ ಮೂಲಕ ಮತದಾರರಿಗೆ ಆಮಿಷವೊಡ್ಡಿ ವಿಧಾನ ಸಭೆ ಚುನಾವಣೆಯಲ್ಲಿ ಗೆದ್ದಿರುವ ಪ್ರಿಯಾಂಕ್ ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ಪ್ರಿಯಾಂಕ್ ಅವರು ಪರಿಶಿಷ್ಟ ಜಾತಿ ಪ್ರಮಾಣಪತ್ರದ ಬದಲು ಗ್ರಾಮ ಪಂಚಾಯಿತಿ ಚುನಾವಣೆಗೆ ಸಲ್ಲಿಸಲಾಗುವ ಜಾತಿ ಮತ್ತು ಆದಾಯ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಅದೂ 2021ರ ಪ್ರಮಾಣ ಪತ್ರವಾಗಿದೆ. ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದಂತೆಯೂ ಅಸಮರ್ಪಕ ಮತ್ತು ನಕಲಿ ದಾಖಲೆಗಳನ್ನು ಸಲ್ಲಿಸಿದ್ದಾರೆ. ಇದಲ್ಲದೆ, ಕಾಂಗ್ರೆಸ್‌ನಿಂದ ಗ್ಯಾರಂಟಿ ಕಾರ್ಡ್ ಯೋಜನೆಗಳ ಮೂಲಕ ಮತದಾರರಿಗೆ ಆಮಿಷ ಒಡ್ಡಿದ್ದು, ಇದು ಲಂಚ ಹಾಗೂ ಭ್ರಷ್ಟಾಚಾರಕ್ಕೆ ಸಮ ಎಂದೂ ದೂರಿದ್ದಾರೆ.

‘ಮಹಾಮೇಳಾವ’ಕ್ಕೆ ತಡೆ: ಮುಖಂಡರ ವಶ

ಒಂದನೇ ಪುಟದಿಂದ...

ಗಡಿಯಲ್ಲಿ ಕಟ್ಟೆಚ್ಚರ: ಕೊಲ್ಹಾಪುರದ ಶಿವಸೇನಾ ಮುಖಂಡರು ಮತ್ತು ಕಾರ್ಯಕರ್ತರು ರಾಜ್ಯಕ್ಕೆ ಬರುವುದನ್ನು ತಡೆಯಲು ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಕೊಗನೊಳ್ಳಿ ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ. ವಾಹನಗಳ ತಪಾಸಣೆ ನಡೆಸಿ ಪ್ರಯಾಣಿಕರ ಸತ್ಯಾಸತ್ಯತೆ ದೃಢಪಡಿಸಿದ ನಂತರ, ರಾಜ್ಯದೊಳಗೆ ಬರಲು ವಾಹನಗಳಿಗೆ ಅವಕಾಶ ನೀಡುತ್ತಾರೆ. ಖಾನಾಪುರದಿಂದ ಬೆಳಗಾವಿಗೆ ಬರುತ್ತಿದ್ದವರನ್ನು ಖಾನಾಪುರ ಪಟ್ಟಣದಲ್ಲೇ ವಶಕ್ಕೆ ಪಡೆದರು.

ಎಂಇಎಸ್‌ನ ಧೋರಣೆ ಖಂಡಿಸಿ, ನಗರದಲ್ಲಿ ಪ್ರತಿಭಟಿಸಿದ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ.ನಾರಾಯಣಗೌಡ ಮತ್ತು ಶಿವರಾಮೇಗೌಡ ಬಣ) ಕಾರ್ಯಕರ್ತರನ್ನು ಸಹ ಪೊಲೀಸರು ವಶಕ್ಕೆ ಪಡೆದರು.

ಬೆಳಗಾವಿ–ಕೊಲ್ಹಾಪುರ ಮಾರ್ಗದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಬಸ್‌ಗಳು ನಿಪ್ಪಾಣಿಯವರೆಗೆ ಮಾತ್ರ ಹೋಗಿ ವಾಪಸ್ ಆಗುತ್ತಿವೆ

ಕೆ.ಎಲ್.ಗುಡೆನ್ನವರ, ವಿಭಾಗೀಯ ನಿಯಂತ್ರಣಾಧಿಕಾರಿ, ವಾಯವ್ಯ ಸಾರಿಗೆ ಸಂಸ್ಥೆ, ಬೆಳಗಾವಿ



ಎಂಇಎಸ್ ನಡೆ ವಿರೋಧಿಸಿ ಬೆಳಗಾವಿಯಲ್ಲಿ ಪ್ರತಿಭಟನೆಗೆ ಯತ್ನಿಸಿದ ಕರ್ನಾಟಕ ರಕ್ಷಣಾ ವೇದಿಕೆ (ಶಿವರಾಮೇಗೌಡ ಬಣ) ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು –ಪ್ರಜಾವಾಣಿ ಚಿತ್ರ

ಸಿಐಡಿಗೆ ವಹಿಸಲು ರಿಟ್: ನೋಟಿಸ್

₹100 ಕೋಟಿ ಆಸ್ತಿ ಕಬಳಿಕೆಗೆ ಗಾಲಿ ಕಿರೀಟಿ ರೆಡ್ಡಿ ಸಂಚು ಆರೋಪ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಮುಖ್ಯಾಂಶಗಳು

- ಸ್ಥಿರಾಸ್ತಿಯ ಮಾಲೀಕ ಎಂ.ಗೋವರ್ಧನ ಸಲ್ಲಿಸಿರುವ ರಿಟ್ ಅರ್ಜಿ
- ನ್ಯಾ. ಎಂ.ನಾಗಪ್ರಸನ್ನ ಅವರಿಂದ ವಿಚಾರಣೆ
- ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿದ ಪೀಠ

ಬೆಂಗಳೂರು: ಬಳ್ಳಾರಿ ನಗರದ ಮಧ್ಯ ಭಾಗದಲ್ಲಿರುವ ₹100 ಕೋಟಿಗೂ ಹೆಚ್ಚಿನ ಮೌಲ್ಯದ ಸ್ಥಿರಾಸ್ತಿ ಕಬಳಿಕೆಯಲ್ಲಿ ಶಾಸಕ ಗಾಲಿ ಜನಾರ್ದನ ರೆಡ್ಡಿ ಪುತ್ರ ಜಿ.ಕಿರೀಟಿ ರೆಡ್ಡಿ ಹಾಗೂ ಆತನ ಸಹವರ್ತಿಗಳು ಭಾಗಿಯಾಗಿರುವ ಆರೋಪದಡಿ ದಾಖಲಿಸಿರುವ ಕ್ರಿಮಿನಲ್ ಪ್ರಕರಣವನ್ನು ಸಿಐಡಿ ಅಥವಾ ಎಸ್ಐಟಿಗೆ ಒಪ್ಪಿಸುವಂತೆ ಕೋರಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಸ್ಥಿರಾಸ್ತಿಯ ಮಾಲೀಕ ಎಂ.ಗೋವರ್ಧನ (74) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್, 'ಅರ್ಜಿದಾರರ 9 ಎಕರೆ ಜಾಗವನ್ನು ಸುಳ್ಳು ದಾಖಲೆ ಸೃಷ್ಟಿ ಮಾಡಿ ತಮ್ಮ ವಶಕ್ಕೆ ಪಡೆಯಲು ಜಿ.ಕಿರೀಟಿ ರೆಡ್ಡಿ ಮತ್ತು ಅವರ ಸಹವರ್ತಿಗಳು ಯತ್ನಿಸಿದ್ದಾರೆ. ಅರ್ಜಿದಾರರ ಜೊತೆ ಕಿರೀಟಿ ರೆಡ್ಡಿಯ ಸಹವರ್ತಿಗಳಾದ ಬಿ.ಸೀನ ಮತ್ತು ಮಂಜುನಾಥ್ 2005ರಲ್ಲಿ ಸಾಮಾನ್ಯ ಅಧಿಕಾರ ಪತ್ರ (ಜಿಪಿಎ) ಮತ್ತು ಕರಾರು ಪತ್ರ ಮಾಡಿಸಿಕೊಂಡು ದಾಖಲೆಗಳನ್ನು ತಿರುಚಿದ್ದಾರೆ' ಎಂದು ವಿಧಿ ವಿಜ್ಞಾನ ಪ್ರಯೋಗಾಲಯದ ದಾಖಲೆಗಳನ್ನು ಉಲ್ಲೇಖಿಸಿದರು.

'ಅರ್ಜಿದಾರರ ಸ್ವಾಧೀನಾನುಭವದಲ್ಲಿರುವ 9 ಎಕರೆ ಬೆಲೆ ಬಾಳುವ ಆಸ್ತಿಯನ್ನು ಪ್ರತಿವಾದಿ ಬಿ.ಸೀನ ಮತ್ತಿತರರು ಶುದ್ಧ ಕ್ರಯಕ್ಕೆ ಮಾರಾಟ ಮಾಡಲಾಗಿದೆ ಎಂಬ ಪತ್ರ ಸೃಷ್ಟಿಸಿ 2008ರಲ್ಲಿ ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ. ಮಾತ್ರವಲ್ಲ, ಅಸಲು ದಾವೆ ಮುಖಾಂತರ ಅರ್ಜಿದಾರರ ವಿರುದ್ಧ ಪ್ರತಿಬಂಧಕ ಆದೇಶ ಪಡೆದುಕೊಂಡು ಸಲ್ಲದ ವ್ಯಾಜ್ಯದಲ್ಲಿ ಸಿಲುಕಿಸಿ ಭಾರಿ ಮೊತ್ತದ ಆಸ್ತಿ ಕಬಳಿಕೆಗೆ ಪ್ರಯತ್ನಿಸಿದ್ದಾರೆ' ಎಂದು ದೂರಿದರು.

'ಈ ಸಂಬಂಧ ಕೌಲ್ ಬಜಾರ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ–1860ರ ಕಲಂ 420, 465, 467, 470, 471, 463 ಮತ್ತು 464ರ ಅಡಿಯಲ್ಲಿ ಎಫ್ಐಆರ್ ದಾಖಲು ಮಾಡಲಾಗಿದೆ. ಆದರೆ, ಯಾವುದೇ ಪ್ರಯೋಜನವಾಗಿಲ್ಲ. ಪ್ರತಿವಾದಿ ಜಿ.ಕಿರೀಟಿ ರೆಡ್ಡಿ ಪ್ರಭಾವಿ ವ್ಯಕ್ತಿ ಆಗಿದ್ದಾರೆ. ಅರ್ಜಿದಾರರಿಗೆ ಜೀವ ಭಯ ಇದ್ದು ಅಗತ್ಯ ರಕ್ಷಣೆ ಒದಗಿಸಬೇಕು ಮತ್ತು ಈ ಪ್ರಕರಣವನ್ನು ಸಿಐಡಿ ಅಥವಾ ಎಸ್ಐಟಿ ಇಲ್ಲವೇ ಸೂಕ್ತ ತನಿಖಾ ಸಂಸ್ಥೆಗೆ ವಹಿಸಲು ನಿರ್ದೇಶನ ನೀಡಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ಪೀಠ, ಅರ್ಜಿದಾರ ಗೋವರ್ಧನ ಅವರ ಜೀವ ರಕ್ಷಣೆಗಾಗಿ ಪೊಲೀಸ್ ಭದ್ರತೆ ಒದಗಿಸಲು ನಿರ್ದೇಶಿಸಿತು. ಅಂತೆಯೇ, ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿ, ಸಿಐಡಿ, ಕೌಲ್ ಬಜಾರ್ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್, ಧಾರವಾಡ ವಲಯ ಐಜಿಪಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಇದೇ 15 ಕ್ಕೆ ವಿಚಾರಣೆ ಮುಂದೂಡಲಾಗಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಪವನ ಸಾಗರ ವಕಾಲತ್ತು ವಹಿಸಿದ್ದಾರೆ.

ಕಾಂತಾವರ ಕನ್ನಡ ಸಂಘ ನಾಲ್ವರಿಗೆ ದತ್ತಿನಿಧಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಚೆನ್ನಬಸವಣ್ಣ


ಲಕ್ಷ್ಮೀನಾರಾಯಣ


ಲಕ್ಷ್ಮಣ ಕೊಡಸೆ


ಸರೋಜಿನಿ

ಮೂಡುಬಿದಿರೆ: ಕಾಂತಾವರ ಕನ್ನಡ ಸಂಘದ 2025ನೇ ಸಾಲಿನ ನಾಲ್ಕು ದತ್ತಿನಿಧಿ ಪ್ರಶಸ್ತಿಗಳನ್ನು ಘೋಷಿಸಲಾಗಿದೆ.

ಸರಸ್ವತಿ ಬಲ್ಲಾಳ್ ಮತ್ತು ಡಾ.ಸಿ.ಕೆ.ಬಲ್ಲಾಳ್ ದಂಪತಿ ಪ್ರತಿಷ್ಠಾನದಿಂದ ನೀಡುವ 'ಕರ್ನಾಟಕ ಏಕೀಕರಣದ ನೇತಾರ ಕೆ.ಬಿ.ಜಿನರಾಜ ಹೆಗ್ಡೆ ಸ್ಮಾರಕ ಸಾಂಸ್ಕೃತಿಕ ಪ್ರಶಸ್ತಿ'ಯನ್ನು ಬಳ್ಳಾರಿಯ ಲೋಹಿಯಾ ಪ್ರಕಾಶನದ ಚೆನ್ನಬಸವಣ್ಣ ಅವರಿಗೆ, ಧಾರವಾಡದ ಹಿರಿಯ ಸಾಹಿತಿ ಜಿ.ಎಂ. ಹೆಗಡೆ ಅವರ ದತ್ತಿನಿಧಿಯ 'ಪ್ರಾಧ್ಯಾಪಕ ಸಂಶೋಧಕ ಪ್ರಶಸ್ತಿ'ಯನ್ನು ನಿವೃತ್ತ ಪ್ರಾಧ್ಯಾಪಕ ಬೆಂಗಳೂರಿನ ಆರ್. ಲಕ್ಷ್ಮೀನಾರಾಯಣ ಅವರಿಗೆ, ಸಂಘದ ವಾರ್ಷಿಕ 'ಶ್ರೇಷ್ಠ ಪತ್ರಕರ್ತ' ಪ್ರಶಸ್ತಿಯನ್ನು ಪತ್ರಕರ್ತ ಮತ್ತು ಸಾಹಿತಿ ಲಕ್ಷ್ಮಣ ಕೊಡಸೆ ಅವರಿಗೆ ಮತ್ತು ರಾಷ್ಟ್ರಪ್ರಶಸ್ತಿ ಪುರಸ್ಕೃತ ದಿ. ಬಾಲಕೃಷ್ಣ ಆಚಾರ್ ದಂಪತಿ ದತ್ತಿನಿಧಿಯ 'ಶ್ರೇಷ್ಠ ಶಿಕ್ಷಕ ಸೌರಭ' ಪ್ರಶಸ್ತಿಯನ್ನು ಸರೋಜಿನಿ ನಾಗಪ್ಪಯ್ಯ ಈಶ್ವರಮಂಗಲ ಅವರಿಗೆ ನೀಡಲಾಗುವುದು.

ಪ್ರಶಸ್ತಿ ತಲಾ ₹10 ಸಾವಿರ ನಗದು, ತಾಮ್ರಪತ್ರ ಒಳಗೊಂಡಿದೆ. ಇದೇ 28ರಂದು 'ಸಂಘದ 50ರ ಸಂಭ್ರಮದ ದ್ವಿತೀಯ ಕಾರ್ಯಕ್ರಮ'ದಲ್ಲಿ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರ ಅಧ್ಯಕ್ಷತೆಯಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕಾಂತಾವರ ಕನ್ನಡ ಸಂಘದ ಅಧ್ಯಕ್ಷ ನಾ.ಮೊಗಸಾಲೆ, ಪ್ರಧಾನ ಕಾರ್ಯದರ್ಶಿ ಸದಾನಂದ ನಾರಾವಿ ತಿಳಿಸಿದ್ದಾರೆ.

'ಸ್ವಾಮೀಜಿ ಅವರಿಗೂ ವಿವರಣೆ ನೀಡಿದ್ದ ಸಾಕ್ಷಿ ದೂರುದಾರ'

ಪುತ್ತೂರು: 'ಧರ್ಮಸ್ಥಳ ಗ್ರಾಮದ ಬೆಳವಣಿಗೆ ಕುರಿತು ಸಾಕ್ಷಿ ದೂರುದಾರ ಚಿನ್ನಯ್ಯ ಆದಿಚುಂಚನಗಿರಿ ಮಠದ ಸ್ವಾಮೀಜಿ ಅವರಿಗೆ ಮಾಹಿತಿ ನೀಡಿದ್ದ' ಎಂದು ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆಯ ಅಧ್ಯಕ್ಷ ಮಹೇಶ ಶೆಟ್ಟಿ ತಿಮರೋಡಿ ಇಲ್ಲಿ ತಿಳಿಸಿದರು.

ತಮ್ಮ ವಿರುದ್ಧದ ಗಡಿಪಾರು ಆದೇಶ ಕುರಿತ ವಿಚಾರಣೆಗೆ ಇಲ್ಲಿಗೆ ಸೋಮವಾರ ಬಂದಿದ್ದ ಅವರು ಸುದ್ದಿಗಾರರ ಜೊತೆ ಮಾತನಾಡಿ, 'ಸ್ವಾಮೀಜಿ ಅವರಿಗೆ ವಿವರ ತಿಳಿಸಿದಾಗ ಚಿನ್ನಯ್ಯ ಜೊತೆಗೆ ಸೌಜನ್ಯಾ ಕುಟುಂಬದವರು ಹಾಗೂ ನಾನು ಇದ್ದೆವು' ಎಂದು ತಿಳಿಸಿದರು. 'ನಾನು ಹೆಣ್ಣುಮಕ್ಕಳ ಪರ ಹೋರಾಟ ಮಾಡುತ್ತಿರುವವ. ನನ್ನ ಮೇಲೆ ಗಡಿಪಾರಿಗೆ ಸಂಬಂಧಿಸಿ ಸುಳ್ಳು ವರದಿ ತಯಾರಿಸಿದ್ದಾರೆ' ಎಂದು ಹೇಳಿದರು.

ತಿಮರೋಡಿ ಹೇಳಿಕೆ ಕುರಿತು ಪ್ರತಿಕ್ರಿಯೆಗೆ ಸ್ವಾಮೀಜಿ ಅವರನ್ನು ಸಂಪರ್ಕಿಸಲಾಯಿತು. ಆದರೆ, ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.



ಬೀದರ್‌ನ ಚನ್ನಬಸವ ಪಟ್ಟದ್ದೇವರು ಜಿಲ್ಲಾ ರಂಗಮಂದಿರದಲ್ಲಿ ಸೋಮವಾರ ನಡೆದ ಬೀದರ್ ವಲಯದ 'ಪ್ರಜಾವಾಣಿ' ರಸಪ್ರಶ್ನೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ವಿಜೇತರಾದ ಕಲಬುರಗಿಯ ಶರಣಬಸವೇಶ್ವರ ವಸತಿ (ಎಸ್‌ಬಿಆರ್) ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳಾದ ಬಸವಪ್ರಸಾದ್ ಹಾಗೂ ಶ್ರೇಯಸ್ ಅವರಿಗೆ ಜಿಲ್ಲಾ ಪಂಚಾಯಿತಿ ಸಿಇಒ ಡಾ. ಗಿರೀಶ್ ಬದೋಲೆ ಮತ್ತು ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಅವರು ಚೆಕ್, ಪ್ರಮಾಣಪತ್ರ ವಿತರಿಸಿದರು – ಪ್ರಜಾವಾಣಿ ಚಿತ್ರ

ಚಟಕೆ ಸುದ್ದಿ

ಕಿರು ಮೃಗಾಲಯಕ್ಕೆ ಖಂಡ್ರೆ ಭೇಟಿ: ಮಾಹಿತಿ ಸಂಗ್ರಹ

ಬೆಳಗಾವಿ: ತಾಲ್ಲೂಕಿನ 'ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯ'ಕ್ಕೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೋಮವಾರ ಭೇಟಿ ನೀಡಿ, ಕೃಷ್ಣಮೃಗ ವಿಭಾಗ ಪರಿಶೀಲಿಸಿದರು.

31 ಕೃಷ್ಣಮೃಗ ಸತ್ತಿರುವ ಪ್ರಕರಣದ ಮಾಹಿತಿ ಪಡೆದರು. ಜತೆಗೆ, ಉಳಿದಿರುವ ಏಳು ಪ್ರಾಣಿಗಳ ಆರೈಕೆ, ಅವುಗಳ ಆರೋಗ್ಯ ಸ್ಥಿತಿ, ಆಹಾರ ವ್ಯವಸ್ಥೆ, ಸಂರಕ್ಷಣೆ ಕುರಿತು ವಿವರ ಸಂಗ್ರಹಿಸಿದರು.

'ಮುಂದೆ ಇಂಥ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು. ಬೇರೆ ಪ್ರಾಣಿಗಳ ಆರೋಗ್ಯದ ಮೇಲೂ ನಿಗಾ ಇರಿಸಬೇಕು' ಎಂದು ಈಶ್ವರ ಖಂಡ್ರೆ ತಿಳಿಸಿದರು.

ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ವನ್ಯಜೀವಿ ವಿಭಾಗದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಪಿ.ಸಿ. ರೇ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನೀಲ ಪನ್ವಾರ್ ಇತರ ಅಧಿಕಾರಿಗಳಿದ್ದರು.

ಶಿಶು ಸಾವು: ಸ್ವಯಂ ಪ್ರೇರಿತ ದೂರು ದಾಖಲು

ಯಾದಗಿರಿ: 'ಯಿಮ್ಸ್'ನ ತಾಯಿ–ಮಕ್ಕಳ ಆಸ್ಪತ್ರೆಯಲ್ಲಿ ಹೆರಿಗೆ ವೇಳೆ ಶಿಶು ಸಾವು ಪ್ರಕರಣ ಕುರಿತು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ದೂರು ದಾಖಲಿಸಿಕೊಂಡಿದೆ.



'ಹೆರಿಗೆ ವೇಳೆ ಶಿಶು ಸಾವು: ವೈದ್ಯರ ವಿರುದ್ಧ ಪ್ರತಿಭಟನೆ' ಶೀರ್ಷಿಕೆ ಅಡಿ 'ಪ್ರಜಾವಾಣಿ'ಯ ಡಿಸೆಂಬರ್ 8ರ ಸಂಚಿಕೆಯಲ್ಲಿ ಸುದ್ದಿ ಪ್ರಕಟವಾಗಿತ್ತು. ಇದನ್ನು ಗಮನಿಸಿದ ಆಯೋಗವು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ಘಟನೆ ಕುರಿತ ಸಮಗ್ರ ವರದಿಯನ್ನು 7 ದಿನದಲ್ಲಿ ಸಲ್ಲಿಸಲು ಸೂಚಿಸಲಾಗಿದೆ ಎಂದು ಆಯೋಗದ ರಾಜ್ಯ ಅಧ್ಯಕ್ಷ ಶಶಿಧರ್ ಎಸ್.ಕೋಸಂಬೆ ತಿಳಿಸಿದ್ದಾರೆ.

ನಿಧನ ವಾರ್ತೆ

ಎಸ್.ಆರ್. ವಿಜಯ್



ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಎಸ್.ಆರ್. ವಿಜಯ್ (88) ಅವರು ಸೋಮವಾರ ನಿಧನರಾದರು.

ಮೃತರಿಗೆ ಪತ್ನಿ ಡಾ.ಗಿರಿಜಾ, ಒಬ್ಬ ಪುತ್ರ, ಒಬ್ಬ ಪುತ್ರಿ ಇದ್ದಾರೆ. ಎಸ್.ಆರ್. ವಿಜಯ್ ಅವರು ಮಂಡ್ಯ, ಮೈಸೂರಿನ ಜಿಲ್ಲಾಧಿಕಾರಿಯಾಗಿ, ಕೆಎಸ್ಐಐಡಿಸಿ, ಕೆಎಸ್ಆರ್‌ಟಿಸಿ, ಕೆಎಸ್ಎಸ್ಐಡಿಸಿ ವ್ಯವಸ್ಥಾಪಕ ನಿರ್ದೇಶಕರಾಗಿ, ಬಿಡಿಎ, ಬಿಬಿಎಂಪಿ ಆಯುಕ್ತರಾಗಿ ಕಾರ್ಯನಿರ್ವಹಿಸಿದ್ದರು. ಬಿಡಬ್ಲ್ಯುಎಸ್ಎಸ್‌ಬಿಯಲ್ಲೂ ಕೆಲ ಕಾಲ ಕಾರ್ಯನಿರ್ವಹಿಸಿದ್ದರು.

ಅಂತ್ಯಕ್ರಿಯೆಯು ಕೋರಮಂಗಲದಲ್ಲಿ ಮಂಗಳವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂಡಿಗೊ ಸಮಸ್ಯೆ: ಟ್ಯಾಕ್ಸಿಗಳಿಗೆ ಹೊಡೆತ

ಆರಂಭಿಕ ದಿನಗಳಲ್ಲಿ ಲಾಭ ಗಳಿಸಿದ್ದ ಕ್ಯಾಬ್‌ಗಳು

• ಅಶ್ವಿನ್ ಬಿ.ಎಂ.

ಬೆಂಗಳೂರು: ಇಂಡಿಗೊ ವಿಮಾನಗಳ ಹಾರಾಟ ರದ್ದಾದ ಆರಂಭಿಕ ದಿನಗಳಲ್ಲಿ ಉಂಟಾದ ಅವ್ಯವಸ್ಥೆಯ ಲಾಭ ಪಡೆದಿದ್ದ ಟ್ಯಾಕ್ಸಿಗಳು ಈಗ ಪ್ರಯಾಣಿಕರಿಲ್ಲದೇ ನಷ್ಟಕ್ಕೆ ಒಳಗಾಗುತ್ತಿವೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರುವ (ಕೆಐಎ) ಅಗ್ರಿಗೇಟರ್ ಕಂಪನಿಗಳ ಕ್ಯಾಬ್ ಮತ್ತು ಖಾಸಗಿ ಟ್ಯಾಕ್ಸಿಗಳ ಆದಾಯ ಕುಸಿತ ಕಂಡಿದೆ.

ವಿಮಾನ ನಿಲ್ದಾಣದ ಸುತ್ತಮುತ್ತ 10 ಸಾವಿರಕ್ಕೂ ಅಧಿಕ ಟ್ಯಾಕ್ಸಿಗಳಿವೆ. ಇಂಡಿಗೊ ವಿಮಾನ ಸಂಚಾರ ದಿಢೀರ್ ರದ್ದಾದಾಗ ವಾಪಸ್ ಹೋಗುವವರ ಸಂಖ್ಯೆ ಏರಿದ್ದರಿಂದ ಒಮ್ಮೆಲೇ ಟ್ಯಾಕ್ಸಿಗಳಿಗೆ ಬೇಡಿಕೆ ಉಂಟಾಗಿತ್ತು. ಪರಿಸ್ಥಿತಿಯ ಲಾಭ ಪಡೆಯಲು ಟ್ಯಾಕ್ಸಿ ಬಾಡಿಗೆ ದರವನ್ನು ವಿಪರೀತವಾಗಿ ಏರಿಸಲಾಗಿತ್ತು. ಇದರ ಕುರಿತು ಪ್ರಚಾರವೂ ವ್ಯಾಪಕವಾಗಿ ಆಗಿತ್ತು. ವಿಮಾನ ಹಾರಾಟದ ಗೊಂದಲದಿಂದಾಗಿ ಈಗ ವಿಮಾನ ಪ್ರಯಾಣಿಕರ ಸಂಖ್ಯೆ ಕುಸಿತವಾಗಿದೆ. ಇರುವ ಕಡಿಮೆ ಸಂಖ್ಯೆಯ ಪ್ರಯಾಣಿಕರು ಕೂಡ ಟ್ಯಾಕ್ಸಿಗೆ ಅಧಿಕ ಬಾಡಿಗೆ ದರ ನೀಡಲು ಹಿಂಜರಿಯುತ್ತಿದ್ದಾರೆ.

‘ವಿಮಾನ ಸಂಚಾರ ರದ್ದಾದಾಗ ನಗರದ ಕಡೆಗೆ ಸಂಚರಿಸುವವರ ಸಂಖ್ಯೆ ಬಹಳ ಹೆಚ್ಚಿತ್ತು. ಗುರುವಾರ (ಡಿ.4) ಬೇಡಿಕೆ ಉತ್ತುಂಗಕ್ಕೆ ತಲುಪಿತ್ತು. ಆ ನಂತರ ಸ್ವಲ್ಪ ಕಡಿಮೆಯಾಗಿತ್ತು. ಕಳೆದ ಎರಡು ದಿನಗಳಿಂದ ಯಾವುದೇ ಬೇಡಿಕೆ ಇಲ್ಲ’ ಎಂದು ಟ್ಯಾಕ್ಸಿ ಚಾಲಕ ಅನ್ವರ್ ಪಾಷಾ ತಿಳಿಸಿದರು.

‘ಕೆಐಎಯಿಂದ ಮೆಜೆಸ್ಟಿಕ್‌ಗೆ ಸಾಮಾನ್ಯವಾಗಿ ₹1,200 ದರ ಇರುತ್ತದೆ. ವಿಮಾನ ಹಾರಾಟವಿಲ್ಲದೆ ಉಂಟಾದ ಗೊಂದಲದ ಸಮಯದಲ್ಲಿ ₹1,800ರಿಂದ ₹3,000 ವರೆಗೆ ಪ್ರಯಾಣಿಕರಿಂದ ಟ್ಯಾಕ್ಸಿಯವರು ವಸೂಲಿ ಮಾಡಿದ್ದರು ಎಂದು ವಿವರ ನೀಡಿದರು.

ಕಮಿಷನ್ ಆಧಾರಿತ ಓಲಾ, ಉಬರ್‌ನ ದರಗಳು ದೈನಂದಿನ ದರಗಳನ್ನು ನಿಗದಿಪಡಿಸಲು ವಿಮಾನ ದತ್ತಾಂಶವನ್ನು ಅವಲಂಬಿಸಿರುತ್ತವೆ. ಹಾಗಾಗಿ ವಿಪರೀತ ಹೆಚ್ಚಿಸಲು ಅವಕಾಶಗಳಿರುವುದಿಲ್ಲ. ಆದರೂ, ಬೇಡಿಕೆ ಕುಸಿದಾಗ ಉಂಟಾಗುವ ನಷ್ಟವನ್ನು ಭರಿಸಬೇಕಾಗುತ್ತದೆ ಎಂದು ಚಾಲಕರು ಹೇಳಿದರು.



140 ಇಂಡಿಗೊ ವಿಮಾನ ರದ್ದು

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (ಕೆಐಎ) ಇಂಡಿಗೊ ಕಾರ್ಯಾಚರಣೆ ನಿಧಾನವಾಗಿ ಸಾಮಾನ್ಯ ಸ್ಥಿತಿಗೆ ಮರಳುತ್ತಿದೆ. ಆದರೂ ಸೋಮವಾರ 140 ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿದೆ.

ಸಾಮೂಹಿಕ ರದ್ದತಿಯಿಂದಾಗಿ ಮರು ಬುಕ್ಕಿಂಗ್ ವೆಚ್ಚ, ಲಗೇಜ್‌ಗಳನ್ನು ವಾಪಸ್ ಪಡೆಯಲು ಪ್ರಯಾಣಿಕರು ಸೋಮವಾರವೂ ಹೈರಾಣಾದರು.

ಟರ್ಮಿನಲ್ 1ರಲ್ಲಿ ಜನದಟ್ಟಣೆ ಕಡಿಮೆಯಾಗಿದ್ದರೂ ಒಂದಷ್ಟು ಜನರು ನಿಲ್ದಾಣದಲ್ಲಿ ಉಳಿದಿದ್ದಾರೆ. ಹಲವರು ತಾವು ಹೋಗಬೇಕಾದ ಸ್ಥಳಕ್ಕೆ ರಸ್ತೆ ಸಾರಿಗೆ, ರೈಲುಗಳನ್ನು ಅವಲಂಬಿಸಬೇಕಾಯಿತು.

ಕೊಚ್ಚಿ, ಜೈಸಲ್ಮೇರ್, ಗೋರಖಪುರ, ಹೈದರಾಬಾದ್, ದೆಹಲಿ, ಇಂದೋರ್, ಮಂಗಳೂರು, ಕೊಯಮತ್ತೂರು, ಚೆನ್ನೈ, ಸೂರತ್ ಮತ್ತು ಗೋವಾ ಸೇರಿದಂತೆ ಪ್ರಮುಖ ಸ್ಥಳಗಳಿಗೆ ಹೋಗುವ ವಿಮಾನಗಳು ಸೋಮವಾರ ರದ್ದಾಗಿದ್ದವು.

‘ಡಿಸೆಂಬರ್ 9ರಂದು ಕೇರಳದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ನಾನು ಪಾಲ್ಗೊಳ್ಳಬೇಕಿತ್ತು. ಅದಕ್ಕಾಗಿ ವಿಮಾನದಲ್ಲಿ ಹೋಗಲು ಸೀಟು ಕಾಯ್ದಿರಿಸಿದ್ದೆ. ಆದರೆ, ಸಂಜೆ 6.45ರ ವಿಮಾನ ರದ್ದಾಗಿದೆ’ ಎಂದು ಪ್ರಯಾಣಿಕ ಮೊಹಮ್ಮದ್ ಅನಸ್ ಹೇಳಿಕೊಂಡರು.

‘ಇಂಡಿಗೊ ಸಂಸ್ಥೆಯವರು ಯಾರೂ ವಿಮಾನ ನಿಲ್ದಾಣದಲ್ಲಿ ಇಲ್ಲ. ನಾನು ಎರಡು ದಿನಗಳವರೆಗೆ ನಗರದಲ್ಲಿ ಕೊಠಡಿ ಕಾಯ್ದಿರಿಸಿದ್ದೆ. ಈಗಾಗಲೇ ಅಂದಾಜು ₹50,000 ನಷ್ಟವಾಗಿದೆ. ಮುಂಚಿತವಾಗಿ ಯಾವುದೇ ಸೂಚನೆ ನೀಡಿಲ್ಲ. ಈಗಲೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ’ ಎಂದು ದೂರಿದರು.

‘ಅಬುಧಾಬಿ ಸಮ್ಮೇಳನದಿಂದ ಹಿಂತಿರುಗುವಾಗ ಲಗೇಜ್‌ಗಳನ್ನು ಪ್ರತ್ಯೇಕವಾಗಿ ಕಳುಹಿಸಲಾಗಿತ್ತು. ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದು ಲಗೇಜ್‌ಗಾಗಿ ಎರಡು ದಿನ ಕಾಯಬೇಕಾಯಿತು’ ಎಂದು ಉದ್ಯಮಿ ಪಂಕಜ್ ಅಸಮಾಧಾನ ತೋಡಿಕೊಂಡರು.

‘ಪ್ರಯಾಣ ರದ್ದು, ಹೋಟೆಲ್ ದರವೂ ದುಬಾರಿ’

ಇಂಡಿಗೊ ವಿಮಾನಗಳ ಸಂಚಾರದಲ್ಲಿನ ವ್ಯತ್ಯಯದಿಂದ ಪ್ರಯಾಣಿಕರಿಗೆ ತೊಂದರೆ ಆಗಿರುವುದು ಅಷ್ಟೇ ಅಲ್ಲದೆ, ವಾಸ್ತವ್ಯಕ್ಕೆ ಹೋಟೆಲ್‌ಗಳು ದುಬಾರಿ ಹಣ ನಿಗದಿ ಮಾಡಿರುವುದರಿಂದ ಪ್ರಯಾಣಿಕರಿಗೆ ಹೊರೆಯಾಗಿದೆ. ಕೆಲವು ಹೋಟೆಲ್, ಲಾಡ್ಜ್‌ಗಳಲ್ಲಿ ಸಾಮಾನ್ಯಕ್ಕಿಂತ ಮೂರು ಪಟ್ಟು ದರ ಹೆಚ್ಚಿಸಿರುವ ಆರೋಪ ಕೇಳಿ ಬಂದಿದೆ.

6–7 ದಿನದಿಂದ ಇಂಡಿಗೊ ವಿಮಾನ ಸಂಚಾರ ರದ್ದುಪಡಿಸಿದ್ದರಿಂದ ಬೆಂಗಳೂರಿನಿಂದ ವಿವಿಧ ನಗರಗಳಿಗೆ ತೆರಳಬೇಕಿದ್ದ ಪ್ರಯಾಣಿಕರು ತೊಂದರೆ ಅನುಭವಿಸಿದರು. ರಾತ್ರಿ ವೇಳೆ ಪ್ರಯಾಣ ಮಾಡಬೇಕಾಗಿದ್ದವರು ಪರ್ಯಾಯ ವಿಮಾನ ಸಂಚಾರಕ್ಕೆ ಅವಕಾಶವೂ ಇಲ್ಲದ ಕಾರಣ ವಾಸ್ತವ್ಯಕ್ಕೆ ಮುಂದಾದರು.

ಈ ವೇಳೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪದ ಹೋಟೆಲ್‌ಗಳಲ್ಲಿ ದರ ವಿಚಾರಿಸಿದಾಗ ಮೂರು ಪಟ್ಟು ಏರಿಕೆಯಾಗಿರುವುದು ಕಂಡುಬಂದಿದೆ.

ಸಾಮಾನ್ಯ ದಿನಗಳಲ್ಲಿ ₹3,938ಕ್ಕೆ ಲಭ್ಯವಿರುವ ಕೊಠಡಿ ದರ ₹11,000ಕ್ಕೆ ಏರಿಕೆಯಾಗಿತ್ತು. ಮತ್ತೊಂದು ಹೋಟೆಲ್‌ನಲ್ಲಿ ₹3,000 ಇದ್ದ ದರವನ್ನು ಈಗ ₹10,000ಕ್ಕೆ ಹೆಚ್ಚಿಸಲಾಗಿದೆ. ಕೆಲವು ಪ್ರಯಾಣಿಕರು ಅನಿವಾರ್ಯವಾಗಿ ಹೆಚ್ಚಿನ ದರ ಪಾವತಿಸಿ ಕೊಠಡಿ ಪಡೆದಿದ್ದಾರೆ.

‘ಕುಟುಂಬದ ಕಾರ್ಯಕ್ರಮದಲ್ಲಿ ಭಾಗವಹಿಸಲು ದೆಹಲಿಗೆ ಹೊರಟಿದ್ದೆ. ಆದರೆ, ವಿಮಾನ ಸಂಚಾರ ರದ್ದಾದ ಕಾರಣ ಇಲ್ಲಿಯೇ ಉಳಿಯಲು ಕೊಠಡಿ ವಿಚಾರಿಸಿದರೆ ₹7,000ದಿಂದ ₹10,000 ಆಗಬಹುದು ಎಂದು ಹೋಟೆಲ್ ಸಿಬ್ಬಂದಿ ತಿಳಿಸಿದರು. ಕೊನೆಗೆ ಬೆಂಗಳೂರಿಗೆ ವಾಪಸಾಗಲು ಕ್ಯಾಬ್ ಬುಕ್ ಮಾಡಿದರೆ ₹2,500 ಪಾವತಿಸಬೇಕಾಯಿತು. ನಮ್ಮದಲ್ಲದ ತಪ್ಪಿಗೆ ಹೊರೆ ಅನುಭವಿಸಿದ್ದೇವೆ. ಈ ವೆಚ್ಚವನ್ನು ಇಂಡಿಗೊ ವಿಮಾನಯಾನ ಸಂಸ್ಥೆಯವರು ಭರಿಸಬೇಕು’ ಎಂದು ಸಾಫ್ಟ್‌ವೇರ್ ಎಂಜಿನಿಯರ್ ಪ್ರೀತಿ ಒತ್ತಾಯಿಸಿದರು.

‘ಬೆಂಗಳೂರು ವಿಶ್ವ ದರ್ಜೆಯ ನಗರ. ವಿಮಾನಯಾನ ಇಲ್ಲವೇ ಸಾರಿಗೆ ಸಮಸ್ಯೆಯಾದರೆ ಹೋಟೆಲ್‌ಗಳಲ್ಲಿ ಕೊಠಡಿಗಳ ದರ ಏರಿಕೆ ಮಾಡಲಾಗುತ್ತದೆ. ಇದೊಂದು ರೀತಿಯ ಹಗಲು ದರೋಡೆ’ ಎಂದು ರಾಜಸ್ಥಾನದ ಜೈಸಲ್ಮೇರ್‌ಗೆ ಹೋಗಬೇಕಿದ್ದ ಉದ್ಯಮಿ ಸೆಂಥಿಲ್ ಕುಮಾರ್ ಬೇಸರ ವ್ಯಕ್ತಪಡಿಸಿದರು.

ಚಿಟಿಕೆ ಸುದ್ದಿ

ಕಂಪ್ಯೂಟರ್ ಶಿಕ್ಷಣ

ಬೆಂಗಳೂರು: ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ಸಂಸ್ಥೆಯು ನಿರುದ್ಯೋಗಿ ಯುವಕ-ಯುವತಿಯರಿಗೆ ಉಚಿತವಾಗಿ ಕಂಪ್ಯೂಟರ್ ತರಬೇತಿ ಶಿಕ್ಷಣವನ್ನು 2026ರ ಜ. 1ರಿಂದ ಆರಂಭಿಸಲಿದೆ.

ತರಬೇತಿ ಅವಧಿ ಮೂರು ತಿಂಗಳಾಗಿದ್ದು, 18ರಿಂದ 35 ವರ್ಷದೊಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಮಲ್ಲೇಶ್ವರದಲ್ಲಿರುವ ಕೆನರಾ ಬ್ಯಾಂಕ್‌ನ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು.

ಕಂಪ್ಯೂಟರ್ ಆಫೀಸ್ ಅಡ್ಮಿನಿಸ್ಟ್ರೇಷನ್, ಟ್ಯಾಲಿ, ಡೆಸ್ಕ್ ಟಾಪ್ ಪಬ್ಲಿಷಿಂಗ್, ಹಾರ್ಡ್‌ವೇರ್ ಇತ್ಯಾದಿ ವಿಷಯಗಳಲ್ಲಿ ತರಬೇತಿ ನೀಡಲಾಗುತ್ತದೆ. ಕನಿಷ್ಠ ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ. ಪಿಯುಸಿ. ಐಟಿಐ, ಡಿಪ್ಲೊಮಾ, ಪದವಿ ಮುಗಿಸಿದವರಿಗೆ ಆದ್ಯತೆ ನೀಡಲಾಗುತ್ತದೆ. ಮಾಹಿತಿಗೆ ಸಂಪರ್ಕ ಸಂಖ್ಯೆ: 9448538107, 080-23440036

ವಧು–ವರರ ಸಮಾವೇಶ

ಬೆಂಗಳೂರು: ವಿಜಯನಗರ ನಾಯಕ ಸಂಘವು ವಾಲ್ಮೀಕಿ ನಾಯಕ ಜನಾಂಗದ ವಧು–ವರರ ಸಮಾವೇಶವನ್ನು ಡಿ.14ರಂದು ರಾಜಾಜಿನಗರದ 5ನೇ ಬ್ಲಾಕ್‌ನಲ್ಲಿರುವ ರಾಜಾಜಿನಗರ ಪೇರೆಂಟ್ ಅಸೋಸಿಯೇಷನ್‌ನಲ್ಲಿ ಹಮ್ಮಿಕೊಂಡಿದೆ.



ಭಾಗವಹಿಸಲು ಇಚ್ಛಿಸುವವರು ಭಾವಚಿತ್ರ ಹಾಗೂ ವಿವರಗಳೊಂದಿಗೆ ಸಂಘದಲ್ಲಿ ನೋಂದಣಿ ಮಾಡಿಸಿ ಕೊಳ್ಳುವಂತೆ ಕೋರಲಾಗಿದೆ.

ಮಾಹಿತಿಗೆ 9900363557 ಸಂಪರ್ಕಿಸಬಹುದು.

ಫ್ಲ್ಯಾಟ್ ಮೇಳಕ್ಕೆ ಸ್ಪಂದನೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಣಿಮಿಣಿಕೆ ಮತ್ತು ಹುಣ್ಣಿಗೆರೆಯ ವಸತಿ ಸಮುಚ್ಚಯದಲ್ಲಿ ಎರಡು ದಿನ ಆಯೋಜಿಸಿದ್ದ ಮೇಳಕ್ಕೆ ಉತ್ತಮ ಸ್ಪಂದನೆ ದೊರೆತಿದ್ದು, 25 ಫ್ಲ್ಯಾಟ್‌ಗಳು ಮತ್ತು 25 ಪ್ರೀಮಿಯಂ ವಿಲ್ಲಾಗಳು ಮಾರಾಟವಾಗಿವೆ.

ಮೇಳದಲ್ಲಿ 300ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದು, ಫ್ಲ್ಯಾಟ್ ಹಾಗೂ ಪ್ರೀಮಿಯಂ ವಿಲ್ಲಾಗಳನ್ನು ಖರೀದಿಸಿದರು. ಪ್ರಾರಂಭಿಕ ಠೇವಣಿ ಪಾವತಿಸಿದ ಗ್ರಾಹಕರಿಗೆ ಸ್ಥಳದಲ್ಲಿಯೇ ಹಂಚಿಕೆ ಪತ್ರ ವಿತರಿಸಲಾಯಿತು.

ಸಾರ್ವಜನಿಕರಿಗೆ ವಾಹನ ವ್ಯವಸ್ಥೆ ಮಾಡಲಾಗಿತ್ತು. ಸ್ವಯಂ ಸೇವಕರು ಫ್ಲ್ಯಾಟ್‌ಗಳ ಬಗ್ಗೆ ಮಾಹಿತಿ ನೀಡಿದರು. ₹1 ಲಕ್ಷ ಪಾವತಿಸಿ ಫ್ಲ್ಯಾಟ್‌ಗಳನ್ನು ಕಾಯ್ದಿರಿಸಿ, ಉಳಿದ ಪ್ರಾರಂಭಿಕ ಠೇವಣಿಯನ್ನು ಏಳು ದಿನಗಳೊಳಗೆ ಪಾವತಿಸಿದ್ದಲ್ಲಿ ಹಂಚಿಕೆ ಪತ್ರವನ್ನು ನೀಡಲಾಗುವುದು ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ಕೆನರಾ ಬ್ಯಾಂಕ್, ಆ್ಯಕ್ಸಿಸ್ ಬ್ಯಾಂಕ್, ಎಚ್‌.ಡಿ.ಎಫ್.ಸಿ. ಬ್ಯಾಂಕ್‌ಗಳ ಪ್ರತಿನಿಧಿಗಳು ಸ್ಥಳದಲ್ಲಿ ಹಾಜರಿದ್ದರು.

ಬಿಡಿಎ ಆರ್ಥಿಕ ಸದಸ್ಯ ಎ. ಲೋಕೇಶ್, ಎಂಜಿನಿಯರ್ ಮಲ್ಲಿಕಾರ್ಜುನ ಸ್ವಾಮಿ, ಮುಖ್ಯ ಲೆಕ್ಕಾಧಿಕಾರಿ ಶ್ರೀನಿವಾಸಮೂರ್ತಿ, ಉಪ ಕಾರ್ಯದರ್ಶಿ ಎಂ.ಎಸ್. ಜ್ಞಾನೇಶ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ಇಂಬವಳ್ಳಿ, ಕುಮಾರ್, ಭುವನೇಶ್ವರ್ ಭಾಗವಹಿಸಿದ್ದರು.

ಮೌನ ಪ್ರತಿಭಟನೆ

ಹುಬ್ಬಳ್ಳಿ: ‘ಲಿಂಗಾಯತರ ಮೇಲಿನ ದೌರ್ಜನ್ಯ ದಿನ’ವೆಂದು ಕಪ್ಪುಬಟ್ಟೆ ಕಟ್ಟಿಕೊಂಡು ಡಿ. 10ರಂದು ಬೆಳಗಾವಿಯಲ್ಲಿ ಮೌನ ಪ್ರತಿಭಟನೆ ಮಾಡಲಾಗುವುದು’ ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಶ್ರೀ ಹೇಳಿದರು.



ಮೃತ್ಯುಂಜಯ ಸ್ವಾಮೀಜಿ

‘ಈ ಪ್ರತಿಭಟನೆ ಶಕ್ತಿ ಪ್ರದರ್ಶನಕ್ಕೆ ಅಲ್ಲ. ಪಂಚಮಸಾಲಿ ಹೋರಾಟಕ್ಕೆ ನೈತಿಕ ಬಲ ತುಂಬಲು ಮಾಡಲಾಗುತ್ತಿದ್ದು, 10 ಸಾವಿರ ಜನ ಸೇರುವ ನಿರೀಕ್ಷೆ ಇದೆ’ ಎಂದು ಹೇಳಿದರು.

ನಿಧನ ವಾರ್ತೆ

ಬಾಬಾ ಆಢಾವ್

ಪುಣೆ (ಪಿಟಿಐ): ಮಹಾರಾಷ್ಟ್ರದ ಸಾಮಾಜಿಕ ಹೋರಾಟಗಾರ ಬಾಬಾ ಆಢಾವ್ (95) ಅವರು ದೀರ್ಘ ಕಾಲಿಕ ಆರೋಗ್ಯದ ಸಮಸ್ಯೆಯಿಂದಾಗಿ ಸೋಮವಾರ ನಿಧನರಾದರು.

ಮಹಾರಾಷ್ಟ್ರದ ಸಾಮಾಜಿಕ ಹಾಗೂ ಕಾರ್ಮಿಕ ಚಳವಳಿಗಳ ಮುಖ್ಯ ಸ್ತಂಭ ಎಂದೇ ಹೆಸರಾಗಿದ್ದ ಬಾಬಾ ಆಢಾವ್, ‘ಹಮಾಲ್ ಪಂಚಾಯತ್’ ಎಂಬ ಸಂಘಟನೆ ಕಟ್ಟಿದ್ದರು. ಪುಣೆ ಹಾಗೂ ಮತ್ತಿತರ ಭಾಗಗಳಲ್ಲಿ ಕೂಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಅವರು ಹೋರಾಟಗಳನ್ನು ರೂಪಿಸಿದ್ದರು. ಅವರಿಗೆ ಇಬ್ಬರು ಪುತ್ರರಿದ್ದಾರೆ.

ಸುದ್ದಿ 2 ನಿಮಿಷ

ಮಾಲಿನ್ಯ ತಡೆಗೆ ತಜ್ಞರ ತಂಡ ರಚಿಸಿ: ಡಿಕೆಶಿ ಸೂಚನೆ

ಬೆಂಗಳೂರು: ಬೆಂಗಳೂರಿನ ವಾಯು ಮಾಲಿನ್ಯದ ಅಪಾಯವನ್ನು ತಡೆಗಟ್ಟಲು, ತುರ್ತು ಮಾರ್ಗೋಪಾಯಗಳನ್ನು ಕಂಡುಹಿಡಿಯಲು ತಜ್ಞರ ತಂಡವನ್ನು ರಚಿಸುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮಾಡಿದ ಮನವಿಗೆ ಸ್ಪಂದಿಸಿರುವ ಡಿ.ಕೆ. ಶಿವಕುಮಾರ್ ಈ ಸೂಚನೆ ನೀಡಿದ್ದಾರೆ.

ನಗರದಲ್ಲಿ 1,23,24,919 ನೋಂದಾಯಿತ ವಾಹನಗಳಿವೆ. ಜನಸಂಖ್ಯೆ (ಸುಮಾರು 1.47 ಕೋಟಿ) ಮತ್ತು ವಾಹನಗಳ ಅನುಪಾತವು ಸರಿಸುಮಾರು ಪ್ರತಿ ನಾಗರಿಕರಿಗೆ ಒಂದು ವಾಹನ ಎಂಬಂತಾಗಿದೆ.

ಪ್ರತಿದಿನ ಸರಾಸರಿ 2,563 ಹೊಸ ವಾಹನಗಳು ಬೆಂಗಳೂರಿನಲ್ಲಿ ನೋಂದಣಿಯಾಗುತ್ತಿವೆ. ಇವುಗಳಲ್ಲಿ 84 ಲಕ್ಷಕ್ಕೂ ಹೆಚ್ಚು ದ್ವಿಚಕ್ರ ವಾಹನಗಳಾಗಿವೆ. ಪ್ರಸ್ತುತ ವಾಯು ಗುಣಮಟ್ಟ ಸೂಚ್ಯಂಕ (ಎಕ್ಯುಐ) 50 ಅನ್ನು ಮೀರಿ 70 ‘ಮಧ್ಯಮ’ ವರ್ಗದಲ್ಲಿದೆ. ಮುಂದಿನ 5-10 ವರ್ಷಗಳಲ್ಲಿ ನಗರವು 'ತೀವ್ರ' ಮಾಲಿನ್ಯದ ಮಟ್ಟ ತಲುಪಬಹುದು ಎಂದು ದಿನೇಶ್ ಗೂಳಿಗೌಡ ಮನವಿಯಲ್ಲಿ ತಿಳಿಸಿದ್ದರು.

ಮಾಲಿನ್ಯದಿಂದಾಗಿ ಮಕ್ಕಳು, ಹಿರಿಯರು ಉಸಿರಾಟದ ತೊಂದರೆ, ಅಲರ್ಜಿ, ಆಸ್ತಮಾ ಮತ್ತು ಹೃದಯ ಸಂಬಂಧಿ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಪರಿಸರ ವಿಜ್ಞಾನಿಗಳು, ಸಂಚಾರ ತಜ್ಞರು, ಸಾರ್ವಜನಿಕ ಆರೋಗ್ಯ ತಜ್ಞರು ಮತ್ತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ತಕ್ಷಣವೇ ರಚಿಸಬೇಕು ಎಂದು ಒತ್ತಾಯಿಸಿದ್ದರು.

ಕ್ರೀಡೆಯಲ್ಲಿ ಉತ್ಸಾಹದಿಂದ ಪಾಲ್ಗೊಳ್ಳಿ: ನಾಗೇಶ್



ಕೆ.ಆರ್.ಪುರ: ‘ಕ್ರೀಡೆ ಜಾತಿ, ಮತ ಭೇದವಿಲ್ಲದ ಕ್ಷೇತ್ರವಾಗಿದ್ದು, ಪ್ರತಿಯೊಬ್ಬರೂ ಕ್ರೀಡೆಯಲ್ಲಿ ಪಾಲ್ಗೊಂಡು ಅರೋಗ್ಯ ವೃದ್ಧಿಸಿಕೊಳ್ಳಿ’ ಎಂದು ಮಾಜಿ ಸಚಿವ ಎಚ್.ನಾಗೇಶ್ ಅವರು ಹೇಳಿದರು.

ಕೆ.ಆರ್.ಪುರ ಸಮೀಪದ ಸಾದರಮಂಗಲದಲ್ಲಿ ಮಹದೇವಪುರ ಕೆಪಿಸಿಸಿ ಅಪಾರ್ಟ್‌ಮೆಂಟ್ ಘಟಕ ಹಮ್ಮಿಕೊಂಡಿದ್ದ ಕೆ.ದೊಮ್ಮಸಂದ್ರ ಬ್ಯಾಡ್ಮಿಂಟನ್ ಟೂರ್ನಮೆಂಟ್ ಸೀಸನ್-1 ಉದ್ಘಾಟಿಸಿ ಅವರು ಮಾತನಾಡಿದರು.

‘ಮನೋವಿಕಾಸ ಮತ್ತು ಆತ್ಮಸ್ಥೈರ್ಯ ಬಲಗೊಳ್ಳಲು ಕ್ರೀಡೆ ಸಹಕಾರಿಯಾಗಿದೆ. ಕ್ರೀಡೆ ದೈಹಿಕ ಕ್ಷಮತೆಯನ್ನು ಹೆಚ್ಚಿಸುತ್ತದೆ. ಪ್ರತಿಯೊಬ್ಬರೂ ತಮಗೆ ಇಷ್ಟವಾದ ಕ್ರೀಡೆಯಲ್ಲಿ ತೊಡಗಿಕೊಂಡು ಸಾಧನೆ ಮಾಡಬೇಕು’ ಎಂದರು.

ಕೆಪಿಸಿಸಿ ಅಪಾರ್ಟ್‌ಮೆಂಟ್ ಘಟಕದ ಅಧ್ಯಕ್ಷ ಪಿ.ತಮಿಳ್ ಸೆಲ್ವನ್ ಮಾತನಾಡಿದರು.

ಕೆಪಿಸಿಸಿ ಪೂರ್ವ ಜಿಲ್ಲಾ ಅಧ್ಯಕ್ಷ ಡಿ.ಕೆ.ಮೋಹನ್, ಮುಖಂಡರಾದ ನಂದಕುಮಾರ್, ಅಮರನಾಥ್, ಮುನಿಕೃಷ್ಣ, ನವೀನ್ ರೆಡ್ಡಿ ಅವರು ಇದ್ದರು.

‘ವಾಹನ ಪಾರ್ಕಿಂಗ್ ಸಮಯಕ್ಕೆ ಶುಲ್ಕ ಸದ್ಯಕ್ಕೆ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (ಕೆಐಎಎಲ್) ಟರ್ಮಿನಲ್-1 ಮತ್ತು ಟರ್ಮಿನಲ್ -2ರಲ್ಲಿ ವಾಹನ ದಟ್ಟಣೆ ತಗ್ಗಿಸುವ ನಿಟ್ಟಿನಲ್ಲಿ ಅನುಮತಿಸಲಾದ ಉಚಿತ ಅವಧಿಗಿಂತ ಹೆಚ್ಚಿನ ಸಮಯದವರೆಗೆ ನಿಲುಗಡೆ ಮಾಡುವ ವಾಹನಗಳಿಗೆ ಶುಲ್ಕ ವಿಧಿಸುವ ನಿರ್ಧಾರವನ್ನು ಮುಂದೂಡಲಾಗಿದೆ.

ಹೊಸ ನಿಯಮಗಳು ಸೋಮವಾರದಿಂದ ಜಾರಿಗೆ ಬರಬೇಕಿತ್ತು. ನಿಯಮದ ಪ್ರಕಾರ ಹೊಸ ಟರ್ಮಿನಲ್-1 ಮತ್ತು ಟರ್ಮಿನಲ್-2ರಲ್ಲಿ ನಿಗದಿಪಡಿಸಲಾದ ಪ್ರಯಾಣಿಕರ ಡ್ರಾಪ್ ಮತ್ತು ಪಿಕ್‌ಅಪ್ ವಲಯಕ್ಕೆ ಎಲ್ಲ ಖಾಸಗಿ ಕಾರುಗಳಿಗೆ (ವೈಟ್ ಬೋರ್ಡ್) ಉಚಿತ ಪ್ರವೇಶವಿದೆ. ಆದರೆ, ನಿಗದಿತ ಸಮಯದ ಮಿತಿ ಮೀರಿ ಹೆಚ್ಚಿನ ಅವಧಿಯಲ್ಲಿ ವಾಹನ ನಿಲ್ಲಿಸಿದರೆ ಪ್ರತ್ಯೇಕ ಶುಲ್ಕ ವಿಧಿಸಲಾಗುತ್ತದೆ. ವಾಹನಗಳಿಗೆ 8 ನಿಮಿಷ ಉಚಿತ ನಿಲುಗಡೆ ಅವಕಾಶ ಕಲ್ಪಿಸಲಾಗಿದೆ.

ಈ ಸಮಯದ ಮಿತಿ ಮೀರಿದ ಎಲ್ಲ ವಾಹನ ಬಳಕೆದಾರರಿಗೆ 8ರಿಂದ 13 ನಿಮಿಷಗಳ ನಿಲುಗಡೆಗೆ ₹150, 13ರಿಂದ 18 ನಿಮಿಷಗಳ ನಿಲುಗಡೆಗೆ ₹300 ಶುಲ್ಕ ವಿಧಿಸಲಾಗುತ್ತದೆ. 18 ನಿಮಿಷಕ್ಕಿಂತ ಹೆಚ್ಚು ಸಮಯ ವಾಹನ ನಿಲ್ಲಿಸಿದರೆ ಹತ್ತಿರದ ಪೊಲೀಸ್ ಠಾಣೆಗೆ ಟೋಯಿಂಗ್ ಮಾಡಲಾಗುತ್ತದೆ ಎಂದು ತಿಳಿಸಲಾಗಿತ್ತು.

ಹಳದಿ ಫಲಕದ ಟ್ಯಾಕ್ಸಿ ಮತ್ತು ಎಲೆಕ್ಟ್ರಿಕ್ ಕ್ಯಾಬ್‌ಗಳು ಸೇರಿ ಎಲ್ಲ ವಾಣಿಜ್ಯ ವಾಹನಗಳು ನಿಗದಿತ ಪಾರ್ಕಿಂಗ್ ಸ್ಥಳದಲ್ಲೇ ಪ್ರಯಾಣಿಕರಿಗೆ ಕಾಯಬೇಕು. ಈ ಸ್ಥಳದಲ್ಲೂ ಮೊದಲ 10 ನಿಮಿಷದವರಗೆ ಮಾತ್ರ ಉಚಿತವಾಗಿ ವಾಹನ ನಿಲುಗಡೆ ಮಾಡಬಹುದು.

ಕೆಐಎಎಲ್ ವಕ್ತಾರರ ಪ್ರಕಾರ, ‘ಕೆಲ ದಿನಗಳಿಂದ ದೇಶದ ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದ್ದು, ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುವವರೆಗೂ ಆದೇಶ ಮುಂದೂಡಲಾಗಿದೆ. ಪರಿಷ್ಕೃತ ಆದೇಶವನ್ನು ಒಂದೆರೆಡು ದಿನಗಳಲ್ಲಿ ಪ್ರಕಟಿಸಲಾಗುವುದು’ ಎಂದು ಹೇಳಿದರು.

ವಿಮಾನ ನಿಲ್ದಾಣಗಳ ಮೂಲಗಳ ಪ್ರಕಾರ, ವಿಮಾನಯಾನ ಸಂಸ್ಥೆಗಳು ಎಂದಿನಂತೆ ಕಾರ್ಯಾಚರಣೆ ಆರಂಭಿಸುತ್ತಿದ್ದಂತೆ ಡಿಸೆಂಬರ್ 11 ಮತ್ತು 12ರಿಂದ ನಿಯಮ ಜಾರಿಗೆ ಬರಬಹುದು ಎನ್ನಲಾಗಿದೆ.

ಎರಡೂ ಟರ್ಮಿನಲ್‌ಗಳಲ್ಲಿ ಶುಲ್ಕದ ವಿವರಗಳನ್ನು ಒಳಗೊಂಡ ಫಲಕಗಳನ್ನು ಅಳವಡಿಸಿದ್ದರೂ ಬಹುತೇಕ ಕ್ಯಾಬ್ ಚಾಲಕರಿಗೆ ಸರಿಯಾದ ಮಾಹಿತಿ ಇಲ್ಲ.

‘ಉಚಿತ ಅವಧಿಗಿಂತ ಹೆಚ್ಚಿನ ಸಮಯದವರೆಗೆ ನಿಲುಗಡೆ ಮಾಡುವ ವಾಹನಗಳಿಗೆ ಶುಲ್ಕ ವಿಧಿಸುವ ನಿರ್ಧಾರ ಖಂಡಿಸಿ ಪ್ರತಿಭಟನೆ ಮಾಡಲಾಗುವುದು. ಚಾಲಕರಿಗೆ ಅನ್ಯಾಯವಾಗುವ ನಿಯಮ ಜಾರಿಗೆ ಬಿಡುವುದಿಲ್ಲ’ ಎಂದು ಕರ್ನಾಟಕ ಚಾಲಕರ ಒಕ್ಕೂಟದ ಅಧ್ಯಕ್ಷ ಜಿ.ನಾರಾಯಣಸ್ವಾಮಿ ತಿಳಿಸಿದರು.

ಈ ಸಂಬಂಧ ಕೆಐಎಎಲ್‌ಗೆ ಪತ್ರ ಬರೆದಿರುವ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ‘ಹೆಚ್ಚಿನ ಸಮಯದವರೆಗೆ ನಿಲುಗಡೆ ಮಾಡುವ ವಾಹನಗಳಿಗೆ ಶುಲ್ಕ ವಿಧಿಸುವ ನಿರ್ಧಾರವನ್ನು ಹಿಂಪಡೆಯಬೇಕು. ಇದು ಕ್ಯಾಬ್ ಚಾಲಕರಿಗೆ ತೀವ್ರ ಆರ್ಥಿಕ ಹೊರೆ ಉಂಟುಮಾಡುತ್ತದೆ’ ಎಂದು ಹೇಳಿದ್ದಾರೆ.

ಸ್ವಲ್ಪ ದಾರಿ ಬಿಡಿ...

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್



ಬನ್ನೇರುಘಟ್ಟ ರಸ್ತೆಯ ಮೀನಾಕ್ಷಿ ದೇವಸ್ಥಾನದ ಬಳಿ ಎಮ್ಮೆಗಳು ನಿತ್ಯ ನಡುರಸ್ತೆಯಲ್ಲೇ ಸಾಗುತ್ತಿರುವುದರಿಂದ ಆ ಸಮಯದಲ್ಲಿ ವಾಹನಗಳು ಸಾಲುಗಟ್ಟಿ ನಿಲ್ಲಬೇಕಾದ ಪರಿಸ್ಥಿತಿ ಇದೆ

‘ಎಐ ಆಧಾರಿತ ಬೆಳೆ ವಿಶ್ಲೇಷಣೆ ಮಹತ್ವದ ಪರಿಹಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನ ಬದಲಾವಣೆ, ಕೀಟ–ರೋಗಗಳ ನಿರ್ವಹಣೆ, ಜಲ ಸಂಪನ್ಮೂಲಗಳ ಕಡಿಮೆ ಲಭ್ಯತೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಬೆಳೆ ವಿಶ್ಲೇಷಣೆ ಮಹತ್ವದ ಪರಿಹಾರ ವಾಗಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯ ಸೋಮವಾರ ಆಯೋಜಿಸಿದ್ದ ಕೃಷಿ ವಿಜ್ಞಾನ ಕೇಂದ್ರಗಳ (ಕೆವಿಕೆ) ಕೃಷಿ ವಿಜ್ಞಾನಿಗಳಿಗೆ ಸ್ಮಾರ್ಟ್ ಕೃಷಿಯ ಬಗ್ಗೆ ಸಲಹೆ, ಎಐ ತಂತ್ರಜ್ಞಾನ ಆಧಾರಿತ ಬೆಳೆ ವಿಶ್ಲೇಷಣೆ ನಡೆಸುವ ತರಬೇತಿಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ನಮ್ಮ ಕೆವಿಕೆ ವಿಜ್ಞಾನಿಗಳು ಗ್ರಾಮೀಣ ಭಾಗದ ರೈತರು ಹಾಗೂ ವಿಶ್ವವಿದ್ಯಾಲಯಗಳ ನಡುವೆ ಜ್ಞಾನದ ಸೇತುವೆಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅದರ ಜೊತೆಗೆ ರೈತರ ಹೊಲ, ಗದ್ದೆಗಳಿಗೆ ಭೇಟಿ ನೀಡಿ ವೈಜ್ಞಾನಿಕ ಸಲಹೆಗಳನ್ನು ನೀಡುತ್ತಿದ್ದಾರೆ. ಆದ್ದರಿಂದ ವಿಜ್ಞಾನಿಗಳಿಗೆ ಹೊಸ–ಹೊಸ ತಂತ್ರಜ್ಞಾನದ ತರಬೇತಿಗಳನ್ನು ನೀಡಲಾಗುತ್ತಿದೆ’ ಎಂದು ಹೇಳಿದರು.

‘ವಿಸ್ತರಣಾ ನಿರ್ದೇಶಕ ವೈ.ಎನ್. ಶಿವಲಿಂಗಯ್ಯ ಮಾತನಾಡಿ, ‘ಹೊಸ ತಂತ್ರಜ್ಞಾನಗಳು ರೈತರ ಬದುಕಿಗೆ ಹೊಸ ಭರವಸೆ ನೀಡುತ್ತವೆ. ರೈತರಿಗೆ ತಲುಪುವ ಪ್ರತಿಯೊಂದು ಸಲಹೆಯೂ ಹೆಚ್ಚು ನಿಖರ, ವೈಜ್ಞಾನಿಕ ಮತ್ತು ಫಲಪ್ರದವಾಗಬೇಕು’ ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕಿ ಸುಮಾ ಉಪಸ್ಥಿತರಿದ್ದರು.

ಬ್ಯಾರಕ್‌ನಲ್ಲಿದ್ದ ನಾಲ್ವರು ಆರೋಪಿಗಳಿಗೆ ಒದ್ದಿರುವ ಆರೋಪ

ಜೈಲಿನಲ್ಲಿ ನಟ ದರ್ಶನ್ ರಂಪಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ, ನಟ ದರ್ಶನ್ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದು, ಅವರನ್ನು ಇರಿಸಿರುವ ಬ್ಯಾರಕ್‌ನಲ್ಲಿ ಇತರೆ ಆರೋಪಿಗಳ ಜತೆಗೆ ರಂಪಾಟ ಮಾಡಿದ್ದಾರೆ ಎನ್ನುವ ವದಂತಿ ಹಬ್ಬಿದೆ.



ದರ್ಶನ್

ಜಾಮೀನು ಮಂಜೂರು ಮಾಡಿ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದ್ದರಿಂದ ಆಗಸ್ಟ್ 14ರಂದು ದರ್ಶನ್, ಅವರ ಗೆಳತಿ ಪವಿತ್ರಾಗೌಡ ಸೇರಿದಂತೆ ಏಳು ಮಂದಿಯನ್ನು ಎರಡನೇ ಬಾರಿಗೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದರು.

ದರ್ಶನ್, ಅವರ ವ್ಯವಸ್ಥಾಪಕ ಆರ್.ನಾಗರಾಜ್, ಕಾರು ಚಾಲಕ ಲಕ್ಷ್ಮಣ್, ಉದ್ಯಮಿ ಪ್ರದೂಷ್ ರಾವ್ ಹಾಗೂ ಚಿತ್ರದುರ್ಗದ ಆಟೊ ಚಾಲಕರಾದ ಅನುಕುಮಾರ್ ಅಲಿಯಾಸ್ ಅನು, ಜಗದೀಶ್ ಅಲಿಯಾಸ್ ಜಗ್ಗ ಅವರನ್ನು ಜೈಲಿನಲ್ಲಿ ಒಂದೇ ಬ್ಯಾರಕ್‌ನಲ್ಲಿ ಇರಿಸಲಾಗಿದೆ. ದರ್ಶನ್ ಅವರು ಆರ್.ನಾಗರಾಜ್ ಹೊರತುಪಡಿಸಿ ಉಳಿದವರ ಜತೆಗೆ ಗಲಾಟೆ ಮಾಡಿದ್ದಾರೆ ಎಂದು ಹೇಳಲಾಗಿದೆ.

ಕಾಲಿನಿಂದ ಒದ್ದರೇ ದರ್ಶನ್?: ದರ್ಶನ್ ಅವರು ನಟಿಸಿರುವ ‘ಡೆವಿಲ್’ ಚಿತ್ರವು ಇದೇ 11ರಂದು ಬಿಡುಗಡೆ ಆಗುತ್ತಿದೆ. ಕೆಲವು ದಿನಗಳಿಂದ ಪತ್ರಿಕೆಗಳನ್ನು ಓದಲು ದರ್ಶನ್ ಬೆಳಿಗ್ಗೆ ಬೇಗನೇ ಎಳುತ್ತಿದ್ದಾರೆ. ಆ ಸಂದರ್ಭದಲ್ಲಿ ಇತರೆ ಆರೋಪಿಗಳನ್ನು ಒದ್ದು ಎಬ್ಬಿಸುತ್ತಿದ್ದಾರೆ. ಅಲ್ಲದೇ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದ್ದಾರೆ ಎಂದು ಹೇಳಲಾಗಿದೆ.

ಎರಡು ದಿನದ ಹಿಂದೆ ಜಗದೀಶ್ ಮತ್ತು ದರ್ಶನ್ ನಡುವೆ ಜೋರು ಜಗಳವಾಗಿದೆ. ಇಬ್ಬರ ಜಗಳ ಜೋರಾಗುತ್ತಿದ್ದಂತೆ ಜೈಲು ಸಿಬ್ಬಂದಿ ಹಾಗೂ ಇತರೆ ಕೈದಿಗಳು ಜಗಳ ಬಿಡಿಸಿದ್ದಾರೆ.

‘ದರ್ಶನ್ ಬ್ಯಾರಕ್‌ನಲ್ಲಿ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದಾರೆ. ತಮ್ಮನ್ನು ಬೇರೆ ಬ್ಯಾರಕ್‌ಗೆ ಕಳುಹಿಸಬೇಕು ಇಲ್ಲವೇ ಚಿತ್ರದುರ್ಗದ ಕಾರಾಗೃಹಕ್ಕೆ ಸ್ಥಳಾಂತರಿಸಬೇಕು. ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂಬುದಾಗಿ ಅನುಕುಮಾರ್ ಹಾಗೂ ಜಗದೀಶ್ ಅವರು ಜೈಲಿನ ಅಧಿಕಾರಿಗಳ ಎದುರು ಅಳಲು ತೋಡಿಕೊಂಡಿದ್ದಾರೆ’ ಎಂದು ಮೂಲಗಳು ಹೇಳಿವೆ.

ಪರಿಶೀಲಿಸಲು ಸೂಚನೆ

‘ದರ್ಶನ್ ಅವರನ್ನು ಇರಿಸಲಾಗಿರುವ ಬ್ಯಾರಕ್‌ನಲ್ಲಿ ಗಲಾಟೆ ಆಗಿರುವ ಮಾಹಿತಿ ಇಲ್ಲ. ಗಲಾಟೆ ನಡೆದಿರುವ ಬಗ್ಗೆ ವದಂತಿ ಹಬ್ಬಿರುವ ಕಾರಣಕ್ಕೆ ಪರಿಶೀಲನೆ ನಡೆಸಲಾಗುತ್ತಿದೆ. ಜೈಲಿನ ಅಧಿಕಾರಿಗಳಿಗೂ ಸೂಚನೆ ನೀಡಲಾಗಿದೆ’ ಎಂದು ಕಾರಾಗೃಹದ ಎಸ್.ಪಿ ಅಂಶುಕುಮಾರ್ ತಿಳಿಸಿದ್ದಾರೆ.

‘ಕಳೆದ ಕೆಲವು ದಿನಗಳಿಂದ ಜೈಲಿನ ವಿವಿಧ ಬ್ಯಾರಕ್‌ಗಳಲ್ಲಿ ಪರಿಶೀಲನೆ ನಡೆಸಲಾಗಿತ್ತು. ಬ್ಯಾರಕ್‌ನಲ್ಲಿ ನಿಷೇಧಿತ ವಸ್ತುಗಳು ಪತ್ತೆ ಆಗಿದ್ದವು. ಮೊಬೈಲ್, ಸಿಮ್ ಹಾಗೂ ನಗದು ವಶಕ್ಕೆ ಪಡೆದುಕೊಳ್ಳಲಾಗಿತ್ತು. ದರ್ಶನ್ ಬ್ಯಾರಕ್‌ನಲ್ಲೂ ಪರಿಶೀಲನೆ ನಡೆಸಲಾಗಿತ್ತು. ಆ ರೀತಿಯ ಘಟನೆ ನಡೆದಿದ್ದರೆ, ಇತರೆ ಆರೋಪಿಗಳು ಮಾಹಿತಿ ನೀಡುತ್ತಿದ್ದರು’ ಎಂದು ಅವರು ಹೇಳಿದ್ದಾರೆ.

ಜೈಲಿನಲ್ಲಿ ಅಕ್ರಮ ತಡೆಗಟ್ಟಲು ಹಾಗೂ ಸುಧಾರಣೆ ತರಲು ಮೊದಲ ಬಾರಿಗೆ ರಾಜ್ಯ ಸರ್ಕಾರವು ಐಪಿಎಸ್ ಅಧಿಕಾರಿ ಅಂಶುಕುಮಾರ್ ಅವರನ್ನು ನೇಮಿಸಿದೆ.

ಕಠಿಣ ನಿಯಮ ಜಾರಿ

ಅತ್ಯಾಚಾರ, ಸರಣಿ ಕೊಲೆಯ ಪಾತಕಿ ಉಮೇಶ್ ರೆಡ್ಡಿ, ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡಿದ್ದ ಪ್ರಕರಣದ ಆರೋಪಿ ತರುಣ್ ರಾಜ್ ತಾವಿರುವ ಬ್ಯಾರಕ್‌ನಲ್ಲಿ ಮೊಬೈಲ್ ಹಿಡಿದು ಮಾತನಾಡುತ್ತಿದ್ದ, ಟಿ.ವಿ ವೀಕ್ಷಣೆ ಮಾಡುತ್ತಿದ್ದ ವಿಡಿಯೊಗಳು ಜಾಲತಾಣದಲ್ಲಿ ಹರಿದಾಡಿದ್ದವು.

ಅದರ ಬೆನ್ನಲ್ಲೇ, ಮಾಂಸ, ಮದ್ಯ ಸೇವಿಸಿ ಜೈಲಿನಲ್ಲಿ ವಿಚಾರಣಾ ಕೈದಿಗಳು ನೃತ್ಯ ಮಾಡುತ್ತಿದ್ದ ವಿಡಿಯೊವೊಂದು ಹರಿದಾಡಿತ್ತು. ಇದರ ಬೆನ್ನಲ್ಲೇ ಕಾರಾಗೃಹದಲ್ಲಿ ಕಠಿಣ ನಿಯಮ ಜಾರಿಗೆ ತರಲಾಗಿದೆ. ಪ್ರಭಾವಿ ಕೈದಿಗಳು ಸಹ ಸರದಿಯಲ್ಲೇ ಬಂದು ಊಟ ತೆಗೆದುಕೊಂಡು ಹೋಗುವ ವ್ಯವಸ್ಥೆ ಜಾರಿಗೆ ತರಲಾಗಿದೆ ಎಂದು ಜೈಲಿನ ಮೂಲಗಳು ತಿಳಿಸಿವೆ.

‘ಜೈಲಿನ ಕೈಪಿಡಿಯಂತೆಯೇ ನಿಯಮ ಜಾರಿಗೆ ತರಲಾಗಿದೆ. ತಮ್ಮ ಬ್ಯಾರಕ್‌ನಲ್ಲಿರುವ ಶೌಚಾಲಯವನ್ನು ಅಲ್ಲಿದ್ದವರೇ ಸ್ವಚ್ಛ ಮಾಡಿಕೊಳ್ಳಬೇಕು. ದರ್ಶನ್ ಅವರಿಗೂ ಅದೇ ನಿಯಮ ಅನ್ವಯ ಮಾಡಲಾಗಿದೆ. ಬ್ಯಾರಕ್ ಎದುರು ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ನಡೆದಿದೆ ಎನ್ನಲಾದ ಆರ್ಥಿಕ ಅವ್ಯವಹಾರ ಪ್ರಕರಣ

‘10 ದಿನಗಳಲ್ಲಿ ವಿಚಾರಣೆ ಪೂರ್ಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ (ಕಸಾಪ) ನಡೆದಿದೆ ಎನ್ನಲಾದ ಆರ್ಥಿಕ ಅವ್ಯವಹಾರಕ್ಕೆ ಸಂಬಂಧಿಸಿದ 17 ಆರೋಪಗಳಲ್ಲಿ 14 ಆಪಾದನೆಗಳ ವಿಚಾರಣೆ ಮುಕ್ತಾಯಗೊಂಡಿದ್ದು, ಉಳಿದ 3 ಅಂಶಗಳ ವಿಚಾರಣೆಯನ್ನು 10 ದಿನಗಳಲ್ಲಿ ಪೂರ್ಣಗೊಳಿಸಲಾಗುವುದು’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

‘ಕಸಾಪ ಪದಾಧಿಕಾರಿಗಳ ಕಾರ್ಯವೈಖರಿ, ಅನುದಾನ ಮತ್ತು ಖರ್ಚು-ವೆಚ್ಚಗಳ ಕುರಿತು ವಿಚಾರಣೆ ನಡೆಸಲು ತನಿಖಾಧಿಕಾರಿ ನೇಮಕ ಮಾಡಿ 2025ರ ಜೂನ್ 26 ಹಾಗೂ 30ರಂದು ಸಹಕಾರ ಸಂಘಗಳ ನೋಂದಣಾಧಿಕಾರಿ ಹೊರಡಿಸಿದ್ದ ಆದೇಶಕ್ಕೆ ತಡೆ ನೀಡಬೇಕು’ ಎಂದು ಕೋರಿ ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ (ಎಜಿ) ಕೆ.ಶಶಿಕಿರಣ ಶೆಟ್ಟಿ ಅವರು, ‘ಪ್ರಕರಣಕ್ಕೆ ಸಂಬಂಧಿಸಿದಂತೆ 14 ಆರೋಪಗಳ ಕುರಿತು ವಿಚಾರಣೆ ಪೂರ್ಣಗೊಳಿಸಲಾಗಿದೆ. ಬಾಕಿ 3 ಆರೋಪಗಳ ವಿಚಾರಣೆ ಪೂರ್ಣಗೊಳಿಸಲು 1 ವಾರ ಅಥವಾ 10 ದಿನಗಳ ಕಾಲಾವಕಾಶ ನೀಡಬೇಕು’ ಎಂದು ಕೋರಿದರು.

ಅಂತೆಯೇ, ಈ ಸಂಬಂಧ ನ್ಯಾಯಪೀಠಕ್ಕೆ ಮೆಮೊ ಸಲ್ಲಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು 2026ರ ಜನವರಿ 13ಕ್ಕೆ ಮುಂದೂಡಿತು.

ತೆಗೆದು ಹಾಕಲು ಮನವಿ

ವಿಚಾರಣೆ ವೇಳೆ ಮಹೇಶ್ ಜೋಶಿ ಪರ ಪದಾಂಕಿತ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ್, ‘ನವೆಂಬರ್ 6ರಂದು ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಕೆಲ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ. ಅವುಗಳನ್ನು ಆದೇಶದಿಂದ ತೆಗೆದುಹಾಕುವಂತೆ ಕೋರಿ ಅರ್ಜಿ ಸಲ್ಲಿಸಲಾಗಿದೆ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸುವುದಾಗಿ ತಿಳಿಸಿತು.

ಚಿಕ್ಕಬೊಮ್ಮಸಂದ್ರದಲ್ಲಿ ಕನಕ ಜಯಂತ್ಯುತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ‘ವಿಶಿಷ್ಟ ಶೈಲಿಯ ಕೀರ್ತನೆಗಳು ಮತ್ತು ಕೃತಿಗಳ ಮೂಲಕ ಸಮಾಜಕ್ಕೆ ಭಕ್ತಿ, ಸಮಾನತೆ ಮತ್ತು ಸಾಮಾಜಿಕ ಸುಧಾರಣೆಯ ಸಂದೇಶಗಳನ್ನು ಸಾರಿದ ಮಹಾಪುರುಷ ಕನಕದಾಸರು’ ಎಂದು ಹೊಸದುರ್ಗ ಶಾಖಾಮಠ ಕನಕಗುರು ಪೀಠದ ಈಶ್ವರಾನಂದಪುರಿ ಸ್ವಾಮೀಜಿ ಬಣ್ಣಿಸಿದರು.

ಕರ್ನಾಟಕ ಪ್ರದೇಶ ಕುರುಬರ ಸಂಘದ ಆಶ್ರಯದಲ್ಲಿ ಚಿಕ್ಕಬೊಮ್ಮಸಂದ್ರದಲ್ಲಿ ಆಯೋಜಿಸಿದ್ದ 538ನೇ ಕನಕ ಜಯಂತ್ಯುತ್ಸವದಲ್ಲಿ ಮಾತನಾಡಿದ ಅವರು, ಕನಕದಾಸರ ಜೀವನ, ಬೋಧನೆಗಳು ಸಮಾಜಕ್ಕೆ ಇಂದಿಗೂ ಪ್ರಸ್ತುತ ಮತ್ತು ಸ್ಫೂರ್ತಿಯಾಗಿದೆ ಎಂದರು.

ಶಾಸಕ ಎಸ್.ಆರ್.ವಿಶ್ವನಾಥ್ ಹಾಗೂ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಎಚ್.ಎಂ.ರೇವಣ್ಣ ಅವರು ಮಾತನಾಡಿದರು. ಸಮಾಜದ ಹಿರಿಯ ಗಣ್ಯರು, ಸ್ಥಳೀಯ ಮುಖಂಡರನ್ನು ಸನ್ಮಾನಿಸಲಾಯಿತು.

ಕಾಗಿನೆಲೆ ಕನಕ ಶ್ರೀ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಬ್ಯಾಂಕಿನ ಯಲಹಂಕ ಶಾಖೆಗೆ ಚಾಲನೆ ನೀಡಲಾಯಿತು. ಬ್ಯಾಂಕಿನ ಅಧ್ಯಕ್ಷ ದೇವರಾಜ ಸುಬ್ಬರಾಯಪ್ಪ, ಉಪಾಧ್ಯಕ್ಷ ಕೃಷ್ಣಪ್ಪ. ಎಚ್.ಆರ್, ನಿರ್ದೇಶಕ ಎಂ.ಮುನಿರಾಜು ಉಪಸ್ಥಿತರಿದ್ದರು.

ಬೈಕ್ ರ‍್ಯಾಲಿ: ಕನಕ ಜಯಂತ್ಯುತ್ಸವದ ಪ್ರಯುಕ್ತ ಸಂಗೊಳ್ಳಿ ರಾಯಣ್ಣ ಯುವಸೇನೆಯ ಕಾರ್ಯಕರ್ತರು, ಚಿಕ್ಕಬೊಮ್ಮಸಂದ್ರ ಮತ್ತು ಯಲಹಂಕ ಉಪನಗರದ ಪ್ರಮುಖ ಬೀದಿಗಳಲ್ಲಿ ಬೈಕ್ ರ‍್ಯಾಲಿ ನಡೆಸಿದರು.

ಮೆರವಣಿಗೆ: ಕನಕದಾಸರ ಪುತ್ಥಳಿಯನ್ನು ಬೆಳ್ಳಿರಥದಲ್ಲಿಟ್ಟು, ಚಿಕ್ಕಬೊಮ್ಮಸಂದ್ರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ವಿವಿಧ ಜಾನಪದ ಕಲಾತಂಡಗಳು ಪ್ರದರ್ಶನ ನೀಡಿದವು.



ಚಿಕ್ಕಬೊಮ್ಮಸಂದ್ರದಲ್ಲಿ ಕನಕದಾಸರ ಪುತ್ಥಳಿಯ ಮೆರವಣಿಗೆ ನಡೆಯಿತು

ರೈತರಿಗೆ ನಿವೇಶನ ನೀಡಲು ಸಿದ್ಧತೆ

ಶಿವರಾಮ ಕಾರಂತ ಬಡಾವಣೆ ಯೋಜನೆಗೆ ಭೂಮಿ ನೀಡಿದವರಿಗೆ ಶೀಘ್ರ ಪರಿಹಾರ

● ಕೆ.ಎಸ್.ಸುನಿಲ್

ಬೆಂಗಳೂರು: ನಗರದ ಉತ್ತರ ಭಾಗದಲ್ಲಿ ನಿರ್ಮಾಣವಾಗುತ್ತಿರುವ ಕೆ.ಶಿವರಾಮ ಕಾರಂತ (ಎಸ್.ಕೆ) ಬಡಾವಣೆಯ ಯೋಜನೆಗೆ ಜಮೀನು ನೀಡಿರುವ ರೈತರಿಗೆ ನಿವೇಶನ ಹಂಚಿಕೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸಿದ್ಧತೆ ನಡೆಸಿದೆ.

ಮೊದಲ ಹಂತದಲ್ಲಿ ಐದು ಸಾವಿರ ನಿವೇಶನಗಳನ್ನು ಹಂಚಿಕೆ ಮಾಡಲು ನಿರ್ಧರಿಸಿರುವ ಪ್ರಾಧಿಕಾರ, ಭೂಮಿ ಬಿಟ್ಟುಕೊಟ್ಟಿರುವ ರೈತರಿಂದ ಪ್ರತ್ಯೇಕವಾಗಿ ಶೀಘ್ರ ಅರ್ಜಿ ಆಹ್ವಾನಿಸಲಿದೆ. 60:40ರ ಅನುಪಾತದಲ್ಲಿ ಪರಿಹಾರ ನೀಡಲು ನಿರ್ಧರಿಸಲಾಗಿದೆ. ಆದರೆ, ಸಂತ್ರಸ್ತ ರೈತರು 50:50 ಅನುಪಾತದಲ್ಲಿ ಪರಿಹಾರ ನೀಡುವಂತೆ ಆಗ್ರಹಿಸಿದ್ದಾರೆ.

ಹಲವು ವರ್ಷಗಳ ಕಾನೂನು ಹೋರಾಟದಿಂದ ಭೂ ಮಾಲೀಕರು ಬೇಸತ್ತಿದ್ದು, ಕಾನೂನು ತೊಡಕುಗಳು ಬಗೆಹರಿಯುವತ್ತ ಸಾಗುತ್ತಿದೆ. ಎಸ್.ಕೆ. ಬಡಾವಣೆ ಯೋಜನೆಗೆ ಜಮೀನು ನೀಡಿದವರಿಗೆ ನಿವೇಶನ ಹಂಚಿಕೆ ಮಾಡಲು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದ ಅನುಸಾರ, ಹೈಕೋರ್ಟ್ ಭೂ ಮಾಲೀಕರಿಗೆ ನಿವೇಶನ ಹಂಚಿಕೆ ಮಾಡಲು ಪ್ರಾಧಿಕಾರಕ್ಕೆ ಅನುಮತಿ ನೀಡಿದೆ.

'ಎಸ್.ಕೆ.ಬಡಾವಣೆಗೆ ಜಮೀನು ಬಿಟ್ಟುಕೊಟ್ಟಿರುವ ರೈತರಿಗೆ 2008ರ ತೀರ್ಮಾನದಂತೆ 60:40 ಅನುಪಾತದಲ್ಲಿ ಪರಿಹಾರ ನೀಡಲಾಗುತ್ತದೆ. ಒಂದು ಎಕರೆ ಭೂಮಿ ಬಿಟ್ಟುಕೊಟ್ಟ ರೈತರಿಗೆ 9,583 ಚದರ ಅಡಿ ಅಭಿವೃದ್ಧಿಪಡಿಸಿದ ನಿವೇಶನಗಳು ಹಂಚಿಕೆಯಾಗಲಿವೆ. ಐದು ಸಾವಿರ ನಿವೇಶನ ಹಂಚಲು ಯೋಜಿಸಲಾಗಿದೆ. ಪರಿಹಾರ ವಿಚಾರ ಬಹಳ ಹಿಂದೆಯೇ ನಿರ್ಧಾರವಾಗಿದೆ' ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

'ಅರ್ಜಿಗಳನ್ನು ಸ್ವೀಕರಿಸಲು ಮತ್ತು ನಿವೇಶನಗಳನ್ನು ವಿತರಿಸಲು ಪ್ರಾಧಿಕಾರವು ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದೆ. ರೈತರ ಮಾಹಿತಿ ಹಾಗೂ ಭೂಮಿ ವಿಸ್ತೀರ್ಣದ ದತ್ತಾಂಶವನ್ನು ಅದರಲ್ಲಿ ದಾಖಲಿಸಲಾಗುತ್ತಿದೆ. ಪಾರದರ್ಶಕತೆ ಕಾಪಾಡಲು ಮತ್ತು ಮಾನವ ಹಸ್ತಕ್ಷೇಪ ತಡೆಗೆ ತಂತ್ರಜ್ಞಾನ ಬಳಸಿಕೊಳ್ಳಲಾಗುತ್ತಿದೆ. ಹಿಂದಿನ ತಪ್ಪು ಮರುಕಳಿಸದಂತೆ ನೋಡಿಕೊಳ್ಳಲಾಗುವುದು. ಮೊದಲು ಪ್ರಾಯೋಗಿಕವಾಗಿ ಜಾರಿ ಮಾಡಲಾಗುವುದು. ಡಿಸೆಂಬರ್ ಅಂತ್ಯದೊಳಗೆ ಪ್ರಕ್ರಿಯೆ ಪೂರ್ಣಗೊಳಿಸಲಾಗುತ್ತದೆ' ಎಂದರು. ಬಿಡಿಎ ಅಭಿವೃದ್ಧಿಪಡಿಸುತ್ತಿರುವ ಈ ಯೋಜನೆಗೆ 3,837 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆಯಾಗಿತ್ತು. ಈ ಪೈಕಿ 3,546 ಎಕರೆ ಭೂಮಿಯಲ್ಲಿ 9 ಬ್ಲಾಕ್‌ಗಳನ್ನಾಗಿ ಮಾಡಿ, ವಿವಿಧ ಅಳತೆಯ ಸುಮಾರು 34 ಸಾವಿರ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಉತ್ತರ ಬೆಂಗಳೂರಿನ 17 ಗ್ರಾಮಗಳನ್ನು ಒಳಗೊಂಡಿದೆ. ಹೈಕೋರ್ಟ್‌ನಲ್ಲಿ ಬಾಕಿ ಇರುವ ಪ್ರಕರಣಗಳಿಂದಾಗಿ ಸ್ಥಗಿತಗೊಂಡಿರುವ ಕೆಲ ಪ್ರದೇಶಗಳನ್ನು ಹೊರತುಪಡಿಸಿ, ಉಳಿದ ಪ್ರದೇಶಗಳ ನಿವೇಶನ ಹಂಚಿಕೆಗೆ ಸಿದ್ಧತೆ ನಡೆದಿದೆ.

'ನ್ಯಾಯಾಲಯ ಆದೇಶ ನೀಡಿದ ಕೂಡಲೇ ಸಾರ್ವಜನಿಕರಿಗೆ ನಿವೇಶನಗಳ ಹಂಚಿಕೆಗೆ ಅರ್ಜಿ ಆಹ್ವಾನಿಸಲಾಗುತ್ತದೆ. ಅಂದಾಜು 10-12 ಸಾವಿರ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತದೆ' ಎಂದು ಮೂಲಗಳು ತಿಳಿಸಿವೆ.

ಈ ನಡುವೆ ಕಾರಂತ ಬಡಾವಣೆ ವಿಸ್ತರಣೆಗೆ ಯಲಹಂಕ ಹಾಗೂ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಒಟ್ಟು 18 ಗ್ರಾಮಗಳನ್ನು ಗುರುತಿಸಲಾಗಿದ್ದು, ಅಂದಾಜು ಮೂರು ಸಾವಿರ ಎಕರೆ ಜಮೀನು ಅಗತ್ಯವಿದೆ.



ಶಿವರಾಮ ಕಾರಂತ ಬಡಾವಣೆ

ಅಂಕಿ ಅಂಶ

3,546 ಎಕರೆ — ಬಡಾವಣೆ ವಿಸ್ತೀರ್ಣ

34,000 — ಸಿದ್ಧಗೊಂಡಿರುವ ನಿವೇಶನ

17 — ಒಳಪಟ್ಟಿರುವ ಗ್ರಾಮಗಳು

50:50 ಅನುಪಾತದ ಪರಿಹಾರಕ್ಕೆ ಆಗ್ರಹ

'ಎಸ್.ಕೆ. ಬಡಾವಣೆಗೆ ಜಮೀನು ನೀಡಿದ ರೈತರಿಗೆ 50:50 ಅನುಪಾತದಲ್ಲಿ ನಿವೇಶನ ನೀಡಬೇಕು. ಅಭಿವೃದ್ಧಿಪಡಿಸಿದ 100, 80 ಹಾಗೂ 60 ಅಡಿ ರಸ್ತೆಗಳಿಗೆ ಹೊಂದಿಕೊಂಡಂತೆ ವಾಣಿಜ್ಯ ಹಾಗೂ ಮೂಲೆ ನಿವೇಶನಗಳನ್ನು ಹಂಚಿಕೆ ಮಾಡುವಂತೆ ಪ್ರಾಧಿಕಾರದ ಆಯುಕ್ತರಿಗೆ ಮನವಿ ಮಾಡಲಾಗಿದೆ. ವಾಣಿಜ್ಯ ಮತ್ತು ಮೂಲೆ ನಿವೇಶನ ನೀಡಬೇಕು' ಎಂದು ಸಂತ್ರಸ್ತ ರೈತ ರಾಮಗೊಂಡನಹಳ್ಳಿ ಎಂ.ರಮೇಶ್ ಆಗ್ರಹಿಸಿದ್ದಾರೆ.

'ನಮ್ಮ ಕುಟುಂಬವು ಯೋಜನೆಗೆ 39 ಗುಂಟೆ ಜಮೀನು ಬಿಟ್ಟುಕೊಟ್ಟಿದೆ. 20 ವರ್ಷ ಕಳೆದರೂ ಪರಿಹಾರ ನೀಡಿಲ್ಲ. ಅಲ್ಲದೇ ಪ್ರಾಧಿಕಾರವು ಪುರೋಭಿವೃದ್ಧಿ ತೆರಿಗೆಯನ್ನು (ಅಭಿವೃದ್ಧಿ ತೆರಿಗೆ) ಅವೈಜ್ಞಾನಿಕವಾಗಿ 17 ಗ್ರಾಮಗಳಿಗೆ ವಿಧಿಸಿದೆ. ಉದಾಹರಣೆಗೆ ಬೆಟ್ಟಹಳ್ಳಿ ಗ್ರಾಮದಲ್ಲಿ ಚದರ ಅಡಿಗೆ ₹552, ಕೆಂಪನಹಳ್ಳಿಗೆ ₹42, ರಾಮಗೊಂಡನಹಳ್ಳಿಗೆ ₹1028, ವೀರಸಾಗರಕ್ಕೆ ₹65 ಪುರೋಭಿವೃದ್ಧಿ ಶುಲ್ಕ ವಿಧಿಸಲಾಗಿದೆ. ಒಂದೊಂದು ಗ್ರಾಮಕ್ಕೆ ಒಂದೊಂದು ರೀತಿ ಶುಲ್ಕ ವಿಧಿಸಿರುವುದು ಅವೈಜ್ಞಾನಿಕವಾಗಿದೆ' ಎಂದು ಹೇಳಿದರು.

'ಈ ಯೋಜನೆ ಅನುಷ್ಠಾನಕ್ಕೆ ಎರಡು ದಶಕ ಆಗಿರುವ ಕಾರಣ ಬಿಡಿಎ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಪುರೋಭಿವೃದ್ಧಿ ಶುಲ್ಕವನ್ನು ಕಡಿಮೆ ಮಾಡಬೇಕು. ಮಾರ್ಗಸೂಚಿ ದರದ ಪ್ರಕಾರ ಶುಲ್ಕ ನಿಗದಿ ಮಾಡಿರುವುದು ಸರಿಯಲ್ಲ. ಕೆಲ ಹಳ್ಳಿಗಳಲ್ಲಿ 30X40 ಅಡಿ ಅಳತೆಯ ನಿವೇಶನಕ್ಕೆ ಅಂದಾಜು ಒಂದು ಲಕ್ಷ ರೂಪಾಯಿವರೆಗೂ ಶುಲ್ಕ ಪಾವತಿಸಬೇಕಾಗಬಹುದು' ಎಂದು ವೀರಸಾಗರ ನಿವಾಸಿ ವಸಂತ್ ಕುಮಾರ್ ತಿಳಿಸಿದರು.

'ಅಶೋಕ ಬಿಜೆಪಿ ಬಣಗಳ ಒಗ್ಗೂಡಿಸಿಕೊಳ್ಳಲಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): 'ಬೆಳಗಾವಿ ಅಧಿವೇಶನದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಹಲವು ಅಸ್ತ್ರಗಳನ್ನು ಪ್ರಯೋಗಿಸಲಾಗುವುದು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ. ಆದರೆ, ಅವರ ಪಕ್ಷದ ಬತ್ತಳಿಕೆಯಲ್ಲಿ ಬಾಣವೇ ಇಲ್ಲ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ವ್ಯಂಗ್ಯ ವಾಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಅವಿಶ್ವಾಸ ನಿರ್ಣಯ ಮಂಡಿಸಿದರೆ ಅದಕ್ಕೆ ಸೋಲಾಗುವುದು ಖಚಿತ' ಎಂದರು.

'ಯಾರು ಯಾವಾಗ, ಎಷ್ಟು ದಿನ ಮುಖ್ಯಮಂತ್ರಿ ಆಗಿರಬೇಕೆಂಬುದನ್ನು ನಮ್ಮ ಪಕ್ಷದ ಹೈಕಮಾಂಡ್ ನಿರ್ಧರಿಸಲಿದೆ. ಹೀಗಾಗಿ, ನಾಯಕತ್ವದ ವಿಚಾರದಲ್ಲಿ ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ' ಎಂದರು.

'ಬಿಜೆಪಿಯಲ್ಲಿ ಅಶೋಕ ಬಣ, ವಿಜಯೇಂದ್ರ ಬಣ, ಕುಮಾರ ಬಂಗಾರಪ್ಪ ಬಣ ಮತ್ತು ರಮೇಶ ಜಾರಕಿಹೊಳಿ ಬಣಗಳಿವೆ. ಮೊದಲು ಆ ಬಣಗಳ ಕಿತ್ತಾಟವನ್ನು ಅಶೋಕ ಅವರು ಪರಿಹರಿಸಲಿ. ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಬಣಗಳಿಲ್ಲ. ನಮ್ಮದೇನಿದ್ದರೂ ಕಾಂಗ್ರೆಸ್ ಬಣ' ಎಂದರು.

'ಬಿಜೆಪಿಯವರು ಜನರಲ್ಲಿ ಕೇವಲ ಮತೀಯ ಭಾವನೆಗಳನ್ನು ಕೆರಳಿಸಿ ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆಯೇ ಹೊರತು, ಯಾವತ್ತೂ ಅಭಿವೃದ್ಧಿ ಬಗ್ಗೆ ರಾಜಕೀಯ ಮಾಡಿಲ್ಲ. ಜನರ ಪರವಾಗಿ ಎಂದಿಗೂ ಕೆಲಸ ಮಾಡಿಲ್ಲ' ಎಂದು ಟೀಕಿಸಿದರು.

ಚಿತ್ರಾವಳಿ



ಕೆಂಗೇರಿ ಬಿಜಿಎಸ್ ಪದವಿಪೂರ್ವ ಕಾಲೇಜಿನಲ್ಲಿ ನಡೆದ ಬೆಂಗಳೂರು ದಕ್ಷಿಣ ಜಿಲ್ಲಾ ಪ್ರಾಂಶುಪಾಲರ ಸಮಾವೇಶದಲ್ಲಿ ಸಂಘದ ಅಧ್ಯಕ್ಷ ಪ್ರಸನ್ನಕುಮಾರ್ ಅವರನ್ನು ವಿಧಾನಪರಿಷತ್ ಸದಸ್ಯ ಪುಟ್ಟಣ್ಣ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮನೋಜ್ ಕುಮಾರ್ ಕೊಳ್ಳಾ ಸನ್ಮಾನಿಸಿದರು



ಕೆ–ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ಅವರು ಯೋಜನಾ ತಂಡ, ಗುತ್ತಿಗೆ ದಾರರು ಮತ್ತು ಅಧಿಕಾರಿಗಳೊಂದಿಗೆ ಸೋಮವಾರ ಯಶವಂತಪುರಕ್ಕೆ ಭೇಟಿ ನೀಡಿ ಬೆಂಗಳೂರು ಉಪನಗರ ಯೋಜನೆಯ ಕಾರಿಡಾರ್–2 ಮತ್ತು ಕಾರಿಡಾರ್–1 ಸಂಪರ್ಕಿಸುವ ಸ್ಥಳವನ್ನು ಪರಿಶೀಲಿಸಿ, ಅದರ ನಕ್ಷೆಯನ್ನು ವೀಕ್ಷಿಸಿದರು



ಅಟಲ್ ಬಿಹಾರಿ ವಾಜಪೇಯಿ ಜನ್ಮ ಶತಮಾನೋತ್ಸವದ ಪ್ರಯುಕ್ತ 'ರಂಗ ಕಹಳೆ' ಬೆಂಗಳೂರು ಹಾಗೂ ಕೇಂದ್ರ ಸಾಂಸ್ಕೃತಿಕ ಸಚಿವಾಲಯದ ಸಹಯೋಗ ಹಮ್ಮಿಕೊಂಡಿದ್ದ 'ಮಕ್ಕಳ ರಂಗ ಉತ್ಸವ'ದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು

ಕನ್ನಡ ಶಾಲೆ ಮುಚ್ಚುವುದಿಲ್ಲ: ಸಚಿವ ಮಧು

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ಕನ್ನಡ ನಮ್ಮ ರಕ್ತದಲ್ಲಿಯೇ ಇದೆ. ಒಂದೇ ಒಂದು ಮಗು ದಾಖಲಾಗಿದ್ದರೂ ರಾಜ್ಯದಲ್ಲಿನ ಯಾವ ಕನ್ನಡ ಶಾಲೆಯನ್ನೂ ಮುಚ್ಚುವುದಿಲ್ಲ' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಚಿದಾನಂದ ಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, '900 ಸರ್ಕಾರಿ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆ. ಬಡವರು, ಪರಿಶಿಷ್ಟರು, ಹಿಂದುಳಿದ ವರ್ಗಗಳ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿದ್ದು, ಅವರಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು ಎನ್ನುವುದು ಸರ್ಕಾರದ ಉದ್ದೇಶ. ಅದಕ್ಕಾಗಿ ಕೆಪಿಎಸ್ ಬಲಪಡಿಸಲಾಗುತ್ತಿದೆ. ದೂರದ ಗ್ರಾಮಗಳಿಂದ ಬರುವ ಮಕ್ಕಳಿಗೆ ಬಿಸಿಯೂಟ, ಉಚಿತ ಪಠ್ಯಪುಸ್ತಕಗಳ ಜತೆಗೆ ಬಸ್ ಸೌಕರ್ಯವನ್ನೂ ಕಲ್ಪಿಸಲಾಗುತ್ತಿದೆ' ಎಂದರು.

ಪ್ರಸ್ತುತ ಇರುವ 309 ಕೆಪಿಎಸ್‌ಗಳಲ್ಲಿ 2,72,464 ವಿದ್ಯಾರ್ಥಿಗಳು ಇದ್ದಾರೆ. ಪ್ರತಿ ಗ್ರಾಮ ಪಂಚಾಯಿತಿಗೂ ಒಂದು ಕೆಪಿಎಸ್ ಸ್ಥಾಪಿಸಲಾಗುವುದು. ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಶಿಕ್ಷಕರ ಕೋರಿಕೆ ವರ್ಗಾವಣೆ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು ಎಂದು ಹೇಳಿದರು.

ಉತ್ತಮ ಕಲಿಕೆ, ಉಜ್ವಲ ಭವಿಷ್ಯ ಎಂಬುದು ಧ್ಯೇಯ ವಾಕ್ಯವಾಗಿದ್ದು, ಪ್ರತಿ ಮಗುವೂ ಶಾಲೆಯಲ್ಲಿರಬೇಕು ಮತ್ತು ಚೆನ್ನಾಗಿ ಕಲಿಯಬೇಕು ಎಂಬ ಆಶಯದಿಂದ ರಾಜ್ಯದ ಎಲ್ಲಾ ಕರ್ನಾಟಕ ಪಬ್ಲಿಕ್ ಶಾಲೆಗಳು ಏಕರೂಪದ ನೀತಿಯನ್ನು ಪಾಲಿಸುವಂತೆ 'ಕರ್ನಾಟಕ ಪಬ್ಲಿಕ್ ಶಾಲಾ ಮಾನದಂಡ ಕೈಪಿಡಿ' ಸಿದ್ಧಪಡಿಸಲಾಗಿದೆ. ಅದರಲ್ಲಿ ನಿಗದಿಪಡಿಸಿರುವ ಗುಣಮಟ್ಟದ ನಿಯಮದಂತೆ ಪ್ರತಿ ಶಾಲೆಯಲ್ಲೂ ಕನಿಷ್ಠ 1,200 ವಿದ್ಯಾರ್ಥಿಗಳಿಗೆ ಅಗತ್ಯವಿರುವ ಶೈಕ್ಷಣಿಕ ಮತ್ತು ಮೂಲಸೌಕರ್ಯಗಳನ್ನು ಒದಗಿಸಲಾಗುವುದು ಎಂದು ಮಾಹಿತಿ ನೀಡಿದರು.

ಶೂ, ಸಾಕ್ಸ್ ವಿತರಣೆಗೆ ₹111.88 ಕೋಟಿ

ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ಶೂ, ಸಾಕ್ಸ್ ವಿತರಣೆ ಮಾಡಲು ₹111.88 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಮಧು ಬಂಗಾರಪ್ಪ ಹೇಳಿದರು.

ಬಿಜೆಪಿಯ ಕೇಶವ ಪ್ರಸಾದ್, ಜಗದೇವ್ ಗುತ್ತೇದಾರ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 44,525 ಶಾಲೆಗಳಿಗೆ ಈಗಾಗಲೇ ವಿತರಣೆ ಮಾಡಲಾಗಿದೆ. ಬಾಕಿ 1,587 ಶಾಲೆಗಳಿಗೆ ಅಗತ್ಯವಿರುವ ₹13.20 ಕೋಟಿ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗಿದೆ ಎಂದರು.

'ಸರ್ಕಾರಿ ಶಾಲೆ: ಗೊಂದಲ ಬಗೆಹರಿಸಿ'

ಬೆಂಗಳೂರು: ಕರ್ನಾಟಕದಲ್ಲಿ ಯಾವುದೇ ಸರ್ಕಾರಿ ಶಾಲೆಗಳನ್ನು ಮುಚ್ಚುವುದಿಲ್ಲ ಎಂಬ ಆದೇಶವನ್ನು ಸರ್ಕಾರ ಹೊರಡಿಸಲಿ ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಒ) ಆಗ್ರಹಿಸಿದೆ.

ಬೆಳಗಾವಿಯಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಮಾತನಾಡಿರುವ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಸರ್ಕಾರಿ ಶಾಲೆ ಮುಚ್ಚುವುದಿಲ್ಲ. ಗ್ರಾಮ ಪಂಚಾಯಿತಿಗೊಂದು ಕೆಪಿಎಸ್ ಶಾಲೆ ತೆರೆಯಲಾಗುತ್ತದೆ ಎಂಬ ಹೇಳಿಕೆ ನೀಡಿದ್ದಾರೆ. ಆದರೆ ಅಕ್ಟೋಬರ್ 15ರಂದು ಹೊರಡಿಸುವ ಸುತ್ತೋಲೆಯಲ್ಲಿ ಕೆಪಿಎಸ್ ಶಾಲೆಗಳೊಂದಿಗೆ ಸುತ್ತಮುತ್ತಲಿನ ಕಡಿಮೆ ಹಾಜರಾತಿ ಇರುವ ಶಾಲೆ ವಿಲೀನಗೊಳಿಸು ವುದಾಗಿ ತಿಳಿಸಲಾಗಿದೆ ಎಂದು ಸಂಘಟನೆ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಹೇಳಿದ್ದಾರೆ.

ಸರ್ಕಾರಿ ಆದೇಶ ಒಂದು ರೀತಿ ಇದ್ದರೆ, ಸಚಿವರು ಇನ್ನೊಂದು ರೀತಿ ಹೇಳಿಕೆ ನೀಡುತ್ತಿದ್ದಾರೆ. ಇದರಿಂದ ಯಾವುದನ್ನು ನಂಬಬೇಕು ಎನ್ನುವ ಗೊಂದಲ ಜನರಲ್ಲಿ ಮೂಡುತ್ತಿದೆ ಎಂದು ಹೇಳಿದ್ದಾರೆ.

ಭಗವದ್ಗೀತೆ ಬೋಧನೆ: ಸಂವಿಧಾನಕ್ಕೆ ವಿರುದ್ಧ–ಸಿಪಿಎಂ

ಬೆಂಗಳೂರು: ಶಾಲಾ ಪಠ್ಯದಲ್ಲಿ ಭಗವದ್ಗೀತೆ ಸೇರಿಸುವಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಕೈಗಾರಿಕಾ ಸಚಿವ ಎಚ್‌.ಡಿ.ಕುಮಾರಸ್ವಾಮಿ ಮನವಿ ಮಾಡಿರುವುದು ಸಂವಿಧಾನಕ್ಕೆ ವಿರುದ್ಧವಾದುದು ಎಂದು ಸಿಪಿಎಂ ಆಕ್ಷೇಪ ವ್ಯಕ್ತಪಡಿಸಿದೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಕಾರ್ಯದರ್ಶಿ ಕೆ.ಪ್ರಕಾಶ್, 'ರಾಜ್ಯದಿಂದ ಆಯ್ಕೆಯಾಗಿರುವ ಸಚಿವರು ಕೇಂದ್ರದಿಂದ ರಾಜ್ಯಕ್ಕೆ ಸಿಗಬೇಕಾದ ಸಂಪನ್ಮೂಲ, ಅಭಿವೃದ್ಧಿಯತ್ತ ಗಮನವಹಿಸುವುದಕ್ಕೆ ಆದ್ಯತೆ ನೀಡಬೇಕು. ಧಾರ್ಮಿಕ ಭಾವನೆಗಳನ್ನು ರಾಜಕೀಯವಾಗಿ ಬಳಸಲು ಅಲ್ಲ. ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಭಗವದ್ಗೀತೆಯನ್ನು ಪಠ್ಯದಲ್ಲಿ ಬೋಧಿಸಲು ಮಾಡಿದ ಪ್ರಯತ್ನಕ್ಕೆ ಕುಮಾರಸ್ವಾಮಿ ವಿರೋಧ ವ್ಯಕ್ತಪಡಿಸಿದ್ದರು. ಈಗಿನ ಅವರ ಪತ್ರ ಹಿಂದಿನ ಅವರದೇ ನಿಲುವಿಗೆ ವ್ಯತಿರಿಕ್ತವಾಗಿದೆ' ಎಂದು ತಿಳಿಸಿದ್ದಾರೆ.

'ಭಗವದ್ಗೀತೆ, ಕುರ್‌ಆನ್, ಬೈಬಲ್ ಗ್ರಂಥಗಳನ್ನು ವೈಯಕ್ತಿಕವಾಗಿ ಓದಬಹುದು. ಅದರಲ್ಲಿ ತಮಗಿರುವ ಅಂಶಗಳನ್ನು ಮೌಲ್ಯಗಳೆಂದು ಪರಿಭಾವಿಸಬಹುದು ಮತ್ತು ಅನುಸರಿಸಲೂಬಹುದು. ಸಿಪಿಎಂ ಜನರ ಧಾರ್ಮಿಕ ಭಾವನೆಗಳನ್ನು ಗೌರವಿಸುತ್ತದೆ. ಎಲ್ಲ ಜಾತಿ, ಧರ್ಮ ಮತ್ತು ಧಾರ್ಮಿಕ ನಂಬಿಕೆಗಳಿಗೆ ಸೇರಿದ ವಿದ್ಯಾರ್ಥಿಗಳಿರುವ ಶೈಕ್ಷಣಿಕ ತರಗತಿಗಳಲ್ಲಿ ಒಂದು ಧರ್ಮದ ಗ್ರಂಥ ಬೋಧನೆ ಏನು ಪರಿಣಾಮ ಬೀರಲಿದೆ ಹಾಗೂ ಎಷ್ಟು ಸರಿ ಎಂಬುದನ್ನು ಸಚಿವರು ಅರಿಯಬೇಕಿತ್ತು' ಎಂದು ಹೇಳಿದ್ದಾರೆ.

ರೈತರ ಸಮಸ್ಯೆ ಚರ್ಚೆ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ರಾಜ್ಯದ ಜ್ವಲಂತ ಸಮಸ್ಯೆಗಳು ಮತ್ತು ರೈತರ ಸಂಕಷ್ಟಗಳ ಕುರಿತು ಅಧಿವೇಶನದಲ್ಲಿ ಗಂಭೀರ ಚರ್ಚೆ ನಡೆಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದ ಕಬ್ಬು, ಮೆಕ್ಕೆಜೋಳ, ಭತ್ತ, ತೊಗರಿ ಬೆಳೆಗಾರರು ಸಂಕಷ್ಟ ಅನುಭವಿಸುತ್ತಿದ್ದಾರೆ' ಎಂದು ದೂರಿದರು.

'ರಾಜ್ಯದಲ್ಲಿ ನಿರುದ್ಯೋಗ ನಿರ್ಮೂಲನೆ ಮಾಡುವುದಾಗಿ ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ಭರವಸೆ ನೀಡಿತ್ತು. ಲಕ್ಷಾಂತರ ಯುವಜನರಿಗೆ ಉದ್ಯೋಗ ನೀಡುವುದಾಗಿಯೂ ಹೇಳಿಕೊಂಡಿತ್ತು. ಅದು ಈಡೇರಿಲ್ಲ. ನೇಕಾರರ ಸಮಸ್ಯೆ, ರಾಜ್ಯದ ಅಭಿವೃದ್ಧಿ ವಿಚಾರ- ಇವೆಲ್ಲ ವಿಚಾರಗಳ ಬಗ್ಗೆ ಚರ್ಚೆ ನಡೆಸುತ್ತೇವೆ. ಉತ್ತರ ಕರ್ನಾಟಕದ ನೀರಾವರಿ ಯೋಜನೆಗಳ ಬಗ್ಗೆಯೂ ಪ್ರಸ್ತಾಪಿಸುತ್ತೇವೆ' ಎಂದು ಹೇಳಿದರು.

'ರಾಜ್ಯ ಸರ್ಕಾರದ ವೈಫಲ್ಯಗಳನ್ನು ಮುಚ್ಚಿ ಹಾಕಲು ಪ್ರತಿ ಸಂದರ್ಭದಲ್ಲೂ ಕೇಂದ್ರ ಸರ್ಕಾರವನ್ನು ದೂರುತ್ತಾರೆ. ಪ್ರಧಾನಿಯವರಿಗೆ ಪತ್ರ ಬರೆಯುತ್ತಾರೆ. ಈ ವಿಚಾರದಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಿಸ್ಸೀಮರಿದ್ದಾರೆ.' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ತಿಮ್ಮಕ್ಕ ವಸ್ತು ಸಂಗ್ರಹಾಲಯ, ಭೈರಪ್ಪ ಸ್ಮಾರಕ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣವಿಧಾನಸೌಧ): ಸಾಲು ಮರದ ತಿಮ್ಮಕ್ಕ ಅವರ ಹೆಸರಿನಲ್ಲಿ ಹಾಸನ ಜಿಲ್ಲೆ ಬೇಲೂರಿನಲ್ಲಿ ವಸ್ತು ಸಂಗ್ರಹಾಲಯ ಮತ್ತು ಖ್ಯಾತ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರ ನೆನಪಿನಲ್ಲಿ ಮೈಸೂರಿನಲ್ಲಿ ಸ್ಮಾರಕ ನಿರ್ಮಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಸೋಮವಾರ ಸಂತಾಪ ಸೂಚಕ ನಿರ್ಣಯದ ಮೇಲೆ ಮಾತನಾಡಿ, 'ತಿಮ್ಮಕ್ಕ ಅವರು ಬದುಕಿದ್ದಾಗ ಒಮ್ಮೆ ನನ್ನ ಬಳಿ ಬಂದು ಒಂದು ಮನವಿ ಪತ್ರ ನೀಡಿದ್ದರು. ಬೇಲೂರಿನಲ್ಲಿ ತಮ್ಮ ಹೆಸರಿನಲ್ಲಿ ಒಂದು ವಸ್ತು ಸಂಗ್ರಹಾಲಯ ಸ್ಥಾಪಿಸಬೇಕು ಎಂಬ ಅಂಶವನ್ನು ಅದರಲ್ಲಿ ನಮೂದಿಸಿದ್ದರು' ಎಂದು ಹೇಳಿದರು.

'ತಿಮ್ಮಕ್ಕ ಬೇಲೂರಿನಲ್ಲಿ ತಮ್ಮ ಜೀವನದ ಹಲವು ವರ್ಷಗಳನ್ನು ಕಳೆದಿದ್ದರು. ಹೀಗಾಗಿ ಅವರ ಆಶಯದ ಪ್ರಕಾರ ಈ ಬೇಡಿಕೆಯನ್ನು ಗಂಭೀರವಾಗಿ ಪರಿಶೀಲಿಸುತ್ತೇನೆ. ತಿಮ್ಮಕ್ಕ ಅವರ ಹೆಸರಿನಲ್ಲಿ ಪರಿಸರ ಪ್ರಶಸ್ತಿ ನೀಡುವುದಾಗಿ ಈಗಾಗಲೇ ಘೋಷಣೆ ಮಾಡಿದ್ದೇವೆ. ಆ ಪ್ರಕಾರ ಪ್ರಶಸ್ತಿ ಸ್ಥಾಪಿಸುತ್ತೇವೆ' ಎಂದು ಸಿದ್ದರಾಮಯ್ಯ ತಿಳಿಸಿದರು.

'ಎಸ್.ಎಲ್.ಭೈರಪ್ಪ ಅವರು ದೇಶ ಕಂಡ ಒಬ್ಬ ಶ್ರೇಷ್ಠ ಕಾದಂಬರಿಕಾರ. ಹಳ್ಳಿಯಲ್ಲಿ ಬಡ ಕುಟುಂಬದಲ್ಲಿ ಜನಿಸಿ ಉನ್ನತ ಸಾಧನೆಯನ್ನು ಮಾಡಿದ ವಿದ್ವಾಂಸ. ಆರು ತಿಂಗಳ ಹಿಂದೆ ಅವರನ್ನು ಭೇಟಿ ಮಾಡಿದ್ದೆ. ಪರ್ವ ಅವರ ಜನಪ್ರಿಯ ಕಾದಂಬರಿ. ಅವರ ಜತೆ ಸೈದ್ಧಾಂತಿಕವಾಗಿ ಭಿನ್ನಾಭಿಪ್ರಾಯವಿತ್ತು, ಆದರೆ ಅವರೊಬ್ಬ ಸರಳ–ಸಜ್ಜನಿಕೆಯ ವ್ಯಕ್ತಿ. ಅವರ ಕೆಲವು ಕಾದಂಬರಿಗಳನ್ನು ಓದಿದ್ದೇನೆ. ಶ್ರೇಷ್ಠ ಕಾದಂಬರಿಕಾರ ಎಂಬ ಗೌರವವಿದೆ' ಎಂದರು.

ಸಂತಾಪ ಸೂಚನೆಯ ಬಳಿಕ ವಿಧಾನಸಭೆ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಲಾಯಿತು.

'ಅಧ್ಯಾತ್ಮ ಜೀವನದ ಅಂಗ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಇಂದಿನ ಆಧುನಿಕ ಯುಗದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಎಷ್ಟೇ ಮುಂದುವರಿದರೂ ನಮ್ಮ ಜೀವನದ ಆಧ್ಯಾತ್ಮಿಕತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ' ಎಂದು ಚಿತ್ರದುರ್ಗದ ಶ್ರೀ ಶಿವಶರಣ ಮಾದಾರಚನ್ನಯ್ಯ ಗುರುಪೀಠಾಧ್ಯಕ್ಷ ಶಿವಶರಣ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಹೇಳಿದರು.

ಕೆ.ಆರ್.ಪುರ ಸಮೀಪದ ಹೂಡಿ ಗ್ರಾಮದಲ್ಲಿ ಅಣ್ಣಮ್ಮ ಹಾಗೂ ಮದ್ದೂರಮ್ಮ ದೇವಿಯ ನೂತನ ಬಿಂಬ ಪ್ರತಿಷ್ಠಾಪನೆ ಮತ್ತು ಮಹಾ ಕುಂಭಾಭಿಷೇಕ ಮಹೋತ್ಸವದಲ್ಲಿ ಅವರು ಮಾತನಾಡಿದರು.

'ನಮ್ಮ ದೈನಂದಿನ ಜೀವನದಲ್ಲಿ ಆಹಾರ, ನೀರು, ಗಾಳಿ ಎಷ್ಟು ಅಗತ್ಯವೋ ಅಷ್ಟೇ ಮುಖ್ಯವಾಗಿ ಮನುಷ್ಯನಿಗೆ ಮಾನಸಿಕವಾಗಿ ಆಧ್ಯಾತ್ಮಿಕ ಮುಖ್ಯವಾಗಿದೆ. ಮಠ ಮಂದಿರಗಳು ಮನುಷ್ಯನಿಗೆ ನೆಮ್ಮದಿ, ಸುಖ, ಶಾಂತಿ ನೀಡುವ ಶ್ರದ್ಧಾಕೇಂದ್ರಗಳಾಗಿವೆ. ನಮ್ಮ ಜೀವನದ ಅನೇಕ ಸಮಸ್ಯೆಗಳ ಪರಿಹಾರಕ್ಕೆ ದೇವರ ಮೊರೆಹೋಗುತ್ತೇವೆ. ಪ್ರತಿನಿತ್ಯ ನಂಬಿಕೆ ಮತ್ತು ಭಕ್ತಿ ಭಾವನೆಗಳನ್ನು ತೋರ್ಪಡಿಸುವ ಮೂಲಕ ನಮ್ಮ ಜೀವನದಲ್ಲಿ ಆಗುವ ತಪ್ಪುಗಳನ್ನು ತಿದ್ದಿಕೊಂಡು ಸನ್ಮಾರ್ಗದಲ್ಲಿ ನಡೆಯಬೇಕಿದೆ' ಎಂದು ಹೇಳಿದರು.

ಗ್ರಾಮದ ಹಿರಿಯ ಮುಖಂಡರಾದ ಎಚ್.ವಿ.ವೆಂಕಟಸ್ವಾಮಿ ಮಾತನಾಡಿ, '20 ವರ್ಷಗಳ ನಂತರ ಮದ್ದೂರಮ್ಮ ಹಾಗೂ ಅಣ್ಣಮ್ಮ ದೇವಸ್ಥಾನವನ್ನು ಹೂಡಿ ಗ್ರಾಮಸ್ಥರು ಹಾಗೂ ದಾನಿಗಳ ನೆರವಿನಿಂದ ಜೀರ್ಣೋದ್ಧಾರ ಮಾಡಲಾಗಿದೆ. ನೂತನ ಬಿಂಬವನ್ನೂ ಪ್ರತಿಷ್ಠಾಪನೆ ಮಾಡಲಾಗಿದೆ' ಎಂದು ಹೇಳಿದರು.

ಬಿಜೆಪಿ ಮಹದೇವಪುರ ಗ್ರಾಮಾಂತರ ಮಂಡಲ ಅಧ್ಯಕ್ಷ ಎಚ್.ಎಸ್.ಪಿಳ್ಳಪ್ಪ, ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಎಚ್.ವಿ.ಮಂಜುನಾಥ್ ಭಾಗವಹಿಸಿದ್ದರು.



ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಅವರು ದೇವಸ್ಥಾನದಬಿಂಬ ಪ್ರತಿಷ್ಠಾಪಿಸಿದರು

'ಗ್ಯಾರಂಟಿ ನೆಪ: ಮೂಲಸೌಕರ್ಯ ಇಲ್ಲ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆ ನೆಪದಲ್ಲಿ ಜನರಿಗೆ ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯ ಒದಗಿಸುತ್ತಿಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಟಿ.ಎನ್. ಜವರಾಯಿಗೌಡ ಆರೋಪಿಸಿದರು.

ದೊಡ್ಡಬಿದರಕಲ್ಲು ವಾರ್ಡ್ ವ್ಯಾಪ್ತಿಯ ಮಾರಣ್ಣ ಬಡಾವಣೆಯಲ್ಲಿನ ನೀರಿನ ಸಮಸ್ಯೆಯಿಂದ ಬೇಸತ್ತ ಮಹಿಳೆಯರು ಖಾಲಿ ಬಿಂದಿಗೆ ಹಿಡಿದು ಸರ್ಕಾರ ಹಾಗೂ ಜಲಮಂಡಳಿ ಅಧಿಕಾರಿಗಳ ವಿರುದ್ಧ ಪ್ರತಿಭಟಿಸಿದರು.

ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಜವರಾಯಿಗೌಡ, 'ನುಡಿದಂತೆ ನಡೆಯುವುದಾಗಿ ಬುರುಡೆ ಬಿಡುವ ರಾಜ್ಯ ಸರ್ಕಾರ, ಕುಡಿಯಲು ನೀರು ಕೂಡ ನೀಡುತ್ತಿಲ್ಲ. ಉಚಿತ ಯೋಜನೆಗಳಿಗೆ ಜನರಿಂದಲೇ ಹಣ ವಸೂಲಿ ಮಾಡಲಾಗುತ್ತಿದೆ. ನೀರಿನ ಸಮಸ್ಯೆ ಬಗೆಹರಿಸದಿದ್ದರೆ, ಜಲಮಂಡಳಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುತ್ತದೆ' ಎಂದು ಎಚ್ಚರಿಸಿದರು.

'ಮಾರಣ್ಣ ಬಡಾವಣೆಯ ಪಂಪ್‌ಸೆಟ್ ಕೆಟ್ಟು ಆರು ತಿಂಗಳಾಗಿದೆ. ಎಲ್ಲಾ ನಿವಾಸಿಗಳು ಕಾವೇರಿ ನೀರು ಸಂಪರ್ಕ ಪಡೆಯಬೇಕೆಂದು ಜಲಮಂಡಳಿಯ ಕೊಳವೆಬಾವಿ ದುರಸ್ತಿ ಮಾಡುತ್ತಿಲ್ಲ. ಅತ್ತ ಕಾವೇರಿ ನೀರೂ ಬರುತ್ತಿಲ್ಲ. ಜನರ ಹಿತಾಸಕ್ತಿ ಮರೆತಿರುವ ಜಲಮಂಡಳಿ ಲಾಭದ ಆಸೆಗೆ ಬಿದ್ದಿದ್ದು, ನೀರಿಗೆ ಹಾಹಾಕಾರ ಎದುರಾಗಿದೆ' ಎಂದು ಮಹಿಳೆಯರು ದೂರಿದರು.

'ಕುಡಿಯಲು ನೀರಿಲ್ಲ. ಓಡಾಡಲು ಸರಿಯಾದ ರಸ್ತೆ ಇಲ್ಲ. ಸಾವಿರಾರು ತೆರಿಗೆ ವಸೂಲಿ ಮಾಡುವ ಪಾಲಿಕೆ ಹಾಗೂ ಜಲಮಂಡಳಿ ಜನರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ' ಎಂದು ಸ್ಥಳೀಯ ಮಹಿಳೆ ತ್ರಿವೇಣಿ ದೂರಿದರು.

ಮುಖಂಡರಾದ ತಿಪ್ಪೇನಹಳ್ಳಿ ಮಂಜುನಾಥ್, ಟ್ರಾವೆಲ್ ಮಂಜುನಾಥ್, ಕುಮಾರ್, ಪುನೀತ್, ಮಾರೇಗೌಡ್ರು, ಸಂತೋಷ್, ಕುಮಾರ್ ಉಪಸ್ಥಿತರಿದ್ದರು.

ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ.ಕುಮಾರಸ್ವಾಮಿ ಪ್ರಶ್ನೆ

'ಅಭಿವೃದ್ಧಿಗೆ ಸಿ.ಎಂ ಕೊಡುಗೆ ಏನು'

ಪ್ರಜಾವಾಣಿ ವಾರ್ತೆ

ನವದೆಹಲಿ: ಮಂಡ್ಯಕ್ಕೆ ಕುಮಾರಸ್ವಾಮಿ ಏನು ಕೊಟ್ಟಿದ್ದಾರೆ ಎಂದು ಕೇಳಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಿರುಗೇಟು ಕೊಟ್ಟಿರುವ ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ, 'ನಾನು ಕೊಟ್ಟಿದ್ದನ್ನು ಪಟ್ಟಿ ಮಾಡಿ ಹೇಳುತ್ತೇನೆ. ಮೊದಲು ಐದು ವರ್ಷ ಮುಖ್ಯಮಂತ್ರಿ ಆಗಿದ್ದಾಗ ಹಾಗೂ ಈಗ ರಾಜ್ಯಕ್ಕೆ ಏನೇನು ಕೊಟ್ಟಿದ್ದೀರಿ ಎಂಬುದನ್ನು ಹೇಳಿ' ಎಂದು ಸವಾಲು ಎಸೆದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಾನು ಕೊಟ್ಟಿದ್ದನ್ನು ಹೇಳುತ್ತೇನೆ. ಸಿದ್ದರಾಮಯ್ಯ ಅವರೇ, ನೀವು ರೈತರಿಗೆ ಏನು ಕೊಡುಗೆ ಕೊಟ್ಟಿದ್ದೀರಿ ಎಂಬುದನ್ನು ಹೇಳಿ. ಮಂಡ್ಯಕ್ಕೆ ನಿಮ್ಮ ಕೊಡುಗೆ ಏನು? ಹಿಂದಿನ ಐದು ವರ್ಷ ಆಡಳಿತದಲ್ಲಿ 200ಕ್ಕೂ ಹೆಚ್ಚು ರೈತರು ಮಂಡ್ಯದಲ್ಲಿ ಸರಣಿ ಆತ್ಮಹತ್ಯೆ ಮಾಡಿಕೊಂಡಿದ್ದೇ ನಿಮ್ಮ ಕೊಡುಗೆ. ಅಂಥ ಕಷ್ಟಕಾಲದಲ್ಲಿ ನಾನು ಅಧಿಕಾರಕ್ಕೆ ಬಂದಮೇಲೆ ಅದೇ ಜಿಲ್ಲೆಯ ರೈತರ ₹900 ಕೋಟಿ ಸಾಲ ಮನ್ನಾ ಮಾಡಿದೆ. ಇದಕ್ಕಿಂತ ಕೊಡುಗೆ ಬೇಕಾ' ಎಂದು ಪ್ರಶ್ನಿಸಿದರು.

ಮೇಕೆದಾಟು–ಮಾತುಕತೆ ನಡೆಸಲಿ: 'ಮೇಕೆದಾಟು ಯೋಜನೆ ಬಗ್ಗೆ ಜನರನ್ನು ಯಾಮಾರಿಸುವುದಕ್ಕೆ ನಮ್ಮ ನೀರು- ನಮ್ಮ ಹಕ್ಕು ಎಂದು ಪಾದಯಾತ್ರೆ ಮಾಡಿದರು. ಆ ಹೆಸರಿನಲ್ಲಿ ಅವರು ಅಧಿಕಾರಕ್ಕೆ ಬಂದರು. ಮೇಕೆದಾಟು ಮಾತ್ರ ಇದ್ದಲ್ಲಿಯೇ ಇದೆ. ಕೇಂದ್ರ ಜಲ ಆಯೋಗದಲ್ಲಿ ವಾದ ಮಂಡಿಸಿ ಎಂದು ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ. ತಮಿಳುನಾಡಿನಲ್ಲಿ ಅಧಿಕಾರ ನಡೆಸುತ್ತಿರುವವರು ಇವರ 'ರಾಜಕೀಯ ಪಾರ್ಟ್‌ನರ್'ಗಳೇ ಆಗಿದ್ದಾರೆ. ಇವರು ಹೋಗಿ ಕುಳಿತು ಮಾತನಾಡಬೇಕಲ್ಲವೇ' ಎಂದು ಅವರು ಕೇಳಿದರು.

'ಮೇಕೆದಾಟು ಪ್ರದೇಶದಲ್ಲಿ ಸುಮಾರು 12 ಸಾವಿರ ಎಕರೆಯಷ್ಟು ಅರಣ್ಯ ಮುಳುಗಡೆ ಆಗುತ್ತದೆ. ವನ್ಯ ಸಂಪತ್ತು ನಾಶವಾಗುತ್ತದೆ ಎಂದು ಹೇಳುತ್ತಿದ್ದಾರೆ. ಬರೀ ಕೇಂದ್ರ ಸರ್ಕಾರ ಅಧಿಕಾರ ಮಾತ್ರವಲ್ಲ, ರಾಜ್ಯ ಸರ್ಕಾರಕ್ಕೂ ಹಕ್ಕು, ಜವಾಬ್ದಾರಿ ಇರುತ್ತದೆ. ಪಲಾಯನ ಮಾಡುವ ಅಗತ್ಯವಿಲ್ಲ, ಇನ್ನೆಷ್ಟು ದಿನ ನುಣುಚಿಕೊಳ್ಳುತ್ತೀರಿ' ಎಂದು ಪ್ರಶ್ನಿಸಿದರು.

'ಭಗವದ್ಗೀತೆ ಕಲಿಸಿ ಎನ್ನುವುದು ಮಹಾನ್ ಅಪರಾಧವೇ?'

'ಬೆಂಗಳೂರು ಸೇರಿ ರಾಜ್ಯದಲ್ಲಿ ಮಾದಕ ವಸ್ತುಗಳ ನಶೆಗೆ ಸಿಕ್ಕಿ ಯುವಜನರು ಹಾಳಾಗುತ್ತಿದ್ದಾರೆ. ರಾತ್ರಿಯಿಂದ ಬೆಳಿಗ್ಗೆವರೆಗೂ ರೇವ್ ಪಾರ್ಟಿಗಳಲ್ಲಿ ಡ್ರಗ್ಸ್ ಅನ್ನು ನಿರಂತರವಾಗಿ ಪೂರೈಕೆ ಮಾಡುತ್ತಿದ್ದಾರೆ. ಇಂಥ ಕೆಟ್ಟ ಪರಿಸ್ಥಿತಿಯಿಂದ ಯುವಕರನ್ನು ಸರಿದಾರಿಗೆ ತರಲು ವಿದ್ಯಾರ್ಥಿ ದಿಸೆಯಿಂದಲೇ ಭಗವದ್ಗೀತೆ ಬೋಧಿಸಬೇಕು ಎಂದು ಹೇಳಿದ್ದೇನೆ. ಇದರಲ್ಲಿ ತಪ್ಪೇನಿದೆ?' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

'ಒಳ್ಳೆಯ ಸಮಾಜ ನಿರ್ಮಿಸುವ ಉದ್ದೇಶದಿಂದ ಮಕ್ಕಳಿಗೆ ಚಿಕ್ಕಂದಿನಿಂದಲೇ ಭಗವದ್ಗೀತೆ ಕಲಿಸಬೇಕು ಎಂಬುದು ನನ್ನ ಅಭಿಪ್ರಾಯ. ಮನುವಾದಕ್ಕೂ ಭಗವದ್ಗೀತೆಗೂ ಏನು ಸಂಬಂಧ? ಇಂಥ ಮನಃಸ್ಥಿತಿಯೇ ಅಪಾಯಕಾರಿ' ಎಂದು ಅಭಿಪ್ರಾಯಪಟ್ಟರು.

'ಡಿಕೆಶಿ ನೀರಿನ ಹೆಜ್ಜೆ; ಅದು ಕಟ್ ಆ್ಯಂಡ್ ಪೇಸ್ಟ್!'

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ 'ನೀರಿನ ಹೆಜ್ಜೆ' ಪುಸ್ತಕದ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, 'ಯಾರೋ ಬರೆದಿರುವ ಆ ಪುಸ್ತಕ ಕೇವಲ ಕಟ್ ಆ್ಯಂಡ್ ಪೇಸ್ಟ್ ಅಷ್ಟೇ. ಬೇರೆ ಯಾವುದೋ ಪುಸ್ತಕದಲ್ಲಿ ಬರೆದಿರುವುದನ್ನೇ ಕತ್ತರಿಸಿ ಈ ಪುಸ್ತಕದಲ್ಲಿ ಅಂಟಿಸಿದ್ದಾರೆ! ನನಗೆ ಈ ಪುಸ್ತಕವನ್ನು ಯಾರೋ ತಂದುಕೊಟ್ಟರು. ಸಾಮಾನ್ಯವಾಗಿ ಯಾವುದೇ ಪುಸ್ತಕವಾದರೂ ಅದನ್ನು ಆಸಕ್ತಿಯಿಂದ ಓದುತ್ತೇನೆ. ಆದರೆ, ಈ ಪುಸ್ತಕ ನೋಡಿದಾಗ ಇಲ್ಲಿರುವುದು ಅವರ ಹೆಜ್ಜೆಗಳಲ್ಲ, ಯಾರದೋ ಹೆಜ್ಜೆಗಳನ್ನು ತಮ್ಮ ಹೆಜ್ಜೆಗಳು ಎಂದು ತೋರಿಸುವ ಕಸರತ್ತು ಮಾಡಿದ್ದಾರೆ' ಎಂದು ವ್ಯಂಗ್ಯವಾಡಿದರು.

ಆವಲಹಳ್ಳಿ 'ಕೆರೆಗಾಗಿ ನಡಿಗೆ' ಜಾಗೃತಿ

ಪ್ರಜಾವಾಣಿ ವಾರ್ತೆ

ಯಲಹಂಕ: ಕೆರೆಗಳ ಮಹತ್ವ ಹಾಗೂ ಸಂರಕ್ಷಣೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು 'ಆವಲಹಳ್ಳಿ ಕೆರೆ ಉಳಿಸಿ', ಆಂದೋಲನದ ನಡೆಸಿ, 'ಕೆರೆಗಾಗಿ ನಡಿಗೆ' ಆಯೋಜಿಸಲಾಗಿತ್ತು.

'ಗ್ರೀನ್ ಸರ್ಕಲ್' ಸಂಘಟನೆ, ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯಿತಿ ಹಾಗೂ ಆವಲಹಳ್ಳಿ ಸುತ್ತಮುತ್ತಲ ಬಡಾವಣೆಗಳ ನಿವಾಸಿಗಳ ಸಹಯೋಗದಲ್ಲಿ ಆಂದೋಲನ ನಡೆಯಿತು. ಶಾಸಕ ಎಸ್.ಆರ್.ವಿಶ್ವನಾಥ್ ನೇತೃತ್ವದಲ್ಲಿ ವಿವಿಧ ಸಂಘ-ಸಂಸ್ಥೆಗಳ ಸದಸ್ಯರು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು, ಆವಲಹಳ್ಳಿ ಕೆರೆ ಹಾಗೂ ಕೃಷ್ಣಸಾಗರ ಕೆರೆಕಟ್ಟೆ ಏರಿಯ ಮೇಲೆ ಎರಡು ಸುತ್ತು ನಡೆದರು.

ವಿಶ್ವನಾಥ್ ಮಾತನಾಡಿ, 'ಕೊಳಚೆ ನೀರನ್ನು ಕೆರೆಗೆ ಬಿಡುವವರ ಮನೆಯ ನೀರಿನ ಸಂಪರ್ಕ ಬಂದ್ ಮಾಡಿ, ದಂಡ ವಿಧಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ತಿಳಿಸಿದರು.

ಅಕ್ರಮ ಸಾಗಣೆ: 2,960 ಟನ್ ಪಡಿತರ ಅಕ್ಕಿ ವಶ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಅನ್ನಭಾಗ್ಯ ಯೋಜನೆಯಲ್ಲಿ ಪಡಿತರದಾರರಿಗೆ ವಿತರಿಸಿದ್ದ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಹಲವು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು, 2024-25ನೇ ಸಾಲಿನಲ್ಲಿ 2,960 ಟನ್ ಅಕ್ಕಿ ವಶಪಡಿಸಿಕೊಳ್ಳಲಾಗಿದೆ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.


ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಸಿ.ಟಿ.ರವಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಬಿಪಿಎಲ್ ಪಡಿತರ ಚೀಟಿ ಇರುವ ಕುಟುಂಬಗಳಿಗೆ ವಿತರಿಸಿದ್ದ ಅಕ್ಕಿಯನ್ನು ಸಂಗ್ರಹಿಸಿ ಹೊರ ರಾಜ್ಯ, ವಿದೇಶಗಳಿಗೆ ಮಾರಾಟ ಮಾಡುತ್ತಿರುವ ಮಾಹಿತಿ ಪಡೆದು ಪ್ರತಿ ಜಿಲ್ಲೆಯಲ್ಲೂ ಕಾರ್ಯಾಚರಣೆ ನಡೆಸಲಾಗಿತ್ತು. ಅಕ್ರಮದಲ್ಲಿ ಭಾಗಿಯಾದ ಆರೋಪದ ಮೇಲೆ 570 ಮಂದಿಯನ್ನು ಬಂಧಿಸಲಾಗಿದೆ. 314 ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಮಾಹಿತಿ ನೀಡಿದರು.

ಪ್ರಕರಣಗಳು ಪತ್ತೆಯಾದ ನಂತರ ಆಹಾರ ಇಲಾಖೆಯಲ್ಲಿ ಎರವಲು ಸೇವೆ ಸಲ್ಲಿಸುತ್ತಿದ್ದ ಅನ್ಯ ಇಲಾಖೆಯ ಅಧಿಕಾರಿಗಳನ್ನು ಸೇವೆಯಿಂದ ಬಿಡುಗಡೆ ಮಾಡಲಾಗಿದೆ. ಗೋದಾಮು ವ್ಯವಸ್ಥಾಪಕರೂ ಸೇರಿ ಆಹಾರ ಇಲಾಖೆಯ ಕೆಲ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಲಾಗಿದೆ. ಅಕ್ರಮ ಸಾಗಣೆದಾರರು ಒಬ್ಬ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿದ್ದರಿಂದ ಮೃತಪಟ್ಟಿರುವ ಪ್ರಕರಣ ಬಾಗಲಕೋಟೆ ಜಿಲ್ಲೆಯಲ್ಲಿ ನಡೆದಿದೆ ಎಂದು ಎಫ್‌ಐಆರ್ ದಾಖಲಿಸಿದ್ದಾರೆ. ಈ ಕುರಿತು ವಿಚಾರಣೆ ನಡೆಯುತ್ತಿದೆ ಎಂದರು.

ಪಡಿತರ ಅಕ್ರಮ ಸಾಗಣೆ ವಿರುದ್ಧ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ನ್ಯಾಯಬೆಲೆ ಅಂಗಡಿ ಹಂತದಿಂದ ತಾಲ್ಲೂಕು, ಜಿಲ್ಲಾ, ರಾಜ್ಯ ಮಟ್ಟದವರೆಗೂ ಜಾಗೃತಿ ಸಮಿತಿಗಳನ್ನು ರಚಿಸಲಾಗಿದ್ದು, ಅಕ್ರಮ ಪತ್ತೆ ಕಾರ್ಯಕ್ಕೆ ನೆರವು ಪಡೆಯಲಾಗುತ್ತಿದೆ. ಪಡಿತರದಾರರಲ್ಲೂ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಹೊಸ ಪುಸ್ತಕವೊಂದನ್ನು ನೀವು ಮನೆಗೆ ತಂದಿರೆಂದರೆ, ಹೊಸ ಹಿತೈಷಿಯೊಬ್ಬ ನಿಮ್ಮ ಮನೆಗೆ ಬಂದನೆಂದು ತಿಳಿಯಬೇಕು.

–ಹಾ.ಮಾ. ನಾಯಕ

ಸಂಪಾದಕೀಯ

ರಷ್ಯಾ ಅಧ್ಯಕ್ಷರ ಭಾರತ ಭೇಟಿ ಹಳೆಯ ಸ್ನೇಹಕ್ಕೆ ಹೊಸ ಭಾಷ್ಯ

ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ನಡುವಿನ ಮಾತುಕತೆಯ ಸಂದರ್ಭದಲ್ಲಿ ವಿಶ್ವದೆದುರು ತೋರಿಸಲಿಕ್ಕೆ ಉಭಯ ದೇಶಗಳು ನಡೆಸಿದ ಕೆಲವು ಯತ್ನಗಳು ಆ ಮಾತುಕತೆಗಳಿಗೆ ಇರುವ ಮಹತ್ವವನ್ನಾಗಲಿ, ಸಭೆಗಳ ಫಲಿತಾಂಶವನ್ನಾಗಲಿ ಕಡಿಮೆ ಮಾಡಲಿಲ್ಲ. ಜಗತ್ತಿನ ಎದುರು ತೋರಿಸಲಿಕ್ಕಾಗಿ ನಡೆಸಿದ ಯತ್ನಗಳು ಬಹುಶಃ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಗಮನದಲ್ಲಿ ಇರಿಸಿಕೊಂಡಿದ್ದವು. ತಮ್ಮ ಸ್ನೇಹಿತ ಯಾರು ಎಂಬುದನ್ನು ತೀರ್ಮಾನಿಸುವ ವಿಚಾರದಲ್ಲಿ ಸ್ವತಂತ್ರವಾಗಿಯೇ ನಿರ್ಣಯ ತೆಗೆದುಕೊಳ್ಳಲಾಗುತ್ತದೆ ಎಂಬ ಸಂದೇಶವನ್ನು ಟ್ರಂಪ್ ಅವರಿಗೆ ರವಾನಿಸಲು ಭಾರತ ಮತ್ತು ರಷ್ಯಾ ಹೀಗೆ ಮಾಡಿರಬಹುದು. ಉಕ್ರೇನ್ ಜೊತೆಗಿನ ಯುದ್ಧ ಆರಂಭವಾದ ನಂತರದಲ್ಲಿ ಪುಟಿನ್ ಅವರು ಭಾರತಕ್ಕೆ ಭೇಟಿ ನೀಡುತ್ತಿರುವುದು ಇದೇ ಮೊದಲು. ತಮ್ಮನ್ನು ಏಕಾಂಗಿಯಾಗಿಸುವಲ್ಲಿ ಅಮೆರಿಕ ಯಶಸ್ಸು ಕಂಡಿಲ್ಲ ಎಂದು ಪುಟಿನ್ ಹೇಳಿದ್ದಾರೆ. 23ನೇ ಭಾರತ–ರಷ್ಯಾ ವಾರ್ಷಿಕ ಶೃಂಗಸಭೆಯ ವೇದಿಕೆಯನ್ನು ಬಳಸಿಕೊಂಡ ಮೋದಿ ಅವರು, ಟ್ರಂಪ್ ಅವರ ನಿರ್ಬಂಧಗಳು ಭಾರತ ಮತ್ತು ರಷ್ಯಾ ನಡುವಿನ ದಶಕಗಳಷ್ಟು ಹಳೆಯದಾದ ಸ್ನೇಹಕ್ಕೆ ಧಕ್ಕೆ ಉಂಟುಮಾಡಿಲ್ಲ ಎಂಬ ಸಂದೇಶ ರವಾನಿಸಿದರು. ಎರಡು ದೇಶಗಳ ನಡುವಿನ ವಿಶೇಷವಾದ ಪಾಲುದಾರಿಕೆಯಿಂದ ಸಿಗುವ ಅನುಕೂಲಗಳು ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗುತ್ತಿರುವ ಹೊಸ ಸವಾಲುಗಳನ್ನು ಎದುರಿಸಲು ಇಬ್ಬರಿಗೂ ನೆರವಾಗಬಹುದು ಎಂಬುದನ್ನು ಈ ಶೃಂಗಸಭೆಯು ತೋರಿಸಿತು.




ಭಾರತದೊಂದಿಗಿನ ರಷ್ಯಾದ ರಾಜತಾಂತ್ರಿಕ ಸಂಬಂಧವನ್ನು ಪುಟಿನ್‌ರ ಭಾರತ ಭೇಟಿ ಬಲಗೊಳಿಸಿದೆ. ತನ್ನ ವಿದೇಶಾಂಗ ನೀತಿಯನ್ನು ಸ್ಪಷ್ಟಪಡಿಸಿಕೊಳ್ಳಲು ಭಾರತಕ್ಕೆ ಇದು ಸಕಾಲ.

ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದನ್ನು ತಗ್ಗಿಸಬೇಕು ಎಂದು ಭಾರತದ ಮೇಲೆ ಪಾಶ್ಚಾತ್ಯ ಜಗತ್ತು ಒತ್ತಡ ಹೇರುತ್ತಿದೆ. ಅದರಲ್ಲೂ ಮುಖ್ಯವಾಗಿ ಅಮೆರಿಕವು ತೀವ್ರ ಪ್ರಮಾಣದಲ್ಲಿ ಒತ್ತಡ ತರುತ್ತಿದೆ. ಆದರೆ, ಈ ಒತ್ತಡಗಳ ನಡುವೆಯೂ ಭಾರತಕ್ಕೆ 'ಇಂಧನ ಪೂರೈಕೆಯಲ್ಲಿ ವ್ಯತ್ಯಯ ಆಗದಂತೆ ನೋಡಿಕೊಳ್ಳಲಾಗುತ್ತದೆ' ಎಂಬ ಭರವಸೆಯನ್ನು ರಷ್ಯಾ ನೀಡಿರುವುದು ಗಮನಾರ್ಹ. ಸ್ವಾಯತ್ತತೆ ವಿಚಾರದಲ್ಲಿ ನುಡಿದಂತೆ ನಡೆಯುವ ಶಕ್ತಿ ತನಗೆ ಇದೆ ಎಂಬುದನ್ನು ಈ ಮೂಲಕ ಭಾರತ ಕೂಡ ತೋರಿಸಿದೆ. ಕಜಾನ್‌ನಲ್ಲಿ 2024ರ ಅಕ್ಟೋಬರ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗದಲ್ಲಿ ಮಾಡಿಕೊಂಡ ಒಪ್ಪಂದದ ಆಧಾರದಲ್ಲಿ, ಎರಡೂ ದೇಶಗಳ ನಡುವಿನ ವ್ಯಾಪಾರ ವಹಿವಾಟುಗಳಲ್ಲಿ ಸ್ಥಳೀಯ ಕರೆನ್ಸಿಗಳನ್ನು ಬಳಕೆ ಮಾಡಲು ಒಪ್ಪಿಗೆ ಮೂಡಿದೆ. ಇದರಿಂದಾಗಿ ಅಮೆರಿಕದ ಡಾಲರ್ ಮೇಲಿನ ಅವಲಂಬನೆ ತಗ್ಗಲಿದೆ. ಇದು ಕೂಡ ವ್ಯಾಪಾರ ಸಂಬಂಧವನ್ನು ಸುಧಾರಿಸಿಕೊಳ್ಳುವ ಬದ್ಧತೆ ಎರಡೂ ದೇಶಗಳಲ್ಲಿ ಇದೆ ಎಂಬುದನ್ನು ತೋರಿಸುತ್ತದೆ. ರಕ್ಷಣಾ ವಹಿವಾಟುಗಳು ಮಾತ್ರವಲ್ಲದೆ, ಔಷಧ ಮತ್ತು ರಸಗೊಬ್ಬರದಂತಹ ವಲಯಗಳಿಗೆ ಆದ್ಯತೆ ನೀಡಿರುವುದು ವ್ಯಾಪಾರ ವಹಿವಾಟಿನ ಮೊತ್ತವನ್ನು ಹೆಚ್ಚಿಸುವ ಬದ್ಧತೆಯನ್ನು ತೋರಿಸುತ್ತಿದೆ. ರಫ್ತು ಪ್ರಮಾಣವನ್ನು ಹೆಚ್ಚು ಮಾಡಿ ರಷ್ಯಾ ಜೊತೆಗಿನ ವ್ಯಾಪಾರ ಕೊರತೆ ಅಂತರವನ್ನು ತಗ್ಗಿಸುವ ಬಯಕೆಯನ್ನು ಭಾರತ ಹೊಂದಿದೆ.

ರಷ್ಯಾದ ಜೊತೆ ಭಾರತ ಹೊಂದಿರುವ ಸ್ನೇಹ ಇಂದು–ನಿನ್ನೆಯದಲ್ಲ. ದಶಕಗಳ ಹಿಂದಿನ ಈ ನಂಟು 'ಎಸ್–400'ನಂತಹ ಅತ್ಯಂತ ಮಹತ್ವದ ರಕ್ಷಣಾ ಉಪಕರಣದ ಖರೀದಿಯ ಮೂಲಕ ಇನ್ನಷ್ಟು ಗಾಢವಾಗಿದೆ. ಆದರೆ, ಭಾರತವು ರಷ್ಯಾ ಜೊತೆಗಿನ ಐತಿಹಾಸಿಕ ಸಂಬಂಧವನ್ನು ಬಲಪಡಿಸುತ್ತ, ಅಮೆರಿಕ ಹಾಗೂ ಐರೋಪ್ಯ ಒಕ್ಕೂಟದ ಜೊತೆಗಿನ ಸಂಬಂಧವನ್ನೂ ತೂಗಿಸಿಕೊಂಡು ಮುನ್ನಡೆಯಬೇಕಿದೆ. ರಷ್ಯಾ–ಉಕ್ರೇನ್ ಯುದ್ಧದ ವಿಚಾರದಲ್ಲಿ ತಾನು ಶಾಂತಿಯ ಪರವಾಗಿ ಇದ್ದೇನೆ ಎಂಬುದನ್ನು ಸ್ಪಷ್ಟಪಡಿಸುವ ಮೂಲಕ ಭಾರತವು ಪಾಶ್ಚಿಮಾತ್ಯ ದೇಶಗಳ ಕಳವಳಗಳಿಗೆ ಸ್ಪಂದಿಸುವ ಕೆಲಸ ಮಾಡಿದೆ. ಭಾರತವು ಈಗ ರಷ್ಯಾ–ಚೀನಾ ಸಂಬಂಧದಲ್ಲಿನ ಆತ್ಮೀಯತೆಯನ್ನು ಸೂಕ್ಷ್ಮವಾಗಿ ಅವಲೋಕಿಸಬೇಕಿದೆ. ಹಾಗೆಯೇ, ಚೀನಾ ಜೊತೆಗಿನ ಸಂಬಂಧದಲ್ಲಿ ಈಚೆಗೆ ಆಗಿರುವ ಸುಧಾರಣೆಗಳನ್ನು ಉಳಿಸಿಕೊಳ್ಳಬೇಕಿದೆ. ಐದು ವರ್ಷಗಳಿಗೂ ಹೆಚ್ಚಿನ ಅವಧಿಯ ನಂತರ ಭಾರತ ಮತ್ತು ಚೀನಾ, ಉನ್ನತ ಮಟ್ಟದ ಅಧಿಕಾರಿಗಳ ನಡುವಿನ ಮಾತುಕತೆಗಳನ್ನು ಈಚೆಗೆ ಪುನರಾರಂಭಿಸಿವೆ. ಎರಡೂ ದೇಶಗಳು, ಪರಸ್ಪರರಿಗೆ ಇರುವ ಪ್ರಯೋಜನವನ್ನು ಅರಿತು ಸಂಬಂಧ ಸುಧಾರಣೆಗೆ ಮುಂದಾಗಿವೆ. ಚೀನಾ ಜೊತೆಗಿನ ಸಂಬಂಧದ ವಿಚಾರದಲ್ಲಿ ಎಚ್ಚರಿಕೆಯೊಂದಿಗೆ ಹೆಜ್ಜೆ ಹಾಕುತ್ತ, ಚೀನಾ–ರಷ್ಯಾ ಸಂಬಂಧವನ್ನು ಎಚ್ಚರಿಕೆಯಿಂದ ಗಮನಿಸುತ್ತ ಭಾರತವು– ಚೀನಾ, ಅಮೆರಿಕ ಮತ್ತು ರಷ್ಯಾ ಜೊತೆಗಿನ ತನ್ನ ಸಂಬಂಧವನ್ನು ಸರಿದೂಗಿಸಿಕೊಂಡು ಮುನ್ನಡೆಯಬೇಕಿದೆ. ಪುಟಿನ್ ಅವರಿಗೆ ರತ್ನಗಂಬಳಿ ಹಾಸಿ ಸ್ವಾಗತ ಕೋರುವ ಮೂಲಕ ಭಾರತವು ತನ್ನ ಹಿತಾಸಕ್ತಿಗಳ ರಕ್ಷಣೆಗಾಗಿ, ಅದರಲ್ಲೂ ಮುಖ್ಯವಾಗಿ ಇಂಧನಕ್ಕೆ ಸಂಬಂಧಿಸಿದ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ರಷ್ಯಾ ಜೊತೆ ಬಲವಾದ ಸಂಬಂಧವನ್ನು ಉಳಿಸಿಕೊಳ್ಳುವ ಬದ್ಧತೆಯನ್ನು ತೋರಿಸಿದೆ.

ಇಂಡಿಗೊ: ಸರ್ಕಾರಕ್ಕೊಂದು ಪಾಠ!



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

> ಏಕಸ್ವಾಮ್ಯ ಇದ್ದಲ್ಲಿ ಅಲಕ್ಷ್ಯ ಸಹಜ ಎನ್ನುವುದಕ್ಕೆ 'ಇಂಡಿಗೊ' ಸಂಸ್ಥೆ ಸೃಷ್ಟಿಸಿದ ಬಿಕ್ಕಟ್ಟು ನಿದರ್ಶನದಂತಿದೆ. ಈ ಸಮಸ್ಯೆ ಸರ್ಕಾರಕ್ಕೂ ಒಂದು ಪಾಠ. ವಿಮಾನಯಾನ ಕ್ಷೇತ್ರದಲ್ಲಿನ ಏಕಸ್ವಾಮ್ಯ ಕೊನೆಗೊಳ್ಳದೆ ಹೋದರೆ ಇಂಥ ಬಿಕ್ಕಟ್ಟುಗಳು ಮರುಕಳಿಸಿದಲ್ಲಿ ಆಶ್ಚರ್ಯವೇನೂ ಇಲ್ಲ.

ಕಳೆದ ವಾರ ಕರೆ ಮಾಡಿದ ಸ್ನೇಹಿತರೊಬ್ಬರು, ದೊಡ್ಡ ಸಮಸ್ಯೆಯೊಂದರಲ್ಲಿ ತಾವು ಸಿಲುಕಿದ್ದಾಗಿ ಹೇಳಿ, ಸಹಾಯ ಕೇಳಿದರು. ಅವರು ಕೋಲ್ಕತ್ತದಲ್ಲಿದ್ದರು. ಮರುದಿನ ಬೆಂಗಳೂರಿಗೆ ಹಾರಬೇಕಿದ್ದ 'ಇಂಡಿಗೊ' ವಿಮಾನ ಸಂಚಾರವು ರದ್ದಾಗಿತ್ತು. ಪತ್ನಿ, ಪುತ್ರಿ ಹಾಗೂ ಮಗ ಕೂಡ ಅವರೊಟ್ಟಿಗೆ ಪ್ರಯಾಣಿಸುವವರಿದ್ದರು. ಮಗಳ ಮದುವೆಯು ಬೆಂಗಳೂರಿನ ವರನೊಟ್ಟಿಗೆ ನಿಶ್ಚಯವಾಗಿತ್ತು. ಮರುದಿನವೇ ಮದುವೆ. ವಿಮಾನಯಾನ ಸಂಸ್ಥೆಯ ಯಾರೊಬ್ಬರನ್ನೂ ಸಂಪರ್ಕಿಸುವುದು ಅವರಿಗೆ ಕಷ್ಟವಾಗಿತ್ತು. ಹೀಗಾಗಿ ನನಗೆ ಕರೆ ಮಾಡಿದರು.

ವಿಮಾನ ಸಂಚಾರ ನಿರ್ವಹಣೆ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ನನ್ನ ಪರಿಚಯಸ್ಥರೊಬ್ಬರಿಗೆ ಕರೆ ಮಾಡಿದೆ. ಆತಂಕದಲ್ಲಿದ್ದ ವಧು ಹಾಗೂ ಅವರ ಮನೆಯವರ ಪ್ರಯಾಣಕ್ಕೆ ಬೇರೆ ವಿಮಾನದಲ್ಲಿ ಹೇಗಾದರೂ ವ್ಯವಸ್ಥೆ ಮಾಡುವಂತೆ ವಿನಂತಿಸಿದೆ. ಅದೃಷ್ಟವಶಾತ್ ನಾನು ಸಂಪರ್ಕಿಸಿದ ವ್ಯಕ್ತಿಯು ಈ ಹಿಂದೆ ಏರ್‌ಡೆಕ್ಕನ್‌ನಲ್ಲಿ ಇದ್ದವರು. ವಿಮಾನ ಸಿಬ್ಬಂದಿಯ ಕರ್ತವ್ಯದ ಅವಧಿ ವಿಷಯದಲ್ಲಿ ಹೊಸ ನಿಯಮ ಜಾರಿಗೆ ಬಂದಮೇಲೆ ಪೈಲಟ್‌ಗಳನ್ನು ಪಾಳಿಗಳಿಗೆ ತಕ್ಕಂತೆ ನಿಯೋಜಿಸುವುದೇ ಜಟಿಲ ಸಮಸ್ಯೆಯಾಗಿದ್ದು, ಅದು ಊಹಾತೀತ ಪ್ರಮಾಣದಲ್ಲಿದೆ ಎಂದು ಇಂಡಿಗೊ ಅಧಿಕಾರಿಗಳು ಒಪ್ಪಿಕೊಂಡರು. ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಫ್ಲೈಟ್‌ಡ್ಯೂಟಿ ಟೈಮ್ ಲಿಮಿಟೇಷನ್ (ವಿಮಾನ ಸಂಚಾರ ಕರ್ತವ್ಯಾವಧಿಯ ಮಿತಿ–ಎಫ್‌ಡಿಟಿಎಲ್) ಹೇರಿದ್ದೇ ಇದಕ್ಕೆ ಕಾರಣವಾಗಿತ್ತು. ಯಾವ ವಿಮಾನದ ಹಾರಾಟ ಸಾಧ್ಯವಾಗಲಿದೆ, ಯಾವುದು ರದ್ದಾಗಲಿದೆ ಎಂದು ಆ ಕ್ಷಣದಲ್ಲಿ ಸ್ಪಷ್ಟವಾಗಿ ಹೇಳಲು ಆಗುತ್ತಲೇ ಇಲ್ಲ ಎನ್ನುವುದನ್ನು ನನ್ನ ಸ್ನೇಹಿತರು ತಿಳಿಸಿದರು. ಸಹಾಯ ಮಾಡುವ ಭರವಸೆಯನ್ನೂ ಕೊಟ್ಟರು.

ವಧು ಅದೃಷ್ಟವಂತಳು. ಹಲವು ವಿಮಾನಗಳು ರದ್ದಾದ ನಂತರವೂ ಮುಹೂರ್ತಕ್ಕೆ ಕೆಲವು ಗಂಟೆಗಳಿರುವಾಗಲೇ ಬೆಂಗಳೂರು ತಲಪಿದಳು. ಕೆಲವು ದಶಕಗಳ ಹಿಂದೆ ನಾನು ಸೇನೆಯಲ್ಲಿ ಕೆಲಸ ಮಾಡುತ್ತಿದ್ದಾಗಿನ ಘಟನೆಯೊಂದು ಆಗ ನೆನಪಾಯಿತು.

ಚೀನಾ ಗಡಿಯ ಎತ್ತರದ ಪ್ರದೇಶದಲ್ಲಿ ನಮ್ಮ ರೆಜಿಮೆಂಟ್ ಕಾರ್ಯತತ್ಪರವಾಗಿದ್ದ ಸಂದರ್ಭ ಅದು. ದಟ್ಟ ಹಿಮವೃಷ್ಟಿಯಿಂದಾಗಿ, ಅಲ್ಲಲ್ಲಿ ಭೂಕುಸಿತ ಉಂಟಾಗಿತ್ತು. ನಮ್ಮ ರೆಜಿಮೆಂಟ್‌ನ ಒಬ್ಬ ಯೋಧ ಉತ್ತರ ಪ್ರದೇಶದ ತನ್ನೂರಿಗೆ ಹೋಗಲು ರೈಲು ಹತ್ತುವುದಕ್ಕಾಗಿ ಸಿಲಿಗುರಿ ತಲಪಲು ಸಾಧ್ಯವಾಗಿರಲಿಲ್ಲ. ಅವನೂ ಆಗ ಮದುವೆಯ ವರ. ಮುಹೂರ್ತ ಮುಂದೂಡಲು ಸಾಧ್ಯವೇ ಇಲ್ಲ ಎಂದು ಪುರೋಹಿತರು ಹೇಳಿಬಿಟ್ಟಿದ್ದರು. ವಧುವಿನೊಟ್ಟಿಗೆ ವರನ ಫೋಟೊ ಇರಿಸಿ, ಆಗ ಅವರಿಬ್ಬರ ಮದುವೆ ಶಾಸ್ತ್ರಗಳನ್ನು ಮುಗಿಸಿದ್ದರು.

ಹಿಮಕುಸಿತವು ಪ್ರಕೃತಿಸಹಜವಾದ ವಿದ್ಯಮಾನ. ಇಂಡಿಗೊ ವಿಮಾನಗಳಿಗೆ ಸಂಬಂಧಿಸಿದ ವಿದ್ಯಮಾನವು ಸ್ವಯಂಕೃತ. ಪೈಲಟ್‌ಗಳಿಗೆ ವಿಧಿಸಲಾಗಿದ್ದ ಎಫ್‌ಡಿಟಿಎಲ್ ನಿಯಮಗಳನ್ನು ಸರ್ಕಾರವು ಡಿ. 5ರಂದು ತಡೆಹಿಡಿಯಿತು. ಆ ದಿನವೊಂದರಲ್ಲೇ ಇಂಡಿಗೊದ 1,000ಕ್ಕೂ ಹೆಚ್ಚು ವಿಮಾನಗಳ ಸಂಚಾರ ರದ್ದಾದ ನಂತರ ನಡೆದ ಬೆಳವಣಿಗೆ ಇದು. ಎರಡು ಲಕ್ಷಕ್ಕೂ ಹೆಚ್ಚು ಪ್ರಯಾಣಿಕರು ವಿಮಾನ ನಿಲ್ದಾಣದಲ್ಲೇ ಸಿಲುಕಿಕೊಂಡರು. 'ಮಾರ್ಕೆಟ್ ಲೀಡರ್' ಎನಿಸಿಕೊಂಡಿರುವ ವಿಮಾನ ಸಂಸ್ಥೆಯ ಎದುರು ದೇಶವೇ ಒತ್ತೆಯಾಳಿನಂತಾದ ಸ್ಥಿತಿ ಇದು.

ಪೈಲಟ್‌ಗಳು ಹಾಗೂ ವಿಮಾನಯಾನದ ಸಿಬ್ಬಂದಿ ಗರಿಷ್ಠ ಎಷ್ಟು ಅವಧಿ ಕೆಲಸ ನಿರ್ವಹಿಸಬೇಕು ಎನ್ನುವುದನ್ನು ನಿಯಂತ್ರಿಸುವ ನಿಯಮಗಳ ಗುಚ್ಛವೇ ಎಫ್‌ಡಿಟಿಎಲ್. ವಿಮಾನ ಸಿಬ್ಬಂದಿ ಸುದೀರ್ಘಾವಧಿ ಕೆಲಸ ಮಾಡುವುದರಿಂದ ದಣಿವು ಉಂಟಾಗುವ ಸಾಧ್ಯತೆ ಇರುತ್ತದೆ. ಅದನ್ನು ತಪ್ಪಿಸಿ, ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡುವುದು ಇದರ ಜಾರಿಯ ಉದ್ದೇಶ. ವರ್ಷವೊಂದರಲ್ಲಿ ಪೈಲಟ್ 900 ತಾಸು ವಿಮಾನ ಹಾರಿಸಬಹುದು. ಆದರೆ, 28 ದಿನಗಳಲ್ಲಿ 100 ತಾಸಿನ ಹಾರಾಟದ ಅವಧಿಯನ್ನು ಮೀರಬಾರದು. [illegible] ರಾತ್ರಿ ವೇಳೆಯಲ್ಲಿ ಲ್ಯಾಂಡಿಂಗ್ ಕಡಿಮೆ ಇರಬೇಕು. ಸಾಮಾನ್ಯವಾಗಿ ವಿಮಾನಯಾನಕ್ಕೆ ಒಂದು ತಾಸು ಮೊದಲು ಪೈಲಟ್‌ನ ಕರ್ತವ್ಯದ ಅವಧಿ ಶುರುವಾಗುತ್ತದೆ. ಗಮ್ಯವನ್ನು ತಲುಪಿದ ನಂತರ ಪೂರ್ಣಗೊಳ್ಳುತ್ತದೆ.

ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆಯು (ಐಸಿಎಒ) ಜಾಗತಿಕವಾಗಿ ಒಂದಿಷ್ಟು ಮಾನದಂಡಗಳನ್ನು ನಿಗದಿಪಡಿಸುತ್ತದೆ. ಅವನ್ನು ದೇಶಗಳು ಅಳವಡಿಸಿಕೊಳ್ಳಬೇಕು. ಎರಡು ಪ್ರಮುಖ ನಿಯಂತ್ರಣ ಸಂಸ್ಥೆಗಳೆಂದರೆ, ಯುಎಸ್ ಫೆಡರಲ್ ವಿಮಾನಯಾನ ಆಡಳಿತ (ಎಫ್‌ಎಎ) ಹಾಗೂ ಐರೋಪ್ಯ ಒಕ್ಕೂಟ ನಾಗರಿಕ ವಿಮಾನಯಾನ ಸುರಕ್ಷತಾ ಸಂಸ್ಥೆ (ಇಎಎಸ್‌ಎ). ಇವು ಜಗತ್ತಿನಲ್ಲೇ ಅತಿ ಹೆಚ್ಚು ವಿಮಾನ ಸಂಚಾರವನ್ನು ನಿರ್ವಹಿಸುತ್ತಿವೆ. ಎಲ್ಲವೂ ಐಸಿಎಒ ನಿಯಮಗಳನ್ನೇ ಅನುಸರಿಸುತ್ತಿವೆ.

ಭಾರತದ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಅನುಸರಿಸುವ ಎಫ್‌ಡಿಟಿಎಲ್ ಮಾರ್ಗದರ್ಶಿ ಸೂತ್ರವು ಐಸಿಎಒ ಮಾದರಿಯದ್ದಲ್ಲ; ಎಫ್‌ಎಎ ಅಥವಾ ಇಎಎಸ್‌ಎ ಸ್ವರೂಪದ್ದೂ ಅಲ್ಲ. ಭಾರತೀಯ ಪೈಲಟ್‌ಗಳ ಒಕ್ಕೂಟ ಹಾಗೂ ಇತರ ಸಂಸ್ಥೆಗಳು ಒತ್ತಡ ಹಾಕುತ್ತಲೇ ಬಂದಿದ್ದರಿಂದ ಐಸಿಎಒ ನಿಯಮಗಳಿಗೆ ಹೊಂದಿಕೆಯಾಗುವಂಥ ಎಫ್‌ಡಿಟಿಎಲ್ ಜಾರಿಗೆ ತರಲಾಯಿತು. ವಿಮಾನಯಾನ ವ್ಯವಸ್ಥಾಪನಾ ಸಂಸ್ಥೆಗಳು ಶೋಷಣೆ ಮಾಡುತ್ತಿದ್ದು, ಪೈಲಟ್‌ಗಳಿಗೆ ದೀರ್ಘಾವಧಿ ಸಂಚಾರ ನಡೆಸುವಂತೆ ಒತ್ತಡ ಹೇರುತ್ತಿವೆ. ಇದು ಅಸುರಕ್ಷಿತ ಹಾಗೂ ಒತ್ತಡ ಹೇರುವ ವಿದ್ಯಮಾನ ಎಂದು ಪೈಲಟ್‌ಗಳ ಒಕ್ಕೂಟ ಬೇಸರ ಹೊರಹಾಕಿದೆ.

ವಿಮಾನಯಾನ ಸಂಸ್ಥೆಗಳು, ಪೈಲಟ್‌ಗಳ ಒಕ್ಕೂಟ ಹಾಗೂ ಸಂಬಂಧಪಟ್ಟ ಸಂಸ್ಥೆಗಳೊಟ್ಟಿಗೆ ಡಿಜಿಸಿಎ ವಿಸ್ತೃತವಾದ ಸಂವಾದ ನಡೆಸಿತ್ತು. ಅದರಲ್ಲಿ ಸುರಕ್ಷತೆಗೇ ಆದ್ಯತೆ ಇತ್ತು. 2024ರ ಮೇ ತಿಂಗಳಲ್ಲಿ ಹೊಸ ಎಫ್‌ಡಿಟಿಎಲ್ ನಿಯಮಗಳನ್ನು ಪ್ರಕಟಿಸಿತು. 2025ರ ಜುಲೈ 1ರಂದು ನಿಯಮಗಳ ಮೊದಲ ಹಂತವನ್ನು ಜಾರಿಗೆ ತರಬೇಕು ಹಾಗೂ ನವೆಂಬರ್ 1ರ ಹೊತ್ತಿಗೆ ಎರಡನೇ ಹಂತದ ಅಷ್ಟೂ ಪ್ರಕ್ರಿಯೆ ಮುಗಿದಿರಬೇಕು ಎಂದು ಡಿಜಿಸಿಎ ತಿಳಿಸಿತು. ಹೊಸ ನಿಯಮಗಳ ಪಾಲನೆ ಶುರುವಾದ 20 ತಿಂಗಳಲ್ಲಿ ವಿಮಾನಯಾನ ಸಂಸ್ಥೆಗಳು ಹಾಗೂ ಪೈಲಟ್‌ಗಳು ಅವಕ್ಕೆ ಪೂರ್ಣಪ್ರಮಾಣದಲ್ಲಿ ಬದ್ಧರಾಗಿ ಇರಬೇಕು ಎಂದೂ ತಾಕೀತು ಮಾಡಿತು. ಆದರೆ, ಈ ನಿಯಮಗಳಿಗೆ ಇಂಡಿಗೊ ಬದ್ಧವಾಗಲಿಲ್ಲ.

ಇಂಡಿಗೊ ಬೃಹತ್ತಾಗಿ ಬೆಳೆದಿದೆ. ಕಾರ್ಯಾಚರಣೆ ಪ್ರಾರಂಭಿಸಿ 20 ವರ್ಷ ಕಳೆದ ನಂತರ 420 ವಿಮಾನಗಳು ಹಾರಾಟ ನಡೆಸುವಷ್ಟು ಅದು ವಿಸ್ತಾರಗೊಂಡಿದೆ. ಕಟ್ಟುನಿಟ್ಟು ಸಮಯಪಾಲನೆ, ಹೆಚ್ಚೇನೂ ಹಳತಾಗದ ಮಜಬೂತಾಗಿ ಇರುವ ವಿಮಾನಗಳು, ಪ್ರಯಾಣಿಕರ ಅಗತ್ಯಕ್ಕೆ ಸ್ಪಂದಿಸುವ ಸಿಬ್ಬಂದಿ, ಜೀವಹಾನಿ ಉಂಟುಮಾಡುವಂತಹ ಅಪಘಾತಗಳೇ ಆಗಿಲ್ಲವೆಂಬ ಹೆಗ್ಗಳಿಕೆ, ಬಂಡವಾಳ ಮಾರುಕಟ್ಟೆಯಲ್ಲಿ ಸುಮಾರು 22 ಶತಕೋಟಿ ಡಾಲರ್‌ನಷ್ಟು ಏರಿಕೆ... ಇವೆಲ್ಲವೂ ಇಂಡಿಗೊಗೆ ಸಂದ ಗರಿಗಳು.

2012ರಲ್ಲಿ ಕಿಂಗ್‌ಫಿಷರ್ ಪತನವಾಯಿತು. 2019 ಹಾಗೂ 2023ರಲ್ಲಿ ಕ್ರಮವಾಗಿ ಜೆಟ್ ಏರ್‌ವೇಸ್ ಹಾಗೂ ಗೋಏರ್ ದಿವಾಳಿಯಾದವು. ಈ ಬೆಳವಣಿಗೆಯಿಂದ ಸುಮಾರು 300 ವಿಮಾನಗಳು ರನ್‌ವೇಗಳಿಂದ ಹೊರಗುಳಿಯುವಂತಾಯಿತು. ಸ್ಪೈಸ್‌ಜೆಟ್ ಸಂಸ್ಥೆಯ ವಿಮಾನಗಳ ಸಂಖ್ಯೆ 100 ಇದ್ದುದು 20ರ ಆಸುಪಾಸಿಗೆ ಇಳಿಯಿತು. ಟಾಟಾ ಕಂಪನಿ ಖರೀದಿಸಿದ ನಂತರವೂ ಇಂಡಿಯನ್ ಏರ್‌ಲೈನ್ಸ್ ತಡಬಡಾಯಿಸುವುದು ನಿಲ್ಲಲಿಲ್ಲ. ಏರ್‌ಏಷ್ಯಾ ಹಾಗೂ ವಿಸ್ತಾರ ಕೂಡ ಇಂಡಿಯನ್ ಏರ್‌ಲೈನ್ಸ್ ಜೊತೆಗೇ ಬೆಸೆದುಕೊಂಡವು. ಹೀಗಾಗಿ ಇಂಡಿಗೊ ಬೃಹತ್ತಾಗಿ ಬೆಳೆದುಬಿಟ್ಟಿತು. ಎಲ್ಲ ರೀತಿಯಲ್ಲಿ ಪ್ರಯೋಗಾತ್ಮಕವಾಗಿ ನೋಡಿದರೆ ಅದರ ಏಕಸ್ವಾಮ್ಯ ಇರುವುದು ಗೊತ್ತಾಗುತ್ತದೆ. ಏಕಸ್ವಾಮ್ಯ ಇದ್ದಲ್ಲಿ ಅಲಕ್ಷ್ಯ ಇದ್ದಿದ್ದೇ ಎಂಬ ಮಾತಿದೆ.

ಬೇರೆ ವಿಮಾನಯಾನ ಸಂಸ್ಥೆಗಳಂತೆಯೇ ಇಂಡಿಗೊ ಸಂಸ್ಥೆಗೂ ಹೊಸ ನಿಯಮಗಳ ಜಾರಿಗೆ 20 ತಿಂಗಳ ಕಾಲಾವಕಾಶವಿತ್ತು. ಇದಕ್ಕೆ ಹೆಚ್ಚು ಸಹ–ಪೈಲಟ್‌ಗಳು, ಕ್ಯಾಪ್ಟನ್‌ಗಳು ಹಾಗೂ ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕಾದುದು ಅಗತ್ಯವಾಗಿತ್ತು. ಈ ವಿಷಯದಲ್ಲಿ ಇಂಡಿಗೊ ಹಿಂದುಳಿಯಿತು.

ಏರ್‌ಇಂಡಿಯಾ ಹಾಗೂ ಬ್ರಿಟಿಷ್ ಏರ್‌ವೇಸ್‌ನ ಪೂರ್ಣಪ್ರಮಾಣದ ಕ್ಯಾರಿಯರ್ ವಿಮಾನವೊಂದಕ್ಕೆ 11 ಪೈಲಟ್‌ಗಳು ಬೇಕಾಗುತ್ತದೆ. ಯಾಕೆಂದರೆ, ಅವುಗಳ ಹಾರಾಟದ ಅವಧಿ ಕಡಿಮೆ. ಕಡಿಮೆ ಟಿಕೆಟ್ ದರದ ವಿಮಾನಗಳ ಹಾರಾಟದ ಅವಧಿ ಹೆಚ್ಚು. ಹೀಗಾಗಿ ಒಂದು ವಿಮಾನಕ್ಕೆ 13–14 ಪೈಲಟ್‌ಗಳ ಅಗತ್ಯವಿದೆ. ಇದು ಹೊಸ ನಿಯಮದ ಅನ್ವಯ ಕಾಣುತ್ತಿರುವ ವಸ್ತುಸ್ಥಿತಿ. ಇಂಡಿಗೊದ ಹಿರಿಯ ವ್ಯವಸ್ಥಾಪಕರ ಸಮಿತಿಯು ಹೇಗಾದರೂ ಮಾಡಿ ಎಫ್‌ಡಿಟಿಎಲ್‌ನಿಂದ ತಪ್ಪಿಸಿಕೊಳ್ಳಬಹುದು ಎಂದು ಅಲಕ್ಷ್ಯ ತೋರಿತು. ಪೈಲಟ್‌ಗಳ ನೇಮಕಾತಿ–ತರಬೇತಿಯ ಕುರಿತು ತಲೆಕೆಡಿಸಿಕೊಳ್ಳಲೇ ಇಲ್ಲ. ಚಳಿಗಾಲದಲ್ಲಿ ವಿಮಾನಗಳ ಹಾರಾಟ ಜಾಸ್ತಿ. ಹೀಗಾಗಿ 'ಹಿಂದೆಂದೂ ಕಂಡಿರದಂಥ, ಹಲವು ಕಾರ್ಯಾಚರಣೆ ಸವಾಲುಗಳಿಂದ ಸಮಸ್ಯೆ ಜಟಿಲವಾಗಿದೆ' ಎಂದು ಇಂಡಿಗೊ ಪ್ರಕಟಣೆ ತಿಳಿಸಿತು. ವಿಮಾನ ಸಂಚಾರ ವ್ಯವಸ್ಥೆ ಕುಸಿಯಿತು.

ಇಂಡಿಗೊ ಹುಟ್ಟುಹಾಕಿರುವ ಈ ಸಮಸ್ಯೆಯು ಸರ್ಕಾರಕ್ಕೂ ಒಂದು ಪಾಠ. ಏಕಸ್ವಾಮ್ಯ ಅಥವಾ ದ್ವಿಸ್ವಾಮ್ಯದಿಂದ ಯಾವ ಕ್ಷೇತ್ರದಲ್ಲೂ ದೇಶ ಪ್ರಗತಿ ಕಾಣಲಾಗದು. ಕಡಿಮೆ ದರದ ವಿಮಾನಗಳನ್ನು ಪೂರೈಸಬಲ್ಲ ಡಜನ್ನು ಸಂಸ್ಥೆಗಳಿದ್ದಲ್ಲಿ ಈ ಪರಿಸ್ಥಿತಿ ಉದ್ಭವಿಸುತ್ತಲೇ ಇರಲಿಲ್ಲ.



ವಾಚಕರ ವಾಣಿ

ವೈಚಾರಿಕತೆ ಮರೆತರೆ ಕೇಡು ಕಟ್ಟಿಟ್ಟ ಬುತ್ತಿ

ಕುವೆಂಪು ಅವರು 1974ರ ಡಿ. 8ರಂದು ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಮಾಡಿದ 'ವಿಚಾರ ಕ್ರಾಂತಿಗೆ ಆಹ್ವಾನ' ಭಾಷಣಕ್ಕೆ 51 ವರ್ಷಗಳು ಸಂದಿವೆ. ಆಗ ಕುವೆಂಪು ಹೇಳಿದ ಮಾತುಗಳು ಇಂದಿಗೂ ಪ್ರಸ್ತುತ. 'ನಾವು ವೈಜ್ಞಾನಿಕ ದೃಷ್ಟಿಯ ಮತ್ತು ವೈಚಾರಿಕ ಬುದ್ಧಿಯ ನೆರವಿನಿಂದ ನಮ್ಮ ನಾಡಿನ ರಾಜಕೀಯ, ಸಾಮಾಜಿಕ, ಮತ, ಧಾರ್ಮಿಕ ರಂಗಗಳನ್ನು ಪರಿಶೋಧಿಸದಿದ್ದರೆ ನಮಗೆ ಕೇಡು ತಪ್ಪದು' ಎಂಬ ಅವರ ಮಾತನ್ನು ನಾವಿಂದು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಿದೆ.

ಕುವೆಂಪು ಅವರ ಕಾಲಘಟ್ಟ ಆಧುನಿಕತೆಗೆ ತೆರೆದುಕೊಳ್ಳುತ್ತಿದ್ದ ಅಥವಾ ಹೊಂದಿಕೊಳ್ಳುತ್ತಿದ್ದ ಸಮಯ. ಇಂದು ಆಧುನಿಕತೆ ನಮ್ಮೆಲ್ಲರನ್ನು ಆವರಿಸಿಕೊಂಡಿದೆ. ಆದರೆ, ವೈಚಾರಿಕತೆ ಬಿಟ್ಟು ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನದಲ್ಲಿ ನಾವು ಜೀವಿಸುತ್ತಿದ್ದೇವೆಯೇ ಹೊರತು, ಮೌಢ್ಯದ ಹಾದಿಯಿಂದ ಹೊರಗೆ ಬರಲು ಆಗುತ್ತಿಲ್ಲ. ತಂತ್ರಜ್ಞಾನವನ್ನೂ ಸಾಂಪ್ರದಾಯಿಕ ಕಟ್ಟಡಗಳಿಗೆ ಜೋಡಿಸುತ್ತಿದ್ದೇವೆ ಎಂಬುದು ಈ ಕಾಲದ ವಿಪರ್ಯಾಸ.

ರಾಜೇಂದ್ರಕುಮಾರ್ ಮುದ್ನಾಳ್, ಯಾದಗಿರಿ

ಅನ್ನದಾತರ ನೆಮ್ಮದಿಗೆ ಗ್ಯಾರಂಟಿ ಬೇಡವೆ?

ರೈತರಿಗೆ ತಲಪದ ಪೂರ್ಣ ಪರಿಹಾರ ವರದಿ (ಪ್ರ.ವಾ., ಡಿ. 8) ಓದಿ ಮನಸ್ಸಿಗೆ ನೋವಾಯಿತು. ಮಳೆಯ ಅಭಾವದಿಂದ ಬೆಳೆನಾಶವಾಗಿದ್ದರೂ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ರೈತರೊಂದಿಗೆ ಚೆಲ್ಲಾಟವಾಡುತ್ತಿರುವುದು ದುರದೃಷ್ಟಕರ. ಎಲ್ಲವನ್ನೂ ರೈತರು ಹೋರಾಟ, ಓಡಾಟದಿಂದಲೇ ಪಡೆದುಕೊಳ್ಳಬೇಕಿರುವುದು ನೋವಿನ ಸಂಗತಿ. ಅನ್ನ ನೀಡುವವರಿಗೆ ಸ್ಪಂದಿಸದಿದ್ದರೆ ರೈತನ ಮುಖದಲ್ಲಿ ಮಂದಹಾಸ ಹೇಗೆ ಮೂಡೀತು! ರೈತ ಬೆಳೆಯದಿದ್ದರೆ ಹೊಟ್ಟೆಯ ಮೇಲೆ ತಣ್ಣೀರ ಬಟ್ಟೆಯೇ ಗತಿಯಾದೀತು? ಪ್ರಕೃತಿಯ ಜತೆಗೆ ರೈತರ ಜೂಜಾಟ ಒಂದೆಡೆಯಾದರೆ; ಮತ್ತೊಂದೆಡೆ ಸರ್ಕಾರ ಹಾಗೂ ಅಧಿಕಾರಿಗಳು ಜೂಟಾಟ ನಡೆಸುತ್ತಿರುವುದು ಬೇಸರದ ಸಂಗತಿ.

ಕುಂದೂರು ಮಂಜಪ್ಪ, ಹೊಳೆಸಿರಿಗೆರೆ

ರಾಜ್ಯ ಸರ್ಕಾರ ಭೂಕಬಳಿಕೆ ನಿಲ್ಲಿಸಲಿ

ಬೆಂಗಳೂರಿನಿಂದ 60 ಕಿ.ಮೀ. ದೂರದ ಕನಕಪುರದ ಸುತ್ತಮುತ್ತಲಿನ ಹಳ್ಳಿಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಗೆ ಸೇರಿಸಲಾಗುತ್ತದೆ; ಅದಕ್ಕಾಗಿ ಸಾವಿರಾರು ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಬಹುದೆಂಬ ಸುತ್ತೋಲೆ ನಮ್ಮಂತಹ ಹಳ್ಳಿಗರಿಗೆ ಆಘಾತ ತಂದಿದೆ. ಹಳ್ಳಿಗಳು ಇನ್ನೂ ರೇಷ್ಮೆ, ರಾಗಿ, ತೆಂಗು ಬೆಳೆಯುವ ಫಲವತ್ತಾದ ಭೂಮಿ ಹೊಂದಿವೆ. ಈ ಜಮೀನಿನಲ್ಲಿ ಸಾವಿರಾರು ಜನರು ನೆಮ್ಮದಿ ಕಂಡುಕೊಂಡಿದ್ದಾರೆ. ಹಳ್ಳಿಗಳು ಹಳ್ಳಿಗಳಾಗಿಯೇ ಇರಲಿ. ಬೆಂಗಳೂರಿಗೆ ಸೇರಿಸಬೇಕು ಎನ್ನುವುದರಲ್ಲಿ ಅರ್ಥವಿಲ್ಲ. ಭೂಮಿಗೆ ಬಂಗಾರದ ಬೆಲೆ ಕೊಡುತ್ತೇವೆ ಎಂದು ಹೇಳಿ ಜಮೀನು ಕಬಳಿಸಿ, ರಿಯಲ್ ಎಸ್ಟೇಟ್ ದಂಧೆ ನಡೆಸುವುದನ್ನು ಹಳ್ಳಿಗರು ಸಹಿಸುವುದಿಲ್ಲ.

ನಾಗರಾಜ ಮಾದೇಗೌಡ, ಕನಕಪುರ

ಸಿಂಗಪುರದ ಅಭಿವೃದ್ಧಿ ಮಾದರಿಯಾಗಲಿ

ಸಿಂಗಪುರದ ಅಭಿವೃದ್ಧಿ ಬಗ್ಗೆ ಆಗಾಗ್ಗೆ ಜನಪ್ರತಿನಿಧಿಗಳು ಮಾತನಾಡುತ್ತಾರೆ. ಅಲ್ಲಿಗೆ ಕುಟುಂಬ ಸಮೇತ ಪ್ರವಾಸಕ್ಕೂ ಹೋಗುತ್ತಾರೆ. ಅಲ್ಲಿನ ಆಡಳಿತ ಮಾದರಿಯನ್ನು ರಾಜ್ಯದಲ್ಲಿ ಅಳವಡಿಸಿಕೊಳ್ಳಲು ಮಾತ್ರ ಹಿಂಜರಿಕೆ ತೋರುತ್ತಾರೆ. ಸಿಂಗಪುರದಲ್ಲಿ ಕಾರುಗಳನ್ನು ಕೊಳ್ಳಲು ಸರ್ಕಾರದ ಅನುಮತಿ ಕಡ್ಡಾಯ. ಅಲ್ಲಿ ಮೆಟ್ರೊ ರೈಲು, ಬಸ್ ಸಂಚಾರ ಜನಪ್ರಿಯವಾಗಿದೆ. ಜನರ ಶಿಕ್ಷಣ, ಆರೋಗ್ಯ ಸೇವೆಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ. ಆ ದೇಶ ಭ್ರಷ್ಟಾಚಾರ ಮುಕ್ತವಾಗಿದೆ. ಅಂತಹ ಮಾದರಿ ನಮಗೆ ಬೇಡವೆ?

ಎ.ವಿ. ಶಾಮರಾವ್, ಬೆಂಗಳೂರು

ರಾಜಕಾರಣದಲ್ಲಿ ಧರ್ಮಕಾರಣ ಅಪ್ರಸ್ತುತ

ಸಂವಿಧಾನದ ಪೀಠಿಕೆಯಿಂದ 'ಜಾತ್ಯತೀತ' ಮತ್ತು 'ಸಮಾಜವಾದ' ಶಬ್ದಗಳನ್ನು ತೆಗೆದುಹಾಕುವಂತೆ ಬಿಜೆಪಿಯ ರಾಜ್ಯಸಭಾ ಸಂಸದ ಭೀಮ್ ಸಿಂಗ್, ಖಾಸಗಿ ಮಸೂದೆ ಮಂಡಿಸಿದ್ದಾರೆ. ದೇಶದಲ್ಲಿ ಹಿಂದೂ ಧರ್ಮೀಯರ ಜೊತೆ, ಮುಸ್ಲಿಂ, ಸಿಖ್, ಜೈನ ಮತ್ತು ಬೌದ್ಧರು ಜೀವಿಸುತ್ತಿದ್ದಾರೆ. ಸಂವಿಧಾನ ಎಲ್ಲರಿಗೂ ರಕ್ಷಣೆ ಕೊಟ್ಟಿದೆ. ಜಾತ್ಯತೀತ ಶಬ್ದ ತೆಗೆದು ಹಿಂದೂರಾಷ್ಟ್ರ ಮಾಡಿ, ಉಳಿದವರನ್ನು ಎಲ್ಲಿಗೆ ಕಳುಹಿಸುವ ಉದ್ದೇಶವಿದೆ; 'ಸಮಾಜವಾದ' ಪದ ತೆಗೆದು ಕೆಲವರನ್ನೇ ಶ್ರೀಮಂತರನ್ನಾಗಿಸುವ ಇಚ್ಛೆ ಇದೆಯೇ? ಜಾತಿ, ಧರ್ಮ, ದೇವರನ್ನೇ ಬಳಸಿಕೊಂಡು ಆಡಳಿತ ಮಾಡುವುದರಿಂದ ಅಭಿವೃದ್ಧಿ ಸಾಧ್ಯವೆ? ಅಭಿವೃದ್ಧಿ ಹೊಂದಿದ ಯಾವುದೇ ರಾಷ್ಟ್ರ ಜಾತಿ, ಧರ್ಮ, ದೇವರ ಆಧಾರದಲ್ಲಿ ಬೆಳೆದಿದೆಯೇ? ಈ ಬಗ್ಗೆ ಅಧ್ಯಯನ ಮಾಡಿ ಸತ್ಯಾಂಶ ತಿಳಿಸುವ ಪ್ರಯತ್ನವನ್ನಾದರೂ ಮಾಡಲಿ.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ವಿರೋಧ ಪಕ್ಷಗಳ ಹೀಗಳಿಕೆ ಸರಿಯಲ್ಲ

ವಿರೋಧ ಪಕ್ಷವು ಪ್ರಜಾಪ್ರಭುತ್ವದ ಕಾವಲುನಾಯಿ. ಸರ್ಕಾರದ ಜನವಿರೋಧಿ ನೀತಿಗಳನ್ನು ಜನರ ಮುಂದಿಡುವುದು ಅದರ ಜವಾಬ್ದಾರಿ. ಆದರೆ, ವಿರೋಧ ಪಕ್ಷವನ್ನು ವಿರೋಧಿಸುವ ಪ್ರವೃತ್ತಿಯು ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಸೈದ್ಧಾಂತಿಕ ಸೆಳೆತಕ್ಕೆ ಸಿಲುಕಿದ ಸಮೂಹವು ಆಡಳಿತ ಪಕ್ಷದ ಅಷ್ಟೂ ನಡೆ–ನಿಯಮ, ಕ್ರಮಗಳನ್ನು ಗಟ್ಟಿಯಾಗಿ ಸಮರ್ಥಿಸಲು ಮುಂದಾಗುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಉಚಿತ ವಕ್ತಾರಿಕೆ ಮಾಡುತ್ತಾ ಸರ್ಕಾರ ಪರ ತಮಟೆ ಬಾರಿಸುತ್ತದೆ. ರಾಜ್ಯ ಅಥವಾ ಕೇಂದ್ರದಲ್ಲಿರುವ ವಿರೋಧ ಪಕ್ಷ ಹಾಗೂ ಅದರ ನಾಯಕರನ್ನು ಗೇಲಿ ಮಾಡುವುದು, ಅವರ ಜವಾಬ್ದಾರಿಯನ್ನು ಹತ್ತಿಕ್ಕುವುದು ಜನತಂತ್ರಕ್ಕೆ ಮಾಡುವ ಅಪಮಾನ. ಇಂಥ ನಡವಳಿಕೆ ಸರ್ವಾಧಿಕಾರದ ಆಡಳಿತಕ್ಕೂ ಎಡೆಮಾಡಿಕೊಡುವಂತಹದ್ದು.

ಕೆ.ಎಸ್. ಗಿರಿರಾಜು, ಬೆಂಗಳೂರು

ಚಾಟಿ

ಕನ್ನಡ: ಅಂದು–ಇಂದು



ಒಂದು ಕಾಲದಲ್ಲಿ ಕನ್ನಡವೇ ಕೇಳಿಸುತ್ತಿದ್ದ ಬ್ಯಾಂಕ್‌ಗಳಲ್ಲಿ ಈಗ ಬರೀ ಹಿಂದಿ, ಇಂಗ್ಲಿಷ್! ಅಪ್ಪಟ ಕನ್ನಡದ ಜಾಗಗಳಲ್ಲೂ ಎಲ್ಲಿ ನೋಡಿದರೂ ಹಿಂದಿಯವರೇ. ಸಾಮಾನ್ಯ ಕನ್ನಡಿಗ, ರೈತ ಮಹಿಳೆ, ತನ್ನ ಭಾಷೆಯಲ್ಲಿ ಸೇವೆ ಪಡೆಯಲು ಆಗುತ್ತಿಲ್ಲ.

ರೂಪೇಶ್ ರಾಜಣ್ಣ, ಕನ್ನಡ ಕಾರ್ಯಕರ್ತ, 'ಎಕ್ಸ್'ನಿಂದ

ಕಿಡಿನುಡಿ



ಬಿಜೆಪಿಯವರು ಸದನದಲ್ಲಿ ಸರಿಯಾಗಿ ಭಾಗವಹಿಸಲಿ. ಅಲ್ಲಿ ಸಮಸ್ಯೆಗಳನ್ನು ಚರ್ಚಿಸಲಿ. ಅದನ್ನು ಬಿಟ್ಟು ಉಳಿದೆಲ್ಲ ಮಾತನಾಡುತ್ತಿದ್ದಾರೆ. ಕಮಲದ ಮನೆಯೇ ನೂರು ಬಾಗಿಲುಗಳ ಒಡೆದ ನಿವಾಸವಾಗಿದೆ.

ಶಿವರಾಜ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಸಚಿವ

25 ವರ್ಷಗಳ ಹಿಂದೆ

ಶನಿವಾರ, 9-12-2000

- **ಸೋನಾ ಮಸೂರಿ: ಕೇಂದ್ರದ ತಂಡದಿಂದ ಮಾದರಿ ಸಂಗ್ರಹಣೆ**

ರಾಯಚೂರು, ಡಿ. 8– ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ಪ್ರಧಾನ ಬೆಳೆ ಸೋನಾ ಮಸೂರಿ (ಬಿಪಿಟಿ–5204) ಭತ್ತಕ್ಕೆ 'ಎ' ದರ್ಜೆ ಗುಣಮಟ್ಟದ ಸ್ಥಾನ ನೀಡಿ ಸೂಕ್ತ ಬೆಂಬಲ ಬೆಲೆ ನಿಗದಿಮಾಡಬೇಕೆಂಬ ಕರ್ನಾಟಕ ಸರ್ಕಾರದ ನಿಯೋಗವೊಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದ ಮನವಿಯನ್ನು ಪುರಸ್ಕರಿಸಿ, ಭತ್ತದ ವಿವಿಧ ನಮೂನೆ ಸಂಗ್ರಹಿಸಲು ತಾಂತ್ರಿಕ ಅಧಿಕಾರಿಗಳು ಆಗಮಿಸಿದ್ದಾರೆ.

ಭಾರತ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ತಾಂತ್ರಿಕ ಅಧಿಕಾರಿ ಎಸ್.ಕೆ. ಕುಲಕರ್ಣಿ ಅವರು ಜಿಲ್ಲೆಗೆ ಆಗಮಿಸಿದ್ದು ಸಿಂಧನೂರು, ಮಾನ್ವಿ, ರಾಯಚೂರು, ಕೊಪ್ಪಳ ಜಿಲ್ಲೆಯ ಕಾರಟಗಿ, ಗಂಗಾವತಿ, ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಬೆಳೆಯುತ್ತಿರುವ ಸೋನಾ ಮಸೂರಿ ಭತ್ತದ ನಮೂನೆ ಸಂಗ್ರಹಿಸಿದ್ದಾರೆ.

- **ರನ್‌ವೇಯಲ್ಲಿ ಅಪಘಾತ: ಪ್ರಯಾಣಿಕರು ಪಾರು**

ಮಂಗಳೂರು, ಡಿ. 8– ಮುಂಬೈನಿಂದ ಮಂಗಳೂರಿಗೆ ಬಂದ ಜೆಟ್ ಏರ್‌ವೇಸ್ ಸಂಸ್ಥೆಗೆ ಸೇರಿದ ವಿಮಾನ, ಬಜ್ಪೆ ನಿಲ್ದಾಣದಲ್ಲಿ ಭೂಸ್ಪರ್ಶ ಮಾಡಿದ ಸ್ವಲ್ಪ ಹೊತ್ತಿನಲ್ಲಿ ರನ್‌ವೇ ಮಧ್ಯದಲ್ಲಿದ್ದಾಗ ಮುಂದಿನ ಚಕ್ರ ಒಡೆದು ಅಪಘಾತಕ್ಕೀಡಾದರೂ ಅದರಲ್ಲಿದ್ದ 129 ಪ್ರಯಾಣಿಕರು ಮತ್ತು 6 ಮಂದಿ ಚಾಲಕ ಸಿಬ್ಬಂದಿ ಆಶ್ಚರ್ಯಕರವಾಗಿ ಪಾರಾದ ಘಟನೆ ಇಂದು ಸಂಭವಿಸಿದೆ.

75 ವರ್ಷಗಳ ಹಿಂದೆ

ಶನಿವಾರ, 9-12-1950

- **'ಆಹಾರ'ದೊಂದಿಗೆ ಚೆಲ್ಲಾಟವಿಲ್ಲ**

ನವದೆಹಲಿ, ಡಿ. 8– ಇನ್ನು ಆರು ತಿಂಗಳ ಕಾಲ ಪ್ರತಿನಿತ್ಯವೂ ಆಹಾರ ಧಾನ್ಯ ತುಂಬಿದ ಹಡಗುಗಳು ಭಾರತದ ಬಂದರುಗಳಿಗೆ ಬರುತ್ತಿರುತ್ತವೆ ಎಂಬುದಾಗಿ ಅರ್ಥ ಸಚಿವ ದೇಶಮುಖ್ ಇಂದು ಪಾರ್ಲಿಮೆಂಟಿನಲ್ಲಿ ನುಡಿದರು.

ದೇಶದ ಆಹಾರ ಪರಿಸ್ಥಿತಿಗೆ ಬಾಧಕವಾಗುವಂತಹ ಯಾವ ಸಂದಿಗ್ಧಕ್ಕೂ ಎಡೆಕೊಡಲು ತಾವು ಹಿಂಜರಿಯಬೇಕಾಗಿದೆಯೆಂದರು. ಮುಂದುವರಿದು, 'ಅದೃಷ್ಟವಶಾತ್ ಆಹಾರಾಮದಿಗೆ ತಕ್ಕಷ್ಟು ವಿನಿಮಯ ಸೌಕರ್ಯವಿದೆ' ಎಂದು ಪಾರ್ಲಿಮೆಂಟಿಗೆ ಭರವಸೆಯಿತ್ತರು.

ಚುರುಮುರಿ



ಶುನಕ ಸಭೆ

● ಲಿಂಗರಾಜು ಡಿ.ಎಸ್.

ಆಫೀಸಿನ ಮುಂದಿದ್ದ ನಾಯಿಗಳ ದೊಡ್ಡ ಗುಂಪು ತೋರಿಸಿದ ಯಂಟಪ್ಪಣ್ಣ, 'ಇವು ಹೋದ ಜಲ್ಮದೇಲಿ ನಮ್ಮ ಇಲಾಖೇಲೇ ಆಫೀಸರಾಗಿದ್ದವು ಕನೋ. ಅದಿಕ್ಕೆ ದಿನಾ ಆಫೀಸಿಗೆ ಬಂದು ಹೋತವೆ. ಮುಂದ್ಲ ಜಲ್ಮದೇಲಿ ನಾವೂ ಹಿಂಗೇ ಬಂದಿರತೀವೇನೊ' ಅಂದ.

'ನರಮನುಷನ ಜಲ್ಮಾದ ಮ್ಯಾಲೆ ನಾಯಿ ಜಲ್ಮವಂತೆ. ನಾಯಿಗಳಲ್ಲೂ ಈಗ ರಿಂಗ್ ರೋಡ್ ರ‍್ಯಾಕೆಟ್, ಬ್ರಿಡ್ಜ್ ಬಾಯ್ಸ್, ಮಾರ್ಕೆಟ್ ರೌಡೀಸ್, ಸೈಲೆಂಟ್ ಕಿಲ್ಲರ್ಸ್ ಅಂತ ಸುಮಾರು ಪಕ್ಷಗಳದಾವೆ. ಇವು ಆಗಾಗ ಉಪಹಾರ ಸಭೆ ಮಾಡಿಕ್ಯಂದು ತಿರುಗಾಡ್ತಿರತವೆ' ಅಂದ್ರು ತುರೇಮಣೆ.

'ಅವುಕ್ಕೇನಾ ವತ್ತರೇಗೆ ಪಾರ್ಕಲ್ಲಿ ಮೀಟಿಂಗ್, ಮಧ್ಯಾಹ್ನಕ್ಕೆ ಹೋಟೆಲ್ ಹಿಂದ್ಗಡೆ ಬಫೆ ಊಟ, ರಾತ್ರಿ ಬೈಕ್ ಅಟ್ಟಿಸಿಕೊಂಡೋಗೊ ವ್ಯಾಯಾಮ ಮಾಡಿಕ್ಯಂದು ಸೂಪರಗದಾವೆ' ತಿಪ್ಪಣ್ಣ ವಿವರಿಸಿದ.

'ಕಚ್ಚೋ ನಾಯಿಗಳು ಒಳಗೂ ಅವೆ ಅಂತ ಮೊನ್ನೆ ರೇಣಕ್ಕ ಅಂದುತ್ತಲ್ಲ. ಈ ನಾಯಿಗಳೆಲ್ಲಾ ಮುಂದ್ಲ ಚುನಾವಣೆಗಳಲಿ ಸ್ಪರ್ಧೆ ಮಾಡಿ ಶುನಕ ಸರ್ಕಾರ ಬಂದ್ರೆ ಯಂಗಿದ್ದದು ಅಣ್ತಮ್ಮ?' ಅಂತಂದೆ.

'ಆಗ ಅವುಗಳ ತ್ಯಾಗ, ಕಾಸಿನ ಪವರ್, ಸೀನಿಯಾರಿಟಿ ಪ್ರಕಾರ ಮಂತ್ರಿ ಮಾಡಬಕು ಅಣ್ತಮ್ಮ. ಡಿಕಾವಾಗಿರೋದು ಸಿಎಂ ಆಯ್ತದೆ. ಟ್ರಾಫಿಕ್ಕಲ್ಲಿ ಯರ‍್ರಾಬಿರ‍್ರೀ ನುಗ್ಗೋ ನಾಯಿ ನಿಗ್ರಹಸಚಿವ, ಸ್ಕೂಲು ಮುಂದಿರೋವು ಶಿಕ್ಷಣ ಮಂತ್ರಿ, ಊಟ ಎಲ್ಲೆಲ್ಲಿ ಸಿಕ್ತದೆ ಅಂತ ತಿಳುಕಂದಿರೋದು ಆಹಾರ ಸಚಿವ. ಸಣ್ಣ–ಪುಟ್ಟ ಗಲ್ಲಿ ನಾಯಿಗಳು ನಿಗಮ–ಮಂಡಲಿ ಅಧ್ಯಕ್ಷರಾತವೆ. ಸುಮ್ಮನೆ ಬೊಗಳೋವು ವಿರೋಧಪಕ್ಷದವು' ಅಂದ ತಿಪ್ಪಣ್ಣ.

'ಸಮಾಜದಲ್ಲಿ ನಡೀತಿರೋ ಘಟನೆಗಳನ್ನು ನೋಡಿದ್ರೆ ಗೊತ್ತಾತದೆ. ನಮ್ಮ ಕತೆ ಯಂಗ್ಲಾ?' ಅಂತಂದೆ.

'ಸುಮ್ಮಗಿರೋದು ಪಾಟ ಮಾಡಿಕಂದಿರೋ ನಾವು ಸಾಕಿದ ನಾಯಿಗಳಿದ್ದಂಗೆ. ಗ್ಯಾರಂಟಿ ಬಿಸ್ಕತ್ತು ಇಸುಗಂದು ಅಮಿಕ್ಕಂದಿರಬಕು. ಸರ್ಕಾರಿ ನಾಯಿಗಳು ಕಂಡೇಟಿಗೆ ಕಾಲೂರಿ ನಡ ಬಗ್ಗಿಸಿ ಗೌರವ ಕೊಡಬಕು' ತಿಪ್ಪಣ್ಣನ ಭವಿಷ್ಯ ಭೀಕರವಾಗಿತ್ತು.

ತಿಪ್ಪಣ್ಣನ ಮಾತನ್ನು ಪೆಟ್ಟು ತಿಂದ ನಾಯಿಗಳಂತೆ ಮೌನವಾಗಿ ಅನುಮೋದಿಸಿದೆವು.

ಸಂಗತ

ಕ್ರಿಕೆಟ್ ಗೆಲುವಿನ ಸಂಭ್ರಮಕ್ಕೆ ಮಾತಿನ ಮಸಿ

ದಕ್ಷಿಣ ಆಫ್ರಿಕಾದ ಕೋಚ್ ಬಳಸಿದ 'ಗ್ರೋವೆಲ್' ಪದದ ಹಿಂದೆ ವಸಾಹತುಶಾಹಿಗಳ ದರ್ಪದ ಮನೋಭಾವ ಇದೆ. ಆ ಅನುಚಿತ ಪದ, ಕ್ರೀಡಾಸ್ಫೂರ್ತಿಗೂ ವಿರುದ್ಧ.

● ಶಿವಲಿಂಗಸ್ವಾಮಿ ಎಚ್.ಕೆ.

ಇತ್ತೀಚೆಗೆ ನಡೆದ ಕ್ರಿಕೆಟ್ ಟೆಸ್ಟ್ ಸರಣಿಯಲ್ಲಿ ದಕ್ಷಿಣ ಆಫ್ರಿಕಾ ತಂಡ ಭಾರತದ ವಿರುದ್ಧ ಗೆಲುವು ಸಾಧಿಸಿದ ನಂತರ, ವಿಜೇತ ತಂಡದ ಮುಖ್ಯ ಕೋಚ್ ಶುಕ್ರಿ ಕಾನ್ರಾಡ್ ಅವರು ಸುದ್ದಿಗಾರರ ಮುಂದೆ ಬಳಸಿದ 'ಗ್ರೋವೆಲ್' ಎಂಬ ಪದ ವಿವಾದ ಸೃಷ್ಟಿಸಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಒಂದು ಪದ ಕೆಲವೊಮ್ಮೆ ಮರೆತುಹೋದ ಇತಿಹಾಸದ ನೋವನ್ನು ನೆನಪಿಸಬಹುದು. ಅಂದರೆ, ಕೆಲವು ಪದಗಳು ಹಲವಾರು ರಾಜಕೀಯ, ಜನಾಂಗೀಯ, ಮತ್ತು ಸಾಂಸ್ಕೃತಿಕ ಸಂದರ್ಭಗಳ ಅನುಸಾರ ಹುಟ್ಟಿಕೊಂಡಿರುತ್ತವೆ. ಹಾಗಾಗಿ ಮೇಲ್ನೋಟಕ್ಕೆ ಕಾಣಿಸುವ ಅರ್ಥಕ್ಕಷ್ಟೇ ನಾವು ಸೀಮಿತವಾಗದೆ, ಪದದ ಹಿಂದಿನ ಹಲವಾರು ಒಳಾರ್ಥಗಳನ್ನೂ ಮನಸ್ಸಿನಲ್ಲಿ ಇಟ್ಟುಕೊಂಡು ಪದಗಳನ್ನು ಬಳಸಬೇಕು. ಪ್ರಾಯಶಃ ಇದೇ ಮಾತನ್ನು ಬಸವಣ್ಣ 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂದು ಹೇಳಿರಬಹುದು.

ದಕ್ಷಿಣ ಆಫ್ರಿಕಾ ತಂಡ ಸಾಧಿಸಿದ ಜಯಭೇರಿಯನ್ನು ಪದಗಳಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ ಕಾನ್ರಾಡ್ ಅವರು, ತಿಳಿದೋ ತಿಳಿಯದೆಯೋ 'ಗ್ರೋವೆಲ್' ಪದ ಬಳಸಿದರು. ಭಾರತ ತಂಡವನ್ನು ತಮ್ಮ ಮುಂದೆ ತಗ್ಗಿ ನಡೆಯುವಂತೆ ಬಗ್ಗು ಬಡಿಯುವುದು ತಮ್ಮ ತಂಡದ ಉದ್ದೇಶವಾಗಿತ್ತು ಎಂಬ ಅರ್ಥ ಸೂಚಿಸುವ ಕಾನ್ರಾಡ್ ಅವರ ಮಾತುಗಳು, ವಸಾಹತುಶಾಹಿ ಕಾಲದ ಜನಾಂಗೀಯ ಧೋರಣೆ ಮತ್ತು ವಸಾಹತುಶಾಹಿ ಅಹಂಕಾರದ ಅಭಿವ್ಯಕ್ತಿಯಂತಿತ್ತು.

ಅಂತರರಾಷ್ಟ್ರೀಯ ಕ್ರೀಡೆಗಳ ಉದ್ದೇಶವು ಸ್ಪರ್ಧೆ ಅಥವಾ ಗೆಲುವಿಗಷ್ಟೇ ಸೀಮಿತವಾಗಿರುವುದಿಲ್ಲ. ಕ್ರೀಡೆಯು ಹಲವು ಮಹತ್ವದ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪಾತ್ರಗಳನ್ನು ನಿಭಾಯಿಸುತ್ತದೆ. ಉಭಯ ದೇಶಗಳ ನಡುವೆ ನಡೆಯುವ ಕ್ರೀಡೆಯು ಪರಸ್ಪರ ಸ್ನೇಹ ಮತ್ತು ಸಹಕಾರವನ್ನು ಉತ್ತೇಜಿಸುತ್ತದೆ. ಕ್ರೀಡೆಗಳಲ್ಲಿ ಆಟಗಾರರ ಸಾಮರ್ಥ್ಯ ಮತ್ತು ಶ್ರೇಷ್ಠತೆಯ ಜೊತೆಗೆ ಅವರ ಮನೋಧೋರಣೆಯೂ ಪ್ರದರ್ಶನವಾಗುತ್ತದೆ. ಕ್ರೀಡಾ ವೇದಿಕೆಯಲ್ಲಿ ಮತ್ತು ಹೊರಜಗತ್ತಿನಲ್ಲಿ ಕ್ರೀಡಾಪ್ರೇಮಿಗಳು ತಮ್ಮ ನೆಚ್ಚಿನ ಆಟಗಾರರ ಮತ್ತು ಆ ಆಟಗಾರರನ್ನು ತರಬೇತು ಮಾಡುವವರನ್ನು ಗಮನಿಸಿ ಅವರಿಂದ ಕಲಿಯುತ್ತಿರುತ್ತಾರೆ. ಬಹಳಷ್ಟು ಬಾರಿ ಕ್ರೀಡಾಕೂಟಗಳು, ಆಟಗಾರರು ಮತ್ತು ಅಭಿಮಾನಿಗಳು ಪರಸ್ಪರ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಅರಿಯಲು ಸಹಾಯಕವಾಗುತ್ತವೆ. ಹೀಗಿರುವಾಗ, ಬರೀ ಒಂದು ಟೆಸ್ಟ್ ಸರಣಿಯನ್ನು ಜಯಿಸಿದ ಸಂತೋಷದ ಭರದಲ್ಲಿ ಹಿಂದೆಮುಂದೆ ನೋಡದೆ 'ಗ್ರೋವೆಲ್' ಪದ ಬಳಸಿದ್ದು ಶುಕ್ರಿ ಕಾನ್ರಾಡ್ ಅವರ ಕ್ರೀಡಾ ಮನೋಭಾವವನ್ನು ಪ್ರಶ್ನಿಸುವಂತೆ ಮಾಡುತ್ತದೆ. ಏಕೆಂದರೆ,



ಈ ಪದವು ವಸಾಹತುಗಾರರು ಸ್ಥಳೀಯರ ಕುರಿತು ತಮ್ಮ ಶ್ರೇಷ್ಠತೆಯನ್ನು ಮೆರೆಯುವ ಮತ್ತು ಸ್ಥಳೀಯರನ್ನು ಅಧೀನದಲ್ಲಿ ಇಟ್ಟುಕೊಳ್ಳುವ ಅರ್ಥದಲ್ಲಿ ಬಳಸುತ್ತಿದ್ದರು. ಈ ಪದದ ಮೂಲ ಉದ್ದೇಶ, ಮತ್ತೊಬ್ಬನನ್ನು ಗೌರವ ವಂಚಿತರನ್ನಾಗಿ ಮಾಡಿ ಅವರು ತಮಗೆ ವಿಧೇಯತೆಯನ್ನು ತೋರಿಸುವಂತೆ ಮಾಡುವುದು. ಈ ಪದವನ್ನು, ಗುಲಾಮರನ್ನು ಹೊಂದಿದ್ದ ಮಾಲೀಕರು, ಮಿಲಿಟರಿ ಅಧಿಕಾರಿಗಳು ಮತ್ತು ವಸಾಹತುಶಾಹಿ ದೊರೆಗಳು ಬಲಹೀನರನ್ನು ಉದ್ದೇಶಿಸಿ ಬಳಸುತ್ತಿದ್ದರು. ಇಷ್ಟೆಲ್ಲಾ ರಾಜಕೀಯ ಮತ್ತು ಜನಾಂಗೀಯ ದ್ವೇಷದ ಒಳಪದರಗಳಿರುವ ಪದವನ್ನು ಅಜಾಗರೂಕತೆಯಿಂದ ಬಳಸಿದ್ದನ್ನು ಶುಕ್ರಿ ಕಾನ್ರಾಡ್‌ರ ಪದಜ್ಞಾನದ ಕೊರತೆ ಎಂದು ಅರ್ಥೈಸಲಾಗುವುದಿಲ್ಲ.


ಗ್ರೋವೆಲ್ ಪದವು ವಿವಾದ ಸೃಷ್ಟಿ ಮಾಡುತ್ತಿರುವುದು ಇದು ಮೊದಲ ಸಲವಲ್ಲ. 1976ರಲ್ಲಿ ದಕ್ಷಿಣ ಆಫ್ರಿಕಾ ಮೂಲದ ಮತ್ತು ಇಂಗ್ಲೆಂಡ್ ತಂಡದ ನಾಯಕರಾಗಿದ್ದ ಟೋನಿ ಗ್ರೆಗ್ ಅವರು, ವೆಸ್ಟ್ ಇಂಡೀಸ್ ತಂಡವನ್ನು ಕುರಿತು 'ಗ್ರೋವೆಲ್' ಪದವನ್ನು ಬಳಸಿ, ಎದುರಾಳಿಗಳನ್ನು ಬಗ್ಗುಬಡಿಯುವ ಮಾತಾಡಿದ್ದರು. ಟೋನಿ ಗ್ರೆಗ್ ಅವರ ಹೇಳಿಕೆ ತೀಕ್ಷ್ಣ ಪ್ರತಿಕ್ರಿಯೆಯನ್ನು ಹುಟ್ಟುಹಾಕಿತ್ತು. ವೆಸ್ಟ್ ಇಂಡೀಸ್ ಆಟಗಾರರು, ಪತ್ರಕರ್ತರು ಮತ್ತು ಅಭಿಮಾನಿಗಳು ಆ ಹೇಳಿಕೆಯಿಂದ ನೋವನುಭವಿಸಿದರು. ಗುಲಾಮಗಿರಿ, ಅವಮಾನ ಮತ್ತು ಕಪ್ಪು ಜನಾಂಗದ ಅಧೀನತೆಗಳನ್ನು ಆ ಪದವು ನೆನಪಿಸಿತ್ತು. ಕ್ಲೈವ್ ಲಾಯ್ಡ್ ನೇತೃತ್ವದ ವೆಸ್ಟ್ ಇಂಡೀಸ್ ಆಟಗಾರರು ಅದನ್ನು ವೈಯಕ್ತಿಕ ಹಾಗೂ ಸಾಮೂಹಿಕ ಅವಮಾನ ಎಂದು ತೀವ್ರವಾಗಿ ಖಂಡಿಸಿದರು. ನಂತರ ವೆಸ್ಟ್ ಇಂಡೀಸ್ ಆಟಗಾರರು ಆ ಹೇಳಿಕೆಯನ್ನು ಪ್ರೇರಣೆಯಾಗಿ ಬಳಸಿಕೊಂಡು ಅತ್ಯಂತ ಶ್ರೇಷ್ಠ ಆಟವಾಡಿ, ಸರಣಿಯಲ್ಲಿ ಸಂಪೂರ್ಣ ಮೇಲುಗೈ ಸಾಧಿಸಿದರು.

ಪ್ರಸ್ತುತ ಶುಕ್ರಿ ಕಾನ್ರಾಡ್ ಅವರ ಹೇಳಿಕೆಯನ್ನು ಹಿರಿಯ ಕ್ರಿಕೆಟಿಗರಾದ ಅನಿಲ್ ಕುಂಬ್ಳೆ, ಪಾರ್ಥಿವ್ ಪಟೇಲ್, ಆಕಾಶ್ ಚೋಪ್ರಾ ಮತ್ತು ಸುನಿಲ್ ಗವಾಸ್ಕರ್ ಅವಮಾನಕಾರಿ ಮತ್ತು ಅನವಶ್ಯಕವೆಂದು ಟೀಕಿಸಿದ್ದಾರೆ. ದಕ್ಷಿಣ ಆಫ್ರಿಕಾದ ಮಾಜಿ ಆಟಗಾರ ಡೇಲ್ ಸ್ಟೇಯ್ನ್ ಕೂಡ ಆ ಹೇಳಿಕೆಗೆ ಆಘಾತ ವ್ಯಕ್ತಪಡಿಸಿದ್ದಾರೆ. ನಮ್ಮ ಮಾತುಗಳು ಸ್ಪರ್ಧಾ ಮನೋಭಾವವನ್ನು ತೋರಿಸಬೇಕೇ ಹೊರತು, ಮರೆಯಾಗಿರುವ ನೋವಿಗೆ ಮರುಜೀವ ಕೊಡಬಾರದು ಎಂದು ಹೇಳಿ ಕಾನ್ರಾಡ್ ಮಾತುಗಳನ್ನು ಖಂಡಿಸಿದ್ದಾರೆ.

ಭಾಷೆ ಎಂದಿಗೂ ಮುಗ್ಧವಾಗಿರುವುದಿಲ್ಲ ಮತ್ತು ಮನುಷ್ಯರ ಇತಿಹಾಸವನ್ನು ಶಾಶ್ವತವಾಗಿ ತನ್ನೊಳಗೆ ಹಿಡಿದಿಟ್ಟುಕೊಂಡಿರುತ್ತದೆ. ಹಾಗಾಗಿ, ಮಾತನಾಡುವ ಸಂದರ್ಭದಲ್ಲಿ ಪದಪ್ರಯೋಗದ ಬಗ್ಗೆ ಎಚ್ಚರಿಕೆ ಮತ್ತು ವಿವೇಕ ಅಗತ್ಯ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಹೆಚ್ಚು ಆದಾಯ ಹೊಂದಿರುವ ಪೋಷಕರ ಒಲವು ಖಾಸಗಿ ಶಾಲೆ, ಇಂಗ್ಲಿಷ್ ಮಾಧ್ಯಮ



ಪೋಷಕರ ಆಯ್ಕೆ ಈಗಲೂ ಸರ್ಕಾರಿ ಶಾಲೆ, ಆದರೆ..



ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳ ಬದಲಾಗಿ ಖಾಸಗಿ ಶಾಲೆಗಳಿಗೆ ಸೇರಿಸಲು ಇಚ್ಛಿಸುತ್ತಾರೆ ಎಂಬ ಮಾತು ಕೇಳಿಬರುತ್ತಿರುವ ಹೊತ್ತಿನಲ್ಲಿ ರಾಜ್ಯದ ಎಲ್ಲ ಶೈಕ್ಷಣಿಕ ಜಿಲ್ಲೆಗಳಲ್ಲಿ 14,149 ಪೋಷಕರನ್ನು ಸಂಪರ್ಕಿಸಿ ನಡೆಸಲಾದ ಅಧ್ಯಯನವು ಇದಕ್ಕೆ ಭಿನ್ನವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ

• ಪ್ರಮೋದ್ ಶ್ರೀಧರಮೂರ್ತಿ, ಸುಧೀರ ಎಚ್.ಎಸ್.

ಪೋಷಕರು ಸರ್ಕಾರಿ ಶಾಲೆಗಳನ್ನು ಬಿಟ್ಟು ಖಾಸಗಿ ಶಾಲೆಗಳತ್ತ ವಾಲುತ್ತಿದ್ದಾರೆ ಎಂಬ ಚರ್ಚೆಯು ಸಾರ್ವಜನಿಕ ಶಿಕ್ಷಣ ವಲಯದಲ್ಲಿ ಹಲವಾರು ವರ್ಷಗಳಿಂದ ನಡೆಯುತ್ತಿದೆ. ಶಾಲಾ ದಾಖಲಾತಿಯು ಕುಸಿಯುತ್ತಿರುವುದನ್ನು ಗಮನಿಸಿದಾಗ ಮೇಲ್ನೋಟಕ್ಕೆ ಇದು ಸತ್ಯ ಎಂದು ಕಂಡುಬರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಜತೆಗೆ, ಮಾಧ್ಯಮ ವರದಿಗಳು, ಶಿಕ್ಷಣ ಅಧಿಕಾರಿಗಳು ಮತ್ತು ಸಾರ್ವಜನಿಕ ಚರ್ಚೆಗಳಲ್ಲಿ ಆಗಾಗ್ಗೆ ಈ ಮಾತು ಕೇಳಿಬರುತ್ತಲೇ ಇರುತ್ತದೆ. ಹೀಗೆ ಪದೇ ಪದೇ ಹೇಳಿ, ಕೇಳಿ ಇದೊಂದು ಸಾಬೀತಾದ ಸತ್ಯದಂತೆ ಭಾಸವಾಗುತ್ತಿದೆ.

ಆದರೆ, ಕರ್ನಾಟಕದ 34 ಶೈಕ್ಷಣಿಕ ಜಿಲ್ಲೆಗಳಾದ್ಯಂತ 14,149 ಪೋಷಕರನ್ನು ಒಳಗೊಂಡ ಅಧ್ಯಯನವು ಈ ನಿರೂಪಣೆಯು ವಾಸ್ತವವಲ್ಲ ಎಂದು ಹೇಳುತ್ತದೆ. ಹೆಚ್ಚಿನ ಪೋಷಕರು ಇನ್ನೂ ಸರ್ಕಾರಿ ಶಾಲೆಗಳನ್ನೇ ಬಯಸುತ್ತಿದ್ದಾರೆ ಮತ್ತು ಕೆಲವು ನಿರ್ದಿಷ್ಟ ಪರಿಸ್ಥಿತಿಗಳ ಒತ್ತಡದಿಂದ ಮಾತ್ರ ಖಾಸಗಿ ಶಾಲೆಗಳ ಮೊರೆಹೋಗುತ್ತಿದ್ದಾರೆ ಎಂದು ಈ ಅಧ್ಯಯನದ ಫಲಿತಾಂಶಗಳು ಸ್ಪಷ್ಟವಾಗಿ ತಿಳಿಸುತ್ತವೆ.

ದತ್ತಾಂಶವು ಸ್ಪಷ್ಟವಾಗಿದೆ: ತಿಂಗಳಿಗೆ ₹10,000ಕ್ಕಿಂತ ಕಡಿಮೆ ಆದಾಯವಿರುವ ಕುಟುಂಬಗಳು ಸರ್ಕಾರಿ ಶಾಲೆಗಳತ್ತ ಬಲವಾದ ಒಲವು ತೋರುತ್ತಿವೆ. ಮಧ್ಯಮ ಆದಾಯದ ಕುಟುಂಬಗಳು ಸಹ– ಕೆಲವು ನಿರ್ದಿಷ್ಟ ಆತಂಕಗಳು ಹೆಚ್ಚಾಗಿ ಕಾಡುವವರೆಗೆ– ಸರ್ಕಾರಿ ಶಾಲೆಗಳನ್ನೇ ಆಯ್ಕೆ ಮಾಡಿಕೊಳ್ಳುತ್ತವೆ. ಉನ್ನತ ಆದಾಯದ ಕುಟುಂಬಗಳು ಮಾತ್ರ ಬಹುತೇಕ ಖಾಸಗಿ ಶಾಲೆಗಳತ್ತ ಮುಖ ಮಾಡುತ್ತವೆ. ಪೋಷಕರು ಸರ್ಕಾರಿ ಶಾಲಾ ಶಿಕ್ಷಣ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಕಳೆದುಕೊಂಡಿದ್ದಾರೆ ಎಂಬ ಕಲ್ಪನೆಯನ್ನು ಈ ಅಂಕಿಅಂಶಗಳು ಸುಳ್ಳಾಗಿಸುತ್ತವೆ. ಬದಲಾಗಿ, ಪೋಷಕರಿಗೆ ಸರ್ಕಾರಿ ಶಾಲಾ ಶಿಕ್ಷಣದ ವ್ಯವಸ್ಥೆ ಮೇಲೆ ಇನ್ನೂ ಬಲವಾದ ನಂಬಿಕೆ ಇದೆ; ಆದರೆ ಅದು ಸ್ವಲ್ಪ ದುರ್ಬಲವಾಗಿದೆ ಎಂದು ಅಧ್ಯಯನವು ಹೇಳುತ್ತದೆ.

ಪೋಷಕರು ಖಾಸಗಿ ಶಾಲೆಗಳನ್ನು ಆಯ್ಕೆ ಮಾಡಲು ಇರುವ ಪ್ರಬಲ ಕಾರಣಗಳಲ್ಲಿ ಒಂದು, ಇಂಗ್ಲಿಷ್ ಮಾಧ್ಯಮದ ಬೋಧನೆಗೆ ಇರುವ ಬೇಡಿಕೆ. ಈ ಆಯ್ಕೆಯು ಕೇವಲ ಸ್ಥಾನಮಾನ ಅಥವಾ ತೋರಿಕೆಯ ಆಧಾರದ ಮೇಲೆ ಇರುವುದಿಲ್ಲ. ಭವಿಷ್ಯದ ಅವಕಾಶಗಳಿಗೆ ಇಂಗ್ಲಿಷ್ ಅತ್ಯಗತ್ಯ ಎನ್ನುವುದು ಪೋಷಕರ ಅಭಿಪ್ರಾಯವಾಗಿದೆ. ಸರ್ಕಾರಿ ಶಾಲೆಗಳ ಹಲವು ಅಂಶಗಳ ಬಗ್ಗೆ ತೃಪ್ತರಾಗಿರುವ ಪೋಷಕರು ಕೂಡ ಇಂಗ್ಲಿಷ್ ಮಾಧ್ಯಮದ ಆಯ್ಕೆಗಳು ಲಭ್ಯವಿಲ್ಲದಿದ್ದರೆ ಶಾಲೆ ಬದಲಾಯಿಸಬೇಕು ಎಂದು ಭಾವಿಸುತ್ತಾರೆ.

ಮತ್ತೊಂದು ಅಂಶವೆಂದರೆ, ಬೋಧನೆಯ ಗುಣಮಟ್ಟದ ಬಗೆಗಿನ ಗ್ರಹಿಕೆ. ಸರ್ಕಾರಿ ಶಾಲಾ ಶಿಕ್ಷಕರು ಉತ್ತಮ ಅರ್ಹತೆ ಹೊಂದಿದ್ದರೂ ನಿಯಮಿತ ತರಬೇತಿ ಪಡೆಯುತ್ತಿದ್ದರೂ ಮತ್ತು ರಾಷ್ಟ್ರೀಯ ಮೌಲ್ಯಮಾಪನಗಳಲ್ಲಿ ಉತ್ತಮ ಸಾಧನೆ ತೋರುತ್ತಿದ್ದರೂ ಖಾಸಗಿ ಶಾಲೆಗಳಲ್ಲಿ ಉತ್ತಮ ಬೋಧನೆ ಇದೆ ಎಂದು ಅನೇಕ ಪೋಷಕರು ನಂಬಿದ್ದಾರೆ. ಪರಿಸ್ಥಿತಿ ಏಕೆ ಹೀಗಿದೆ ಎಂದರೆ, ಸರ್ಕಾರಿ ಶಾಲೆಗಳ ಸಾಮರ್ಥ್ಯಗಳು ಪೋಷಕರಿಗೆ ಗೋಚರಿಸುತ್ತಿಲ್ಲ. ಅವರು ತಮ್ಮ ಕಣ್ಣಿಗೆ ಕಾಣುತ್ತಿರುವುದರ ಆಧಾರದಲ್ಲಿ ಮಾತ್ರವೇ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದಾರೆ; ಅವರು ಸಮಯಪಾಲನೆ, ನೋಟ್‌ಬುಕ್ ಪರಿಶೀಲನೆ, ಹೋಮ್‌ವರ್ಕ್, ತರಗತಿಯಲ್ಲಿನ ಸುವ್ಯವಸ್ಥೆ ಮತ್ತು ನಿಯಮಿತ ಸಂವಹನವನ್ನು ಹೆಚ್ಚಾಗಿ ಗಮನಿಸುತ್ತಾರೆ.

ಜನರ ಕಣ್ಣಿಗೆ ಅಷ್ಟಾಗಿ ಕಾಣದ ಸರ್ಕಾರಿ ಶಾಲೆಗಳ ಸಕಾರಾತ್ಮಕ ಅಂಶಗಳನ್ನೂ ಅಧ್ಯಯನವು ದಾಖಲಿಸಿದೆ. ಬಹುತೇಕ ಪೋಷಕರು ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಹೆಚ್ಚು ಪ್ರಶಂಸಿಸುತ್ತಾರೆ. ಕ್ರೀಡಾ ಸೌಲಭ್ಯಗಳು ಮತ್ತು ಅವಕಾಶಗಳನ್ನು ಸಹ ಅವರು ಅಮೂಲ್ಯವೆಂದು ಪರಿಗಣಿಸುತ್ತಾರೆ. ಸರ್ಕಾರಿ ಶಾಲೆಗಳು ಪಠ್ಯಕ್ರಮವನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುತ್ತವೆ ಎಂದು ಮೂರನೇ ಎರಡರಷ್ಟು ಪೋಷಕರು ಹೇಳಿದ್ದಾರೆ. ಶಾಲೆಯ ಸಾಮೀಪ್ಯ ಮತ್ತು ಸುಲಭ ಲಭ್ಯತೆಯು ತಮ್ಮ ನಿರ್ಧಾರದ ಮೇಲೆ ಪ್ರಭಾವ ಬೀರಿದೆ ಎಂದು ಶೇ 34ರಷ್ಟು ಪೋಷಕರು ತಿಳಿಸಿದ್ದಾರೆ. ತರಬೇತಿ ಪಡೆದ ಶಿಕ್ಷಕರ ಉಪಸ್ಥಿತಿ ಮತ್ತು ಸುರಕ್ಷಿತ ವಾತಾವರಣ ಸಹ ಪೋಷಕರ ಗಮನ ಸೆಳೆದಿದೆ. ಈ ಸಕಾರಾತ್ಮಕ ಅಂಶಗಳ ಹೊರತಾಗಿಯೂ ಸರ್ಕಾರಿ ಶಾಲೆಗಳನ್ನು ಗುಣಮಟ್ಟದ ಸಾರ್ವಜನಿಕ ಸೇವೆಗಳ ಸಂಸ್ಥೆ ಎನ್ನುವುದಕ್ಕಿಂತ ಹೆಚ್ಚಾಗಿ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಭಾಗವಾಗಿರುವ ಸಂಸ್ಥೆಗಳೆಂದೇ ಪರಿಗಣಿಸಲಾಗುತ್ತದೆ.

ಶಿಕ್ಷಕರ ಕೊರತೆ: ಶಿಕ್ಷಕರ ಲಭ್ಯತೆಯು ಸರ್ಕಾರಿ ಶಾಲೆಗಳ ಮತ್ತೊಂದು ಪ್ರಮುಖ ಸಮಸ್ಯೆಯಾಗಿದೆ. ಶಿಕ್ಷಕರ ಕೊರತೆ, ಆಗಾಗ್ಗೆ ಶಿಕ್ಷಕರ ವರ್ಗಾವಣೆ ಅಥವಾ ಶಿಕ್ಷಕರ ನೇಮಕಾತಿಯಲ್ಲಿನ ಅನಿಶ್ಚಿತ ಸ್ಥಿತಿಯ ಬಗ್ಗೆ ಹತ್ತರಲ್ಲಿ ಏಳು ಪೋಷಕರು ಚಿಂತಿತರಾಗಿದ್ದಾರೆ. ಸರ್ಕಾರಿ ಶಿಕ್ಷಕರು ಗಮನಾರ್ಹ ಪ್ರಮಾಣದ ಬೋಧಕೇತರ ಕೆಲಸಗಳನ್ನು ನಿರ್ವಹಿಸುತ್ತಾರೆ. ಇದು ಬೋಧನೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ಹಲವರು ನಂಬಿದ್ದಾರೆ.

ಶೇ 71ರಷ್ಟು ಪೋಷಕರು ಬೋಧನೆಯ ಗುಣಮಟ್ಟವನ್ನು ಸಮಸ್ಯೆಯೆಂದು ಪಟ್ಟಿ ಮಾಡಿದ್ದಾರೆ. ಹೆಚ್ಚಿನವರಿಗೆ ಬೋಧನಾ ತಂತ್ರಗಳನ್ನು ಮೌಲ್ಯಮಾಪನ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಅವರು ಶಾಲಾ ಕಟ್ಟಡ, ತರಗತಿಯ ಸುವ್ಯವಸ್ಥೆ, ಹೋಮ್‌ವರ್ಕ್ ಮತ್ತು ಶಿಸ್ತಿನಂತಹ ಮೇಲ್ನೋಟದ ಅಂಶಗಳ ಮೇಲೆ ಅವಲಂಬಿತರಾಗುತ್ತಾರೆ. ಈ ದೃಷ್ಟಿಗೋಚರ ಸುಳಿವುಗಳು, ಅವು ಯಾವಾಗಲೂ ಆಳವಾದ ಶೈಕ್ಷಣಿಕ ಗುಣಮಟ್ಟವನ್ನು ಪ್ರತಿಬಿಂಬಿಸದಿದ್ದರೂ ನಂಬಿಕೆಯನ್ನು ರೂಪಿಸುತ್ತಿವೆ.

ದೈನಂದಿನ ಕಾರ್ಯನಿರ್ವಹಣೆಯೂ ಮುಖ್ಯವಾಗಿದೆ. ಖಾಸಗಿ ಶಾಲೆಗಳು ವೇಗವಾಗಿ ಸ್ಪಂದಿಸುತ್ತವೆ, ನಿಯಮಿತವಾಗಿ ಮಾಹಿತಿಯನ್ನು ಹಂಚಿಕೊಳ್ಳುತ್ತವೆ ಮತ್ತು ಸಂವಹನವನ್ನು ಸರಳವಾಗಿ ಇರಿಸುತ್ತವೆ ಎಂದು ಪೋಷಕರು ಭಾವಿಸುತ್ತಾರೆ. ಈ ವರ್ತನೆಯು ಪೋಷಕರನ್ನು ಸೆಳೆಯುತ್ತಿದ್ದು, ಇತರ ಪರಿಗಣನೆಗಳಿಗಿಂತ ಹೆಚ್ಚು ಮಹತ್ವದ್ದಾಗಿದೆ.

ಸುಮಾರು ಅರ್ಧದಷ್ಟು ಪೋಷಕರು, ಸರ್ಕಾರಿ ಶಾಲೆಗಳಲ್ಲಿ ಸಿಬಿಎಸ್‌ಇ ಅಥವಾ ಐಸಿಎಸ್‌ಇ ಆಯ್ಕೆಗಳ ಕೊರತೆಯು ತಮ್ಮ ನಿರ್ಧಾರದ ಮೇಲೆ ಪ್ರಭಾವ ಬೀರುತ್ತದೆ ಎಂದು ಹೇಳಿದ್ದಾರೆ. ಅನೇಕ ಪೋಷಕರು ಈ ಬೋರ್ಡ್‌ಗಳು ಎನ್‌ಸಿಇಆರ್‌ಟಿ ಪಠ್ಯಕ್ರಮವನ್ನೇ ಅನುಸರಿಸಿದರೂ ಅವುಗಳು ಉತ್ತಮ ಅವಕಾಶಗಳನ್ನು ನೀಡುತ್ತವೆ ಎಂದು ಭಾವಿಸುತ್ತಾರೆ. ಈ ಸಂಬಂಧದ ಜನರ ಗೊಂದಲ, ಆತಂಕವನ್ನು ನಿವಾರಿಸುವ ಕೆಲಸ ನಡೆದಿಲ್ಲ.

ಖಾಸಗಿ ಶಾಲೆಗಳಲ್ಲಿ ತಮ್ಮ ಮಾತಿಗೆ ಬೆಲೆ ಇದೆ ಎಂದು ಪೋಷಕರು ಭಾವಿಸುತ್ತಾರೆ. ಆದರೆ ಸರ್ಕಾರಿ ಶಾಲೆಗಳಲ್ಲಿ ಪೋಷಕರ ಮಾತಿಗೆ ಎಷ್ಟರ ಮಟ್ಟಿಗೆ ಬೆಲೆ ಇದೆ ಎಂಬುದರ ಬಗ್ಗೆ ಅನೇಕರಿಗೆ ಅನಿಶ್ಚಿತತೆಯಿದೆ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಂತಹ (ಎಸ್‌ಡಿಎಂಸಿ) ವ್ಯವಸ್ಥೆಗಳು ಅಸ್ತಿತ್ವದಲ್ಲಿದ್ದರೂ ಅವು ಯಾವಾಗಲೂ ಸಕ್ರಿಯ ಅಥವಾ ಅರ್ಥಪೂರ್ಣ ವೇದಿಕೆಗಳಾಗಿ ತೋರುತ್ತಿಲ್ಲ. ಪೋಷಕರಿಗೆ ತಮ್ಮ ಮಾತು ಕೇಳುವವರಿಲ್ಲ ಎಂದು ಅನಿಸಿದಾಗ, ಸರ್ಕಾರಿ ಶಾಲೆಗಳ ಕುರಿತ ಅವರ ನಂಬಿಕೆ ದುರ್ಬಲಗೊಳ್ಳುತ್ತದೆ.

ಪೋಷಕರು ಖಾಸಗಿ ಶಾಲೆಗಳನ್ನು ಏಕೆ ಆಯ್ಕೆ ಮಾಡುತ್ತಾರೆ ಎಂಬುದರ ಸುತ್ತಲಿನ ಕೆಲವು ಗ್ರಹಿಕೆಗಳು ಬಹುತೇಕ ತಪ್ಪಾಗಿ ಅರ್ಥೈಸಲ್ಪಟ್ಟಿವೆ ಎಂಬುದನ್ನು ಸಹ ಅಧ್ಯಯನ ಹೇಳುತ್ತದೆ. ಕೇವಲ ಸಣ್ಣ ಪ್ರಮಾಣದ ಪೋಷಕರು ಖಾಸಗಿ ಶಾಲಾ ಶಿಕ್ಷಣವನ್ನು ಸ್ಥಾನಮಾನದ ಆಯ್ಕೆ ಎಂದು ಪರಿಗಣಿಸುತ್ತಾರೆ. ಆದರೆ, ಹೆಚ್ಚಿನವರು ಇದನ್ನು ಒಪ್ಪುವುದಿಲ್ಲ. ಖಾಸಗಿ ಶಾಲೆಗಳತ್ತ ವಾಲುವುದು ಈ ಪೋಷಕರಿಗೆ ಇಮೇಜ್‌ಗಿಂತ ಹೆಚ್ಚಾಗಿ ವಾಸ್ತವಿಕ ಅಂಶಗಳ ವಿಚಾರವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಪೋಷಕರು ವಾಸ್ತವಿಕ ಪರಿಸ್ಥಿತಿಗಳ ಆಧಾರದ ಮೇಲೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಅಧ್ಯಯನದ ಫಲಿತಾಂಶಗಳು ತೋರಿಸುತ್ತವೆ. ಅವರು ಸರ್ಕಾರಿ ಶಾಲೆಗಳ ಸಾಮರ್ಥ್ಯಗಳನ್ನು ಗುರುತಿಸುತ್ತಾರೆ. ಆದರೆ ಸ್ಥಿರತೆ, ಭಾಷಾ ಅವಕಾಶಗಳು, ಸ್ಪಂದನೆ ಮತ್ತು ಬೋಧನೆಯ ಬಗ್ಗೆ ಚಿಂತಿತರಾಗಿದ್ದಾರೆ. ದೈನಂದಿನ ಜೀವನದಲ್ಲಿ ಸ್ಥಿರ ಮತ್ತು ಮೇಲ್ನೋಟದ ಅಂಶಗಳ ಆಧಾರದಲ್ಲಿ ಅವರು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ.

ಯಾರು, ಯಾವ ಶಾಲೆ ಆಯ್ಕೆ ಮಾಡಿಕೊಳ್ಳುತ್ತಾರೆ?

ತಿಂಗಳ ಆದಾಯ **₹10 ಸಾವಿರಕ್ಕಿಂತ** ಕಡಿಮೆ ಇರುವ ಮತ್ತು ಶಿಕ್ಷಣ ಪಡೆಯದ ಪೋಷಕರು ಉಚಿತ ಶಿಕ್ಷಣದ ಪರವಾದ ಅಭಿಪ್ರಾಯ ಹೊಂದಿದ್ದು, ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಬಯಸುತ್ತಾರೆ

98.4% ಈ ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವ ಸಾಧ್ಯತೆಯ ಪ್ರಮಾಣ

ಮಾಸಿಕ ಆದಾಯವು **₹10 ಸಾವಿರದಿಂದ ₹50 ಸಾವಿರದವರೆಗೆ** ಇರುವ ಮತ್ತು ಪಿಯುಸಿ ಅಥವಾ ಡಿಪ್ಲೊಮಾದವರೆಗೆ ಶಿಕ್ಷಣ ಪಡೆದಿರುವ ಪೋಷಕರು ಕೂಡ ಸರ್ಕಾರಿ ಶಾಲೆಗಳ ಪರವಾದ ನಿಲುವು ಹೊಂದಿದ್ದಾರೆ

77.7% ಈ ಆದಾಯದ ವ್ಯಾಪ್ತಿಗೆ ಬರುವ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವಾಗ ಸರ್ಕಾರಿ ಶಾಲೆಯನ್ನು ಆಯ್ಕೆ ಮಾಡುವ ಸಾಧ್ಯತೆಯ ಪ್ರಮಾಣ

ತಿಂಗಳಿಗೆ **₹50 ಸಾವಿರಕ್ಕಿಂತ** ಹೆಚ್ಚು ಆದಾಯ ಹೊಂದಿರುವ ಹಾಗೂ ಪದವಿ ಮತ್ತು ಅದಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದಿರುವ ಪೋಷಕರು ಖಾಸಗಿ ಶಾಲೆಗಳ ಪರವಾದ ನಿಲುವುದು ಹೊಂದಿದ್ದಾರೆ. ಮತ್ತು ಇಂಗ್ಲಿಷ್ ಮಾಧ್ಯಮ ಶಿಕ್ಷಣಕ್ಕೆ ಹೆಚ್ಚು ನೀಡುತ್ತಾರೆ

99.4% ಇಂತಹ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುವ ಸಾಧ್ಯತೆಯ ಪ್ರಮಾಣ

ಸರ್ಕಾರಿ ಶಾಲೆಗಳ ಸುಧಾರಣೆ ಹೇಗೆ?

ಈ ಅಧ್ಯಯನವು ಸರ್ಕಾರಿ ಶಾಲೆಗಳನ್ನು ಬಲಪಡಿಸಲು ಮತ್ತು ಪೋಷಕರ ವಿಶ್ವಾಸವನ್ನು ಹೆಚ್ಚಿಸಲು ಕೈಗೊಳ್ಳಬಹುದಾದ ನಿರ್ದಿಷ್ಟ ಕ್ರಮಗಳನ್ನು ಸೂಚಿಸುತ್ತದೆ.

ಮೊದಲನೆಯದು, ಇಂಗ್ಲಿಷ್ ಮಾಧ್ಯಮದ ಬೇಡಿಕೆಗೆ ಪ್ರಾಯೋಗಿಕ ವಿಧಾನವನ್ನು ಅನುಸರಿಸುವುದು. ಭಾಷೆಯ ಆಯ್ಕೆಯನ್ನು ಸಾಂಸ್ಕೃತಿಕ ಸಂಘರ್ಷವಾಗಿ ಬಿಂಬಿಸುವ ಬದಲು, ರಾಜ್ಯ ಸರ್ಕಾರವು ಆರಂಭಿಕ ತರಗತಿಗಳಲ್ಲಿ ಗಣಿತ ಮತ್ತು ವಿಜ್ಞಾನ ಪಠ್ಯಪುಸ್ತಕಗಳನ್ನು ದ್ವಿಭಾಷಾ ರೂಪದಲ್ಲಿ ನೀಡುವುದನ್ನು ಪರಿಗಣಿಸಬಹುದು. ಇದು ಮಕ್ಕಳಿಗೆ ಕನ್ನಡದಲ್ಲಿ ಪರಿಕಲ್ಪನಾ ಸ್ಪಷ್ಟತೆಯನ್ನು ನೀಡುತ್ತದೆ. ಅದೇ ಸಮಯದಲ್ಲಿ ಇಂಗ್ಲಿಷ್ ಪರಿಭಾಷೆಯನ್ನೂ ಪರಿಚಯಿಸುತ್ತದೆ. ಪ್ರೌಢಶಾಲೆಯಿಂದ, ವಿಶೇಷವಾಗಿ 9 ಮತ್ತು 10ನೇ ತರಗತಿಗಳಲ್ಲಿ, ಈ ವಿಷಯಗಳನ್ನು ಸಂಪೂರ್ಣವಾಗಿ ಇಂಗ್ಲಿಷ್‌ನಲ್ಲಿ ನೀಡಬಹುದು. ಈ ಹಂತಹಂತದ ವಿಧಾನವು ಪೋಷಕರಿಗೆ ಸರ್ಕಾರಿ ವ್ಯವಸ್ಥೆಯೊಳಗೇ ವಿಶ್ವಾಸಾರ್ಹ ಪರ್ಯಾಯವನ್ನು ಒದಗಿಸುತ್ತದೆ.

ಎರಡನೆಯದು, ಸರ್ಕಾರಿ ಶಾಲೆಗಳ ಸಾಮರ್ಥ್ಯಗಳನ್ನು ಮರುರೂಪಿಸುವುದು. ಉಚಿತ ಶಿಕ್ಷಣ, ಮಧ್ಯಾಹ್ನದ ಬಿಸಿ ಊಟ, ಕ್ರೀಡಾ ಸೌಲಭ್ಯಗಳು, ಸುಲಭ ಲಭ್ಯತೆ ಮತ್ತು ಪಠ್ಯಕ್ರಮ ಪೂರ್ಣಗೊಳಿಸುವುದನ್ನು ಕೇವಲ ಕಲ್ಯಾಣ ಕಾರ್ಯಕ್ರಮದ ಭಾಗವಾಗಿ ನೋಡದೇ, ಗುಣಮಟ್ಟದ ಮಾನದಂಡಗಳಾಗಿ ಪ್ರಸ್ತುತಪಡಿಸಬೇಕು. ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಕಲ್ಯಾಣ ಕಾರ್ಯಕ್ರಮದ ಭಾಗ ಎಂದು ನೋಡಿದಾಗ, ಪೋಷಕರು ಅವುಗಳ ಮೌಲ್ಯವನ್ನು ಕಡಿಮೆ ಅಂದಾಜುಮಾಡುತ್ತಾರೆ. ಉತ್ತಮ ಪೌಷ್ಟಿಕಾಂಶ ಕಾರ್ಯಕ್ರಮವು ಕಲಿಕೆಯನ್ನು ಬೆಂಬಲಿಸುತ್ತದೆ. ಸೌಲಭ್ಯಗಳ ಸುಲಭ ಲಭ್ಯತೆಯು ಸುರಕ್ಷತೆ ಮತ್ತು ಹಾಜರಾತಿಯನ್ನು ಖಚಿತಪಡಿಸುತ್ತದೆ. ಪಠ್ಯಕ್ರಮ ಪೂರ್ಣಗೊಳಿಸುವಿಕೆಯು ಶಿಸ್ತನ್ನು ಪ್ರತಿಬಿಂಬಿಸುತ್ತದೆ. ಇವು ಸವಲತ್ತುಗಳಲ್ಲ, ಪ್ರಯೋಜನಗಳು.

ಶಿಕ್ಷಕರ ಲಭ್ಯತೆ ವಿಚಾರದಲ್ಲಿ ಸುಧಾರಣೆಯ ಅಗತ್ಯವಿದೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಮುಖ್ಯ. ವರ್ಷವಿಡೀ ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಅಷ್ಟೇ ಮುಖ್ಯ. ಅತಿಥಿ ಶಿಕ್ಷಕರನ್ನು ವರ್ಷ ಪ್ರಾರಂಭವಾಗುವ ಮೊದಲೇ ನೇಮಿಸಲಾಗಿದೆಯೇ ಎಂದು ಖಚಿತಪಡಿಸುವುದು ಮತ್ತು ಅರ್ಹತಾ ಪರೀಕ್ಷೆಗಳಲ್ಲಿ (ಟಿಇಟಿ) ತೇರ್ಗಡೆಯಾದ ಅಭ್ಯರ್ಥಿಗಳಿಗೆ ಆದ್ಯತೆ ನೀಡುವುದರಿಂದ ಸ್ಪಷ್ಟ ವ್ಯತ್ಯಾಸವನ್ನು ತರಬಹುದು. ಶಾಲಾ ಮಟ್ಟದಲ್ಲಿ ಶಿಕ್ಷಕರ ಲಭ್ಯತೆಯ ಬಗ್ಗೆ ಸಾರ್ವಜನಿಕ ಪ್ರಕಟಣೆ ನೀಡುವ ಮೂಲಕ ಪೋಷಕರಿಗೆ ಪ್ರಗತಿಯನ್ನು ಮನದಟ್ಟು ಮಾಡಿಸಬಹುದು.

ದಿನನಿತ್ಯ ಜನರ ಕಣ್ಣಿಗೆ ಕಾಣುವ ಅಂಶಗಳು ಅವರ ಗ್ರಹಿಕೆಯನ್ನು ಬಲವಾಗಿ ರೂಪಿಸುತ್ತವೆ. ಸ್ವಚ್ಛ ತರಗತಿಗಳು, ಸಮರ್ಪಕ ಶೌಚಾಲಯಗಳು ಮತ್ತು ಮೂಲಭೂತ ಬೋಧನಾ ಸಾಮಗ್ರಿಗಳು ಪೋಷಕರಿಗೆ ಮುಖ್ಯ. ಸಿಎಸ್‌ಆರ್ (ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ) ನಿಧಿಯು ಕೆಲವೇ ಶಾಲೆಗಳಿಗೆ ಸಿಗುವ ಬದಲಿಗೆ ಹಲವು ಶಾಲೆಗಳಲ್ಲಿ ಕನಿಷ್ಠ ಮೂಲಸೌಕರ್ಯ ಕಲ್ಪಿಸಲು ಬಳಕೆ ಯಾಗಬೇಕು.

ಸಂವಹನವು ಕೂಡ ಸುಧಾರಣೆ ಕಾಣಬೇಕಾದ ಮತ್ತೊಂದು ಕ್ಷೇತ್ರವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಅಸ್ತಿತ್ವದಲ್ಲಿರುವ ಉಪಕ್ರಮಗಳು ಮತ್ತು ವಿದ್ಯಾರ್ಥಿ ಸಾಧನೆಗಳ ಬಗ್ಗೆ ಅನೇಕ ಪೋಷಕರಿಗೆ ಮಾಹಿತಿಯೇ ಇರುವುದಿಲ್ಲ. ಸಮುದಾಯ ಸಭೆಗಳ ಮೂಲಕ ಪೋಷಕರ ಗ್ರಹಿಕೆಯನ್ನು ಮರು ರೂಪಿಸಬಹುದು.

ಎಲ್ಲದರಲ್ಲೂ ಪೋಷಕರ ಪಾಲ್ಗೊಳ್ಳುವಿಕೆ ಮುಖ್ಯ. ಔಪಚಾರಿಕ ಪೋಷಕ–ಶಿಕ್ಷಕ ಸಭೆಗಳ ಹೊರತಾಗಿ, ಅನುಕೂಲಕರವಾದ ಪೋಷಕ–ಶಿಕ್ಷಕ ಸಭೆ ರೂಪಿಸಬಹುದು. ಪೋಷಕರಿಗೆ ಸೂಕ್ತ ತರಬೇತಿ ಮತ್ತು ಹೆಚ್ಚು ರಚನಾತ್ಮಕ ಒಳಗೊಳ್ಳುವಿಕೆಯ ಮೂಲಕ ಎಸ್‌ಡಿಎಂಸಿಗಳನ್ನು ಸಶಕ್ತಗೊಳಿಸಬಹುದು.

ಲೇಖಕರು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ದಿಸೆಯಲ್ಲಿ ಕೆಲಸ ಮಾಡುತ್ತಿರುವ ಇಂಡಿಯಾ ಲಿಟರಸಿ ಪ್ರಾಜೆಕ್ಟ್‌ನ ಭಾಗವಾಗಿದ್ದಾರೆ

ಸರ್ಕಾರಿ ಶಾಲೆಗಳಿಂದ ಪೋಷಕರು ನಿರೀಕ್ಷಿಸುವುದೇನು?

ಇಂಗ್ಲಿಷ್ ಮಾಧ್ಯಮ	83.63%
ಅರ್ಹತೆ ಪಡೆದಿರುವ ಶಿಕ್ಷಕರು	65.24%
ಅಗತ್ಯವಿರುವಷ್ಟು ಶಿಕ್ಷಕರು	62.92%
ಪಾಠ ಪೂರ್ಣಗೊಳಿಸುವುದು	58.70%
ಇತರೆ ಪಠ್ಯಕ್ರಮಗಳು	53.41%
ಪಠ್ಯೇತರ ಚಟುವಟಿಕೆಗಳು	51.19%
ಅಗತ್ಯದ ಮೂಲಸೌಕರ್ಯ	49.25%
ಪ್ರತ್ಯೇಕ ಶೌಚಾಲಯಗಳು	47.15%
ಶೌಚಾಲಯಗಳು	42.16%
ಕ್ರೀಡೆಯಲ್ಲಿ ಅವಕಾಶ	39.17%
ಮಧ್ಯಾಹ್ನದ ಬಿಸಿಯೂಟ	35.71%
ಶಾಲೆ ಸಾರಿಗೆ ವ್ಯವಸ್ಥೆ	30.41%
ಇತರ	10.27%

ಖಾಸಗಿ ಶಾಲೆಗಳಿಗೆ ದಾಖಲಾತಿ: ಪೋಷಕರು ಹೇಳಿದ್ದೇನು?

ಗುಣಮಟ್ಟದ ಬೋಧನೆ	86.58%
ಇಂಗ್ಲಿಷ್ ಮಾಧ್ಯಮ	85.46%
ಶಾಲೆಯ ಜನಪ್ರಿಯತೆ	64.37%
ಶಿಕ್ಷಕರ ಲಭ್ಯತೆ	64.37%
ಮೂಲಸೌಕರ್ಯ	63.65%
ಶಾಲೆ ಸಮೀಪದಲ್ಲಿರುವುದು	51.68%
ಪಠ್ಯೇತರ ಚಟುವಟಿಕೆಗಳು	49.54%
ಭವಿಷ್ಯದಲ್ಲಿನ ಅವಕಾಶಗಳು	40.45%
ಶಾಲೆಯ ಸಾರಿಗೆ ವ್ಯವಸ್ಥೆ	40.11%
ಇತರ ಪಠ್ಯಕ್ರಮಗಳು	35.39%
ಶಾಲಾ ಶುಲ್ಕ	33.98%

ಕರ್ನಾಟಕದ ಸರ್ಕಾರಿ ಶಾಲೆಗಳು ಸಾರ್ವಜನಿಕ ವಿಶ್ವಾಸವನ್ನು ಉಳಿಸಿಕೊಂಡಿವೆ ಎಂದು ಅಧ್ಯಯನವು ತೋರಿಸುತ್ತದೆ. ಆದರೆ, ಜನರ ಗ್ರಹಿಕೆ, ನಂಬಿಕೆ ಮತ್ತು ಮೇಲ್ನೋಟಕ್ಕೆ ಕಾಣುವ ಕೆಲವು ವಿಚಾರಗಳಲ್ಲಿ ವ್ಯತ್ಯಾಸಗಳಿವೆ. ಸೂಕ್ತ ಕ್ರಮಗಳನ್ನು ಅಳವಡಿಸಿಕೊಂಡು ಇವುಗಳನ್ನು ಪರಿಹರಿಸುವ ಮೂಲಕ ರಾಜ್ಯದಾದ್ಯಂತ ಪೋಷಕರಲ್ಲಿ ವಿಶ್ವಾಸವನ್ನು ಬಲಪಡಿಸಬಹುದು. ಪೋಷಕರು ಸರ್ಕಾರಿ ಶಾಲೆಗಳನ್ನು ತೊರೆಯುತ್ತಿದ್ದಾರೆ ಎಂಬ ಜನಪ್ರಿಯ ನಂಬಿಕೆಯು ಮೇಲ್ನೋಟಕ್ಕೆ ಕಾಣುವುದಕ್ಕಿಂತ ಹೆಚ್ಚು ಸಂಕೀರ್ಣವಾಗಿದೆ. ಸರ್ಕಾರಿ ವ್ಯವಸ್ಥೆಯು ಪೋಷಕರಲ್ಲಿ ವಿಶ್ವಾಸ ಮೂಡಿಸುವ ಈ ಕೆಲಸವನ್ನು ಸ್ಪಷ್ಟವಾಗಿ ಮತ್ತು ಸತತವಾಗಿ ಮಾಡುವುದೇ ಎನ್ನುವುದು ನಮ್ಮ ಮುಂದೆ ಇರುವ ಪ್ರಶ್ನೆಯಾಗಿದೆ.

ಪದಬಂಧ 6248


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ತೆಪ್ಪನೆ ಹೋಗುವಾಗ ಕಾಣಿಸಿದ ಧಾನ್ಯದ ಹೊಡೆ (2)
3.ಈತ ಹಾಸ್ಯಗಾರ (4)
5.ಪರುಷ ಹಿಡಿದಿರುವ ಗಂಡು ವ್ಯಕ್ತಿ! (3)
7.ಹಜಾರವನ್ನು ಹೀಗೂ ಹೇಳುವರು (4)
9.ಬೈಯ್ಯಲು ಸೂಕ್ತವಾದ ವಿಸ್ತಾರ ಜಾಗ! (3)
10.ಸರದ ಹತ್ತಿರವಿರುವ ಕಬ್ಬಿಣದ ಸಲಾಕೆ (3)
11.ಸೂರ್ಯನ ಇನ್ನೊಂದು ಹೆಸರು (4)
13.ನಡುಕ ಇಲ್ಲಿ ಕಾಣುತ್ತಿದೆ (3)
15.ಕರದಲ್ಲಿರುವ ಚಿನ್ನ (4)
16.ಅನುಗ್ರಹದಲ್ಲಿರುವ ಆಕಾಶಚರ ಕಾಣುತ್ತಿದೆಯೇ? (2)

ಮೇಲಿಂದ ಕೆಳಕ್ಕೆ

2.ಒನಪು ತೋರಿದಾಗ ಬಂದಿರುವ ಸ್ಮರಣೆ (3)
3.ಇತರರಿಂದ ಬೇರೆಯಾಗಿಸುವ ಗುಣ (3)
4.ಪರಿಷ್ಕೃತವಾಗದಿರುವ ಪ್ರತಿ (3)
6.ಮಾಲು ತರುವಾಗ ತಲೆಗೆ ಸುತ್ತಿಕೊಂಡ ಬಟ್ಟೆ (3)
8.ಛಾಯೆ ಇಲ್ಲಿ ಬಿದ್ದಿದೆ (3)
9.ಬದಿಯಲ್ಲಿರುವ ಜೈನರ ದೇವಾಲಯ (3)
10.ಹತ್ತಿರಕ್ಕೊಂದು ಪರ್ಯಾಯ ಪದ (3)
12.ತಿರುಗಿಸಿದರೂ ಇದು ಬಂಗಾರ (3)
13. ಕೊರಳು ಇಲ್ಲಿ ಕಾಣುತ್ತಿದೆ (3)
14.ಉಗುರಿನ ತುದಿ (3)



6247ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿಮಳ 5.ನವರಂಗ
6.ಶಿರಸಿ 9.ಹಣ
10.ಧಾವಂತ 11.ಬಣ
13.ನನಸು
15.ವಾತಾಯನ 17.ವ್ಯವಹಾರ

ಮೇಲಿಂದ ಕೆಳಕ್ಕೆ:
1.ಪದ 2.ಮಸೂರ
3.ಅವನಿ 4.ಹಗರಣ
6.ಶಿರಸ್ತ್ರಾಣ 7.ಸಿರಿಧಾನ್ಯ
8.ಮತದಾನ 9.ಹಸುಗೂಸು
11.ಬನವಾಸಿ 12.ಕಾಯಕ
14.ನದವ 16.ವರ

ಸುಡೊಕು 6632

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6		4	9		7			8
					6		2	
	7	8	2			4		6
7					8		6	
	8		4			7	3	5
		5		7				
4	9		3	8		6		1
	6					5		
8		7			4			3

6631 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ಸಾಮಾನ್ಯರ ಅಸಾಮಾನ್ಯತೆ

ನುಡಿ ಬೆಳಗು



ದೀಪಾ ಹಿರೇಗುತ್ತಿ

ವರ್ಣಭೇದ ನೀತಿಯೆಂಬುದು ಮನುಷ್ಯರನ್ನು ಪ್ರಾಣಿಗಳಂತೆ ನಡೆಸಿಕೊಳ್ಳುತ್ತಿದ್ದ ಒಂದು ವ್ಯವಸ್ಥೆ. ಜಗತ್ತಿನ ಅತ್ಯಂತ ಮುಂದುವರಿದ ರಾಷ್ಟ್ರವೆಂದು ಹೇಳಿಸಿಕೊಳ್ಳುವ ಅಮೆರಿಕ ಸಂಯುಕ್ತ ಸಂಸ್ಥಾನ ಈ ಅತ್ಯಂತ ಹೀನಾಯವಾದ ಪದ್ಧತಿಯನ್ನು ಕಳೆದ ಕೆಲವೇ ದಶಕಗಳ ಹಿಂದಿನವರೆಗೂ ಆಚರಿಸುತ್ತಿತ್ತು.

ಅಮೆರಿಕದ ರಾಜ್ಯ ಅಲಬಾಮಾದ ಸಾರ್ವಜನಿಕ ಬಸ್‌ಗಳಲ್ಲಿ ಒಂದು ನಿಯಮವಿತ್ತು. ಅದೇನೆಂದರೆ, ಬಸ್ಸಿನ ಮುಂದಿನ ಆಸನಗಳು ಬಿಳಿಯರಿಗಾಗಿ ಮೀಸಲಾಗಿದ್ದವು. ಕಪ್ಪು ವರ್ಣದ ಪ್ರಯಾಣಿಕರು ಬಸ್ಸಿನ ಹಿಂದಿನ ಆಸನಗಳಲ್ಲಿ ಕೂರಬೇಕಿತ್ತು. ಬಸ್ ಜನರಿಂದ ತುಂಬಿ ತುಳುಕಿದಾಗ ಕಪ್ಪು ಬಣ್ಣದವರು ತಮ್ಮ ಆಸನಗಳನ್ನು ಬಿಳಿಯರಿಗೆ ಬಿಟ್ಟು ಕೊಡಬೇಕಿತ್ತು. ಅಷ್ಟೇ ಅಲ್ಲ, ಮುಂದಿನ ಸೀಟುಗಳು ಖಾಲಿಯಿದ್ದರೂ ಅವರು ಅವುಗಳಲ್ಲಿ ಕುಳಿತುಕೊಳ್ಳುವ ಹಾಗಿರಲಿಲ್ಲ. ಈ ನಿಯಮ ಅಮೆರಿಕದ ದಕ್ಷಿಣದ ಹಲವಾರು ರಾಜ್ಯಗಳಲ್ಲಿ ಇತ್ತು.

1955ರ ಡಿಸೆಂಬರ್ ಒಂದನೇ ತಾರೀಕು ರೋಸಾ ಪಾರ್ಕ್ಸ್ ಎನ್ನುವ ಕಪ್ಪು ವರ್ಣದ ಮಹಿಳೆ ಅಲಬಾಮಾದ ರಾಜಧಾನಿ ಮೊಂಟ್ಗೊಮರಿಯಲ್ಲಿ ಬಸ್ಸಿನ ಹಿಂದಿನ ಭಾಗದ ಮೊದಲ ಸಾಲಿನ ಆಸನದಲ್ಲಿ ಕುಳಿತಿದ್ದರು. ಆಗ ತಾನೇ ಬಸ್ ಹತ್ತಿದ ಬಿಳಿಯರಿಗೆ ಸೀಟು ಕೊಡುವಂತೆ ರೋಸಾ ಮತ್ತು ಉಳಿದ ಮೂವರು ಪ್ರಯಾಣಿಕರಿಗೆ ಚಾಲಕ ಹೇಳಿದ. ಉಳಿದವರು ಎದ್ದು ಹಿಂದೆ ಹೋದರು. ಆದರೆ ರೋಸಾ ಎದ್ದೇಳಲು ನಿರಾಕರಿಸಿದರು. ತಾನು ಹಿಂದೆ ಹೋಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದರಾಕೆ. ಕಾನೂನು ಉಲ್ಲಂಘನೆ ಮಾಡಿದ್ದಕ್ಕೆ ಅವರನ್ನು ಬಂಧಿಸಲಾಯಿತು.

ರೋಸಾ ಅವರ ಬಂಧನ ಮೊಂಟ್ಗೊಮರಿಯ ಜನರಲ್ಲಿ ಜಾಗೃತಿಯನ್ನುಂಟು ಮಾಡಿತು. ರೋಸಾ ಅವರ ಶಾಂತಿಯುತ ಪ್ರತಿಭಟನೆ ಅವರ ಸಮುದಾಯದ ಜನರಲ್ಲಿ ಸ್ಫೂರ್ತಿ ತುಂಬಿ ಅವರು ಬಸ್ ಪ್ರಯಾಣವನ್ನೇ ಕೈಬಿಟ್ಟರು. ಅದೂ ಪೂರ್ತಿ ಒಂದು ವರ್ಷ. ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಈ ಪ್ರತಿಭಟನೆಯನ್ನು ಮುನ್ನಡೆಸಿದರು. ಜನರು ಓಡಾಟಕ್ಕೆ ಎಷ್ಟೇ ಕಷ್ಟವಾದರೂ ಪ್ರತಿಭಟನೆ ಕೈಬಿಡಲಿಲ್ಲ. 381 ದಿನಗಳ ನಂತರ ಅಮೆರಿಕದ ಸುಪ್ರೀಂ ಕೋರ್ಟ್, ಬಸ್‌ನಲ್ಲಿ ಆಸನಗಳ ಪ್ರತ್ಯೇಕತೆ ಅಸಾಂವಿಧಾನಿಕ ಎಂದು ತೀರ್ಪು ಕೊಟ್ಟಿತು. ರೋಸಾ ಪಾರ್ಕ್ಸ್ ಅವರ ಧೈರ್ಯದ ಕೆಚ್ಚಿನ ಮತ್ತು ಆತ್ಮವಿಶ್ವಾಸದ ಒಂದು ನಡೆ ಈ ಐತಿಹಾಸಿಕ ತೀರ್ಮಾನಕ್ಕೆ ಕಾರಣವಾಯಿತು. ದೇಶಾದ್ಯಂತ ಬದಲಾವಣೆ ಜಾರಿಗೆ ಬಂತು.

ಜಗತ್ತನ್ನು ಬದಲಾಯಿಸಲು ದೊಡ್ಡ ದೊಡ್ಡ ಕೆಲಸಗಳನ್ನೇ ಮಾಡಬೇಕೆಂದಿಲ್ಲ. ನಮಗೆ ಸರಿ ಅನ್ನಿಸದ ಸಂಗತಿಗಳನ್ನು ನಮ್ಮದೇ ಆದ ರೀತಿಯಲ್ಲಿ ವಿರೋಧಿಸಬಹುದು. ಅನ್ಯಾಯವೆಂದು ಅನ್ನಿಸಿದ ಕಡೆ ನಮ್ಮ ಧ್ವನಿ ಎತ್ತಬಹುದು. ಒಂಟಿ ಧ್ವನಿಯೂ ದೊಡ್ಡ ಪರಿಣಾಮ ಉಂಟು ಮಾಡಬಹುದು. ಹಲವಾರು ಜನರ ಬದುಕನ್ನು ಬದಲಾಯಿಸಬಹುದು. ಅಷ್ಟೇ ಅಲ್ಲ, ಈ ದೊಡ್ಡ ಪರಿಣಾಮ ಉಂಟು ಮಾಡುವ ಪುಟ್ಟ ಪುಟ್ಟ ಕೆಲಸಗಳನ್ನು ದೊಡ್ಡವರೇ ಮಾಡಬೇಕೆಂದೂ ಇಲ್ಲ. ನಮ್ಮ ನಿಮ್ಮಂತಹ ಸಾಮಾನ್ಯರೂ ಮಾಡಬಹುದು. ಬಲವಾದ ನೈತಿಕ ಮೌಲ್ಯಗಳನ್ನು ಹೊಂದಿದ ಅತ್ಯಂತ ಸಾಧಾರಣ ವ್ಯಕ್ತಿಗಳಿಗೆ ಕೂಡ ಪ್ರಭುತ್ವವನ್ನೇ ವಿರೋಧಿಸುವ ತಾಕತ್ತು ಇರುತ್ತದೆ. ಯುದ್ಧಗಳನ್ನು ಗೆಲ್ಲಲು ಕತ್ತಿ ಕೋವಿಗಳಿಂದ ಮಾತ್ರವಲ್ಲ ಅಹಿಂಸಾತ್ಮಕ ಮಾರ್ಗಗಳಿಂದಲೂ ಸಾಧ್ಯ ಎಂಬುದನ್ನು ಈ ಘಟನೆ ಸಾಬೀತು ಪಡಿಸಿತು. ರೋಸಾ ಅವರ ಈ ಮೌನ ಹೋರಾಟದ ಗೆಲುವು ಇಂದಿಗೂ ಒಂದು ಭರವಸೆಯ ಕಿರಣವಾಗುಳಿದಿದೆ. ಸ್ಫೂರ್ತಿಯ ಸೆಲೆಯೂ ಆಗಿದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

09 ಡಿಸೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಪಂಚಮಿ ಗಂ. 14-30 ನಕ್ಷತ್ರ: ಆಶ್ಲೇಷ ಗಂ. 26-23 ಯೋಗ: ಐಂದ್ರ ಗಂ. 14-33 ಕರಣ: ತೈತಿಲ ಗಂ. 14-30 ನಂತರ ಗರ 26-02 ವೃಶ್ಚಿಕ ಮಾಸದ 23 ನೇ ದಿನ. ಮಳೆ ನಕ್ಷತ್ರ : ಜ್ಯೇಷ್ಠ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 ಸೂರ್ಯೋದಯ : 06-46 ಸೂರ್ಯಾಸ್ತ : 06-00, ಮುಸ್ಲಿಂ ದಿನಾಂಕ : 17 ಜುಮಾದುಸ್ಸಾನಿ ,ಅದೃಷ್ಟ ಸಂಖ್ಯೆ : 6, 12

ಮೇಷ: ಅನಿರೀಕ್ಷಿತವಾಗಿ ಮನಸ್ಸಿನಲ್ಲಿದ್ದಂಥ ಅಸಮಾಧಾನಗಳೆಲ್ಲವೂ ಮಾತಿನಲ್ಲಿ ಹೊರಬರಲಿವೆ. ಪ್ರಾರ್ಥನೆಯು ದೇವರನ್ನು ತಲುಪಿತು ಎನ್ನುವಂತೆ ಅಭೀಷ್ಟಗಳು ನೆರವೇರಲಿವೆ. ಮರೆವಿನಿಂದ ಕಷ್ಟಗಳಾಗುವುದು.

ವೃಷಭ: ಯಾವುದೇ ವಿಷಯವನ್ನಾಗಲಿ ಅಧಿಕಾರಿಗಳಿಂದ ಒಂದಕ್ಕಿಂತ ಹೆಚ್ಚು ಬಾರಿ ಹೇಳಿಸಿಕೊಳ್ಳಬೇಡಿ. ತಿಳಿಯದೆ ಆದ ತಪ್ಪುಗಳಿಗೆ ಜೀವನ ಪರ್ಯಂತ ನೋವು ಅನುಭವಿಸಲಿದ್ದೀರಿ. ನಂಜು ನಿವಾರಕ ಆಹಾರವನ್ನು ಸೇವಿಸಿ.

ಮಿಥುನ: ಸಮಾರಂಭ ಒಂದರಲ್ಲಿ ಬಂದಂಥ ಉಡುಗೊರೆಗಳನ್ನು ನೋಡುವ ಸಾಧ್ಯತೆ ಇದೆ. ಉತ್ತಮ ಪ್ರತಿಜ್ಞೆಗಳೊಂದಿಗೆ ಶುರುವಾದ ಕಾರ್ಯ ಶುಭಫಲ ನೀಡುವುದು. ಕೃಷಿ ಚಟುವಟಿಕೆಗಳನ್ನು ಹೆಚ್ಚಿಸಿಕೊಳ್ಳಬಹುದು.

ಕರ್ಕಾಟಕ: ಬದಲಾವಣೆ ಅಲೆಯನ್ನು ನಿರೀಕ್ಷಿಸುತ್ತಿರುವ ನೀವು ಸಣ್ಣ ಸಣ್ಣ ವಿಷಯಗಳಲ್ಲಿ ನೀತಿಗಳನ್ನು ಅಳವಡಿಸಿಕೊಳ್ಳುವಿರಿ. ವಿವಿಧ ಸವಾಲುಗಳನ್ನು ಎದುರಿಸಬೇಕಾದ ಸಂದರ್ಭ ಬರುತ್ತದೆ.

ಸಿಂಹ: ಸಹೋದ್ಯೋಗಿಯ ನೆರವಿನಿಂದ ಕೆಲಸ ಕಾರ್ಯಗಳು ಅಚ್ಚುಕಟ್ಟಾಗಿ ಮನಸ್ಸಿಗೆ ಹಿತ ಕೊಡುವ ರೀತಿಯಲ್ಲಿ ಪೂರೈಸುವಿರಿ. ಅಧಿಕಾರಿಗಳ ವಿರುದ್ಧ ತಿರುಗಿಬೀಳಲಿದ್ದೀರಿ.

ಕನ್ಯಾ: ಜೀವನದಲ್ಲಿ ಸೋಮಾರಿತನ, ಜತೆಯಲ್ಲಿ ಅಹಂಕಾರವನ್ನು ದೂರ ಮಾಡಿದರೆ ಯೋಗ್ಯತೆಗೆ ಮೀರಿದ ಕೆಲಸಕಾರ್ಯಗಳಿಗೆ ಕೈಹಾಕಿದರೂ ಸಮಸ್ಯೆ ಆಗಲ್ಲ. ತಾಯಿಯ ಮನೆಯ ಆಸ್ತಿಗಾಗಿ ಆಸೆ ಪಡುವುದು ಸರಿಯಲ್ಲ.

ತುಲಾ: ರಾಜಕೀಯ ಭವಿಷ್ಯದಲ್ಲಿ ಉತ್ತಮ ಅವಕಾಶ ಸಿಕ್ಕಿದರೂ, ಕಾದು ನೋಡುವ ಪ್ರವೃತ್ತಿ ಉತ್ತಮ. ನಿಮ್ಮ ನಿರ್ಧಾರಗಳಲ್ಲಿ ಸ್ಥಿರತೆ ಬರುವವರೆಗೂ ಇತರರ ಮುಂದೆ ಪ್ರಸ್ತುತ ಪಡಿಸಬೇಡಿ.

ವೃಶ್ಚಿಕ: ಹಲವು ದಿನಗಳ ಬಳಿಕ ಕುಟುಂಬದ ಹಿರಿಯ ವ್ಯಕ್ತಿಗಳನ್ನು ಭೇಟಿಯಾಗಿ ಹೊಸ ವ್ಯವಹಾರ ಶುರುಮಾಡಲು ಆಶೀರ್ವಾದ ಪಡೆದುಕೊಳ್ಳುವಿರಿ. ದೇಹದ ಸೌಂದರ್ಯ ವರ್ಧನೆಗಾಗಿ ಹಣ ಖರ್ಚು ಮಾಡುವಿರಿ.

ಧನು: ಕಷ್ಟದಿಂದ ಸಂಪಾದನೆ ಮಾಡಿದ ಹಣವನ್ನು ಸರಿಯಾದ ವಿನಿಯೋಗಕ್ಕಾಗಿ ಬಹಳವಾಗಿ ಯೋಚಿಸುವಿರಿ. ದಾಂಪತ್ಯದಲ್ಲಿ ಆಗಾಗ ಸಮಸ್ಯೆಗಳು ತೋರಿಬಂದರೂ ಮುಂದಿನ ದಿನಗಳಲ್ಲಿ ಸಂತಸವಿದೆ.

ಮಕರ: ನಿಜವೆಂದು ತೋರುವ ಕೆಲವು ವಿಷಯಗಳು ಪರಾಮರ್ಶೆಯ ನಂತರ ಹುಸಿ ಎಂದು ತಿಳಿಯುವುದು. ಹೊಸ ವಿಚಾರಗಳನ್ನು ಸಹೋದರಿಯಿಂದ ಕಲಿಯಲು ಮುಂದಾಗುತ್ತೀರಿ. ಮಂಗಳಕಾರ್ಯಗಳಿಗೆ ಸಿದ್ಧತೆ ನಡೆಯಲಿದೆ.


ಕುಂಭ: ಮಕ್ಕಳು ಜೀವನದಲ್ಲಿ ಹಂತವನ್ನು ತಲುಪಿರುವುದನ್ನು ಯೋಚಿಸಿಕೊಂಡು ನೆಮ್ಮದಿ ಪಡುವಂತಾಗುವುದು. ಕೆಲವರು ಮಾಡುವ ಅನಾಹುತವನ್ನು ನಿಲ್ಲಿಸದೇ ಬೇರೆಯ ಹಾದಿ ಇಲ್ಲವಾಗಿರುತ್ತದೆ.

ಮೀನ: ಯಾವುದೇ ಸವಾಲುಗಳು ಎದುರಾದರೂ ಬುದ್ಧಿವಂತಿಕೆ ಹಾಗೂ ಧೈರ್ಯದಿಂದ ಎದುರಿಸುವಿರಿ. ಹಿರಿಯಲ್ಲಿ ತಪ್ಪಿಲ್ಲದಿದ್ದರೂ ವಯಸ್ಸಿಗೆ ಬೆಲೆ ಕೊಟ್ಟು ಕ್ಷಮೆಯನ್ನು ಕೇಳಿ. ಮಾತು ಕಡಿಮೆ ಆಡಿದಷ್ಟೂ ಒಳ್ಳೆಯದು.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	26,186
ಇಂದಿನ ಅಂತ್ಯ:	25,960
ದಿನದ ಕನಿಷ್ಠ:	25,892
	225

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹675
	12 ಕ್ಕೆ	₹96
ಮೈಸೂರು:	100 ಕ್ಕೆ	₹675

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹500-716
ದ್ವಿತಳಿ (ಬಿ.ವಿ)	₹425-930

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹175
ಗುಡ್ ಲಾಟ್	₹163

ಮುದ್ರೆ ಮನೆ ಕಾಫಿ (50 ಕೆಜಿಗೆ)

ಎಪಿ	₹28,500
ಎಸಿ	₹15,775
ಆರ್‌ಪಿ	₹18,800
ಆರ್‌ಸಿ	₹10,425

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1400-2600
ಮಧ್ಯಮ	₹800-1400
ಸಣ್ಣ	₹400-800

ಚಿಟಿಕೆ ಸುದ್ದಿ

‘ಚೀನಾಕ್ಕೆ ಪ್ರಯಾಣ: ಜಾಗರೂಕರಾಗಿರಿ’

ನವದೆಹಲಿ (ಪಿಟಿಐ): ಚೀನಾಕ್ಕೆ ಪ್ರಯಾಣಿಸುವಾಗ ಅಥವಾ ಚೀನಾ ಮೂಲಕ ಇತರ ದೇಶಗಳಿಗೆ ಪ್ರಯಾಣ ಬೆಳೆಸುವಾಗ ಸ್ವಂತ ವಿವೇಚನೆ ಬಳಸುವ ಜತೆಗೆ ಜಾಗರೂಕರಾಗಿರಿ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಸಲಹೆ ನೀಡಿದೆ.

ಅರುಣಾಚಲ ಪ್ರದೇಶದ ಮಹಿಳೆಯೊಬ್ಬರು ಶಾಂಘೈ ವಿಮಾನ ನಿಲ್ದಾಣದಲ್ಲಿ ಕಿರುಕುಳ ಅನುಭವಿಸಿದ ಘಟನೆ ನಡೆದ ಎರಡು ವಾರಗಳ ನಂತರ ಈ ಬೆಳವಣಿಗೆ ನಡೆದಿದೆ.

‘ಚೀನಾದ ವಿಮಾನ ನಿಲ್ದಾಣಗಳ ಮೂಲಕ ಪ್ರಯಾಣಿಸುವ ಭಾರತದ ನಾಗರಿಕರನ್ನು ಗುರಿಯಾಗಿಸುವುದಿಲ್ಲ, ಬಂಧಿಸುವುದಿಲ್ಲ, ಕಿರುಕುಳ ನೀಡುವುದಿಲ್ಲ. ಅಂತರರಾಷ್ಟ್ರೀಯ ನಿಯಮಗಳನ್ನು ಚೀನಾ ಗೌರವಿಸಲಿದೆ ಎಂದು ಅಲ್ಲಿನ ಅಧಿಕಾರಿಗಳು ಭರವಸೆ ನೀಡುವುದಾಗಿ ನಾವು ನಿರೀಕ್ಷಿಸುತ್ತೇವೆ’ ಎಂದು ವಿದೇಶಾಂಗ ವ್ಯವಹಾರಗಳ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದರು.

ವಾಹನ ಮಾರಾಟ: ತಗ್ಗದ ಉತ್ಸಾಹ

ನವೆಂಬರ್ ತಿಂಗಳಲ್ಲಿ ಪ್ರಯಾಣಿಕ ವಾಹನ ಮಾರಾಟ ಶೇ 20ರಷ್ಟು ಏರಿಕೆ



ನವದೆಹಲಿ (ಪಿಟಿಐ): ಹಬ್ಬಗಳ ಋತು ಮುಗಿದ ನಂತರವೂ ದೇಶದಲ್ಲಿ ವಾಹನ ಮಾರಾಟವು ಬಿರುಸು ಉಳಿಸಿಕೊಂಡಿದೆ. ನವೆಂಬರ್‌ನಲ್ಲಿ ಪ್ರಯಾಣಿಕ ವಾಹನಗಳ ಮಾರಾಟ ಪ್ರಮಾಣವು ಶೇ 20ರಷ್ಟು ಹೆಚ್ಚಳ ಕಂಡಿದೆ.

ಒಟ್ಟಾರೆಯಾಗಿ ನವೆಂಬರ್‌ನಲ್ಲಿ ವಾಹನಗಳ ನೋಂದಣಿ ಪ್ರಮಾಣವು ಶೇ 2ರಷ್ಟು ಹೆಚ್ಚಾಗಿದೆ. 2024ರ ನವೆಂಬರ್‌ನಲ್ಲಿ ದೇಶದಲ್ಲಿ ಒಟ್ಟು 32.31 ಲಕ್ಷ ವಾಹನಗಳ ಮಾರಾಟ ಆಗಿತ್ತು. ಈ ವರ್ಷದ ನವೆಂಬರ್‌ನಲ್ಲಿ ಅದು 33 ಲಕ್ಷಕ್ಕೆ ಏರಿಕೆ ಆಗಿದೆ ಎಂದು ಆಟೊಮೊಬೈಲ್ ಡೀಲರ್ ಸಂಘಗಳ ಒಕ್ಕೂಟ (ಎಫ್‌ಎಡಿಎ) ನೀಡಿರುವ ಅಂಕಿ–ಅಂಶಗಳು ತಿಳಿಸಿವೆ.

‘ಜಿಎಸ್‌ಟಿ ದರ ಪರಿಷ್ಕರಣೆ, ಕಂಪನಿಗಳು ಹಾಗೂ ಡೀಲರ್‌ಗಳು ನೀಡಿದ ಕೆಲವು ಕೊಡುಗೆಗಳ ಕಾರಣದಿಂದಾಗಿ ಗ್ರಾಹಕರು ವಾಹನ ಮಾರಾಟ ಮಳಿಗೆಗಳತ್ತ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದಾರೆ. ಇದರಿಂದಾಗಿ ಹಬ್ಬದ ಋತುವಿನ ನಂತರವೂ ಗ್ರಾಹಕರ ಸ್ಪಂದನ ಹೆಚ್ಚಿನ ಮಟ್ಟದಲ್ಲಿಯೇ ಇದೆ’ ಎಂದು ಎಫ್‌ಎಡಿಎ ಅಧ್ಯಕ್ಷ ಸಿ.ಎಸ್. ವಿಘ್ನೇಶ್ವರ ತಿಳಿಸಿದ್ದಾರೆ.

ಹಬ್ಬಗಳು ಮುಗಿದ ನಂತರದಲ್ಲಿ ವಾಹನ ಮಾರಾಟವು ಸಾಮಾನ್ಯವಾಗಿ ಕಡಿಮೆ ಆಗುತ್ತದೆ. ಆದರೆ ಈ ವರ್ಷದ ನವೆಂಬರ್ ತಿಂಗಳು ಇದಕ್ಕೆ ಭಿನ್ನವಾಗಿದೆ. ಕಳೆದ ವರ್ಷವೂ ಹಬ್ಬಗಳ ಕಾರಣದಿಂದಾಗಿ ನವೆಂಬರ್‌ನಲ್ಲಿ ಮಾರಾಟ ಹೆಚ್ಚಿತ್ತು. ಆದರೆ ಈ ಬಾರಿಯ ಮಾರಾಟ ಪ್ರಮಾಣವು ಅದಕ್ಕಿಂತಲೂ ಜಾಸ್ತಿ ಆಗಿದೆ ಎಂದು ವಿಘ್ನೇಶ್ವರ ಹೇಳಿದ್ದಾರೆ.

ಈ ವರ್ಷದ ನವೆಂಬರ್‌ನಲ್ಲಿ 3.94 ಲಕ್ಷದಷ್ಟು ಪ್ರಯಾಣಿಕ ವಾಹನಗಳು ಮಾರಾಟ ಆಗಿವೆ. ಕಳೆದ ವರ್ಷದಲ್ಲಿ ಈ ಸಂಖ್ಯೆಯು 3.29 ಲಕ್ಷ ಆಗಿತ್ತು.

ಜಿಎಸ್‌ಟಿ ದರ ಪರಿಷ್ಕರಣೆಯ ಪ್ರಯೋಜನ, ವಿವಾಹ ಮುಹೂರ್ತಗಳು ಸಾಲು ಸಾಲು ಇದ್ದಿದ್ದು, ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಕಾಯುವ ಕೆಲವು ನಿರ್ದಿಷ್ಟ ಮಾದರಿಯ ವಾಹನ ಪೂರೈಕೆ ಉತ್ತಮವಾಗಿದ್ದುದು ಮಾರಾಟ ಹೆಚ್ಚಾಗಲು ಕಾರಣವಾಗಿವೆ ಎಂದು ಎಫ್‌ಎಡಿಎ ಹೇಳಿದೆ. ವಾಣಿಜ್ಯ ವಾಹನಗಳ ಮಾರಾಟ ಕೂಡ ಶೇ 20ರಷ್ಟು ಹೆಚ್ಚಾಗಿದೆ. ತ್ರಿಚಕ್ರ ವಾಹನಗಳ ಮಾರಾಟ ಪ್ರಮಾಣವು ಶೇ 24ರಷ್ಟು ಜಾಸ್ತಿ ಆಗಿದೆ.

ಆದರೆ ನವೆಂಬರ್‌ನಲ್ಲಿ ದ್ವಿಚಕ್ರ ವಾಹನಗಳ ರಿಟೇಲ್ ಮಾರಾಟವು ಶೇ 3ರಷ್ಟು ಇಳಿಕೆ ಕಂಡಿದೆ. ಇದೇ ಅವಧಿಯಲ್ಲಿ ಟ್ರ್ಯಾಕ್ಟರ್‌ಗಳ ಮಾರಾಟವು ಶೇ 57ರಷ್ಟು ಹೆಚ್ಚಾಗಿದೆ.

ಮಾರಾಟ ಹೆಚ್ಚಳದ ಸೂಚನೆ

ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿ ಸುಧಾರಿಸುತ್ತಿರುವುದು, ಅರ್ಥ ವ್ಯವಸ್ಥೆ ಪೂರಕವಾಗಿರುವುದು, ಹಿಂಗಾರು ಬಿತ್ತನೆ ಚೆನ್ನಾಗಿ ಇರುವುದು, ರೈತರ ವರಮಾನವು ಚೆನ್ನಾಗಿ ಇರುವ ಸೂಚನೆಗಳು ಇರುವುದು... ಇವೆಲ್ಲ ಒಳ್ಳೆಯ ಲಕ್ಷಣಗಳು. ಇವು ಹಾಗೂ ಇನ್ನೂ ಕೆಲವು ಅಂಶಗಳು ಟ್ರ್ಯಾಕ್ಟರ್ ಹಾಗೂ ಗ್ರಾಮೀಣ ಪ್ರದೇಶದಲ್ಲಿ ದ್ವಿಚಕ್ರ ವಾಹನಗಳ ಮಾರಾಟ ಹೆಚ್ಚಾಗುವ ಸೂಚನೆ ನೀಡುತ್ತವೆ ಎಂದು ಎಫ್‌ಎಡಿಎ ಹೇಳಿದೆ.

ಸುದ್ದಿ 2 ನಿಮಿಷ

ವಿದೇಶಿ ಹೂಡಿಕೆ ಹಿಂದಕ್ಕೆ, ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಸತತ ಎರಡು ದಿನಗಳ ವಹಿವಾಟಿನಲ್ಲಿ ಏರಿಕೆ ದಾಖಲಿಸಿದ್ದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಕುಸಿತ ಕಂಡವು.

ವಿದೇಶಿ ಹೂಡಿಕೆದಾರರು ಷೇರು ಮಾರಾಟಕ್ಕೆ ಗಮನ ನೀಡಿದ್ದು ಹಾಗೂ ಕೆಲವು ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಷೇರುಗಳನ್ನು ಮಾರಾಟ ಮಾಡಲು ಮುಂದಾಗಿದ್ದುದು ಈ ಕುಸಿತಕ್ಕೆ ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಅಮೆರಿಕದ ಫೆಡರಲ್ ರಿಸರ್ವ್ ಈ ವಾರ ತನ್ನ ಹಣಕಾಸಿನ ನೀತಿಯನ್ನು ಪ್ರಕಟಿಸಲಿದೆ. ಈ ಹಿನ್ನೆಲೆಯಲ್ಲಿ ಹೂಡಿಕೆದಾರರು ರಿಸ್ಕ್ ತೆಗೆದುಕೊಳ್ಳಲು ತುಸು ಹಿಂದೇಟು ಹಾಕಿದರು. ಇದು ಕೂಡ ಸೂಚ್ಯಂಗಳ ಮೇಲೆ ಪರಿಣಾಮ ಬೀರಿತು ಎಂದು ತಜ್ಞರು ಹೇಳಿದ್ದಾರೆ.



ಮುಂಬೈ ಷೇರುಪೇಟೆಯ (ಬಿಎಸ್‌ಇ) ಸೆನ್ಸೆಕ್ಸ್ ಸೋಮವಾರದ ವಹಿವಾಟಿನಲ್ಲಿ 609 ಅಂಶ ಕುಸಿದಿದೆ. ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ನಿಫ್ಟಿ ಸೂಚ್ಯಂಕವು 225 ಅಂಶ ಇಳಿಕೆ ಕಂಡಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 90.11ಕ್ಕೆ ಇಳಿದಿದೆ.

ಶೇ 15ರಷ್ಟು ಜನಧನ ಖಾತೆ ನಿಷ್ಕ್ರಿಯ: ಪಂಕಜ್ ಚೌಧರಿ

ನವದೆಹಲಿ (ಪಿಟಿಐ): ಜನಧನ ಯೋಜನೆಯ ಅಡಿಯಲ್ಲಿ ತೆರೆಯಲಾದ 15 ಕೋಟಿ ಖಾತೆಗಳು ನಿಷ್ಕ್ರಿಯವಾಗಿವೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಲೋಕಸಭೆಗೆ ಸೋಮವಾರ ಮಾಹಿತಿ ನೀಡಿದ್ದಾರೆ.

ಈ ಯೋಜನೆಯ ಅಡಿ ಒಟ್ಟು 57.07 ಕೋಟಿ ಖಾತೆಗಳನ್ನು ತೆರೆಯಲಾಗಿದೆ. ಈ ಪೈಕಿ ಶೇ 26ರಷ್ಟು ಖಾತೆಗಳು ನಿಷ್ಕ್ರಿಯವಾಗಿವೆ.

ಈ ವರ್ಷದ ಸೆಪ್ಟೆಂಬರ್ 30ರ ವೇಳೆಗೆ ದೇಶದ ಬ್ಯಾಂಕ್‌ಗಳು ಒಟ್ಟು 7.81 ಕೋಟಿ ಕಿಸಾನ್ ಕ್ರೆಡಿಟ್ ಕಾರ್ಡ್ ಖಾತೆಗಳನ್ನು ಹೊಂದಿದ್ದವು, ಇವುಗಳ ಮೂಲಕ ನೀಡಿರುವ ಸಾಲದಲ್ಲಿ ಒಟ್ಟು ₹10.39 ಲಕ್ಷ ಕೋಟಿ ಅವುಗಳಿಗೆ ಬರಬೇಕಿದೆ ಎಂದು ಬೇರೊಂದು ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ಚೌಧರಿ ತಿಳಿಸಿದ್ದಾರೆ.

ಸ್ಟ್ಯಾಂಡ್–ಅಪ್ ಇಂಡಿಯಾ ಯೋಜನೆಯ ಅಡಿಯಲ್ಲಿ ಬ್ಯಾಂಕ್‌ಗಳು ಒಟ್ಟು ₹62,791 ಕೋಟಿ ಮೊತ್ತದ 2.75 ಲಕ್ಷ ಸಾಲಗಳನ್ನು ನೀಡಿವೆ. ವಹಿವಾಟಿನ ಗಾತ್ರದ ಆಧಾರದಲ್ಲಿ ಭಾರತದ ಯುಪಿಐ ವ್ಯವಸ್ಥೆಯು ಜಗತ್ತಿನ ಅತಿದೊಡ್ಡ ರಿಟೇಲ್ ತ್ವರಿತ ಪಾವತಿ ವ್ಯವಸ್ಥೆ ಎಂದು ಐಎಂಎಫ್ ಹೇಳಿದೆ ಎಂದು ಸಚಿವರು ತಿಳಿಸಿದ್ದಾರೆ.

ಲೋಕಸಭೆಗೆ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಮಾಹಿತಿ

2027–28ಕ್ಕೆ ಮೊದಲು ಹೊಸ ನಮೂನೆ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಕಾಯ್ದೆ – 2025ಕ್ಕೆ ಅನುಗುಣವಾಗಿರುವ ಹೊಸ ಆದಾಯ ತೆರಿಗೆ ವಿವರ (ಐಟಿಆರ್) ನಮೂನೆಗಳನ್ನು 2027–28ನೇ ಹಣಕಾಸು ವರ್ಷಕ್ಕೆ ಮೊದಲೇ ಪ್ರಕಟಿಸಲಾಗುತ್ತದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಸೋಮವಾರ ಹೇಳಿದ್ದಾರೆ.

ಐಟಿಆರ್ ನಮೂನೆಗಳ ಸರಳೀಕರಣ ಕ್ಕೆ ಸಂಬಂಧಿಸಿದ ಸಿಬಿಡಿಟಿ ಸಮಿತಿಯು ತೆರಿಗೆ ತಜ್ಞರ ಜೊತೆ, ಸಂಸ್ಥೆಗಳ ಜೊತೆ ಹಾಗೂ ಆದಾಯ ತೆರಿಗೆ ಇಲಾಖೆಯ ಕೆಲವು ಅಧಿಕಾರಿಗಳ ಜೊತೆ ವ್ಯಾಪಕ ಸಮಾಲೋಚನೆ ನಡೆಸುತ್ತಿದೆ ಎಂದು ಅವರು ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಆಗಸ್ಟ್ 21ರಂದು ರಾಷ್ಟ್ರಪತಿಯವರ ಅಂಕಿತ ಪಡೆದಿರುವ ಆದಾಯ ತೆರಿಗೆ ಕಾಯ್ದೆ – 2025 ಮುಂದಿನ ಹಣಕಾಸು ವರ್ಷದ ಮೊದಲ ದಿನದಿಂದ (2026ರ ಏಪ್ರಿಲ್ 1) ಜಾರಿಗೆ ಬರಲಿದೆ. ಇದು ಈಗ ಚಾಲ್ತಿಯಲ್ಲಿ ಇರುವ ಆದಾಯ ತೆರಿಗೆ ಕಾಯ್ದೆ – 1961ರ ಬದಲಿಗೆ ಜಾರಿಗೊಳ್ಳುತ್ತದೆ.

ತ್ರೈಮಾಸಿಕ ಟಿಡಿಎಸ್ ನಮೂನೆ, ಐಟಿಆರ್ ನಮೂನೆ ಸೇರಿದಂತೆ ಹೊಸ ಕಾಯ್ದೆಯ ಅಡಿಯಲ್ಲಿ ಅಗತ್ಯವಿರುವ ಎಲ್ಲ ನಮೂನೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಹೊಸ ಕಾಯ್ದೆ ಜಾರಿಗೆ ಬಂದ ನಂತರದ ಮೊದಲ ತೆರಿಗೆ ವರ್ಷವಾದ 2026–27ಕ್ಕೆ ಸಂಬಂಧಿಸಿದ ಐಟಿಆರ್ ನಮೂನೆಗಳನ್ನು ಸಿದ್ಧಪಡಿಸಲಾಗುತ್ತಿದ್ದು, ಅವುಗಳನ್ನು 2027–28ಕ್ಕೆ ಮೊದಲು ಅಧಿಸೂಚನೆಯಲ್ಲಿ ಪ್ರಕಟಿಸಲಾಗುತ್ತದೆ ಎಂದು ಚೌಧರಿ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದ ಆದಾಯಕ್ಕೆ ಸಂಬಂಧಿಸಿದ ಐಟಿಆರ್ ನಮೂನೆಗಳನ್ನು ಸರಳೀಕರಿಸುವ ಕೆಲಸ ನಡೆಯುತ್ತಿದೆ, ಅವುಗಳನ್ನು 1961ರ ಕಾಯ್ದೆಗೆ ಅನುಗುಣವಾಗಿ ಅಧಿಸೂಚನೆಯಲ್ಲಿ ಪ್ರಕಟಿಸಲಾಗುತ್ತದೆ ಎಂದು ಸಚಿವರು ಹೇಳಿದ್ದಾರೆ.

ಅಮೆರಿಕ ಕಾರ್ಯತಂತ್ರಕ್ಕೆ ರಷ್ಯಾ ಮೆಚ್ಚುಗೆ

ಕೀವ್ (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಡಳಿತದ ನೂತನ ರಾಷ್ಟ್ರೀಯ ಭದ್ರತಾ ಕಾರ್ಯತಂತ್ರವನ್ನು ರಷ್ಯಾ ಭಾನುವಾರ ಸ್ವಾಗತಿಸಿದೆ.

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ವಕ್ತಾರ ಡಿಮಿಟ್ರಿ ಪೆಸ್ಕೋವ್ ಅವರು, ‘ಅಮೆರಿಕದ ಪರಿಷ್ಕೃತ ಕಾರ್ಯತಂತ್ರ ದಾಖಲೆಯು ರಷ್ಯಾದ ವಿಶಾಲ ದೃಷ್ಟಿಕೋನಕ್ಕೆ ತಕ್ಕಂತೆಯೇ ಇದೆ’ ಎಂದು ನೀಡಿರುವ ಹೇಳಿಕೆ ಆಧರಿಸಿ ರಷ್ಯಾದ ಟಾಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

‘ಮುಖಾಮುಖಿ, ಮಾತುಕತೆ ಹಾಗೂ ಉತ್ತಮ ಸಂಬಂಧ ಸ್ಥಾಪಿಸುವುದರ ಪರವಾದ ಪ್ರಯತ್ನಗಳ ವಿರುದ್ಧದ ಕೆಲ ಹೇಳಿಕೆಗಳೂ ಅಲ್ಲಿವೆ. ಉಕ್ರೇನ್ ವಿಚಾರವನ್ನು ಇತ್ಯರ್ಥಮಾಡಿಕೊಳ್ಳುವಲ್ಲಿ ಅಮೆರಿಕದ ಜೊತೆ ಮತ್ತಷ್ಟು ರಚನಾತ್ಮಕ ಸಹಕಾರ ಹೊಂದಲು ಇದು ದಾರಿ ಮಾಡಬಹುದು ಎಂದು ರಷ್ಯಾ ಭಾವಿಸುತ್ತದೆ’ ಎಂದಿದ್ದಾರೆ.

ಶ್ವೇತಭವನ ಶುಕ್ರವಾರ ಬಿಡುಗಡೆ ಮಾಡಿದ್ದ ರಾಷ್ಟ್ರೀಯ ಭದ್ರತಾ ಕಾರ್ಯತಂತ್ರದ ದಾಖಲೆಯಲ್ಲಿ ‘ಜಾಗತಿಕ ಬಹಿಷ್ಕೃತ’ ಎಂದು ಕರೆಸಿಕೊಂಡಿದ್ದ ರಷ್ಯಾದೊಂದಿಗೆ ಬಹಳ ವರ್ಷಗಳ ನಂತರ ಸಂಬಂಧ ಸುಧಾರಣೆಗೆ ಅಮೆರಿಕ ಬಯಸುತ್ತದೆ. ಯುದ್ಧವನ್ನು ಕೊನೆಗಾಣಿಸುವ ಅಮೆರಿಕದ ಪ್ರಮುಖ ಆಸಕ್ತಿಯು ರಷ್ಯಾದೊಂದಿಗೆ ಕಾರ್ಯತಂತ್ರಾತ್ಮಕ ಸ್ಥಿರತೆಯನ್ನು ಮರುಸ್ಥಾಪಿಸುವುದು ಕೂಡ ಆಗಿದೆ’ ಎಂದು ಹೇಳಿಕೊಂಡಿದೆ.

ರಷ್ಯಾ ದಾಳಿಗೆ 4 ಸಾವು: ಯುದ್ಧಕ್ಕೆ ಅಂತ್ಯ ಹಾಡಲು ಅಮೆರಿಕ ಮತ್ತು ಉಕ್ರೇನ್ ಅಧಿಕಾರಿಗಳು ಮೂರನೇ ದಿನ (ಭಾನುವಾರ) ಮಾತುಕತೆ ನಡೆಸಿದ್ದರು. ಅದೇ ದಿನ ಉಕ್ರೇನ್‌ನ ಮೇಲೆ ರಷ್ಯಾ ಡ್ರೋನ್ ಮತ್ತು ಶೆಲ್‌ಗಳನ್ನು ಬಳಸಿ ನಡೆಸಿದ ದಾಳಿಯಲ್ಲಿ ನಾಲ್ವರು ಮೃತಪಟ್ಟಿದ್ದರು. ಈ ಸಂದರ್ಭದಲ್ಲೇ ರಷ್ಯಾ ವಕ್ತಾರರು ಈ ಹೇಳಿಕೆ ನೀಡಿದ್ದಾರೆ.

ಶನಿವಾರ ರಾತ್ರಿ ಚೆರ್ನಿಹಿವ್‌ನ ಉತ್ತರ ಭಾಗದಲ್ಲಿ ಡ್ರೋನ್ ದಾಳಿಗೆ ವ್ಯಕ್ತಿಯೊಬ್ಬರು ಮೃತಪಟ್ಟಿದ್ದರು. ಕೈಗಾರಿಕಾ ನಗರ ಕ್ರೆಮಿನ್‌ಚುಕ್ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದರಿಂದ ಉಕ್ರೇನ್‌ನ ಬೃಹತ್ ತೈಲಾಗಾರಕ್ಕೆ ಹಾನಿಯಾಗಿತ್ತು.

ಖಾರ್ಕಿವ್ ಪ್ರಾಂತ್ಯದ ಮೇಲೆ ರಷ್ಯಾ ಸೇನಾ ಪಡೆಗಳು ಭಾನುವಾರ ಶೆಲ್ ದಾಳಿ ನಡೆಸಿದ್ದು ಮೂವರು ಮೃತಪಟ್ಟು, ಇತರೆ 10 ಮಂದಿ ಗಾಯಗೊಂಡಿದ್ದರು.

‘ಬೆಂಗಳೂರಿಗೆ ಹೈದರಾಬಾದ್ ಸ್ಪರ್ಧಿಯಲ್ಲ’

‘ತೆಲಂಗಾಣ ರೈಸಿಂಗ್’ ಸಮ್ಮೇಳನದಲ್ಲಿ ಡಿಕೆಶಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಐಟಿ ರಫ್ತಿನಲ್ಲಿ ಬೆಂಗಳೂರು ಶೇ 43ರಷ್ಟು ಪಾಲು ಹೊಂದಿದೆ. ತೆಲಂಗಾಣ ಈ ವಿಚಾರದಲ್ಲಿ ಕಡಿಮೆ ಇದ್ದರೂ ಈ ರಾಜ್ಯದ ದೂರದೃಷ್ಟಿ, ಆಲೋಚನೆ ಬಹಳ ದೊಡ್ಡದಾಗಿದೆ. ಕೆಲವರು, ಬೆಂಗಳೂರಿಗೆ ಹೈದರಾಬಾದ್ ಪ್ರತಿಸ್ಪರ್ಧಿ ಎಂದು ಬಿಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ನಾವು ಸ್ಪರ್ಧಿಗಳಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಹೈದರಾಬಾದ್‌ನಲ್ಲಿ ಸೋಮವಾರ ನಡೆದ ‘ತೆಲಂಗಾಣ ರೈಸಿಂಗ್’ ಜಾಗತಿಕ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ತೆಲಂಗಾಣವು ಬೆಂಗಳೂರು ಹಾಗೂ ಕರ್ನಾಟಕದ ಜೊತೆ ಸ್ಪರ್ಧಿಸುತ್ತಿದೆಯೇನೋ ಎಂದು ಅಂದುಕೊಂಡಿದ್ದೆ. ಆದರೆ ಜಾಗತಿಕ ಮಟ್ಟದಲ್ಲಿ ತೆಲಂಗಾಣ ಗುರುತಿಸಿಕೊಳ್ಳುತ್ತಿದೆ’ ಎಂದರು.

‘ಅಭಿವೃದ್ಧಿ ಎಂಬುದು ಮ್ಯಾಜಿಕ್ ಮೂಲಕ ಸಾಧಿಸುವುದಲ್ಲ, ಸುಸ್ಥಿರ ಯೋಜನೆ, ಪರಿಶ್ರಮ, ಪ್ರಾಮಾಣಿಕತೆಯಿಂದ ಸಾಧಿಸುವುದಾಗಿದೆ’ ಎಂದರು.



ಹೈದರಾಬಾದ್‌ನಲ್ಲಿ ಸೋಮವಾರ ನಡೆದ ‘ತೆಲಂಗಾಣ ರೈಸಿಂಗ್’ ಜಾಗತಿಕ ಸಮ್ಮೇಳನದಲ್ಲಿ ಡಿ.ಕೆ. ಶಿವಕುಮಾರ್ ಮಾತನಾಡಿದರು

‘ಈ ಸಮ್ಮೇಳನ ಭವಿಷ್ಯದ ಬಗ್ಗೆ ಚಿಂತನೆ ನಡೆಸಿದೆ. 10 ವರ್ಷಗಳ ನಂತರ ತೆಲಂಗಾಣದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಜನ ಆಯ್ಕೆ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಇಂದಿನಿಂದ ವಿಧಾನ ಮಂಡಲ ಅಧಿವೇಶನ ಶುರುವಾಗಿದ್ದರೂ ಇಲ್ಲಿಗೆ ಬಂದಿದ್ದೇನೆ. ಇಡೀ ದಕ್ಷಿಣ ಭಾರತ ತೆಲಂಗಾಣ ರಾಜ್ಯದ ಬೆನ್ನಿಗೆ ನಿಲ್ಲುವ ಮೂಲಕ ದೇಶದ ಪ್ರಗತಿಗೆ ಶ್ರಮಿಸಲಿದೆ. ನಾನು ಇಲ್ಲಿ ಕರ್ನಾಟಕದ ಉಪ ಮುಖ್ಯಮಂತ್ರಿಯಾಗಿ ಮಾತ್ರ ಬಂದಿಲ್ಲ. ದಕ್ಷಿಣ ಭಾರತದ ಧ್ವನಿಯಾಗಿ ಬಂದಿದ್ದೇನೆ. ದೇಶದ ಪ್ರಗತಿಯಲ್ಲಿ ದಕ್ಷಿಣ ಭಾರತದ ಕೊಡುಗೆ ಅಪಾರ’ ಎಂದರು.

‘ರೇವಂತ್ ರೆಡ್ಡಿ ಅವರ ನಾಯಕತ್ವದಲ್ಲಿ ಸಚಿವರು, ಅಧಿಕಾರಿಗಳು ಒಟ್ಟಿಗೆ ಶ್ರಮಿಸಿ, ತೆಲಂಗಾಣ ರಾಜ್ಯವನ್ನು ಜಾಗತಿಕ ಮಟ್ಟಕ್ಕೆ ಮುನ್ನಡೆಸಲಿದ್ದಾರೆ. ಇವರ ಬೆಂಬಲಕ್ಕೆ ಕರ್ನಾಟಕ ಸರ್ಕಾರ ನಿಲ್ಲಲಿದೆ’ ಎಂದೂ ಶಿವಕುಮಾರ್ ಹೇಳಿದರು.

ಗೀತೆಯ ಜಾಡು : ಜಗಳ ಜೋರು

ಮುಸ್ಲಿಂ ಲೀಗ್ ಓಲೈಕೆಗೆ ಹಾಡಿಗೆ ಕತ್ತರಿ: ಮೋದಿ

ಒಂದನೇ ಪುಟದಿಂದ...

ಆ ನಂತರ ನೆಹರೂ ಅವರು ಸುಭಾಷ್ ಚಂದ್ರ ಬೋಸ್‌ಗೆ ಪತ್ರ ಬರೆದು ಹಾಡಿನ ಹಿನ್ನೆಲೆ ಮುಸ್ಲಿಮರಲ್ಲಿ ದ್ವೇಷ ಬಿತ್ತಬಹುದು ಎಂದು ಹೇಳಿದ್ದರು. ನಂತರ ಪಕ್ಷವು ಬಂಕಿಮ್ ಚಂದ್ರ ಚಟರ್ಜಿಯವರ ಬಂಗಾಳದಲ್ಲಿ ಅಧಿವೇಶನ ಕರೆದಿತ್ತು. ಈ ನಡೆ ವಿರುದ್ಧ ದೇಶದಾದ್ಯಂತ ಜನರು ಪ್ರತಿಭಟಿಸಿದ್ದರು. ಆದರೆ, ಜಾತ್ಯತೀತತೆ ಮತ್ತು ಕೋಮು ಸಾಮರಸ್ಯದ ನೆಪದಲ್ಲಿ ಕಾಂಗ್ರೆಸ್ ವಂದೇ ಮಾತರಂ ವಿಷಯದಲ್ಲಿ ರಾಜಿ ಮಾಡಿಕೊಂಡಿತ್ತು. ಮುಸ್ಲಿಂ ಲೀಗ್ ಮುಂದೆ ಈ ರೀತಿ ಮಂಡಿಯೂರಿದ್ದು ದೇಶ ವಿಭಜನೆಗೂ ಕಾರಣವಾಯಿತು’ ಎಂದು ಅವರು ಆರೋಪಿಸಿದರು.

‘ಈ ಗೀತೆ ಎಷ್ಟು ಜನಪ್ರಿಯವಾಗಿದೆಯೆಂದರೆ ರಾಷ್ಟ್ರ ಗೀತೆಯಾಗಿ ಹೊರಹೊಮ್ಮಿದೆ ಎಂದು ಮಹಾತ್ಮಾ ಗಾಂಧೀಜಿ 1905ರಲ್ಲಿ ಪತ್ರ ಬರೆದಿದ್ದರು. ಜನಪ್ರಿಯ ಗೀತೆಗೆ ಅನ್ಯಾಯ ಸಂಭವಿಸಿದ್ದು ಏಕೆ. ಕಳೆದ ಶತಮಾನದಲ್ಲಿ ಅದಕ್ಕೆ ಏಕೆ ದ್ರೋಹ ಮಾಡಲಾಯಿತು. ಹಾಡಿನ ಕುರಿತ ಮಹಾತ್ಮ ಗಾಂಧಿಯವರ ಆಶಯಗಳನ್ನು ತಳ್ಳಿಹಾಕುವಷ್ಟು ಬಲಶಾಲಿಯಾಗಿದ್ದ ಆ ಶಕ್ತಿಗಳು ಯಾವುವು’ ಎಂದು ಅವರು ಪ್ರಶ್ನಿಸಿದರು.

‘ಗೀತೆಗೆ 50 ವರ್ಷ ತುಂಬಿದಾಗ ದೇಶವು ವಸಾಹತುಶಾಹಿಯ ಅಡಿಯಲ್ಲಿ ತತ್ತರಿಸುತ್ತಿತ್ತು. 100 ವರ್ಷವಾದಾಗ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾಗಿತ್ತು. ಆಗ ಸಂವಿಧಾನದ ಕತ್ತು ಹಿಸುಕಲಾಗಿತ್ತು. ದೇಶಭಕ್ತಿ ಹೊಂದಿದ್ದ, ರಾಷ್ಟ್ರಕ್ಕಾಗಿ ಪ್ರಾಣ ಸಮರ್ಪಿಸಲು ಸಿದ್ಧರಿದ್ದವರು ಜೈಲಿನಲ್ಲಿ ಬಂಧಿಗಳಾಗಿದ್ದರು’ ಎಂದು ಅವರು ಹೇಳಿದರು.

‘ತುರ್ತು ಪರಿಸ್ಥಿತಿಯು ನಮ್ಮ ಇತಿಹಾಸದಲ್ಲಿ ಒಂದು ಕರಾಳ ಅಧ್ಯಾಯವಾಗಿತ್ತು. ಈಗ ವಂದೇ ಮಾತರಂನ ಶ್ರೇಷ್ಠತೆಯನ್ನು ಪುನಃಸ್ಥಾಪಿಸಲು ನಮಗೆ ಅವಕಾಶ ಸಿಕ್ಕಿದೆ. ಆ ಅವಕಾಶವನ್ನು ಕಳೆದುಕೊಳ್ಳಲು ಬಿಡಬಾರದು’ ಎಂದು ಮೋದಿ ಸದನಕ್ಕೆ ತಿಳಿಸಿದರು.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ವಂದೇ ಮಾತರಂ ಇಡೀ ದೇಶಕ್ಕೆ ಶಕ್ತಿ ಮತ್ತು ಸ್ಫೂರ್ತಿ ನೀಡಿತು ಎಂದು ಮೋದಿ ಹೇಳಿದರು.

ಬಂಗಾಳ ಚುನಾವಣೆ ಹೊತ್ತಲ್ಲಿ ಗೀತೆ ನೆನಪು: ಪ್ರಿಯಾಂಕಾ

ಒಂದನೇ ಪುಟದಿಂದ...

‘ನೀವು ನೆಹರೂ ಬಗ್ಗೆ ಮಾತನಾಡುತ್ತಲೇ ಇರುವುದರಿಂದ ಒಂದು ಕೆಲಸ ಮಾಡೋಣ. ಆ ವಿಷಯದ ಕುರಿತ ಚರ್ಚೆಗೆ ಸರ್ಕಾರ ನಿರ್ದಿಷ್ಟ ಸಮಯ ನಿಗದಿಪಡಿಸಲಿ. 10 ಗಂಟೆ, 20 ಗಂಟೆ ಅಥವಾ 40 ಗಂಟೆಗಳು–ಈ ವಿಷಯವನ್ನು ಒಮ್ಮೆಲೇ ಇತ್ಯರ್ಥಪಡಿಸಬೇಕು. ನಂತರ ಬೆಲೆ ಏರಿಕೆ, ನಿರುದ್ಯೋಗ, ಮಹಿಳಾ ಸಮಸ್ಯೆಗಳು ಮತ್ತು ಪ್ರಧಾನ ಮಂತ್ರಿ ಕಚೇರಿಯಲ್ಲಿನ ಸಮಸ್ಯೆಗಳ ಕುರಿತು ಚರ್ಚೆಗಳನ್ನು ಕೈಗೆತ್ತಿಕೊಳ್ಳಬೇಕು’ ಎಂದು ಹೇಳಿದರು.

‘ವಂದೇ ಮಾತರಂ ಕುರಿತು ಚರ್ಚೆಗೆ ಎರಡು ಕಾರಣಗಳಿವೆ. ಒಂದು– ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಹತ್ತಿರ ಬರುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ, ನಮ್ಮ ಪ್ರಧಾನಿ ತಮ್ಮ ಪಾತ್ರಕ್ಕಾಗಿ ವೇದಿಕೆ ಸಿದ್ಧಪಡಿಸಲು ಬಯಸುತ್ತಿದ್ದಾರೆ. ಎರಡನೆಯದಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು, ದೇಶಕ್ಕಾಗಿ ತ್ಯಾಗ ಮಾಡಿದವರ ಮೇಲೆ ಹೊಸ ಆರೋಪಗಳನ್ನು ಹೊರಿಸಲು ಸರ್ಕಾರ ಬಯಸುತ್ತಿದೆ’ ಎಂದರು.

‘ವಂದೇ ಮಾತರಂ’ನ ಮೊದಲ ಎರಡು ಚರಣಗಳನ್ನು ರಾಷ್ಟ್ರ ಗೀತೆಯಾಗಿ ಮಾಡಲು ನಿರ್ಧರಿಸಿದ ಮಹಾತ್ಮ ಗಾಂಧಿ, ರವೀಂದ್ರ ನಾಥ್ ಟ್ಯಾಗೋರ್, ರಾಜೇಂದ್ರ ಪ್ರಸಾದ್, ಬಿ.ಆರ್. ಅಂಬೇಡ್ಕರ್, ಮೌಲಾನಾ ಅಬುಲ್ ಕಲಾಂ ಆಜಾದ್, ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಸುಭಾಷ್ ಚಂದ್ರ ಬೋಸ್ ಮತ್ತಿತರ ಸ್ವಾತಂತ್ರ್ಯ ಹೋರಾಟಗಾರರ ಬುದ್ಧಿವಂತಿಕೆಯನ್ನು ಮೋದಿ ಮತ್ತು ಬಿಜೆಪಿ ಅವಮಾನಿಸುತ್ತಿದೆ. ರಾಷ್ಟ್ರ ಗೀತೆಯು ಮೊಟಕುಗೊಳಿಸುವಿಕೆಯ ಬಲಿಪಶು ಎಂದು ಕರೆಯುವುದು ಆ ಮಹಾನ್ ನಾಯಕರಿಗೆ ಮಾಡಿದ ಅವಮಾನ’ ಎಂದರು.

> ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದವರು ಈಗ ವಂದೇ ಮಾತರಂನ ಮೌಲ್ಯಗಳ ಬಗ್ಗೆ ಮಾತನಾಡುತ್ತಿದ್ದಾರೆ. ಇಂದು ವಿಭಜಕ ಶಕ್ತಿಗಳು ಈ ಹಾಡನ್ನು ಬಳಸಿಕೊಂಡು ವಿಭಜನೆಗೆ ಪ್ರಯತ್ನಿಸುತ್ತಿವೆ. ಈ ವ್ಯಕ್ತಿಗಳು ಬ್ರಿಟಿಷರ ಒಡೆದು ಆಳುವ ನೀತಿಯನ್ನೇ ಅನುಸರಿಸುತ್ತಿದ್ದಾರೆ
>
> **ಅಖಿಲೇಶ್ ಯಾದವ್,** ಸಮಾಜವಾದಿ ಪಕ್ಷದ ಮುಖ್ಯಸ್ಥ

> ಸಾವರ್ಕರ್ ಜೈಲಿನಲ್ಲಿದ್ದಾಗ ಕ್ಷಮಾದಾನ ಅರ್ಜಿಗಳನ್ನು ಬರೆದರು. ತಾವು ಸ್ವಾತಂತ್ರ್ಯ ಪಡೆದುಕೊಂಡರು. ಆ ಸಮಯದಲ್ಲಿ, ಸೆಲ್ಯುಲಾರ್ ಜೈಲಿನಲ್ಲಿದ್ದ 585 ಕೈದಿಗಳಲ್ಲಿ 398 ಬಂಗಾಳಿಗಳು ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡರು. ಖುದಿರಾಮ್ ಬೋಸ್ ತಮ್ಮ ಪ್ರಾಣ ತ್ಯಾಗ ಮಾಡಿದಾಗ, ಇಂದಿನ ಆಡಳಿತ ಪಕ್ಷದ ಪೂರ್ವಜರು ಕ್ಷಮಾದಾನ ಅರ್ಜಿಗಳನ್ನು ಬರೆಯುವಲ್ಲಿ ನಿರತರಾಗಿದ್ದರು
>
> **ಕಾಕೋಲಿ ಘೋಷ್ ದಸ್ತಿದಾರ್,** ಟಿಎಂಸಿ ಸಂಸದೆ

> ಬಿಜೆಪಿಯ ಏಕೈಕ ಉದ್ದೇಶ ಜನರನ್ನು ಮತ್ತಷ್ಟು ವಿಭಜಿಸುವುದು. ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಅದನ್ನು ಮಾಡಲು ಬಯಸುತ್ತಿದ್ದಾರೆ. ಅವರಿಗೆ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ನಂಬಿಕೆ ಇದೆಯೇ ಮತ್ತು ಅವರು ಅದರಲ್ಲಿ ಭಾಗವಹಿಸಿದ್ದಾರೆಯೇ?
>
> **ಪಿ.ಸಂತೋಷ್,** ಸಿಪಿಐ ಸಂಸದ

> ಪ್ರಧಾನಿ ಮೋದಿ ಮಾತುಗಳು ಕಳಪೆ ದರ್ಜೆಯದ್ದು. ವಾಸ್ತವವಾಗಿ, ಮೋದಿ ಅಥವಾ ಗೃಹ ಸಚಿವ ಅಮಿತ್ ಶಾ ಮಾತ್ರವಲ್ಲ, ಬಿಜೆಪಿಯ ನಾಯಕರು ಬಂಗಾಳದ ದ್ವೇಷಿಗಳು
>
> **ಕಲ್ಯಾಣ್ ಬ್ಯಾನರ್ಜಿ,** ಟಿಎಂಸಿ ಸಂಸದ

ಗ್ರಾಹಕರಿಗೆ ದುಬಾರಿಯಾದ ಕೋಳಿ ಮೊಟ್ಟೆ

• ಖಲೀಲಅಹ್ಮದ ಶೇಖ

ಬೆಂಗಳೂರು: ಮಾರುಕಟ್ಟೆಯಲ್ಲಿ ಕೋಳಿ ಮೊಟ್ಟೆಯ ದರ ಹೆಚ್ಚಾಗಿದೆ. ಕೆಲವು ದಿನಗಳ ಹಿಂದೆ ₹6ಕ್ಕೆ ಮಾರಾಟವಾಗುತ್ತಿದ್ದ ಒಂದು ಮೊಟ್ಟೆ ಈಗ ₹8ಕ್ಕೆ ಮಾರಾಟವಾಗುತ್ತಿದ್ದು, ಗ್ರಾಹಕರಿಗೆ ಹೊರೆಯಾಗಿದೆ.

ಸಾಮಾನ್ಯವಾಗಿ ಚಳಿಗಾಲದಲ್ಲಿ ಮೊಟ್ಟೆಗೆ ಹೆಚ್ಚು ಬೇಡಿಕೆ ಇರುತ್ತದೆ. ಇದರಿಂದ ಮಾರಾಟ ಹೆಚ್ಚಾಗುವ ಜೊತೆಗೆ ದರವೂ ಏರಿಕೆಯಾಗುತ್ತದೆ. ಕಳೆದ ಕೆಲ ದಿನಗಳಿಂದ ಮೊಟ್ಟೆಯ ದರ ಏರಿಕೆಯಾಗುತ್ತಿದೆ. ನಗರದ ವಿವಿಧ ಮಾಲ್ ಹಾಗೂ ಆನ್‌ಲೈನ್ ಖರೀದಿ ವೇದಿಕೆಗಳಲ್ಲಿ ಒಂದು ಮೊಟ್ಟೆ ದರ ₹6.95 ರಿಂದ ₹7.50 ಇದೆ. ನಗರದ ವಿವಿಧ ಪ್ರದೇಶಗಳ ಕಿರಾಣಿ ಅಂಗಡಿಗಳಲ್ಲಿ ₹7.50ರಿಂದ ₹8ಕ್ಕೆ ಮಾರಾಟವಾಗುತ್ತಿದೆ.

ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಸಂದರ್ಭದಲ್ಲಿ ಕೇಕ್ ತಯಾರಿಸಲು ಮೊಟ್ಟೆಯನ್ನು ಬಳಸಲಾಗುತ್ತದೆ. ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಮೊಟ್ಟೆ ಪೂರೈಕೆಯಾಗದ ಕಾರಣ ದರ ಹೆಚ್ಚಳವಾಗಿದೆ. ಜೊತೆಗೆ ಕಳೆದ ವರ್ಷ ಹಕ್ಕಿ ಜ್ವರ ಬಂದಿದ್ದರಿಂದ ಕೋಳಿಗಳ ಸಾಕಾಣಿಕೆ ಮಾಡುವವರ ಸಂಖ್ಯೆ ಕಡಿಮೆಯಾಗಿದೆ. ಹೀಗಾಗಿ ಮೊಟ್ಟೆಗಳ ಕೊರತೆ ಉಂಟಾಗಿದೆ ಎಂದು ಮೊಟ್ಟೆ ವ್ಯಾಪಾರಸ್ಥರು ತಿಳಿಸಿದರು.

‘ರಾಜ್ಯದಲ್ಲಿ ನಿತ್ಯ 2.20 ಕೋಟಿ ಮೊಟ್ಟೆ ಉತ್ಪಾದನೆ ಆಗುತ್ತದೆ. ಇದರಲ್ಲಿ ಗೋವಾ, ಮಹಾರಾಷ್ಟ್ರ, ಕೇರಳಕ್ಕೆ ಪೂರೈಸಲಾಗುತ್ತದೆ. ಮೊಟ್ಟೆಯ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಲು ನಿತ್ಯ 11 ಲಕ್ಷ ಮೊಟ್ಟೆ ಬಳಕೆಯಾಗುತ್ತದೆ. ಇದರ ಜೊತೆಗೆ ತಮಿಳುನಾಡಿನ ನಾಮಕ್ಕಲ್‌ನಿಂದ ರಾಜ್ಯಕ್ಕೆ ಸುಮಾರು 50 ಲಕ್ಷ ಮೊಟ್ಟೆಗಳ ಪೂರೈಕೆ ಆಗುತ್ತಿತ್ತು. ಈಗ ಅದು ಕಡಿಮೆ ಆಗಿದೆ’ ಎಂದು ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿ (ಎನ್‌ಇಸಿಸಿ) ಮಾರುಕಟ್ಟೆ ಅಭಿವೃದ್ಧಿ ಅಧಿಕಾರಿ ಶೇಷನಾರಾಯಣ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೊಟ್ಟೆ ದರ ಏರಿಕೆಯಿಂದ ಹೋಟೆಲ್ ಮತ್ತು ಬೇಕರಿ ಉದ್ಯಮದ ಮೇಲೆ ಪರಿಣಾಮ ಬೀರಲಿದೆ. ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಸಮೀಪಿಸು ತ್ತಿದ್ದು, ದರ ನಿಯಂತ್ರಣವಾಗದಿದ್ದರೆ ಕೇಕ್ ದರವೂ ಹೆಚ್ಚಾಗಲಿದೆ’ ಎಂದು ಶೇಷಾದ್ರಿಪುರದ ಬೇಕರಿ ವ್ಯಾಪಾರಿಯೊಬ್ಬರು ತಿಳಿಸಿದರು.

‘ನಿತ್ಯ 1 ಕೋಟಿ ಮೊಟ್ಟೆ ರಫ್ತು’

‘ತಮಿಳುನಾಡಿನ ನಮಕ್ಕಲ್‌ನಿಂದ ನಿತ್ಯ 1 ಕೋಟಿಗೂ ಹೆಚ್ಚು ಮೊಟ್ಟೆಗಳನ್ನು ಅಮೆರಿಕ, ದುಬೈ, ಸೇರಿದಂತೆ ವಿವಿಧ ದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ನಮಕ್ಕಲ್‌ನಿಂದ ಬೆಂಗಳೂರಿಗೆ ನಿತ್ಯ 45 ಲಕ್ಷ ಮೊಟ್ಟೆ ಪೂರೈಕೆ ಮಾಡಲಾಗುತ್ತಿತ್ತು. ಚಳಿಗಾಲದಲ್ಲಿ ಮೊಟ್ಟೆ ಇಳುವರಿ ಪ್ರಮಾಣ ಕಡಿಮೆಯಾಗಿದೆ’ ಎಂದು ಶೇಷನಾರಾಯಣ ಅವರು ಹೇಳಿದರು.

‘ಸದ್ಯ ಸಗಟು ಮಾರುಕಟ್ಟೆಯಲ್ಲಿ ಒಂದು ಮೊಟ್ಟೆಗೆ ₹6.75ರಂತೆ ಮಾರಾಟವಾಗುತ್ತಿದೆ. ಸಂಕ್ರಾಂತಿ ವೇಳೆಗೆ ಹಾಗೂ ರಫ್ತು ಮಾಡುವ ಪ್ರಮಾಣ ಕಡಿಮೆಯಾದರೆ ಮೊಟ್ಟೆ ದರ ಇಳಿಕೆ ಆಗಲಿದೆ’ ಎಂದರು.



> ಮೊಟ್ಟೆ ದರ ಏರಿಕೆಯಿಂದಾಗಿ ಅಂಗನವಾಡಿಗಳಲ್ಲಿ ಮಕ್ಕಳಿಗೆ, ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ಮೊಟ್ಟೆ ವಿತರಿಸಲು ಕಷ್ಟವಾಗುತ್ತಿದೆ
>
> **ಎಂ. ಜಯಮ್ಮ,** ಎಐಟಿಯುಸಿ ಪ್ರಧಾನ ಕಾರ್ಯದರ್ಶಿ

ಅಡಿಕೆ ಧಾರಣೆ

ಬಂಟ್ವಾಳ		ಚಿತ್ರದುರ್ಗ			
ಕೋಕ	18000-27000	ಅಪಿ	54939-55369	ಇಡಿ	26500-28000
ಹೊಸತು	27000-41000	ಬೆಟ್ಟೆ	37619-38079	ರಾಶಿ	56312-56399
ಭದ್ರಾವತಿ		ಕೆಂಪುಗೋಟು	30609-31010	ಸಿಪ್ಪೆಗೋಟು	10000-10700
ಸಿಪ್ಪೆಗೋಟು	10000-11000	ರಾಶಿ	54429-54889	**ಪುತ್ತೂರು**	
ಇತರೆ	20000-20000	**ಹೊನ್ನಾಳಿ**		ಕೋಕ	20000-35000
				ಹೊಸತು	26000-41000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1490 (--)
ಸೋಯಾ (ರಿಫೈನ್ಡ್)	₹1280(--)
ಸೂರ್ಯಕಾಂತಿ (ರಿಫೈನ್ಡ್)	₹1480 (--)
ಪಾಮೋಲಿನ್	₹1250 (--)

ದಿ ರೂಲರ್ ಆದ ರಾಜ್ ಬಿ.ಶೆಟ್ಟಿ

ನಟ ರಾಜ್ ಬಿ.ಶೆಟ್ಟಿ ಸಿನಿ ಬ್ಯಾಂಕ್ ಹಿಗ್ಗುತ್ತಲೇ ಇದೆ. ಪ್ರೇಕ್ಷಕರ ಮುಂದೆ ಏಕಾಏಕಿ ಪ್ರತ್ಯಕ್ಷಗೊಳ್ಳುವ ರೀತಿಯಲ್ಲಿ ಅವರ ಸಿನಿಮಾಗಳು ಘೋಷಣೆಯಾಗುತ್ತಿವೆ. 'ಕರಾವಳಿ', 'ಜುಗಾರಿ ಕ್ರಾಸ್', 'ರಕ್ಕಸಪುರೋಳ್' ಬಳಿಕ ಇದೀಗ 'ಲ್ಯಾಂಡ್‌ಲಾರ್ಡ್'ನಲ್ಲೂ ರಾಜ್ ಬಣ್ಣಹಚ್ಚಿದ್ದು, ಈ ಬಾರಿ ಖಳನಾಯಕನಾಗಿ ಬಂದಿದ್ದಾರೆ.


ರಾಜ್ ಬಿ.ಶೆಟ್ಟಿ

ಇಬ್ಬರು ನಿರ್ದೇಶಕ–ನಟರು ಓರ್ವ ನಿರ್ದೇಶಕನ ಸಿನಿಮಾವೊಂದರಲ್ಲಿ ಕಾಣಿಸಿಕೊಳ್ಳುವುದು ಅಪರೂಪ. 'ಕಾಟೇರ' ಸಿನಿಮಾದ ಕಥೆಗಾರ ಜಡೇಶ ಕೆ. ಹಂಪಿ ನಿರ್ದೇಶನದ 'ಲ್ಯಾಂಡ್‌ಲಾರ್ಡ್'ನಲ್ಲಿ ಇಂಥ ಕಾಂಬಿನೇಷನ್ ಇದೆ. ನಟ, ನಿರ್ದೇಶಕ 'ದುನಿಯಾ' ವಿಜಯ್‌ಗೆ ಎದುರಾಳಿಯಾಗಿ ನಟ, ನಿರ್ದೇಶಕ ರಾಜ್ ಬಿ.ಶೆಟ್ಟಿ ಕಾಣಿಸಿಕೊಳ್ಳಲಿದ್ದಾರೆ. 'ಉಳಿದಿರುವವ'ನೆದುರು 'ಆಳುವವ'ನಾಗಿ ರಾಜ್ ನಟಿಸಿದ್ದಾರೆ.

ಸೋಮವಾರ (ಡಿ.8) ರಾಜ್ ಬಿ.ಶೆಟ್ಟಿ ಪಾತ್ರವನ್ನು ಚಿತ್ರತಂಡ ಅನಾವರಣಗೊಳಿಸಿದೆ. ಈ ಕಾರ್ಯಕ್ರಮದಲ್ಲಿ ಮಾತನಾಡಿದ ರಾಜ್, 'ಶೋಷಕ ವರ್ಗದಲ್ಲಿರುವ, ಅಧಿಕಾರವನ್ನು ಆನಂದಿಸುವ ಹಾಗೂ ಈ ಅಧಿಕಾರಕ್ಕಾಗಿ ಯಾವುದೇ ಹಂತಕ್ಕೂ ಹೋಗುವ ವ್ಯಕ್ತಿಯಾಗಿ ಕಾಣಿಸಿಕೊಂಡಿದ್ದೇನೆ. ಈ ಪಾತ್ರಕ್ಕೆ ಕೂದಲಿರುತ್ತದೆ ಎಂದು ಜಡೇಶ್ ಹೇಳಿದಾಗ, 'ವಿಗ್ ಹಾಕಲೇಬೇಕೇ?' ಎಂದು ಕೇಳಿದ್ದೆ. ಸಿನಿಮಾ ನೋಡಿದಾಗ ಪಾತ್ರಕ್ಕೆ ಕೂದಲು ಅಗತ್ಯ ಎಂದೆನಿಸಿತು. ಒಬ್ಬ ನಿರ್ದೇಶಕ ಗೆಲ್ಲಬೇಕು ಎನ್ನುವುದೇ ಈ ಸಿನಿಮಾ ಒಪ್ಪಿಕೊಳ್ಳುವುದಕ್ಕೆ ಮೊದಲ ಕಾರಣ. ಕೆಲವೊಮ್ಮೆ ಖಳನಾಯಕನ ಪಾತ್ರಗಳು ಪ್ರಚಾರಕ್ಕೆ ಸೀಮಿತವಾಗುತ್ತವೆ. ಆದರೆ 'ಲ್ಯಾಂಡ್‌ಲಾರ್ಡ್'ನಲ್ಲಿ ಹಾಗಿಲ್ಲ. ಇದರಲ್ಲಿ ನನ್ನ ಪಾತ್ರಕ್ಕೆ ಅಸ್ಮಿತೆ ಇದೆ, ಬರವಣಿಗೆಯೂ ಚೆನ್ನಾಗಿದೆ. ನನ್ನ ಪಾತ್ರದಿಂದಾಗಿ ಕಥೆ ಮುಂದುವರಿಯುತ್ತದೆ. ಕೆಲವೊಮ್ಮೆ ಬರವಣಿಗೆಯಲ್ಲಷ್ಟೇ ಇಂಥ ಪಾತ್ರಗಳು ಜೀವಂತವಿರುತ್ತವೆ. ಯಾವಾಗ ಪಕ್ಕದಲ್ಲಿರುವ ನಾಯಕನಿಗೆ ಖಳನಾಯಕನ ಪಾತ್ರದ ಮೇಲೆ ಅಸೂಯೆ ಬರುತ್ತದೆಯೋ ಆಗ ಖಳನಾಯಕನ ಪಾತ್ರ ಕುಗ್ಗುತ್ತದೆ. ಆದರೆ ವಿಜಯ್ ಅವರು ಆ ರೀತಿಯಿಲ್ಲ. ಅವರಿಗೆ ಪಾತ್ರಗಳ ಪ್ರಾಮುಖ್ಯತೆಯ ಬಗ್ಗೆ ಗೊತ್ತಿತ್ತು. ಕೋಲಾರ ಭಾಗದ ಕನ್ನಡದಲ್ಲಿ ಸಿನಿಮಾದ ಸಂಭಾಷಣೆಯಿದೆ. ನಾವಿಬ್ಬರೂ ನಿರ್ದೇಶಕರಾಗಿದ್ದರೂ ನಟರಾಗಷ್ಟೇ ಇಲ್ಲಿದ್ದೆವು. ನಿರ್ದೇಶಕರು ಮಾಡಿದ ಅಡುಗೆಯನ್ನು ಬಡಿಸುವುದಷ್ಟೇ ನಮ್ಮ ಕರ್ತವ್ಯವಾಗಿತ್ತು' ಎಂದರು.

ಜ.23ಕ್ಕೆ ಸಿನಿಮಾ ಬಿಡುಗಡೆ

ರಾಜ್‌ಗೆ ಜೋಡಿಯಾದ ಭಾವನಾ

ಕಪ್ಪು–ಮೊಟ್ಟೆ ಸೇರಿದ್ರೆ 'ವರ್ಲ್ಡ್‌ಕಪ್'

'ಒಂದು ಕಾಲದಲ್ಲಿ 'ನನ್ ತಾವ ಇರೋದು 15 ರೂಪಾಯಿ, ಎಲ್ದೇ ಎಲ್ದು ಟೊಮ್ಯಾಟೊ ಕಣಣ್ಣಾ' ಎಂದುಕೊಂಡು ನಾನು ಬಂದೆ. ರಾಜ್ ಅವರು 'ಒಂದು ಮೊಟ್ಟೆಯ ಕಥೆ' ಎಂದು ಬಂದರು. ಅವತ್ತು ನನ್ನನ್ನು ಆಡಿಕೊಂಡಂತೆ ರಾಜ್ ಅವರನ್ನೂ ಆಡಿಕೊಂಡಿದ್ದನ್ನು ನಾನು ಕೇಳಿಸಿಕೊಂಡಿದ್ದೇನೆ. ಕೊನೆಯಲ್ಲಿ ನಾನೇ 'ಉಳಿದಿರುವವನು', ರಾಜ್ ಅವರೇ 'ಆಳುವವ'ನಾದರು. ನಮ್ಮನ್ನು ಆಡಿಕೊಂಡವರಿಗೆ ತುಂಬುಹೃದಯದ ಧನ್ಯವಾದಗಳು. ನಾವು ಅಂದುಕೊಂಡಿರುವುದನ್ನು ಸಾಧಿಸುತ್ತೇವೆ. ಈ ವೇದಿಕೆ ನೋಡಿದಾಗ ನಾವು ಅನುಭವಿಸಿದ ನೋವು, ಅವಮಾನಗಳು ನೆನಪಿಗೆ ಬಂದವು' ಎಂದರು ವಿಜಯ್.

'ಈ ಸಿನಿಮಾದಲ್ಲಿ ಒಬ್ಬ ನಿರ್ದೇಶಕನ ಕೆಳಗಡೆ ಇಬ್ಬರು ನಿರ್ದೇಶಕರು ನಟರಾಗಿ ಏನೂ ಗೊತ್ತಿಲ್ಲದೇ ಇರುವ ರೀತಿ ಕೆಲಸ ಮಾಡಿದ್ದೇವೆ. ಜಡೇಶ್ ಜೊತೆಗೆ ನಿರ್ಮಾಪಕರಾದ ಹೇಮಂತ್ ಇನ್ನೊಂದಿಷ್ಟು ಸಿನಿಮಾ ಮಾಡಲಿ. ಒಂದು ಕಾಂಬಿನೇಷನ್ ಹಿಟ್ ಆದ ತಕ್ಷಣದಲ್ಲೇ ಎಲ್ಲರೂ ದೂರವಾಗುತ್ತಾರೆ. ನಮ್ಮ ಕನ್ನಡ ಚಿತ್ರರಂಗದಲ್ಲಿ ಹೀಗಾಗಿರುವುದೇ ದೌರ್ಬಲ್ಯ' ಎನ್ನುತ್ತಾರೆ ವಿಜಯ್.

ಕೂದಲಿದ್ದಿದ್ದರೆ ನಟನಾಗುತ್ತಿರಲಿಲ್ಲ

'ಈ ಗೆಟಪ್‌ನಲ್ಲಿ ನೋಡಿದ ಬಳಿಕ ನನಗೆ ಕೂದಲು ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದೆನಿಸಿತು. ಆದರೆ ನನಗೆ ಕೂದಲು ಇದ್ದಿದ್ದರೆ 'ಒಂದು ಮೊಟ್ಟೆಯ ಕಥೆ' ಸಿನಿಮಾವೇ ಆಗುತ್ತಿರಲಿಲ್ಲ. ಜೊತೆಗೆ ನಾನು ನಟನೇ ಆಗುತ್ತಿರಲಿಲ್ಲ. ಕೂದಲು ಇಲ್ಲದೇ ಇರುವುದು ದೌರ್ಬಲ್ಯವಲ್ಲ. ಹೀಗಾಗಿಯೇ ಇಲ್ಲಿ ಕುಳಿತಿದ್ದೇನೆ' ಎನ್ನುತ್ತಾರೆ ರಾಜ್.

'ಇಲ್ಲಿಯವರೆಗೂ ಮಾಡಲು ಆಗದೇ ಇರುವ ಪಾತ್ರಗಳ ಸವಾಲನ್ನು ಸ್ವೀಕರಿಸಬೇಕು ಎಂಬುವುದು ನನ್ನಲ್ಲಿತ್ತು. ಹೀಗಾಗಿ ಈ ಪಾತ್ರ ಮಾಡಿದೆ. ಮಲಯಾಳದ 'ಟರ್ಬೊ'ದಲ್ಲೂ ನಾನು ಖಳನಾಯಕನಾಗಿದ್ದೆ. 'ಲ್ಯಾಂಡ್‌ಲಾರ್ಡ್'ನಲ್ಲಿರುವ ನನ್ನ ಖಳನಾಯಕನ ಪಾತ್ರವು ಎಲ್ಲಾ ಭಾವನೆಗಳನ್ನೂ ಹೊರಹಾಕುತ್ತದೆ. ಅತ್ತರೆ, ದುಃಖಪಟ್ಟರೆ ಆತ ಖಳನಾಯಕನಲ್ಲ ಎಂಬ ಮಾತಿದೆ. ಆದರೆ ಈ ಪಾತ್ರಕ್ಕೆ ಈ ಎಲ್ಲಾ ಭಾವನೆಗಳಿವೆ' ಎಂದರು.

ಸಾರಥಿ ಫಿಲಂಸ್ ಬ್ಯಾನರ್‌ನಡಿಯಲ್ಲಿ ಹೇಮಂತ್ ಗೌಡ ಕೆ.ಎಸ್ ಹಾಗೂ ಕೆ.ವಿ ಸತ್ಯಪ್ರಕಾಶ್ 'ಲ್ಯಾಂಡ್‌ಲಾರ್ಡ್' ಸಿನಿಮಾ ನಿರ್ಮಾಣ ಮಾಡಿದ್ದಾರೆ.

> **ಈ ಪಾತ್ರಕ್ಕೆ ರಾಜ್ ಅವರೇ ಬೇಕೆಂದು ಒತ್ತಾಯ ಮಾಡಿದ್ದೆ. ಭಾವನಾತ್ಮಕವಾಗಿ ಅವರನ್ನು ಕೇಳಿಕೊಂಡಿದ್ದೆ. ರಾಜ್ ಅವರು ಈ ಪಾತ್ರ ಮಾಡದೇ ಇದ್ದಿದ್ದರೆ ಇದೊಂದು ಸಾಮಾನ್ಯ ಸಿನಿಮಾವಾಗುತ್ತಿತ್ತು. ರೈತರಿಗೆ ಕೆಲಸಕ್ಕೆ ತಕ್ಕ ಕಾಸು ಎಂಬ ವಿಷಯದ ಮೇಲೆ ಈ ಸಿನಿಮಾವಿದೆ**
> **ಜಡೇಶ್ ಕೆ.ಹಂಪಿ,** ನಿರ್ದೇಶಕ.


ರಿತನ್ಯಾ, ರಿಷಿ

ರಿಷಿ–ರಿತನ್ಯಾ ಜೋಡಿಯ ಜವರ

ನಟ ದುನಿಯಾ ವಿಜಯ್ ಮಗಳು ರಿತನ್ಯಾ ವಿಜಯ್ 'ಲ್ಯಾಂಡ್‌ಲಾರ್ಡ್' ಮುಖಾಂತರ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿದ್ದಾರೆ. ರಿತನ್ಯಾ ಇದೀಗ ಎರಡನೇ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದು, 'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ನಟ ರಿಷಿ ಜೊತೆಗೆ 'ಜವರ' ಎನ್ನುವ ಸಿನಿಮಾದಲ್ಲಿ ನಟಿಸಲಿದ್ದಾರೆ.

ಇತ್ತೀಚೆಗೆ ಈ ಚಿತ್ರದ ಮುಹೂರ್ತ ನಡೆಯಿತು. ನಟ ಕೋಮಲ್ ನಟನೆಯ 'ಯಲಾಕುನ್ನಿ' ಸಿನಿಮಾ ನಿರ್ದೇಶಿಸಿದ್ದ ಪ್ರದೀಪ್ ದಳವಾಯಿ 'ಜವರ' ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಚಿದಾವೃಷಭ ನಿರ್ಮಾಣ ಮಾಡುತ್ತಿದ್ದಾರೆ. ಸಿನಿಮಾದ ವಿಶೇಷ ಪಾತ್ರಗಳಲ್ಲಿ ನಟ ರಂಗಾಯಣ ರಘು ಮತ್ತು ನಟಿ ಶ್ರುತಿ ಕಾಣಿಸಿಕೊಳ್ಳಲಿದ್ದಾರೆ.

ರಂಗಾಯಣ ರಘು ಈ ಸಿನಿಮಾದಲ್ಲಿ 'ಗೌರಿ' ಎನ್ನುವ ಪಾತ್ರದಲ್ಲಿ ನಟಿಸುತ್ತಿದ್ದಾರೆ. ನಟಿ ಶ್ರುತಿ 'ರಾಯಲ್ ಮೀನಾಕ್ಷಿ' ಎನ್ನುವ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ರಿತನ್ಯಾ 'ಜವರ' ಸಿನಿಮಾ ಮೂಲಕ ಅಧಿಕೃತವಾಗಿ ನಾಯಕಿಯಾಗಿ ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ.

'ಲ್ಯಾಂಡ್‌ಲಾರ್ಡ್'ನಲ್ಲಿ ಮಗಳ ಪಾತ್ರಕ್ಕೆ ರಿತನ್ಯಾ ಬಣ್ಣ ಹಚ್ಚಿದ್ದಾರೆ. ಸಿನಿಮಾದಲ್ಲಿ 'ಭೂಮಿ' ಎನ್ನುವ ಪಾತ್ರದಲ್ಲಿ ಅವರು ಕಾಣಿಸಿಕೊಳ್ಳುತ್ತಿದ್ದಾರೆ. 'ನಾನು ವೈದ್ಯಕೀಯ ವಿದ್ಯಾರ್ಥಿನಿಯ ಪಾತ್ರವನ್ನು ನಿರ್ವಹಿಸಲಿದ್ದೇನೆ. ಹೆಸರಾಂತ ಕಲಾವಿದರ ಜೊತೆ ತೆರೆಹಂಚಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ' ಎನ್ನುತ್ತಾರೆ ರಿತನ್ಯಾ.

ರಿಷಿ 'ರುದ್ರ' ಎನ್ನುವ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. 'ನಿರ್ದೇಶಕರು ಕಥೆ ಹೇಳುವಾಗಲೇ ಚಿತ್ರಕಥೆಯನ್ನು ಸಿದ್ಧಮಾಡಿಕೊಂಡಿದ್ದರು. ಇದು ಸಿನಿಮಾ ಮೇಲಿನ ಅವರ ಬದ್ಧತೆ ತೋರಿಸಿತು. ನಿರ್ದೇಶಕರು ತುಂಬಾ ಯೋಚಿಸಿ ಮಾಡಿರುವ ಕಥೆ ಇದು' ಎಂದರು ರಿಷಿ.

'ಸಿನಿಮಾದ ಕಥೆಗೆ ಶ್ರುತಿ ಮತ್ತು ರಂಗಾಯಣ ರಘು ಅವರ ಅವಶ್ಯಕತೆ ತುಂಬಾ ಇತ್ತು. ಈ ಪಾತ್ರಗಳು ಬಹಳ ಚೆನ್ನಾಗಿವೆ. ರಿತನ್ಯಾ ಅವರು ತುಂಬಾ ಚೆನ್ನಾಗಿ ನಟಿಸುತ್ತಾರೆ. ಅದನ್ನು ನೋಡಿಯೇ ದುನಿಯಾ ವಿಜಯ್ ಅವರಿಗೆ ಕಥೆ ಹೇಳಿದ್ದೆ. ಅವರಿಗೂ ಇಷ್ಟ ಆಗಿ ಮಗಳಿಗೆ ಹೇಳಿದರು. ಬಳಿಕ ರಿತನ್ಯಾ ಒಪ್ಪಿಕೊಂಡರು' ಎಂದು ಪ್ರದೀಪ್ ಹೇಳಿದರು.

ಚಿತ್ರಕ್ಕೆ ಧರ್ಮ ವಿಶ್ ಸಂಗೀತ ನಿರ್ದೇಶನ, ಹಾಲೇಶ್ ಛಾಯಾಚಿತ್ರಗ್ರಹಣವಿದೆ.

'ಆಲ್ಫಾ' ಟೀಸರ್ ಬಿಡುಗಡೆ

'ಗೀತಾ', 'ಗುರುದೇವ ಹೊಯ್ಸಳ' ಚಿತ್ರಗಳನ್ನು ನಿರ್ದೇಶಿಸಿರುವ ವಿಜಯ್ ಅವರ ಹೊಸ ಸಿನಿಮಾ 'ಆಲ್ಫಾ'ದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು.

'ಮೆನ್ ಲವ್ ವೆಂಜೆನ್ಸ್' ಎಂಬ ಅಡಿಬರಹವಿರುವ ಈ ಸಿನಿಮಾವನ್ನು ಎಲ್.ಎ.ಪ್ರೊಡಕ್ಷನ್ಸ್‌ನಡಿ ಆನಂದ್ ಕುಮಾರ್ ನಿರ್ಮಿಸಿದ್ದಾರೆ. ನಾಯಕನಾಗಿ ಹೇಮಂತ್ ಕುಮಾರ್ ನಟಿಸಿದ್ದು, ಇದು ಇವರ ಚೊಚ್ಚಲ ಸಿನಿಮಾ.

'ಸಂಭಾಷಣೆಕಾರ ಮಾಸ್ತಿ ಅವರ ಮೂಲಕ ಹೇಮಂತ್ ಕುಮಾರ್ ಪರಿಚಯವಾಯಿತು. ಒಂದೊಳ್ಳೆಯ ಕಥೆ ಇದ್ದರೆ ಸಿನಿಮಾ ಮಾಡೋಣ, ಆದರೆ ಪ್ರೇಮಕಥೆ ಬೇಡ ಎಂದು ಅವರು ಹೇಳಿದರು. ಆ ಸಂದರ್ಭದಲ್ಲಿ ಈ ಸಿನಿಮಾದ ಕಥೆ ಹೇಳಿದ್ದೆ. ಮಾರ್ಚ್‌ನಲ್ಲಿ ಚಿತ್ರ ಪ್ರಾರಂಭವಾಯಿತು. ಈಗ ಮುಕ್ತಾಯದ ಹಂತದಲ್ಲಿದೆ. ಫೆಬ್ರುವರಿಗೆ ಚಿತ್ರವನ್ನು ತೆರೆಗೆ ತರುವ ಪ್ರಯತ್ನ ಮಾಡುತ್ತಿದ್ದೇವೆ' ಎಂದರು ವಿಜಯ್.

'ಇದು ಆ್ಯಕ್ಷನ್ ಥ್ರಿಲ್ಲರ್ ಚಿತ್ರ ಮಾತ್ರವಲ್ಲ, ಭಾವನಾತ್ಮಕ ಕಥೆಯೂ ಸಿನಿಮಾದಲ್ಲಿದೆ. ಮೂರು ಜನ ಅಪ್ಪಂದಿರ ಹಾಗೂ ಮೂರು ಜನ ಮಕ್ಕಳ ಸುತ್ತ ನಡೆಯುವ ಕಥೆ ಇದಾಗಿದೆ. ಅಪ್ಪನ ತಂಟೆಗೆ ಯಾರಾದರೂ ಬಂದರೆ, ಮಕ್ಕಳ ಪ್ರತಿಕಾರ ಹೇಗಿರುತ್ತದೆ ಎಂದು ತಿಳಿಸುವ ಕಥೆಯೂ ಹೌದು' ಎನ್ನುತ್ತಾರೆ ವಿಜಯ್.


ಅಯಾನ, ಹೇಮಂತ್ ಕುಮಾರ್, ಗೋಪಿಕಾ ಸುರೇಶ್

ಗೋಪಿಕಾ ಸುರೇಶ್ ಹೇಮಂತ್‌ಗೆ ಜೋಡಿಯಾಗಿ ನಟಿಸಿದ್ದಾರೆ. ಚಿತ್ರದಲ್ಲಿ ಪೊಲೀಸ್ ಅಧಿಕಾರಿಯಾಗಿ ಅಯಾನ ಬಣ್ಣಹಚ್ಚಿದ್ದಾರೆ. 'ಬಿಗ್‌ಬಾಸ್' ಖ್ಯಾತಿಯ ಕಾರ್ತಿಕ್ ಮಹೇಶ್ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಅವಿನಾಶ್, ಅಚ್ಯುತ್ ಕುಮಾರ್, ಮಾನಸಿ ಸುಧೀರ್, ರಮೇಶ್ ಇಂದಿರಾ, ಬಾಲು ನಾಗೇಂದ್ರ, ವಿನಯ್ ಬಿದ್ದಪ್ಪ, ಮಹಾಂತೇಶ್, ರಾಘು ಶಿವಮೊಗ್ಗ ತಾರಾಬಳಗದಲ್ಲಿದ್ದಾರೆ. ಜೆ.ಅನೂಪ್ ಸೀಳಿನ್ ಸಂಗೀತ ನಿರ್ದೇಶನ, ಕಾರ್ತಿಕ್ ಛಾಯಾ ಚಿತ್ರಗ್ರಹಣ ಸಿನಿಮಾಗಿದೆ.

ಶೇ 30 ಸ್ಥಾನ ಮಹಿಳೆಯರಿಗೆ ನಿಗದಿ

ರಾಜ್ಯ ವಕೀಲರ ಪರಿಷತ್ತು ಚುನಾವಣೆ: ಸುಪ್ರೀಂ ಕೋರ್ಟ್ ನಿರ್ದೇಶನ

ನವದೆಹಲಿ (ಪಿಟಿಐ): ಚುನಾವಣಾ ಪ್ರಕ್ರಿಯೆಗೆ ಇನ್ನೂ ಚಾಲನೆ ಸಿಗದ ರಾಜ್ಯ ವಕೀಲರ ಪರಿಷತ್ತುಗಳಲ್ಲಿ ಶೇ 30ರಷ್ಟು ಸ್ಥಾನಗಳನ್ನು ಮಹಿಳಾ ವಕೀಲರಿಗೆ ನಿಗದಿಪಡಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು, 'ರಾಜ್ಯ ವಕೀಲರ ಪರಿಷತ್ತುಗಳಲ್ಲಿ ಶೇ 30ರಷ್ಟು ಸ್ಥಾನಗಳನ್ನು ಮಹಿಳಾ ವಕೀಲರು ಪ್ರತಿನಿಧಿಸಬೇಕು. ಅದರಲ್ಲಿ ಶೇ 20ರಷ್ಟು ಸ್ಥಾನಗಳನ್ನು ಚುನಾವಣೆ ಮೂಲಕ ಮತ್ತು ಶೇ 10ರಷ್ಟು ಸ್ಥಾನಗಳನ್ನು ನಾಮ ನಿರ್ದೇಶನದ ಮೂಲಕ ಭರ್ತಿ ಮಾಡಬೇಕು' ಎಂದು ಹೇಳಿತು.

ಚುನಾವಣೆಯಲ್ಲಿ ಸ್ಪರ್ಧಿಸುವ ಮಹಿಳಾ ವಕೀಲರ ಸಂಖ್ಯೆ ಕಡಿಮೆಯಿದ್ದರೆ, ಅಂತರ ರಾಜ್ಯಗಳ ವಕೀಲರ ಪರಿಷತ್ತುಗಳಲ್ಲಿ ನಾಮ ನಿರ್ದೇಶನಕ್ಕೆ ಸಂಬಂಧಿಸಿದ ಪ್ರಸ್ತಾಪವನ್ನು ನ್ಯಾಯಾಲಯದ ಮುಂದೆ ಇಡಬೇಕು ಎಂದೂ ನಿರ್ದೇಶಿಸಿದೆ.

ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿರುವ ನಿರ್ದೇಶನದಂತೆ ಆರು ರಾಜ್ಯಗಳ ವಕೀಲರ ಪರಿಷತ್ತುಗಳ ಚುನಾವಣೆಗೆ ಅಧಿಸೂಚನೆ ಹೊರಡಿಸಲಾಗಿದೆ ಎಂದು ಭಾರತೀಯ ವಕೀಲರ ಪರಿಷತ್ತಿನ (ಬಿಸಿಐ) ಅಧ್ಯಕ್ಷರೂ ಆಗಿರುವ ಹಿರಿಯ ವಕೀಲ ಮನನ್ ಕುಮಾರ್ ಮಿಶ್ರಾ ಅವರು ಪೀಠಕ್ಕೆ ತಿಳಿಸಿದರು.

'ಶೇ 15ರಷ್ಟು ಸ್ಥಾನಗಳನ್ನು ಮಹಿಳಾ ಸದಸ್ಯರ ನಾಮ ನಿರ್ದೇಶನದ ಮೂಲಕ ಭರ್ತಿ ಮಾಡಿಕೊಳ್ಳಲು ಅವಕಾಶ ನೀಡಬೇಕು' ಎಂದು ಅವರು ಪೀಠಕ್ಕೆ ಮನವಿ ಮಾಡಿದರು. ಆದರೆ, 'ನಾಮ ನಿರ್ದೇಶನವನ್ನು ಶೇ 10ರಷ್ಟು ಸೀಟುಗಳಿಗೆ ಸೀಮಿತಗೊಳಿಸಿದರೆ ಸೂಕ್ತ' ಎಂದು ಪೀಠ ತಿಳಿಸಿತು.

ಈಗಾಗಲೇ ಚುನಾವಣಾ ಪ್ರಕ್ರಿಯೆ ಆರಂಭವಾಗಿರುವ ಪರಿಷತ್ತುಗಳಲ್ಲಿ ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಿಡುವುದು ವಿವೇಕಯುತ ನಿರ್ಧಾರವಲ್ಲ ಎಂದೂ ಪೀಠ ಹೇಳಿತು.

ಆಂಧ್ರ ಪ್ರದೇಶ, ಪಂಜಾಬ್ ಮತ್ತು ಹರಿಯಾಣ, ಉತ್ತರ ಪ್ರದೇಶ, ತೆಲಂಗಾಣ, ಬಿಹಾರ ಹಾಗೂ ಛತ್ತೀಸಗಢ ರಾಜ್ಯಗಳ ವಕೀಲರ ಪರಿಷತ್ತುಗಳ ಚುನಾವಣೆಗೆ ಈಗಾಗಲೇ ಅಧಿಸೂಚನೆ ಹೊರಡಿಸಲಾಗಿದೆ ಎಂದಿತು.

'ಮಹಿಳೆಯರು ಸ್ಪರ್ಧಿಸಲು ಹಿಂಜರಿಯುವಂತಹ ಪರಿಷತ್ತುಗಳಲ್ಲಿ ನಾಮ ನಿರ್ದೇಶನ ಪ್ರಕ್ರಿಯೆ ಕೈಗೊಳ್ಳಲಾಗುವುದು. ಅಂತಿಮವಾಗಿ ಕಾರ್ಯಕಾರಿ ಮಂಡಳಿಯಲ್ಲಿ ಮಹಿಳೆಯರಿಗೆ ಶೇ 30ರಷ್ಟು ಪ್ರಾತಿನಿಧ್ಯ ಸಿಗುವುದನ್ನು ಖಾತರಿಪಡಿಸಬೇಕು' ಎಂದು ಹೇಳಿತು.

ಎಲ್ಲಾ ರಾಜ್ಯಗಳ ವಕೀಲರ ಪರಿಷತ್ತುಗಳಲ್ಲಿ ಮೂರನೇ ಒಂದರಷ್ಟು ಸ್ಥಾನಗಳನ್ನು ಹಿಳೆಯರಿಗೆ ಮೀಸಲಿಡಬೇಕೆಂದು ಕೋರಿ ವಕೀಲರಾದ ಯೋಗಮಾಯಾ ಎಂ.ಜಿ ಮತ್ತು ಶೆಹ್ಲಾ ಚೌಧರಿ ಅವರು ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

ನ್ಯಾ. ಸ್ವಾಮಿನಾಥನ್ ಪದಚ್ಯುತಿಗೆ ನೋಟಿಸ್ ಸಲ್ಲಿಕೆ ಸಾಧ್ಯತೆ

ಚೆನ್ನೈ: ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠದ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರನ್ನು ಪದಚ್ಯುತಗೊಳಿಸುವುದಕ್ಕೆ ಸಂಬಂಧಿಸಿದ ನೋಟಿಸ್‌ಅನ್ನು ಇಂಡಿಯಾ ಮೈತ್ರಿಕೂಟದ ಸಂಸದರು ಲೋಕಸಭೆಯಲ್ಲಿ ಸಲ್ಲಿಸುವ ಸಾಧ್ಯತೆಯಿದೆ.

ಮಧುರೈ ಬಳಿಯ ತಿರುಪರನ್ ಕುಂಡ್ರಂ ಬೆಟ್ಟದ ಕಲ್ಲಿನ ದೀಪಸ್ತಂಭ 'ದೀಪಥೋನ್'ನಲ್ಲಿ ಕಾರ್ತಿಕ ದೀಪ ಬೆಳಗಿಸಲು ಹೈಕೋರ್ಟ್‌ನ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರು ಭಕ್ತರಿಗೆ ಅವಕಾಶ ನೀಡಿ ಇತ್ತೀಚೆಗೆ ಆದೇಶ ಹೊರಡಿಸಿದ್ದರು. ಅದೇ ಬೆಟ್ಟದಲ್ಲಿ ಸಿಕಂದರ್ ಬಾದುಶಾ ದರ್ಗಾ ಇದ್ದು, ಈ ಆದೇಶದಿಂದ ಕೋಮು ಸೌಹಾರ್ದಕ್ಕೆ ಧಕ್ಕೆ ಉಂಟಾಗಲಿದೆ ಎಂದು ಡಿಎಂಕೆ ಆತಂಕ ವ್ಯಕ್ತಪಡಿಸಿತ್ತು.

'ತಮಿಳುನಾಡು ಮತ್ತು ಇತರ ರಾಜ್ಯಗಳ ಕಾಂಗ್ರೆಸ್ ಸಂಸದರು ನೋಟಿಸ್‌ಗೆ ಸಹಿ ಹಾಕಿದ್ದಾರೆ' ಎಂದು ಮೂಲವೊಂದು ತಿಳಿಸಿದೆ. ನೋಟಿಸ್ ಸಲ್ಲಿಸಲು ಅಗತ್ಯವಿರುವ 100 ಸಂಸದರ ಬೆಂಬಲ ಸುಲಭವಾಗಿ ಸಿಗಲಿದೆ ಎಂಬ ವಿಶ್ವಾಸವನ್ನು ಡಿಎಂಕೆ ವ್ಯಕ್ತಪಡಿಸಿದೆ.

'ಡಿಎಂಕೆ ಸಂಸದರು ವಿರೋಧ ಪಕ್ಷಗಳ ಸದಸ್ಯರ ಬೆಂಬಲವನ್ನೂ ಕೋರುತ್ತಿದ್ದಾರೆ. ಲೋಕಸಭೆಯಲ್ಲಿ ಮಂಡಿಸಲಿರುವ ನೋಟಿಸ್‌ಅನ್ನು ಎಲ್ಲಾ ಪಕ್ಷಗಳು ಬೆಂಬಲಿಸುವ ವಿಶ್ವಾಸವಿದೆ. ನೋಟಿಸ್‌ಗೆ ಸಹಿ ಹಾಕಿರುವ ಸಂಸದರ ನಿಖರ ಸಂಖ್ಯೆಯನ್ನು ಮಂಗಳವಾರ ಬೆಳಿಗ್ಗೆ ಹೇಳಲು ಸಾಧ್ಯ' ಎಂದು ಮೂಲಗಳು ಹೇಳಿವೆ.

ಕೇರಳ: ನಟ ದಿಲೀಪ್ ಖುಲಾಸೆ

ಲೈಂಗಿಕ ದೌರ್ಜನ್ಯ ಪ್ರಕರಣ: ಆರು ಮಂದಿ ದೋಷಿ

ಪಿಟಿಐ/ಪ್ರಜಾವಾಣಿ ವಾರ್ತೆ

ಕೊಚ್ಚಿ: ದಕ್ಷಿಣ ಭಾರತದ ನಟಿಯೊಬ್ಬರ ಮೇಲೆ 2017ರಲ್ಲಿ ನಡೆದಿದ್ದ ಲೈಂಗಿಕ ದೌರ್ಜನ್ಯ ಪ್ರಕರಣ ದಲ್ಲಿ ಮಲಯಾಳ ನಟ ದಿಲೀಪ್ ಅವರನ್ನು ಎರ್ನಾಕುಲಂ ಪ್ರಧಾನ ಸೆಷನ್ಸ್ ನ್ಯಾಯಾಲಯ ಸೋಮವಾರ ಖುಲಾಸೆಗೊಳಿಸಿದೆ.

ಪ್ರಮುಖ ಆರೋಪಿ ಸುನಿಲ್ ಎನ್. ಎಸ್. ಅಲಿಯಾಸ್ ಪಲ್ಸರ್ ಸುನಿ ಹಾಗೂ ಮಾರ್ಟಿನ್ ಆಂಟನಿ, ಮಣಿಕಂಠನ್ ಬಿ, ವಿಜೇಶ್ ವಿ.ಪಿ, ಸಲೀಂ ಎಚ್. ಮತ್ತು ಪ್ರದೀಪ್ ತಪ್ಪಿತಸ್ಥರೆಂದು ಘೋಷಿಸಿದೆ.


ದಿಲೀಪ್

ನ್ಯಾಯಾಲಯವು ಶಿಕ್ಷೆಯ ಪ್ರಮಾಣವನ್ನು ಡಿ.12ರಂದು ಪ್ರಕಟಿಸುವ ನಿರೀಕ್ಷೆಯಿದೆ.

ನವೆಂಬರ್ 25ರಂದು ಸುದೀರ್ಘ ವಿಚಾರಣೆ ನಡೆಸಿದ್ದ ಎರ್ನಾಕುಲಂ ಪ್ರಧಾನ ಸೆಷನ್ಸ್ ನ್ಯಾಯಾಧೀಶ ಹನಿ ಎಂ. ವರ್ಗೀಸ್ ಅವರು ಈ ಆದೇಶ ಪ್ರಕಟಿಸಿದ್ದಾರೆ. ಈ ಪ್ರಕರಣದಲ್ಲಿ ದಿಲೀಪ್ ಜೊತೆಗೆ ಇತರ ಮೂವರನ್ನು ಖುಲಾಸೆಗೊಳಿಸಲಾಗಿದೆ.

ಪ್ರಕರಣದಲ್ಲಿ ದಿಲೀಪ್ ಅವರ ಪಾತ್ರವನ್ನು ಸಾಬೀತುಪಡಿಸಲು ಯಾವುದೇ ನೇರ ಸಾಕ್ಷ್ಯಗಳಿಲ್ಲ. ಪ್ರಮುಖ ಆರೋಪಿ ಸುನಿಲ್ ಜೊತೆಗೆ ದಿಲೀಪ್ ಇರುವ ಛಾಯಾಚಿತ್ರಗಳು, ಮೊಬೈಲ್ ಫೋನ್ ಕರೆಗಳ ವಿವರ ಮತ್ತು ನಗದು ವಹಿವಾಟು ಮಾಹಿತಿಯನ್ನಷ್ಟೇ ಪ್ರಾಸಿಕ್ಯೂಷನ್ ನೀಡಿದೆ. ಪ್ರಾಸಿಕ್ಯೂಷನ್ ಪ್ರಕಾರ, 2017ರ ಫೆಬ್ರುವರಿ 17ರಂದು ರಾತ್ರಿ ನಟಿಯನ್ನು ಅಪಹರಿಸಿದ್ದ ಸುನಿಲ್ ನೇತೃತ್ವದ ತಂಡ ಚಲಿಸುವ ಕಾರಿನಲ್ಲೇ ಲೈಂಗಿಕ ದೌರ್ಜನ್ಯ ಎಸಗಿತ್ತು. ಮರುದಿನ ನಟಿ ದೂರು ದಾಖಲಿಸಿದ್ದರು.

ಪೊಲೀಸರು ವಾರದೊಳಗೆ ಎಲ್ಲ ಆರೋಪಿಗಳನ್ನು ಬಂಧಿಸಿದ್ದರು. ಏಪ್ರಿಲ್‌ನಲ್ಲಿ ಏಳು ಮಂದಿ ವಿರುದ್ಧ ಮೊದಲ ಆರೋಪಪಟ್ಟಿ ಸಲ್ಲಿಸಿದ್ದರು.

ಪ್ರಮುಖ ಆರೋಪಿ ಸುನಿಲ್ ಜೈಲಿನಲ್ಲಿ ಇದ್ದುಕೊಂಡೇ ದಿಲೀಪ್‌ಗೆ ಪತ್ರ ಕಳುಹಿಸಿದ್ದನ್ನು ತನಿಖಾ ತಂಡವು ಪತ್ತೆ ಮಾಡಿತ್ತು. 2017ರ ಜುಲೈ 10ರಂದು ದಿಲೀಪ್ ಅವರನ್ನು ಬಂಧಿಸಿತ್ತು. ಅ.3ರಂದು ಅವರಿಗೆ ಜಾಮೀನು ಸಿಕ್ಕಿತ್ತು.

ನವೆಂಬರ್‌ನಲ್ಲಿ ಪೊಲೀಸರು ದಿಲೀಪ್ ಸೇರಿದಂತೆ ಇನ್ನೂ ಏಳು ಜನರ ವಿರುದ್ಧ ಪೂರಕ ಆರೋಪಪಟ್ಟಿ ಸಲ್ಲಿಸಿದ್ದರು. ಈ ಪೈಕಿ ಐವರನ್ನು ನಂತರ ಬಿಡುಗಡೆ ಮಾಡಲಾಗಿತ್ತು. 'ನಟಿ ಕಾವ್ಯಾ ಮಾಧವನ್ ಜೊತೆಗಿನ ಸಂಬಂಧದ ಬಗ್ಗೆ ದಿಲೀಪ್ ಅವರ ಮೊದಲ ಪತ್ನಿ ನಟಿ ಮಂಜು ವಾರಿಯರ್ ಅವರಿಗೆ ದೂರುದಾರರಾಗಿದ್ದ ಸಂತ್ರಸ್ತೆ ತಿಳಿಸಿದ್ದರು. ಇದೇ ಕಾರಣಕ್ಕೆ ದೂರುದಾರರ ಮೇಲೆ ಹಲ್ಲೆ ಮಾಡಲು ದಿಲೀಪ್ ಕೆಲವರನ್ನು ನೇಮಿಸಿಕೊಂಡಿದ್ದರು' ಎಂದು ಪ್ರಾಸಿಕ್ಯೂಷನ್ ಆರೋಪಿಸಿತ್ತು.

ದಿಲೀಪ್ ಮತ್ತು ಮಂಜು ವಾರಿಯರ್ ವಿಚ್ಛೇದನ ಪಡೆದಿದ್ದರು. ಬಳಿಕ, ಕಾವ್ಯಾ ಅವರನ್ನು ದಿಲೀಪ್ ಮದುವೆಯಾಗಿದ್ದರು. ಕಾವ್ಯಾ ಸಹ ತನ್ನ ಮೊದಲ ಪತಿಯಿಂದ ವಿಚ್ಛೇದನ ಪಡೆದಿದ್ದರು.

ಈ ಪ್ರಕರಣದಂತೆಯೇ, ವಿಚಾರಣೆಯೂ ಅನೇಕ ತಿರುವುಗಳಿಗೆ ಸಾಕ್ಷಿಯಾಗಿತ್ತು. 2019ರಲ್ಲಿ ದಿಲೀಪ್ ಅವರು ಸಿಬಿಐ ತನಿಖೆ ಕೋರಿ ಕೇರಳ ಹೈಕೋರ್ಟ್ ಮೊರೆ ಹೋಗಿದ್ದರು. ಆದರೆ, ಹೈಕೋರ್ಟ್ ಅರ್ಜಿಯನ್ನು ವಜಾಗೊಳಿಸಿತ್ತು. ಆರು ತಿಂಗಳಲ್ಲಿ ವಿಚಾರಣೆ ಪೂರ್ಣಗೊಳಿಸುವಂತೆ ಸುಪ್ರೀಂ ಕೋರ್ಟ್ 2019ರಲ್ಲಿ ನಿರ್ದೇಶಿಸಿತ್ತು.

ಮೇಲ್ಮನವಿಗೆ ಕೇರಳ ಸರ್ಕಾರ ನಿರ್ಧಾರ

ನಟಿ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ನಟ ದಿಲೀಪ್ ಅವರನ್ನು ಖುಲಾಸೆಗೊಳಿಸಿದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವುದಾಗಿ ಕೇರಳ ಸರ್ಕಾರ ಸೋಮವಾರ ತಿಳಿಸಿದೆ.

'ಈ ತೀರ್ಪಿನಿಂದ ಸಂತ್ರಸ್ತೆಗೆ ಸಂಪೂರ್ಣ ನ್ಯಾಯ ಸಿಕ್ಕಿಲ್ಲ. ಇದರ ವಿರುದ್ಧ ಮೇಲ್ಮನವಿ ಸಲ್ಲಿಸಲು ಸರ್ಕಾರ ನಿರ್ಧರಿಸಿದೆ. ಮುಖ್ಯಮಂತ್ರಿ ಮತ್ತು ಡಿಜಿಪಿ ಅವರೊಂದಿಗೆ ಮಾತನಾಡಿದ್ದೇನೆ. ಮುಂದಿನ ಕ್ರಮಕ್ಕೆ ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಲಾಗಿದೆ' ಎಂದು ಕಾನೂನು ಸಚಿವ ಪಿ.ರಾಜೀವ್ ಹೇಳಿದ್ದಾರೆ.

ಸಿಲುಕಿಸಲು ಪಿತೂರಿ: ದಿಲೀಪ್

'ನಟಿ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ನನ್ನನ್ನು ಸಿಲುಕಿಸಲು ಹಾಗೂ ವೃತ್ತಿ ಜೀವನವನ್ನು ನಾಶ ಮಾಡಲು ಕೆಲ ಪೊಲೀಸ್ ಅಧಿಕಾರಿಗಳು ಮತ್ತು ಮಾಧ್ಯಮ ಕ್ಷೇತ್ರದ ಕೆಲವರು ಪಿತೂರಿ ನಡೆಸುತ್ತಿದ್ದಾರೆ' ಎಂದು ನಟ ದಿಲೀಪ್ ಆರೋಪಿಸಿದ್ದಾರೆ.

'ಈ ಪ್ರಕರಣ ಸಂಬಂಧ ಕೂಲಂಕಷ ತನಿಖೆಯನ್ನು ನಡೆಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

'ಸಮಸ್ಯೆಗಳಿಗೆ ಇಂಡಿಗೊ ಕಾರಣ'

ಒಂದನೇ ಪುಟದಿಂದ...

'ಹೊಸ ನಿಯಮಗಳು ಜಾರಿಯಾದ ಒಂದು ತಿಂಗಳು ವಿಮಾನಗಳ ಹಾರಾಟ ಸೂಕ್ತ ರೀತಿಯಲ್ಲಿಯೇ ಮುಂದುವರಿದಿತ್ತು. ಆದರೆ, ಇಂಡಿಗೊ ಕಾರಣದಿಂದ ಸಮಸ್ಯೆ ಉಂಟಾಯಿತು.

ಕೆಲವು ಸ್ಪಷ್ಟತೆಗಳು ಬೇಕು ಎಂದು ಸಂಸ್ಥೆ ಕೇಳಿಕೊಂಡಿದ್ದರಿಂದ, ಡಿ.1ರಂದು (ಸಮಸ್ಯೆ ಆರಂಭವಾದ ಒಂದು ದಿನದ ಮೊದಲು) ನಮ್ಮ ಸಚಿವಾಲಯವು ಸಂಸ್ಥೆಯೊಂದಿಗೆ ಸಭೆ ನಡೆಸಿತ್ತು. ಈ ಸಭೆಯಲ್ಲಿಯೂ ಸಂಸ್ಥೆಯು ತನ್ನ ಪಾಳಿ ಸಮಸ್ಯೆಯ ಬಗ್ಗೆ ತುಟಿ ಬಿಚ್ಚಲಿಲ್ಲ' ಎಂದು ದೂರಿದರು.

> **ಹವಾಯಿ ಚಪ್ಪಲಿ ಹಾಕಿಕೊಳ್ಳುವವರೂ ವಿಮಾನದಲ್ಲಿ ಪ್ರಯಾಣಿಸುತ್ತಾರೆ ಎನ್ನಲಾಗಿತ್ತು. ಆದರೆ, ಟಿಕೆಟ್ ದರ ₹20 ಸಾವಿರ ದಾಟಿದೆ. ಒಂದು ಲೋಟ ಕಾಫಿ ದರ ₹250 ಆಗಿದೆ**
> **ಗೌರವ್ ಗೊಗೊಯಿ,** ಲೋಕಸಭೆ ವಿರೋಧ ಪಕ್ಷದ ಉಪನಾಯಕ



ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರುವ ಫಲಕದಲ್ಲಿ ಸೋಮವಾರ ಇಂಡಿಗೊ ವಿಮಾನಗಳು ರದ್ದಾಗಿರುವ ಕುರಿತು ಮಾಹಿತಿ ನೀಡಲಾಯಿತು –ಪ್ರಜಾವಾಣಿ ಚಿತ್ರ

ದಿನದ ಬೆಳವಣಿಗೆಗಳು

500 ಸೋಮವಾರ ರದ್ದು ಮಾಡಲಾದ ವಿಮಾನಗಳು

1,802 ಸೋಮವಾರ ಹಾರಾಟ ನಡೆಸಿದ ಇಂಡಿಗೊ ವಿಮಾನಗಳ ಸಂಖ್ಯೆ

4,500 9,000 ಬ್ಯಾಗ್‌ಗಳ ಪೈಕಿ ಪ್ರಯಾಣಿಕರಿಗೆ ವಾಪಸು ನೀಡಲಾದ ಬ್ಯಾಗ್‌ಗಳ ಸಂಖ್ಯೆ (ಉಳಿದ ಬ್ಯಾಗ್‌ಗಳನ್ನು ಮುಂದಿನ 36 ಗಂಟೆಗಳಲ್ಲಿ ವಾಪಸು ನೀಡಲಾಗುತ್ತದೆ ಎಂದು ಇಂಡಿಗೊ ಹೇಳಿದೆ)

'ಉತ್ತರಿಸಲು ಕಾಲಾವಕಾಶ ನೀಡಿ'

ಘಟನೆ ಕುರಿತು ಇಂಡಿಗೊ ಸಂಸ್ಥೆಗೆ ಡಿಜಿಸಿಎ ಶನಿವಾರ ಷೋಕಾಸ್ ನೋಟಿಸ್ ನೀಡಿ, ಭಾನುವಾರದ ಒಳಗೆ ಉತ್ತರಿಸುವಂತೆ ಹೇಳಿತ್ತು. ಉತ್ತರಿಸಲು 1 ದಿನ ಕಾಲಾವಕಾಶ ವಿಸ್ತರಿಸಿತ್ತು. ಸೋಮವಾರ ಸಂಜೆ ಉತ್ತರಿಸಿರುವ ಸಂಸ್ಥೆಯು, ಇನ್ನಷ್ಟು ಕಾಲಾವಕಾಶ ಕೋರಿದೆ.

'ವಿಮಾನ ಹಾರಾಟ ರದ್ದು ಮಾಡಲು ಕಾರಣವಾದ ಅಂಶಗಳ ಕುರಿತು ಸ್ಪಷ್ಟ ಚಿತ್ರಣ ನೀಡಲು ಇಷ್ಟು ಕಡಿಮೆ ಅವಧಿಗೆ ಸಾಧ್ಯವಾಗುವುದಿಲ್ಲ. ಪ್ರಯಾಣಿಕರಿಗೆ ಆದ ಅನನುಕೂಲದ ಕುರಿತು ಕ್ಷಮೆ ಕೋರುತ್ತೇವೆ.

ಡಿಜಿಸಿಎ ನಿಯಮದ ಪ್ರಕಾರ ನೋಟಿಸ್‌ಗೆ ಉತ್ತರಿಸಲು 15 ದಿನ ಅವಕಾಶವಿದೆ' ಎಂದು ಇಂಡಿಗೊ ಉತ್ತರಿಸಿದೆ ಎಂದು ಡಿಜಿಸಿಎ ಹೇಳಿದೆ.

ನೈಟ್‌ಕ್ಲಬ್ ಮಾಲೀಕರು ಥಾಯ್ಲೆಂಡ್‌ಗೆ

ಪಣಜಿ/ನವದೆಹಲಿ (ಪಿಟಿಐ): 'ಉತ್ತರ ಗೋವಾದ 'ಬರ್ಚ್ ಬೈ ರೋಮಿಯೊ ಲೇನ್' ನೈಟ್‌ಕ್ಲಬ್‌ನಲ್ಲಿ ಶನಿವಾರ ರಾತ್ರಿ ಸಂಭವಿಸಿದ್ದ ಭಾರಿ ಅಗ್ನಿ ಅವಘಡದ ಬೆನ್ನಲ್ಲೇ, ಮಾಲೀಕರಾದ ಸೌರಭ್ ಹಾಗೂ ಗೌರವ್ ಲೂಥ್ರಾ ಥಾಯ್ಲೆಂಡ್‌ಗೆ ಪರಾರಿಯಾಗಿದ್ದಾರೆ. ಅವರನ್ನು ವಶಕ್ಕೆ ಪಡೆಯಲು ಇಂಟರ್‌ಪೋಲ್ ನೆರವು ಪಡೆಯಲಾಗುವುದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಡಿಸೆಂಬರ್ 7ರ ಬೆಳಿಗ್ಗೆ 5.30ಕ್ಕೆ ಇಂಡಿಗೊ ಏರ್‌ಲೈನ್ಸ್‌ನ 6ಇ–1073 ವಿಮಾನದಲ್ಲಿ ಫುಕೆಟ್ ನಗರಕ್ಕೆ ಪ್ರಯಾಣಿಸಿರುವುದು ವಲಸೆ ದಾಖಲೆಗಳಲ್ಲಿ ಕಂಡುಬಂದಿದೆ. ಈಗ ಅವರನ್ನು ವಶಕ್ಕೆ ಪಡೆದು ಬಂಧಿಸಲು ಇಂಟರ್‌ಪೋಲ್ ನೆರವು ಪಡೆಯಲು ನಿರ್ಧರಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವ್ಯಾಪಕ ಶೋಧ: ದೆಹಲಿಯ ಹಡ್ಸನ್ ಲೇನ್‌ನಲ್ಲಿರುವ ಲೂಥ್ರಾ ಸಹೋದರರ ನಿವಾಸಕ್ಕೆ ಗೋವಾ ಪೊಲೀಸರ ತಂಡ ಸೋಮವಾರ ಭೇಟಿ ನೀಡಿ ಪರಿಶೀಲಿಸಿತು.

'ಕಾಂಗ್ರೆಸ್‌ನಲ್ಲಿ ₹500 ಕೋಟಿ ನೀಡಿದರೆ ಮುಖ್ಯಮಂತ್ರಿ ಸ್ಥಾನ'

ಹೇಳಿಕೆ ತಿರುಚಲಾಗಿದೆ: ನವಜೋತ್ ಕೌರ್

ಚಂಡೀಗಢ (ಪಿಟಿಐ): 'ಮುಖ್ಯಮಂತ್ರಿ ಕುರ್ಚಿಗೆ ₹500 ಕೋಟಿ ನೀಡಬೇಕು' ಎಂಬ ತಮ್ಮ ಹೇಳಿಕೆಯು ರಾಜಕೀಯ ವಲಯದಲ್ಲಿ ಗದ್ದಲ ಎಬ್ಬಿಸಿದ ಬೆನ್ನಲ್ಲೇ ಕಾಂಗ್ರೆಸ್ ನಾಯಕಿ ನವಜೋತ್ ಕೌರ್ ಸಿಧು ಅವರು ಸ್ಪಷ್ಟನೆ ನೀಡಿದ್ದಾರೆ.


ಕೌರ್ ಸಿಧು

'ಕಾಂಗ್ರೆಸ್ ಪಕ್ಷವು ನಮ್ಮಿಂದ ಏನನ್ನೂ ಕೇಳಿಲ್ಲ ಎಂಬ ನನ್ನ ಹೇಳಿಕೆಯನ್ನು ತಿರುಚಿರುವುದನ್ನು ನೋಡಿ ಆಘಾತ ಉಂಟಾಗಿದೆ' ಎಂದು ಭಾನುವಾರ ಸಂಜೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಪತಿ ನವಜೋತ್ ಸಿಂಗ್ ಸಿಧು ಅವರು ಬೇರೆ ಯಾವುದಾದರೂ ಪಕ್ಷದಿಂದ ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿಯಾಗುವರೇ ಎಂಬ ಪ್ರಶ್ನೆಗೆ, ಮುಖ್ಯಮಂತ್ರಿ ಹುದ್ದೆಗೆ ನೀಡಲು ನಮ್ಮ ಬಳಿ ಹಣವಿಲ್ಲ ಎಂದಿದ್ದೆ. ನನ್ನ ಹೇಳಿಕೆಯನ್ನು ತಿರುಚಲಾಗಿದೆ' ಎಂದಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ್ದ ಕೌರ್, ಕಾಂಗ್ರೆಸ್ ಪಕ್ಷವು ತನ್ನ ಪತಿಯನ್ನು ಪಂಜಾಬ್‌ನಲ್ಲಿ ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಎಂದು ಘೋಷಿಸಿದರೆ ಸಕ್ರಿಯ ರಾಜಕಾರಣಕ್ಕೆ ಮರಳುತ್ತಾರೆ ಎಂದು ಹೇಳಿದ್ದರು.

'ಯಾವುದೇ ಪಕ್ಷಕ್ಕೆ ನೀಡಲು ನಮ್ಮ ಬಳಿ ಹಣವಿಲ್ಲ. . ಆದರೆ ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತುಕೊಳ್ಳಲು ನೀಡಬೇಕಾದ ₹500 ಕೋಟಿ ನಮ್ಮಲ್ಲಿಲ್ಲ' ಎಂದಿದ್ದರು.

ಯಾರಾದರೂ ನಿಮ್ಮಲ್ಲಿ ಹಣಕ್ಕೆ ಬೇಡಿಕೆಯಿಟ್ಟಿದ್ದಾರೆಯೇ ಎಂಬ ಪ್ರಶ್ನೆಗೆ, 'ಯಾರೂ ಬೇಡಿಕೆ ಇಟ್ಟಿಲ್ಲ. ಆದರೆ ₹500 ಕೋಟಿ ಇರುವ ಸೂಟ್‌ಕೇಸ್ ನೀಡುವವರು ಮುಖ್ಯಮಂತ್ರಿ ಆಗುತ್ತಾರೆ' ಎಂದು ಅವರು ಪ್ರತಿಕ್ರಿಯಿಸಿದ್ದರು.

> **ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಹುದ್ದೆಗೆ ₹ 500 ಕೋಟಿ ನೀಡಬೇಕು ಎಂದು ಹೇಳಿದವರನ್ನು ಹುಚ್ಚಾಸ್ಪತ್ರೆಗೆ ಸೇರಿಸೋಣ**
> **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

ಸಿ.ಎಂ ಕುರ್ಚಿಗೆ ಬೆಲೆ ಎಷ್ಟು ನಿಗದಿ: ಅಶೋಕ

ಬೆಳಗಾವಿ: 'ಪಂಜಾಬ್‌ನಂತಹ ಸಣ್ಣ ರಾಜ್ಯದಲ್ಲೇ ಮುಖ್ಯಮಂತ್ರಿ ಅಭ್ಯರ್ಥಿ ಘೋಷಣೆಗೆ ಕಾಂಗ್ರೆಸ್ ಹೈಕಮಾಂಡ್ ₹500 ಕೋಟಿ ಬೆಲೆ ನಿಗದಿ ಮಾಡಿದ್ದರೆ, ಕರ್ನಾಟಕದಂತಹ ಸಂಪದ್ಭರಿತ ರಾಜ್ಯದಲ್ಲಿ ಎಷ್ಟು ನಿಗದಿ ಮಾಡಿರಬಹುದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದ್ದಾರೆ. ಪಂಜಾಬ್‌ನ ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಅವರ ಪತ್ನಿಯ ಹೇಳಿಕೆಯನ್ನು ಉಲ್ಲೇಖಿಸಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅಶೋಕ, 'ನಾಯಕತ್ವ ಬದಲಾವಣೆ ವಿಷಯ ದೆಹಲಿಯಲ್ಲಿ ನಮ್ಮ ಐದಾರು ಜನರ ನಡುವಿನ 'ಗುಟ್ಟಿನ ವ್ಯಾಪಾರ' ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದು, ಬಹುಶಃ ಇದೇ ಕಾರಣಕ್ಕಿರಬಹುದು' ಎಂದಿದ್ದಾರೆ.

ಅಮಾನತು

ಚಂಡೀಗಢ: ಪಕ್ಷದ ವರ್ಚಸ್ಸಿಗೆ ಧಕ್ಕೆ ತರುವಂತಹ ಹೇಳಿಕೆ ನೀಡಿದ್ದಕ್ಕೆ ನವಜೋತ್ ಕೌರ್ ಸಿಧು ಅವರನ್ನು ಪಂಜಾಬ್ ಕಾಂಗ್ರೆಸ್ ಸೋಮವಾರ ಅಮಾನತು ಮಾಡಿದೆ.

ಟಿ20 ವಿಶ್ವಕಪ್‌ಗೆ ತಾಲೀಮು ಆರಂಭ

ದಕ್ಷಿಣ ಆಫ್ರಿಕಾ ವಿರುದ್ಧ ಟಿ20 ಸರಣಿ ಇಂದಿನಿಂದ • ಭಾರತಕ್ಕೆ ಗಿಲ್, ಪಾಂಡ್ಯ ಬಲ



ಭಾರತ ಟಿ20 ತಂಡದ ಉಪನಾಯಕ ಶುಭಮನ್ ಗಿಲ್ ಹಾಗೂ ಆರಂಭ ಬ್ಯಾಟರ್ ಅಭಿಷೇಕ್ ಶರ್ಮಾ ಅವರು ತಾಲೀಮು ವೇಳೆ ಹರಟೆ ಹೊಡೆದರು ಪಿಟಿಐ ಚಿತ್ರಗಳು

ಕಟಕ್ (ಪಿಟಿಐ): ಭಾರತ ಮತ್ತು ಶ್ರೀಲಂಕಾದಲ್ಲಿ ನಡೆಯಲಿರುವ ಐಸಿಸಿ ಪುರುಷರ ಟಿ20 ವಿಶ್ವಕಪ್‌ಗೆ ಎರಡು ತಿಂಗಳಷ್ಟೇ ಉಳಿದಿದೆ. ಹೀಗಾಗಿ ದಕ್ಷಿಣ ಆಫ್ರಿಕಾ ವಿರುದ್ಧ ಮಂಗಳವಾರ ಇಲ್ಲಿ ಆರಂಭವಾಗುವ ಐದು ಪಂದ್ಯಗಳ ಟಿ20 ಸರಣಿ ಭಾರತ ತಂಡಕ್ಕೆ ಅಧಿಕೃತ ತಾಲೀಮು ಆಗಿದೆ.

ಐಸಿಸಿ ಟೂರ್ನಿಗೆ ಮೊದಲು ಭಾರತ ತಂಡವು ಸಿದ್ಧತೆಯ ರೂಪದಲ್ಲಿ 10 ಚುಟುಕು ಮಾದರಿಯ ಪಂದ್ಯಗಳನ್ನು ಆಡಲಿದೆ. ದಕ್ಷಿಣ ಆಫ್ರಿಕಾ ವಿರುದ್ಧ ಸರಣಿಯ ನಂತರ, ನ್ಯೂಜಿಲೆಂಡ್ ವಿರುದ್ಧವೂ ತವರಿನಲ್ಲಿ ಐದು ಪಂದ್ಯಗಳನ್ನು ಆಡಲಿದೆ. ನಂತರ ಫೆಬ್ರುವರಿ 7ರಂದು ಮುಂಬೈನಲ್ಲಿ ಅಮೆರಿಕ ತಂಡವನ್ನು ಎದುರಿಸುವ ಮೂಲಕ ಹಾಲಿ ಚಾಂಪಿಯನ್ ಭಾರತ ತಂಡವು ವಿಶ್ವಕಪ್ ಅಭಿಯಾನವನ್ನು ಆರಂಭಿಸಲಿದೆ.

ಆಟಗಾರರ ಪಾತ್ರದ ಸ್ಪಷ್ಟತೆ, ತಂಡ ಸಂಯೋಜನೆ, ದೌರ್ಬಲ್ಯಗಳನ್ನು ತಿದ್ದಿಕೊಳ್ಳಲು ಈ ಪಂದ್ಯಗಳು ನೆರವಾಗಲಿವೆ. ಈ ಹಿಂದಿನ ವಿಶ್ವಕಪ್‌ನಲ್ಲಿ ಭಾರತ ಸತತ ಎಂಟು ಪಂದ್ಯಗಳನ್ನು ಗೆದ್ದು ವೀರೋಚಿತ ರೀತಿಯಲ್ಲಿ ಟ್ರೋಫಿ ಎತ್ತಿಹಿಡಿದಿತ್ತು. ನಂತರವೂ ಭಾರತದ ಪ್ರಾಬಲ್ಯ ಮುಂದುವರಿಯಿತು. 26 ಪಂದ್ಯಗಳನ್ನು ಗೆದ್ದಿರುವ ಭಾರತ ನಾಲ್ಕರಲ್ಲಿ ಮಾತ್ರ ಸೋತಿದೆ.

ಉಪನಾಯಕ ಶುಭಮನ್ ಗಿಲ್ ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಈ ಸರಣಿಗೆ ಮರಳುತ್ತಿರುವುದು ತಂಡಕ್ಕೆ ಅಗತ್ಯವಾಗಿರುವ ಸಮತೋಲನ ಒದಗಿಸಲಿದೆ. ಕುತ್ತಿಗೆ ನೋವಿನಿಂದ ಒಂದು ತಿಂಗಳು ಕ್ರಿಕೆಟ್‌ನಿಂದ ದೂರವಿದ್ದ ಗಿಲ್ ಪುನರಾಗಮನಕ್ಕೆ ಸಜ್ಜಾಗಿದ್ದಾರೆ. 2025ರ ಐಪಿಎಲ್‌ನಿಂದ ಅವರು ಸತತವಾಗಿ ಆಡಿದ್ದರು.

33 ಟಿ20 ಪಂದ್ಯಗಳಿಂದ 837 ರನ್ (ಸರಾಸರಿ: 29.89) ಗಳಿಸಿರುವ ಗಿಲ್ ಅವರಿಗೆ ವಿಶ್ವಕಪ್‌ಗೆ ತಯಾರಿ ದೃಷ್ಟಿಯಿಂದ ಈ ಸರಣಿ ಮಹತ್ವದ್ದು. ಅಭಿಷೇಕ್ ಶರ್ಮಾ ಜೊತೆ ಅವರ ಇನಿಂಗ್ಸ್ ಆರಂಭವು ಆಕ್ರಮಣ ಮತ್ತು ಸಾಂಪ್ರದಾಯಿಕ ಸ್ಟ್ರೋಕ್ ಪ್ಲೇ ಮಿಶ್ರಣಕ್ಕೆ ದಾರಿಯಾಗಲಿದೆ. ಆಸ್ಟ್ರೇಲಿಯಾ ಎದುರಿನ ಸರಣಿಯಲ್ಲಿ ಶರ್ಮಾ 164 ರನ್ ಗಳಿಸಿದ್ದರು. ಸೈಯದ್ ಮುಷ್ತಾಕ್ ಅಹ್ಮದ್ ಟ್ರೋಫಿ ಪಂದ್ಯಗಳಲ್ಲೂ ಮಿಂಚಿದ್ದು 50.66ರ ಸರಾಸರಿಯಲ್ಲಿ 304 ರನ್ ಗಳಿಸಿದ್ದು ಉತ್ತಮ ಲಯದಲ್ಲಿದ್ದಾರೆ.



ದಕ್ಷಿಣ ಆಫ್ರಿಕಾ ತಂಡದ ನಾಯಕ ಏಡನ್ ಮರ್ಕರಂ

ಪಾಂಡ್ಯ ಪುನರಾಗಮನ: ಹಾರ್ದಿಕ್ ಪಾಂಡ್ಯ ಪುನರಾಗಮನವೂ ಅಷ್ಟೇ ಮಹತ್ವದ್ದು. ಏಷ್ಯಾ ಕಪ್ ವೇಳೆ ತೊಡೆಯ ನೋವಿಗೆ ಒಳಗಾದ ಬಳಿಕ ಅವರೂ ಕ್ರಿಕೆಟ್‌ನಿಂದ ದೂರವಿದ್ದರು. ಸೈಯದ್ ಮುಷ್ತಾಕ್ ಅಹ್ಮದ್ ಟಿ20 ಟೂರ್ನಿಯಲ್ಲಿ ಬರೋಡ ಪರ 42 ಎಸೆತಗಳಲ್ಲಿ 77 ರನ್ ಬಾರಿಸುವ ಮೂಲಕ ಗಮನಸೆಳೆಯುವಂತೆ ಪುನರಾಗಮನ ಮಾಡಿದ್ದಾರೆ. ನಾಲ್ಕು ಓವರುಗಳನ್ನೂ ಮಾಡಿದ್ದಾರೆ.

ತಂಡ ಆಗಮಿಸುವ ಒಂದು ದಿನ ಮೊದಲೇ ಬಾರಬತಿ ಕ್ರೀಡಾಂಗಣಲ್ಲಿ ಬಂದು ಒಂಟಿಯಾಗಿ ಅಭ್ಯಾಸ ನಡೆಸಿದ್ದಾರೆ. ವ್ಯಾಯಾಮದ ಜೊತೆ 20 ನಿಮಿಷ ಬೌಲಿಂಗ್ ಮಾಡಿದ್ದಾರೆ. ಪಾಂಡ್ಯ ಅವರಿಂದ ಬ್ಯಾಟಿಂಗ್ ಬಲಗೊಳ್ಳಲಿದೆ.

ಬೆಳಗುವರೇ 'ಸೂರ್ಯ': ಸರಣಿ ಆರಂಭಕ್ಕೆ ಮೊದಲು ಚರ್ಚೆಯ ಪ್ರಮುಖ ವಿಷಯವೆಂದರೆ ಸೂರ್ಯಕುಮಾರ್ ಅವರ ಫಾರ್ಮ್. 2024ರ ಜುಲೈನಲ್ಲಿ ನಾಯಕನಾದ ಬಳಿಕ 15 ಇನಿಂಗ್ಸ್‌ಗಳಲ್ಲಿ ಅವರು 15.33 ಸರಾಸರಿಯಲ್ಲಿ 184 ರನ್ ಮಾತ್ರ ಗಳಿಸಿದ್ದಾರೆ. ಕೊನೆಯ 20 ಪಂದ್ಯಗಳಲ್ಲಿ ಒಮ್ಮೆಯೂ ಅರ್ಧ ಶತಕ ಗಳಿಸಿಲ್ಲ. ಸ್ಟ್ರೈಕ್ ರೇಟ್ ಸಹ ಕುಗ್ಗಿದೆ. ತಮ್ಮ ನಾಯಕತ್ವ ಮತ್ತು ಫಾರ್ಮಿಗೆ ಸಂಬಂಧಿಸಿ ಟೀಕೆಗಳು ಎದುರಾಗದಂತೆ ನೋಡಿಕೊಳ್ಳಲು ಮುಂದಿನ ಪಂದ್ಯಗಳು ಅವರ ಪಾಲಿಗೆ ಮಹತ್ವದ್ದಾಗಲಿವೆ.

ಸಂಜು– ಜಿತೇಶ್ ಪೈಪೋಟಿ: ವಿಕೆಟ್ ಕೀಪರ್ ಸ್ಥಾನಕ್ಕೆ ಅನುಭವಿ ಸಂಜು ಸ್ಯಾಮ್ಸನ್ ಮತ್ತು ಯುವ ತಾರೆ ಜಿತೇಶ್ ಶರ್ಮಾ ಅವರ ಮಧ್ಯೆ ಪೈಪೋಟಿಯಿದೆ. ಹಾಲಿ ದೇಶಿ ಟಿ20 ಟೂರ್ನಿಯಲ್ಲಿ ಸಂಜು ಸ್ಯಾಮ್ಸನ್ ಮಿಂಚಿದ್ದಾರೆ. ಆದರೆ ಆರು ಪಂದ್ಯಗಳಲ್ಲಿ ಜಿತೇಶ್ ಅಷ್ಟೇನೂ ಗಮನಸೆಳೆದಿಲ್ಲ.

ಆಫ್ರಿಕಾ ಉತ್ಸಾಹ: ದಕ್ಷಿಣ ಆಫ್ರಿಕಾ ಸಹ ಕಳೆದ ಟಿ20 ವಿಶ್ವಕಪ್ ಫೈನಲ್ ನಂತರ, ವೇಗದ ಬೌಲರ್ ಆ್ಯನ್ರಿಚ್ ನಾಕಿಯಾ ಅವರನ್ನು ಆಡಿಸಲು ಸಜ್ಜಾಗಿದೆ. ಮಾರ್ಕೊ ಯಾನ್ಸೆನ್ ಪ್ರಬಲ ಆಲ್‌ರೌಂಡರ್ ಆಗಿ ರೂಪುಗೊಂಡಿರುವುದು ತಂಡದ ಬಲ ವೃದ್ಧಿಸಿದೆ.

ಆದರೆ ತಂಡವು ಬ್ಯಾಟರ್ ಟೋನಿ ಡಿ ಝೋರ್ಜಿ ಮತ್ತು ವೇಗದ ಬೌಲರ್ ಕ್ವೆನಾ ಮಫಾಕಾ ಅವರನ್ನು ಕಳೆದುಕೊಂಡಿದೆ. ಇಬ್ಬರೂ ಗಾಯಾಳಾಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಒಟ್ಟು ಪಂದ್ಯಗಳು 31

ಭಾರತ ಜಯ	18
ದಕ್ಷಿಣ ಆಫ್ರಿಕಾಕ್ಕೆ ಜಯ	12
ಫಲಿತಾಂಶವಿಲ್ಲ	1

ತಂಡಗಳು

ಭಾರತ: ಸೂರ್ಯಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್ (ಉಪ ನಾಯಕ), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಸಂಜು ಸ್ಯಾಮ್ಸನ್, ಜಿತೇಶ್ ಶರ್ಮಾ (ಇಬ್ಬರೂ ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ಶಿವಂ ದುಬೆ, ವಾಷಿಂಗ್ಟನ್ ಸುಂದರ್, ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್, ಹರ್ಷಿತ್ ರಾಣಾ, ಕುಲದೀಪ್ ಯಾದವ್, ವರುಣ್ ಚಕ್ರವರ್ತಿ.

ದಕ್ಷಿಣ ಆಫ್ರಿಕಾ: ಏಡನ್ ಮರ್ಕರಂ (ನಾಯಕ), ಒಟನೀಲ್ ಬಾರ್ಟ್‌ಮನ್, ಕಾರ್ಬಿನ್ ಬಾಷ್, ಡೆವಾಲ್ಡ್ ಬ್ರೆವಿಸ್, ಕ್ವಿಂಟನ್ ಡಿಕಾಕ್, ಡೊನವಾನ್ ಫೆರೀರಾ, ರೀಝಾ ಹೆಂಡ್ರಿಕ್ಸ್, ಮಾರ್ಕೊ ಯಾನ್ಸೆನ್, ಜಾರ್ಜ್ ಲಿಂಡೆ, ಕೇಶವ್ ಮಹಾರಾಜ್, ಡೇವಿಡ್ ಮಿಲ್ಲರ್, ಲುಂಗಿ ಎನ್ಗಿಡಿ, ಆ್ಯನ್ರಿಚ್ ನಾಕಿಯಾ, ಟ್ರಿಸ್ಟನ್ ಸ್ಟಬ್ಸ್.

ಸೆಮಿಗೆ ಕರ್ನಾಟಕ ವನಿತೆಯರು

ಬಿಸಿಸಿಐ 23 ವರ್ಷದೊಳಗಿನ ಮಹಿಳೆಯರ ಟಿ20 ಟ್ರೋಫಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭ ಆಟಗಾರ್ತಿ ನಿಕಿ ಪ್ರಸಾದ್ ಅವರ ಅರ್ಧಶತಕ ಹಾಗೂ ಪಿ. ಸಲೋನಿ ಅವರ ಆಲ್‌ರೌಂಡ್ ಆಟದ ಬಲದಿಂದ ಕರ್ನಾಟಕ ತಂಡವು ಬಿಸಿಸಿಐ 23 ವರ್ಷದೊಳಗಿನ ಮಹಿಳೆಯರ ಟಿ20 ಟ್ರೋಫಿ ಎಲೀಟ್ ಕ್ರಿಕೆಟ್ ಟೂರ್ನಿಯಲ್ಲಿ ತಮಿಳುನಾಡು ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿ, ಸೆಮಿಫೈನಲ್ ಪ್ರವೇಶಿಸಿತು.



ನಿಕಿ ಪ್ರಸಾದ್

ಅಹಮದಾಬಾದ್‌ನ ಎಡಿಎಸ್‌ಎ ರೈಲ್ವೇಸ್ ಕ್ರಿಕೆಟ್ ಮೈದಾನದಲ್ಲಿ ಸೋಮವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ತಮಿಳುನಾಡು ತಂಡವು ನಿಗದಿತ ಓವರ್‌ಗಳಲ್ಲಿ 5 ವಿಕೆಟ್‌ಗೆ 129 ರನ್ ಗಳಿಸಿತು.

ಆರಂಭ ಆಟಗಾರ್ತಿಯರಾದ ಎನ್.ಎಸ್.ಶುಭಹರಿಣಿ (46) ಹಾಗೂ ಜಿ.ಕಮಲಿನಿ (41) ಅವರು 92 ರನ್ ಸೇರಿಸಿ ಉತ್ತಮ ಬುನಾದಿ ಹಾಕಿಕೊಟ್ಟರು. ಆದರೆ, ನಂತರ ಬಂದ ಬ್ಯಾಟರ್‌ಗಳು ವಿಫಲರಾದರು. ಕರ್ನಾಟಕದ ಸಲೋನಿ ಪಿ. 18 ರನ್‌ಗಳಿಗೆ 2 ವಿಕೆಟ್ ಪಡೆದರೆ, ನಮಿತಾ ಡಿಸೋಜಾ ಹಾಗೂ ಬಿ.ಜಿ.ತೇಜಸ್ವಿನಿ ತಲಾ ಒಂದು ವಿಕೆಟ್ ಕಿತ್ತರು.

ಸ್ಪರ್ಧಾತ್ಮಕ ಗುರಿ ಬೆನ್ನಟ್ಟಿದ ರೋಷಿಣಿ ಕಿರಣ್ ಬಳಗವು 18.1 ಓವರ್‌ಗಳಲ್ಲಿ 4 ವಿಕೆಟ್‌ಗೆ 131 ರನ್ ಗಳಿಸಿ ಸಂಭ್ರಮಿಸಿತು. ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ, ದಿಟ್ಟವಾಗಿ ಆಡಿದ ನಿಕಿ (ಔಟಾಗದೇ 58) ಅವರು ತಂಡವನ್ನು ಗೆಲುವಿನ ದಡ ಸೇರಿಸಿದರು. ಬಿರುಸಿನ ಆಟವಾಡಿದ ತೇಜಸ್ವಿನಿ (17) ಹಾಗೂ ಸಾಲೊನಿ (22) ಅವರೂ ಉಪಯುಕ್ತ ಕೊಡುಗೆ ನೀಡಿದರು.

ಕರ್ನಾಟಕ ತಂಡವು ಮಂಗಳವಾರ (ಡಿಸೆಂಬರ್ 9) ನಡೆಯಲಿರುವ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ದೆಹಲಿ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ತಮಿಳುನಾಡು: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 129 (ಎನ್.ಎಸ್.ಶುಭಹರಿಣಿ 46, ಜಿ.ಕಮಲಿನಿ 41; ಪಿ. ಸಲೋನಿ 18ಕ್ಕೆ 2). ಕರ್ನಾಟಕ: 18.1 ಓವರ್‌ಗಳಲ್ಲಿ 4 ವಿಕೆಟ್‌ಗೆ 131 (ನಿಕಿ ಪ್ರಸಾದ್ ಔಟಾಗದೇ 58, ಸಲೋನಿ 22; ಎಂ.ಎಸ್.ಐಶ್ವರ್ಯ 13ಕ್ಕೆ1). ಫಲಿತಾಂಶ: ಕರ್ನಾಟಕ ತಂಡಕ್ಕೆ ಆರು ವಿಕೆಟ್‌ಗಳ ಜಯ.

ಕರ್ನಾಟಕ ತಂಡಕ್ಕೆ ರಚಿತಾ ನಾಯಕತ್ವ

ಉಡುಪಿ: ಬಿಸಿಸಿಐ 19 ವರ್ಷದೊಳಗಿನ ಮಹಿಳಾ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಕುಂದಾಪುರದ ರಚಿತಾ ಹತ್ವಾರ್ ಮುನ್ನಡೆಸಲಿದ್ದಾರೆ.

ಇದೇ 13 ರಿಂದ 21ರವರೆಗೆ ಹೈದರಾಬಾದ್‌ನಲ್ಲಿ ಟೂರ್ನಿ ನಡೆಯಲಿದ್ದು, ತಂಡದ ನಾಯಕಿಯಾಗಿ ರಚಿತಾ ಆಯ್ಕೆಯಾಗಿದ್ದಾರೆ. ವಿಕೆಟ್ ಕೀಪಿಂಗ್ ಮತ್ತು ಬ್ಯಾಟರ್ ಆಗಿರುವ ರಚಿತಾ ಸದ್ಯ ಅಹಮದಾಬಾದ್‌ನಲ್ಲಿ ನಡೆಯುತ್ತಿರುವ 23 ವರ್ಷದೊಳಗಿನ ಮಹಿಳಾ ಟಿ20 ಕ್ರಿಕೆಟ್‌ನಲ್ಲಿ ಕರ್ನಾಟಕದ ಪರ ಆಡುತ್ತಿದ್ದಾರೆ.



ರಚಿತಾ ಹತ್ವಾರ್

ಕುಂದಾಪುರದ ವಕೀಲರಾದ ರಮೇಶ್ ಹತ್ವಾರ್ ಹಾಗೂ ಸರಿತಾ ಹತ್ವಾರ್ ದಂಪತಿಯ ಪುತ್ರಿಯಾಗಿರುವ ರಚಿತಾ ಅವರು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್‌ನಲ್ಲಿ (ಎನ್‌ಐಒಎಸ್) ಪ್ರಥಮ ಪಿಯುಸಿ ಕಲಿಯುತ್ತಿದ್ದಾರೆ.

ರಚಿತಾ ಅವರು 2023ರಲ್ಲಿ 16 ವರ್ಷದೊಳಗಿನ ಕರ್ನಾಟಕ ರಾಜ್ಯ ತಂಡಕ್ಕೆ ವಿಕೆಟ್ ಕೀಪರ್, ಆರಂಭಿಕ ಬ್ಯಾಟರ್ ಆಗಿ ಸೇರ್ಪಡೆಗೊಂಡಿದ್ದರು.

ಸುಸ್ತಾಗಿ ಥ್ರೊ ಮಾಡಿದ್ದೆ: ಶಕೀಬ್ ಒಪ್ಪಿಗೆ



ಶಕೀಬ್ ಅಲ್ ಹಸನ್

ಲಂಡನ್ (ಪಿಟಿಐ): ಸರ್ರೆ ತಂಡದ ಪರ ಕೌಂಟಿ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಆಡುವಾಗ ಸುಸ್ತಾಗಿದ್ದ ಕಾರಣ ಬೌಲಿಂಗ್ ಮಾಡುವ ವೇಳೆ ಕೆಲವೊಮ್ಮೆ ಚೆಂಡನ್ನು ಉದ್ದೇಶಪೂರ್ವಕವಾಗಿ 'ಎಸೆಯುತ್ತಿದ್ದೆ' ಎಂದು ಬಾಂಗ್ಲಾದೇಶ ತಂಡದಿಂದ ಹೊರಬಿದ್ದಿರುವ ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಒಪ್ಪಿಕೊಂಡಿದ್ದಾರೆ.

ಎಡಗೈ ಸ್ಪಿನ್ನರ್ ಶಕೀಬ್ ಅವರ ಬೌಲಿಂಗ್ ಶೈಲಿ ನಿಯಮ ಬದ್ಧವಾಗಿಲ್ಲ ಎಂದು ಖಚಿತವಾದ ನಂತರ ಅವರನ್ನು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಯು (ಇಸಿಬಿ) ತಾನು ಆಯೋಜಿಸುವ ಟೂರ್ನಿಗಳಿಂದ 2024ರ ಡಿಸೆಂಬರ್‌ನಲ್ಲಿ ಅಮಾನತು ಮಾಡಿತ್ತು.

ಟಾಂಟನ್‌ನಲ್ಲಿ ಸಾಮರ್ಸೆಟ್ ವಿರುದ್ಧ ಪಂದ್ಯದ ವೇಳೆ ಅವರ ಬೌಲಿಂಗ್ ಶೈಲಿ ಶಂಕಾಸ್ಪದವಾಗಿದೆ ಎಂದು ಅಂಪೈರ್‌ಗಳು ವರದಿ ಮಾಡಿದ್ದರು. 'ನಾಲ್ಕು ದಿನಗಳ ಆ ಪಂದ್ಯದಲ್ಲಿ ನಾನು 70 ಓವರ್ ಬೌಲಿಂಗ್ ಮಾಡಿದ್ದೆ. ಆಯಾಸವಾಗಿತ್ತು. ಉದ್ದೇಶಪೂರ್ವಕವಾಗಿ ಕೆಲವೊಮ್ಮೆ 'ಥ್ರೊ' ಮಾಡುತ್ತಿದ್ದೆ' ಎಂದು ಅವರು ಭಾನುವಾರ 'ಬಿಯರ್ಡ್ ಬಿಫೋರ್ ವಿಕೆಟ್ ಪೋಡ್‌ಕಾಸ್ಟ್'ನಲ್ಲಿ ಬಹಿರಂಗಪಡಿಸಿದ್ದಾರೆ.

'ನಾನು ಟೆಸ್ಟ್ ಪಂದ್ಯದಲ್ಲಿ ಸಹ 70 ಓವರುಗಳನ್ನು ಮಾಡಿರಲಿಲ್ಲ. ಸಾಲದ್ದಕ್ಕೆ ಆಗಷ್ಟೇ ಪಾಕಿಸ್ತಾನ ಪ್ರವಾಸ ಮುಗಿಸಿದ್ದೆ. ಅಲ್ಲಿ ನಮ್ಮ ತಂಡ ಸರಣಿ ಗೆದ್ದಿತ್ತು. ನಂತರ ಈ ಕೌಂಟಿ ಪಂದ್ಯಕ್ಕೆ ಬಂದಿದ್ದೆ' ಎಂದಿದ್ದಾರೆ 38 ವರ್ಷದ ಶಕೀಬ್. ಕೆಲ ಸಮಯದ ನಂತರ ಅವರು ಬೌಲಿಂಗ್ ಆ್ಯಕ್ಷನ್ ಸರಿಪಡಿಸಿಕೊಂಡಿದ್ದರು.

ತವರಿನಲ್ಲಿ ವಿದಾಯದ ಆಸೆ: ತವರಿಗೆ ಮರಳಿ ಮೂರೂ ಮಾದರಿಯ ಪಂದ್ಯಗಳಲ್ಲಿ ಆಡಿ, ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಬೇಕೆಂಬ ಬಯಕೆಯಿದೆ ಎಂದು ಶಕೀಬ್ ಹೇಳಿದ್ದಾರೆ. ಬಾಂಗ್ಲಾದೇಶ ಕಂಡ ಮಹಾನ್ ಆಟಗಾರ ಎಂಬ ಶ್ರೇಯ ಅವರದು.

ಶೇಕ್ ಹಸೀನಾ ನೇತೃತ್ವದ ಸರ್ಕಾರ ಪತನಗೊಂಡ ಬಳಿಕ, ಶಕೀಬ್ ದೇಶ ತೊರೆದಿದ್ದರು. ಅವರು ಹಸೀನಾ ಅವರ ಅವಾಮಿ ಲೀಗ್ ಪಕ್ಷದ ಸಂಸದರಾಗಿದ್ದರು.

'ನಾನು ಯಾವುದೇ ಮಾದರಿಗೆ ಅಧಿಕೃತವಾಗಿ ಇನ್ನೂ ನಿವೃತ್ತಿ ಹೇಳಿಲ್ಲ' ಎಂದು ಶಕೀಬ್ ಅವರು ಪಾಡ್‌ಕಾಸ್ಟ್‌ನಲ್ಲಿ ತಿಳಿಸಿದ್ದಾರೆ.

ಚಟಿಕೆ ಸುದ್ದಿ

ಟಿಟಿ: ಸಾಕ್ಷ್ಯಾಗೆ ಕಂಚು



ಬೆಂಗಳೂರು: ಕರ್ನಾಟಕದ ಬಾಲಪ್ರತಿಭೆ ಸಾಕ್ಷ್ಯಾ ಸಂತೋಷ್ ಅವರು ರಾಂಚಿಯಲ್ಲಿ ನಡೆದ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಯೂತ್ ಬಾಲಕಿಯರ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಗೆದ್ದರು.

10 ವರ್ಷದ ಸಾಕ್ಷ್ಯಾ ಅವರು ಸೆಮಿಫೈನಲ್‌ನಲ್ಲಿ 1–3 (13–15, 9–11, 11–2, 10–11) ರಿಂದ ಆಧ್ಯಾ ಅವರಿಗೆ ಶರಣಾಗಿ, ಕಂಚಿನ ಪದಕದೊಂದಿಗೆ ಅಭಿಯಾನ ಮುಗಿಸಿದರು

ಕರ್ನಾಟಕದ ಆಟಗಾರ್ತಿ ಕ್ವಾರ್ಟರ್ ಫೈನಲ್‌ನಲ್ಲಿ 3–0ಯಿಂದ ಹರಿಯಾಣದ ಮೋಕ್ಷಾ ಅವರನ್ನು ಮಣಿಸಿದ್ದರು.

ಹಾಕಿ: ಡಿವೈಇಎಸ್ ಬಿ ತಂಡಕ್ಕೆ ಜಯ

ಬೆಂಗಳೂರು: ಆರ್. ಲಿಥು (19ನೇ ನಿ., 56ನೇ ನಿ. ಹಾಗೂ 60ನೇ ನಿ.) ಅವರ ಹ್ಯಾಟ್ರಿಕ್ ಗೋಲಿನ ನೆರವಿನಿಂದ ಡಿವೈಇಎಸ್ ಬಿ ತಂಡವು ನಾಮಧಾರಿ ಕಪ್ ಹಾಕಿ ಟೂರ್ನಿಯ ಪಂದ್ಯದಲ್ಲಿ ಸೋಮವಾರ 6–1ರಿಂದ ಸಾಯ್ ಎಸ್‌ಟಿಸಿ ಬಿ ತಂಡವನ್ನು ಸುಲಭವಾಗಿ ಮಣಿಸಿತು.

ಡಿವೈಇಎಸ್ ಬಿ ತಂಡದ ಅಖಿಲ್ ಎಂ. (7ನೇ ನಿ.), ಶ್ರೀನಿವಾಸ್ ತಳವಾರ್ (50ನೇ ನಿ.) ಹಾಗೂ ಪ್ರೇಮ್‌ಕುಮಾರ್ 57ನೇ ನಿ.) ಅವರು ತಲಾ ಒಂದು ಗೋಲು ಗಳಿಸಿದರು. ನಯೀಮುದ್ದೀನ್ (24ನೇ ನಿ.) ಅವರು ಸಾಯ್ ಎಸ್‌ಟಿಸಿ ಬಿ ತಂಡದ ಪರ ಏಕೈಕ ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಸಂಘಟಿತ ಆಟವಾಡಿದ ಕೆನರಾ ಬ್ಯಾಂಕ್ ತಂಡವು 5–2 ಗೋಲುಗಳಿಂದ ಪೋಸ್ಟಲ್ ತಂಡದ ವಿರುದ್ಧ ಗೆಲುವು ಸಾಧಿಸಿತು. ಕೆನರಾ ಬ್ಯಾಂಕ್ ತಂಡದ ಅಭಿಷೇಕ್ (6ನೇ ನಿ.), ಬಿಪಿನ್ ಬಿ.ಆರ್. (24ನೇ ಹಾಗೂ 36ನೇ ನಿ.), ನಿತೇಶ್ ಶರ್ಮಾ (40ನೇ ನಿ.) ಹಾಗೂ ರತನ್ ಎಂ. (41ನೇ ನಿ.) ತಲಾ ಒಂದು ಗೋಲು ಹೊಡೆದರು. ಪೋಸ್ಟಲ್ ತಂಡದ ಪರ ಶ್ರೀರಾಮ (19ನೇ ನಿ.) ಹಾಗೂ ಚೇತನ್ ಚಿನ್ನಪ್ಪ (52ನೇ ನಿ.) ತಲಾ ಒಂದು ಗೋಲು ಹೊಡೆದರು.

17ರಿಂದ ಟಿ.ಟಿ ಟೂರ್ನಿ

ಬೆಂಗಳೂರು: ಮಲ್ಲೇಶ್ವರದ ಕೆನರಾ ಯೂನಿಯನ್‌ನಲ್ಲಿ ಸಿ.ವಿ.ಎಲ್. ಶಾಸ್ತ್ರಿ ಸ್ಮಾರಕ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ಅನ್ನು ಇದೇ 17 ರಿಂದ 21ರವರೆಗೆ ಹಮ್ಮಿಕೊಳ್ಳಲಾಗಿದೆ.

11, 13, 15, 17 ಹಾಗೂ 19 ವರ್ಷದೊಳಗಿನವರ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್ ಹಾಗೂ ಪುರುಷರ, ಮಹಿಳೆಯರ, ಎನ್‌ಎಂಎಸ್ ಸಿಂಗಲ್ಸ್ ಸ್ಪರ್ಧೆಗಳು ನಡೆಯಲಿವೆ. ನೋಂದಣಿಗೆ ಇದೇ 13 ಕೊನೆಯ ದಿನವಾಗಿದೆ. ಮಾಹಿತಿಗೆ ಸಂಜಯ್ ಮೊ: 94484 85357.

ಎಸ್‌ಎಂಎಟಿ: ಸೋಲಿನೊಂದಿಗೆ ಅಭಿಯಾನ ಮುಗಿಸಿದ ಮಯಂಕ್ ಪಡೆ

ಕರ್ನಾಟಕ ತಂಡಕ್ಕೆ ತ್ರಿಪುರ ಆಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಮತ್ತೊಂದು ಆಘಾತಕಾರಿ ಸೋಲಿನೊಂದಿಗೆ ಈ ಬಾರಿಯ ಅಭಿಯಾನ ಮುಗಿಸಿತು. ಅಹಮ-ದಾಬಾದ್‌ನಲ್ಲಿ ಸೋಮವಾರ ನಡೆದ ಡಿ ಗುಂಪಿನ ಪಂದ್ಯದಲ್ಲಿ ಮಯಂಕ್ ಅಗರವಾಲ್ ಬಳಗವು ಸೂಪರ್ ಓವರ್‌ನಲ್ಲಿ ಅನನುಭವಿ ತ್ರಿಪುರ ತಂಡಕ್ಕೆ ಶರಣಾಯಿತು.

ಕ್ವಾರ್ಟರ್ ಫೈನಲ್ ರೇಸ್‌ನಿಂದ ಈ ಮೊದಲೇ ಹೊರಬಿದ್ದಿದ್ದ ಎರಡು ಬಾರಿಯ ಚಾಂಪಿಯನ್ ಕರ್ನಾಟಕ ತಂಡವು ಗೆಲುವಿನೊಡನೆ ಅಭಿಯಾನ ಮುಗಿಸುವ ಗುರಿಯಲ್ಲಿತ್ತು. ಆದರೆ, ನಾಯಕ ಮಣಿಶಂಕರ್ ಮುರಾಸಿಂಗ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ತ್ರಿಪುರ ತಂಡವು ರೋಚಕ ಗೆಲುವು ಸಾಧಿಸಿ, ಮಯಂಕ್ ಪಡೆಗೆ ಆಘಾತ ನೀಡಿತು. ತ್ರಿಪುರ ತಂಡವು ದೆಹಲಿ ತಂಡಕ್ಕೂ ಸೋಲುಣಿಸಿತ್ತು.

ಏಳು ಪಂದ್ಯಗಳ ಪೈಕಿ ಎರಡನ್ನು ಗೆದ್ದು, ಐದರಲ್ಲಿ ಸೋತಿರುವ ಕರ್ನಾಟಕ ತಂಡವು 8 ಅಂಕಗಳೊಂದಿಗೆ ಗುಂಪಿನಲ್ಲಿ ನಾಲ್ಕನೇ ಸ್ಥಾನ ಪಡೆಯಿತು. ಅಷ್ಟೇ ಅಂಕ ಗಳಿಸಿರುವ ತ್ರಿಪುರ ತಂಡವು ಆರನೇ ಸ್ಥಾನ ಗಳಿಸಿತು. ಜಾರ್ಖಂಡ್ (28 ಅಂಕ), ರಾಜಸ್ಥಾನ (24) ಕ್ರಮವಾಗಿ ಮೊದಲೆರಡು ಸ್ಥಾನ ಪಡೆದವು.



ಅರ್ಧಶತಕ ಗಳಿಸಿದ ತ್ರಿಪುರಾ ತಂಡದ ನಾಯಕ ಮಣಿಶಂಕರ್ ಮುರಾಸಿಂಗ್

ನಿಗದಿತ ಓವರ್‌ನಲ್ಲಿ ಉಭಯ ತಂಡಗಳು 197 ರನ್ ಗಳಿಸಿ ರೋಚಕ ಟೈ ಆದ ಬಳಿಕ ಪಂದ್ಯವು ಸೂಪರ್ ಓವರ್‌ಗೆ ಸಾಗಿತು. ಮೊದಲು ಬ್ಯಾಟ್ ಮಾಡಿದ ತ್ರಿಪುರ ತಂಡವು ವಿದ್ಯಾಧರ ಪಾಟೀಲ್ ಓವರ್‌ನಲ್ಲಿ 22 ರನ್ ಸೂರೆ ಮಾಡಿತು. ಮಣಿಶಂಕರ್ (ಔಟಾಗದೇ 5;2ಎ) ಮತ್ತು ಶ್ರೀದಂ ಪಾಲ್ (ಔಟಾಗದೇ 16;4ಎ) ಅಬ್ಬರಿಸಿದರು.

23 ರನ್‌ಗಳ ಕಠಿಣ ಗುರಿ ಪಡೆದ ಕರ್ನಾಟಕ ತಂಡವು 1 ವಿಕೆಟ್‌ಗೆ 18 ರನ್ ಗಳಿಸಲಷ್ಟೇ ಶಕ್ತವಾಯಿತು. ಅಭಿನವ್ ಮನೋಹರ್ (ಔಟಾಗದೇ 11;3ಎ) ಹೋರಾಟ ತೋರಿದರು. ಮೂರನೇ ಎಸೆತದಲ್ಲಿ ಆರ್.ಸ್ಮರಣ್ ಖಾತೆ ತೆರೆಯುವ ಮುನ್ನ ಔಟಾದರು. ಮೆಕ್ನೀಲ್ ನೊರೊನ್ಹಾ 2 ಎಸೆತಗಳಲ್ಲಿ ಔಟಾಗದೇ 5 ರನ್ ಗಳಿಸಿದರು.

ಇದಕ್ಕೂ ಮುನ್ನ ಟಾಸ್ ಗೆದ್ದ ಕರ್ನಾಟಕ ಬ್ಯಾಟಿಂಗ್ ಆಯ್ದುಕೊಂಡಿತ್ತು. ಬಿ.ಆರ್. ಶರತ್ (44;22ಎ) ಮತ್ತು ಮಯಂಕ್ (29;26ಎ) ಅವರು ಮೊದಲ ವಿಕೆಟ್‌ಗೆ ವೇಗದ 57 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದ್ದರು. ಬಳಿಕ ದೇವದತ್ತ ಪಡಿಕ್ಕಲ್ (32;24ಎ) ಮತ್ತು ಮೆಕ್ನೀಲ್ (34;21ಎ) ಉಪಯುಕ್ತ ಕಾಣಿಕೆ ನೀಡಿದ್ದರು. ಕೊನೆಯಲ್ಲಿ ಸ್ಮರಣ್ ಮಿಂಚಿನ 24 ರನ್ (11ಎ) ಗಳಿಸಿ ತಂಡದ ಮೊತ್ತವನ್ನು ದ್ವಿಶತಕದ ಸಮೀಪ ತಲುಪಿಸಲು ನೆರವಾಗಿದ್ದರು. ಅನುಭವಿಗಳಾದ ಕರುಣ್ ನಾಯರ್, ಶ್ರೇಯಸ್ ಗೋಪಾಲ್, ವೈಶಾಖ ವಿಜಯಕುಮಾರ್ ಅವರಿಗೆ ವಿಶ್ರಾಂತಿ ನೀಡಲಾಗಿತ್ತು.

198 ರನ್‌ಗಳ ಸವಾಲಿನ ಗುರಿ ಪಡೆದ ತ್ರಿಪುರ ತಂಡಕ್ಕೆ ಹನುಮ ವಿಹಾರಿ (36;49ಎ) ಮತ್ತು ಶ್ರೀದಾಂ ಪಾಲ್ (28;15ಎ) ಮಿಂಚಿನ ಆರಂಭ ನೀಡಿದರು. ಈ ಜೋಡಿಯು ಮೊದಲ ವಿಕೆಟ್‌ಗೆ 5.2 ಓವರ್‌ಗಳಲ್ಲಿ 65 ರನ್ ಪೇರಿಸಿತ್ತು. ಆದರೆ, 41 ರನ್‌ಗಳ ಅಂತರದಲ್ಲಿ ಆರು ವಿಕೆಟ್‌ಗಳು ಪತನಗೊಂಡು ಕರ್ನಾಟಕ ತಂಡವು ಗೆಲುವಿನತ್ತ ಸಾಗಿತ್ತು. ಒಂದು ಹಂತದಲ್ಲಿ ನಾಯಕ ಮಣಿಶಂಕರ್ ಮುರಾಸಿಂಗ್ (69;35ಎ, 4X2, 6X6) ವೀರೋಚಿತ ಆಟವಾಡಿ ತಂಡವನ್ನು ಸೋಲಿನ ದವಡೆಯಿಂದ ಪಾರು ಮಾಡಿದರು. ಕೊನೆಯ ಎಸೆತದಲ್ಲಿ ಅವರು ರನೌಟ್ ಆಗುವುದರೊಂದಿಗೆ ಪಂದ್ಯ ಟೈ ಆಯಿತು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 197 (ಬಿ.ಆರ್. ಶರತ್ 44, ಮಯಂಕ್ ಅಗರವಾಲ್ 29, ದೇವದತ್ತ ಪಡಿಕ್ಕಲ್ 32, ಮೆಕ್ನೀಲ್ ನೊರೊನ್ಹಾ 34, ಆರ್.ಸ್ಮರಣ್ 24; ಮಣಿಶಂಕರ್ ಮುರಾಸಿಂಗ್ 30ಕ್ಕೆ 2, ಶಾರುಕ್ ಹುಸೇನ್ 35ಕ್ಕೆ 2). ತ್ರಿಪುರ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 197 (ಹನುಮ ವಿಹಾರಿ 36, ಮಣಿಶಂಕರ್ ಮುರಾಸಿಂಗ್ 69; ಶುಭಾಂಗ್ 31ಕ್ಕೆ 2, ಪ್ರವೀಣ್ ದುಬೆ 6ಕ್ಕೆ 2). ಫಲಿತಾಂಶ: ತ್ರಿಪುರ ತಂಡಕ್ಕೆ ಸೂಪರ್ ಓವರ್‌ನಲ್ಲಿ ಜಯ

ಎಫ್‌ಐಎಚ್ ಜೂನಿಯರ್ ಮಹಿಳಾ ವಿಶ್ವಕಪ್

ಭಾರತ ವನಿತೆಯರಿಗೆ ಮಣಿದ ವೇಲ್ಸ್

ಸ್ಯಾಂಟಿಯಾಗೊ (ಚಿಲಿ) (ಪಿಟಿಐ): ಎಫ್‌ಐಎಚ್ ಜೂನಿಯರ್ ಮಹಿಳಾ ವಿಶ್ವಕಪ್‌ನಲ್ಲಿ ಕ್ವಾರ್ಟರ್ ಫೈನಲ್ ಸ್ಪರ್ಧೆಯಿಂದ ಹೊರಬಿದ್ದಿರುವ ಭಾರತ ತಂಡವು ಒಂಬತ್ತನೇ ಸ್ಥಾನದ ಪ್ರಯತ್ನದಲ್ಲಿದ್ದು, ಭಾನುವಾರ ನಡೆದ ಪಂದ್ಯದಲ್ಲಿ 3–1ರಿಂದ ವೇಲ್ಸ್ ವಿರುದ್ಧ ಜಯ ಸಾಧಿಸಿದೆ.

ಭಾರತ ಪರ ಹಿನಾ ಬಾನೊ (14ನೇ ನಿಮಿಷ), ಸುನೆಲಿಟಾ ಟೊಪ್ಪೊ (24ನೇ), ಮತ್ತು ಇಶಿಕಾ (31ನೇ) ಗೋಲು ದಾಖಲಿಸಿದರೆ, ವೇಲ್ಸ್ ಪರ ಎಲೋಯಿಸ್ ಮೋಟ್ (52ನೇ) ಏಕೈಕ ಗೋಲು ಗಳಿಸಿದರು. ಭಾರತ ತಂಡವು ಸಿ ಗುಂಪಿನಲ್ಲಿ ಎರಡು ಜಯ ಮತ್ತು ಒಂದು ಸೋಲಿನೊಂದಿಗೆ ಎರಡನೇ ಸ್ಥಾನ ಗಳಿಸಿ ನಾಕೌಟ್ ರೇಸ್‌ನಿಂದ ಹೊರಬಿದ್ದಿದೆ.

ಆರು ಗುಂಪುಗಳಲ್ಲಿ ಅಗ್ರಸ್ಥಾನ ಪಡೆದ ಆರು ತಂಡಗಳು ಮತ್ತು ಎರಡನೇ ಸ್ಥಾನ ಪಡೆದು, ಅತ್ಯುತ್ತಮ ಪಾಯಿಂಟ್ಸ್ ಹೊಂದಿರುವ ಎರಡು ತಂಡಗಳು ಕ್ವಾರ್ಟರ್‌ಫೈನಲ್ ಪ್ರವೇಶಿಸಲಿವೆ.

ಭಾರತ ತಂಡವು ಮಂಗಳವಾರ ಉರುಗ್ವೆ ವಿರುದ್ಧ ಸೆಣಸಲಿದೆ. ಈ ಪಂದ್ಯದ ವಿಜೇತರು 9ನೇ ಸ್ಥಾನಕ್ಕಾಗಿ ಹಣಾಹಣಿ ನಡೆಸಲಿದ್ದಾರೆ.

ಸೋತ ತಂಡವು 11ನೇ ಸ್ಥಾನಕ್ಕಾಗಿ ಹೋರಾಟ ನಡೆಸಲಿದೆ.



ಭಾರತ (ನೀಲಿ) ಮತ್ತು ವೇಲ್ಸ್ ತಂಡಗಳ ಆಟಗಾರ್ತಿಯರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಯತ್ನಿಸಿದರು ಡಿಡಿ ಚಿತ್ರ

ಸಮರ್ಥ್ ಮಿಂಚು; ಕರ್ನಾಟಕ ಮೇಲುಗೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪಿನ್ನರ್ ಸಮರ್ಥ್ ಕುಲಕರ್ಣಿ (47ಕ್ಕೆ6) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡವು ವಿಜಯ್ ಮರ್ಚೆಂಟ್ ಟ್ರೋಫಿ (16 ವರ್ಷದೊಳಗಿನವರ) ಎಲೀಟ್ ಗುಂಪಿನ ಪಂದ್ಯದಲ್ಲಿ ಮಧ್ಯಪ್ರದೇಶ ತಂಡವನ್ನು 292 ರನ್‌ಗಳಿಗೆ ನಿಯಂತ್ರಿಸಿತು. ಬಳಿಕ, ಇನಿಂಗ್ಸ್ ಆರಂಭಿಸಿರುವ ರಾಜ್ಯ ತಂಡವು ಸೋಮವಾರದ ದಿನದಾಟದ ಅಂತ್ಯಕ್ಕೆ 5 ವಿಕೆಟ್‌ಗೆ 243 ರನ್ ಗಳಿಸಿದೆ.

ರಾಯಪುರದ ಶಹೀದ್ ವೀರ ನಾರಾಯಣ ಸಿಂಗ್ ಕ್ರೀಡಾಂಗಣದಲ್ಲಿ ಭಾನುವಾರ 6 ವಿಕೆಟ್‌ಗೆ 269 ರನ್ ಗಳಿಸಿದ್ದ ಮಧ್ಯಪ್ರದೇಶ ತಂಡವು ಸಮರ್ಥ್ ಅವರ ಬೌಲಿಂಗ್ ದಾಳಿಗೆ ಕುಸಿಯಿತು. ಎದುರಾಳಿ ತಂಡದ ಉಳಿದ ನಾಲ್ಕೂ ವಿಕೆಟ್‌ಗಳನ್ನು ಸಮರ್ಥ್ ಮೊದಲ ಅವಧಿಯಲ್ಲಿಯೇ ಉರುಳಿಸಿದರು.

ಆರ್. ರೋಹಿತ್ ರೆಡ್ಡಿ (71) ಹಾಗೂ ಆರ್ಯನ್‌ಸಿಂಗ್ ಚಾವ್ಡಾ (ಔಟಾಗದೇ 62) ಅವರ ಅರ್ಧಶತಕಗಳ ನೆರವಿನಿಂದ ಕರ್ನಾಟಕ ತಂಡ ಬ್ಯಾಟಿಂಗ್‌ನಲ್ಲಿಯೂ ಸ್ಥಿರ ಪ್ರದರ್ಶನ ತೋರಿದೆ. ಮೊದಲ ಇನಿಂಗ್ಸ್ ಬಾಕಿ ಚುಕ್ತಾಕ್ಕೆ ಇನ್ನು 49 ರನ್ ಬೇಕಿದೆ.

ಸಂಕ್ಷಿಪ್ತ ಸ್ಕೋರು: ಮಧ್ಯಪ್ರದೇಶ: 292 (ಅಥರ್ವ್ ಪಟೇಲ್ 70, ರಿತೀಕ್ ಪಾರಬ್ ಔಟಾಗದೇ 37; ಸಮರ್ಥ್ ಕುಲಕರ್ಣಿ 47ಕ್ಕೆ6). ಕರ್ನಾಟಕ: 5 ವಿಕೆಟ್‌ಗೆ 243 (ಆರ್. ರೋಹಿತ್ ರೆಡ್ಡಿ 71, ಆರ್ಯನ್‌ಸಿಂಗ್ ಚಾವ್ಡಾ ಔಟಾಗದೇ 62, ಸುಕೃತ್ ಜೆ. 49; ನೈತಿಕ್ ಜೈನ್ 70ಕ್ಕೆ3).

ಸೂಪರ್ ಕಪ್: ಗೋವಾ ಚಾಂಪಿಯನ್

ಮಡಗಾಂವ್ (ಪಿಟಿಐ): ಎಫ್‌ಸಿ ಗೋವಾ ತಂಡವು ಭಾನುವಾರ ನಡೆದ ಎಐಎಫ್‌ಎಫ್ ಸೂಪರ್ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಈಸ್ಟ್ ಬೆಂಗಾಲ್ ತಂಡವನ್ನು 'ಸಡನ್ ಡೆತ್'ನಲ್ಲಿ ಮಣಿಸಿತು. ಅದರೊಂದಿಗೆ, ಟೂರ್ನಿಯ ಇತಿಹಾಸದಲ್ಲಿ ಪ್ರಶಸ್ತಿಯನ್ನು ತನ್ನಲ್ಲಿಯೇ ಉಳಿಸಿಕೊಂಡ ಮೊದಲ ತಂಡ ಎಂಬ ಗೌರವಕ್ಕೂ ಪಾತ್ರವಾಯಿತು. ಜೊತೆಗೆ, ಮೂರನೇ ಬಾರಿಗೆ ಕಿರೀಟ ತನ್ನದಾಗಿಸಿಕೊಂಡಿತು.

ಫುಟ್‌ಬಾಲ್ ವಿಶ್ವಕಪ್: ಪಂದ್ಯಕ್ಕೆ 'ಪಾನೀಯ ವಿರಾಮ'

ಜ್ಯೂರಿಚ್ (ಎಪಿ): ಮುಂದಿನ ವರ್ಷದ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಪ್ರತಿಯೊಂದು ಪಂದ್ಯದಲ್ಲಿ ವಿರಾಮಕ್ಕೆ ಮೊದಲು ಮತ್ತು ನಂತರದ ಅವಧಿಯಲ್ಲಿ ಮೂರು ನಿಮಿಷಗಳ 'ಪಾನೀಯ ವಿರಾಮ' ಸೇರ್ಪಡೆ ಮಾಡುವುದಾಗಿ ವಿಶ್ವ ಫುಟ್‌ಬಾಲ್ ಫೆಡರೇಷನ್ (ಫಿಫಾ) ಸೋಮವಾರ ಪ್ರಕಟಿಸಿದೆ.

ಆಟಗಾರರಿಗೆ ಬಾಯಾರಿಕೆ ನೀಗಿಸಲು ಅನುಕೂಲ-ವಾಗುವಂತೆ, ಪೂರ್ವಾರ್ಧ ಮತ್ತು ಉತ್ತರಾರ್ಧದ ಆಟ ಶುರುವಾಗಿ 22 ನಿಮಿಷಗಳ ನಂತರ ರೆಫ್ರಿ ಅವರು ಮೂರು ನಿಮಿಷ ಪಂದ್ಯ ನಿಲುಗಡೆ ಮಾಡಲಿದ್ದಾರೆ.

ಇದು ಹೆಚ್ಚಿನ ತಾಪಮಾನವಿರುವ ಪಂದ್ಯಗಳಿಗೆ ಮಾತ್ರವಲ್ಲ, ಬಿಸಿಲು ಕಡಿಮೆಯಿರುವ ಕ್ರೀಡಾಂಗಣಗ-ಳಲ್ಲಿ ನಡೆಯುವ ಪಂದ್ಯಗಳಿಗೂ ಅನ್ವಯ ವಾಗಲಿದೆ. ಛಾವಣಿಯಿರುವ, ಏರ್ ಕಂಡಿಷನ್ ವ್ಯವಸ್ಥೆಯಿರುವ ಕ್ರೀಡಾಂಗಣಗಳಲ್ಲಿ ನಡೆಯುವ ಪಂದ್ಯಗಳಿಗೂ ಈ ಪಾನೀಯ ವಿರಾಮ (ಹೈಡ್ರೇಷನ್ ಬ್ರೇಕ್) ಇರಲಿದೆ.

ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊ ದೇಶಗಳ ಸಂಯುಕ್ತ ಆಶ್ರಯದಲ್ಲಿ 2026ರ ವಿಶ್ವಕಪ್ ಜೂನ್ 11 ರಿಂದ ಜುಲೈ 19ರವರೆಗೆ ನಡೆಯಲಿದೆ.

ಪ್ರಸಾರಕ ಸಂಸ್ಥೆಗಳ ಜೊತೆಯೂ ಈ ಬಗ್ಗೆ ಚರ್ಚೆ ನಡೆದಿದೆ. 22 ನಿಮಿಷಕ್ಕೆ ಕೆಲವೇ ಕ್ಷಣ ಮೊದಲು ಆಟಗಾರನೊಬ್ಬ ಗಾಯಾಳಾದಲ್ಲಿ ಆ ಕ್ಷಣದಲ್ಲೇ ಈ ಬ್ರೇಕ್ ಅನ್ವಯಿಸುವ ಅವಕಾಶವನ್ನೂ ರೆಫ್ರಿಗೆ ಕಲ್ಪಿಸಲಾಗಿದೆ. ಅದನ್ನು ರೆಫ್ರಿ ಸ್ಥಳದಲ್ಲೇ ನಿರ್ಧರಿಸುವರು ಎಂದು ಟೂರ್ನಿಯ ಮುಖ್ಯ ಅಧಿಕಾರಿ ಮನೊಲೊ ಝುಬಿರಿಯಾ ತಿಳಿಸಿದರು.

ಸಿಬ್ಬಂದಿ ತೀವ್ರ ಕೊರತೆಗೆ ಕಳವಳ ವ್ಯಕ್ತಪಡಿಸಿದ್ದ ಸಂಸದೀಯ ಸ್ಥಾಯಿ ಸಮಿತಿ

ಸಾಯ್‌ನಲ್ಲಿ 1,191 ಹುದ್ದೆ ಖಾಲಿ: ಸಚಿವ

ನವದೆಹಲಿ (ಪಿಟಿಐ): ಭಾರತ ಕ್ರೀಡಾ ಪ್ರಾಧಿಕಾರದಲ್ಲಿ (ಸಾಯ್) ಪ್ರಸ್ತುತ 1000ಕ್ಕೂ ಅಧಿಕ ಹುದ್ದೆಗಳು ಖಾಲಿಬಿದ್ದಿವೆ ಎಂದು ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಒಪ್ಪಿಕೊಂಡಿದ್ದಾರೆ.

'ಕ್ರೀಡಾ ಪ್ರಾಧಿಕಾರಕ್ಕೆ ಕೊಡುವ ನೆರವು ಏನೇನೂ ಸಾಲದು. ಇಲ್ಲಿ ಸಿಬ್ಬಂದಿಯ ಕೊರತೆಯೂ ತೀವ್ರವಾಗಿದೆ' ಎಂದು ಸಂಸದೀಯ ಸ್ಥಾಯಿ ಸಮಿತಿಯೊಂದು ತನ್ನ ವರದಿಯಲ್ಲಿ ಕಳವಳ ವ್ಯಕ್ತಪಡಿಸಿತ್ತು.

ಕೇರಳದ ಅಟ್ಟಿಂಗಲ್ ಕ್ಷೇತ್ರದ ಸಂಸದ ಅಡೂರ್ ಪ್ರಕಾಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಪ್ರಾಧಿಕಾರದಲ್ಲಿ 1,191 ಹುದ್ದೆಗಳು ಖಾಲಿಯಿವೆ. ಕೆಲವು ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ' ಎಂದು ಹೇಳಿದರು.

ರಾಜ್ಯಸಭಾ ಸದಸ್ಯ ದಿಗ್ವಿಜಯ ಸಿಂಗ್ ನೇತೃತ್ವದ ಸ್ಥಾಯಿ ಸಮಿತಿ ಆಗಸ್ಟ್‌ನಲ್ಲಿ ವರದಿ ಸಲ್ಲಿಸಿದ್ದು, ಇದರಲ್ಲಿ ಮಂಜೂರಾದ ಹುದ್ದೆಗಳ ಪೈಕಿ ಶೇ 45ರಷ್ಟು ಖಾಲಿಯಿವೆ ಎಂದು ತಿಳಿಸಿತ್ತು.

'ಈ ಕೊರತೆಯನ್ನು ಗುತ್ತಿಗೆ ಮೇಲೆ ನೇಮಕಗೊಂಡ ಸಿಬ್ಬಂದಿ ನಿಭಾಯಿಸುತ್ತಿದ್ದು, ಇದು ತಾತ್ಕಾಲಿಕ ವ್ಯವಸ್ಥೆಯಾಗಿದೆ' ಎಂದು ವರದಿ ತಿಳಿಸಿತ್ತು. ಸಮಿತಿಯಲ್ಲಿ ಆಮ್ ಆದ್ಮಿ ಪಕ್ಷದ ಹರಭಜನ್ ಸಿಂಗ್, ಬಿಜೆಪಿಯ ಸಂಭಿತ್ ಪಾತ್ರಾ ಮತ್ತು ಬಾನ್ಸುರಿ ಸ್ವರಾಜ್ ಅವರೂ ಸೇರಿದ್ದರು.

ಈ ವರ್ಷದ ವಾರ್ಷಿಕ ಬಜೆಟ್‌ನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಸರ್ಕಾರವು ₹3,794 ಕೋಟಿ ಹಂಚಿಕೆ ಮಾಡಿತ್ತು. ಇದರಲ್ಲಿ ಭಾರತ ಕ್ರೀಡಾ ಪ್ರಾಧಿಕಾರಕ್ಕೆ ₹830 ಕೋಟಿ ಮಾತ್ರ ಮೀಸಲಿಟ್ಟಿತ್ತು.



ಮನ್ಸುಖ್ ಮಾಂಡವೀಯ

ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿ ಕ್ರೀಡಾಪಟುಗಳು ನೀಡಿರುವ ದೂರುಗಳ ಸಮಗ್ರ ದತ್ತಾಂಶವನ್ನು ಸರ್ಕಾರ ಹೊಂದಿದೆಯೇ ಎಂಬ ಇನ್ನೊಂದು ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಸರ್ಕಾರ ಇದಕ್ಕಾಗಿಯೇ ಪ್ರತ್ಯೇಕ ದತ್ತಾಂಶ ಸಿದ್ಧಪಡಿಸಿಲ್ಲ' ಎಂದರು. ಆದರೆ ಕ್ರೀಡಾಪಟುಗಳಿಗೆ ಸುರಕ್ಷಿತ ವಾತಾವರಣ ಕಲ್ಪಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಂಡವೀಯ ವಿವರ ನೀಡಿದರು.

ಗ್ಲ್ಯಾಂಡರ್ಸ್: ಈ ವಾರದ ಬೆಂಗಳೂರು ರೇಸ್ ರದ್ದು

ಬೆಂಗಳೂರು: ಕೆಲ ಕುದುರೆಗಳಿಗೆ 'ಗ್ಲ್ಯಾಂಡರ್ಸ್' ರೋಗದ ಸೋಂಕು ಕಾಣಿಸಿಕೊಂಡ ಕಾರಣ, ಇದೇ ಗುರುವಾರ ಮತ್ತು ಶುಕ್ರವಾರ (ಡಿ.11 ಮತ್ತು 12) ಏರ್ಪಡಿಸಿದ್ದ ಬೆಂಗಳೂರು ರೇಸ್ ಅನ್ನು ರದ್ದುಪಡಿಸಲಾಗಿದೆ.

ಶುಕ್ರವಾರ ನಡೆಯಬೇಕಿದ್ದ 'ಜವಾರೆ ಎಸ್. ಪೂನಾವಾಲ ಬೆಂಗಳೂರು 2000 ಗಿನ್ನೀಸ್' ಅನ್ನು ಮುಂದಿನ ದಿನಗಳಲ್ಲಿ ಆಯೋಜಿಸಲಾಗುವುದು ಎಂದು ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ತಿಳಿಸಿದೆ. ಗ್ಲ್ಯಾಂಡರ್ಸ್ ಸೋಂಕು ತಡೆಗಟ್ಟಲು, ಬಿಟಿಸಿಯಿಂದ ಹೊರಹೋಗುವ ಮತ್ತು ಒಳಬರುವ ಕುದುರೆಗಳ ಓಡಾಟವನ್ನು ಮುಂದಿನ ಆದೇಶದವರೆಗೂ ಸ್ಥಗಿತಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಶೂಟಿಂಗ್: 6 ಪದಕಗಳೊಂದಿಗೆ ಭಾರತದ ಅಭಿಯಾನಕ್ಕೆ ತೆರೆ

ದೋಹಾ (ಪಿಟಿಐ): ಭಾರತದ ಶೂಟರ್‌ಗಳು ಇಲ್ಲಿ ನಡೆದ ಐಎಸ್‌ಎಸ್‌ಎಫ್ ವಿಶ್ವಕಪ್ ಫೈನಲ್‌ನಲ್ಲಿ ಎರಡು ಚಿನ್ನ ಸೇರಿ 6 ಪದಕಗಳೊಂದಿಗೆ ಅಭಿಯಾನವನ್ನು ಅತ್ಯುತ್ತಮ ರೀತಿಯಲ್ಲಿ ಮುಗಿಸಿದರು.

ಕೊನೆಯ ದಿನವಾದ ಸೋಮವಾರ ಪುರುಷರ ಟ್ರ್ಯಾಪ್ ಫೈನಲ್‌ನಲ್ಲಿ ವಿಶ್ವ ಚಾಂಪಿಯನ್‌ಷಿಪ್ ಕಂಚು ವಿಜೇತ ಝೋರಾವರ್ ಸಿಂಗ್ ಸಂಧು ಏಳನೇ ಸ್ಥಾನ ಪಡೆದರು. ಅಂತಿಮ ದಿನದ ಶಾಟ್‌ಗನ್ ಸ್ಪರ್ಧೆಯಲ್ಲಿದ್ದ ಭಾರತದ ಏಕೈಕ ಶೂಟರ್ ಅವರಾಗಿದ್ದರು.

ಅರ್ಹತಾ ಸುತ್ತಿನಲ್ಲಿ 125ರಲ್ಲಿ 119 ಅಂಕ ಪಡೆದಿದ್ದ ಝೋರಾವರ್ ಅವರು ಆರನೇ ಸ್ಥಾನದೊಂದಿಗೆ ಫೈನಲ್ ಪ್ರವೇಶಿಸಿದ್ದರು. ಐಎಸ್‌ಎಸ್‌ಎಫ್ ಹೊಸ ನಿಯಮಗಳ ಪ್ರಕಾರ ಆರು ಶೂಟರ್‌ಗಳ ಬದಲಿಗೆ ಈ ಬಾರಿ ಎಂಟು ಮಂದಿ ಪ್ರಶಸ್ತಿ ಸುತ್ತಿಗೆ ಅರ್ಹತೆ ಪಡೆದಿದ್ದರು.

30 ಶಾಟ್‌ಗಳ ಫೈನಲ್‌ನಲ್ಲಿ ಲಯ ತಪ್ಪಿದ ಝೋರಾವರ್ 7 ಅಂಕ ಸಂಪಾದಿಸಲಷ್ಟೇ ಶಕ್ತವಾದರು. ಅಮೆರಿಕದ ಹಿಂಟನ್ ವಿಲಿಯಂ (29) ಚಿನ್ನ ಗೆದ್ದರೆ, ಗ್ವಾಟೆಮಾಲಾದ ಬ್ರೋಲ್ ಕಾರ್ಡೆನಾಸ್ ಜೀನ್ ಪಿಯರ್ (28) ಬೆಳ್ಳಿ ಜಯಿಸಿದರು. ಅಮೆರಿಕದ ಮತ್ತೊಬ್ಬ ಶೂಟರ್ ಎಲರ್ ವಾಲ್ಟನ್ (23) ಕಂಚು ತಮ್ಮದಾಗಿಸಿಕೊಂಡರು.

4 ಚಿನ್ನ, 2 ಬೆಳ್ಳಿ, 3 ಕಂಚಿನ ಪದಕ ಗೆದ್ದ ಚೀನಾ ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯಿತು. 2 ಚಿನ್ನ, 3 ಬೆಳ್ಳಿ, ಒಂದು ಕಂಚಿನ ಪದಕಗಳೊಂದಿಗೆ ಭಾರತ ಎರಡನೇ ಸ್ಥಾನ ಗಳಿಸಿತು. ಅಮೆರಿಕ (6 ಪದಕ) ಮೂರನೇ ಸ್ಥಾನ ಪಡೆಯಿತು.